

ಸಂಬೋಧ

...LIMITED

...TS,

...d,

...R Ltd.,

...egrators,

Wood working Machinery.

Tinman's Machinery.

Workshop Tools of all description — such as Spanners, Dies Taps, Hacksaw Blades, Milling Cutters, Blowers, Hand and Power Slitting Saws. etc. Cutting Tools and engineering requirements and precision Tools.

Tablet-making and Pills making Machines.

Electric Motors, Pumps and Pumping sets.

Crucibles, Plumbago Powder, Graphite Powder.

Corn Emery, Rice mill Emery, Cement, Salt, Rubber Brakes etc.

Rice Huller parts. Metals. Welding Sets — Gas and Electrical — and also welding rods etc. Materials.

Beltings of all descriptions, Pullys, Shaftings Shaft Couplings, Collars etc.

ENQUIRIES SOLICITED — FOR ALL TYPES OF MACHINERY AND TOOLS OF ALL DESCRIPTIONS.

Prices : **GOVERNMENT CONTROLLED PRICES.**


ಸಂಪುಟ 21
ಸಂಚಿಕೆ 241

ಶುಭ ಸಂದರ್ಭಗಳಲ್ಲಿ ನಿಮ್ಮ ಪ್ರೀತಿಪಾತ್ರರಾದವರಿಗೆ ಅಂಗಕಾಂತಿಯು ಹೊಳಪಿನಿಂದ ಪ್ರಜ್ವಲಿಸಲು ಸುಗಂಧಯುಕ್ತವಾದುದನ್ನು ಬಹುಮಾನಿಸಿ!

ಜನವರಿ 1946

ಹಿಂದೂದೇಶದ

ಮಾತೃಭೂಮಿ
ವಿಶೇಷಾಂಕ



ಅಪ್ಪಟ
ಗಂಧದ ಸಾಬೂನು
ಮೈಸೂರು ಸ್ಯಾಂಡಲ್ ಸೋಪ್

ಮೈಸೂರು ಸ್ಯಾಂಡಲ್ ಸೋಪ್ ಸುಪ್ರಸಿದ್ಧರಾದ ರಸಾಯನ ಶಾಸ್ತ್ರಜ್ಞರ ನೇತೃತ್ವದಲ್ಲಿ ತಯಾರಿಸಲ್ಪಟ್ಟಿದೆ. ಸೌಂದರ್ಯೋಪಾಸಕರಿಗೆ ಅತ್ಯುತ್ತಮ ಸಹಕಾರಿ. ಸ್ನಾನಮಾಡುವುದರಲ್ಲಿ ಆಹ್ಲಾದವನ್ನು ಹೆಚ್ಚಿಸುತ್ತೆ. ಶುದ್ಧವಾದ ಸುಗಂಧ ದ್ರವ್ಯಗಳಿಂದ ತಯಾರಿಸಲ್ಪಟ್ಟಿದೆ.

ಮೈಸೂರು ಸ್ಯಾಂಡಲ್ ಸೋಪ್

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತದೆ

ಸುಬೋಧ

ಸಂಪಾದಕ : ಯಂ. ರಾಮರಾವ್.

T.B.C. No. 361 of 23rd Jan 1929.
Approved for all High, Middle and Normal School Libraries.

ವಿಷಯಾನುಕ್ರಮಣಿಕೆ.

ಚಿತ್ರಪಟಗಳು

ಸಾದರ ಸ್ವೀಕಾರ

ಶ್ರೀ ಜಯಚಾಮರಾಜೇಂದ್ರ ಶತಕಂ: ಗ್ರಂಥಕರ್ತರು: ಶ್ರೀ ಆರ್. ಎಸ್. ಕೇಸರಿ ಬಿ. ಎ., ಮೈಸೂರು. ಕ್ರೌನ್ ಅಷ್ಟಪತ್ರ ಪುಟ ೪೨ ಬೆಲೆ ೧೦ ಆ.

ಮೌಲಾನಾ ಅಬುಲ್ ಕಲಾಂ ಆಜಾದ್: ಗ್ರಂಥಕರ್ತರು: ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ಯರು. ಕ್ರೌನ್ ಅಷ್ಟಪತ್ರದ ಪುಟ ೯೪ ಬೆಲೆ ೧೨ ಆ.

ಬಾಳ್ವೆಯೇ ಬೆಳಕು: ಗ್ರಂಥಕರ್ತರು: ಶ್ರೀ ಶಿವರಾಮ ಕಾರಂತರು, ಪುತ್ತೂರು ಕ್ರೌನ್ ಅಷ್ಟಪತ್ರದ ೧೫೨ ಪುಟಗಳು. ಬೆಲೆ ೧ ರೂ. ೮ ಆ.

ಕಂಸಮಡಿಯ ಹುಟ್ಟು: ಗ್ರಂಥಕರ್ತರು: ಶ್ರೀ ರಂ. ಬಾ. ಜೋಶಿ, ಧಾರವಾಡ. ಕ್ರೌನ್ ಅಷ್ಟಪತ್ರದ ೧೫೨ ಪುಟಗಳು. ಬೆಲೆ ೧ ರೂ. ೧೨ ಆ.

ಜರತಾರಿ ಕುಪ್ಪಸ : ಕತೆಗಾರರು: ಶ್ರೀ ಎಚ್. ಎಸ್. ಭಟ್ಟ ಬಿ. ಎಸ್‌ಸಿ. ಪ್ರಕಾಶಕರು, 'ಮಿತ್ರ ಸಂಘ' ಬೆಂಗಳೂರು (ಕಥಾಸಂಗ್ರಹ) ಕ್ರೌನ್ ಅಷ್ಟಪತ್ರದ ೧೧೪ ಪುಟಗಳು ಬೆಲೆ—?

ಅಂತರಂಗ: ಸಂಪಾದಕರು: ಶ್ರೀ ಕೆ. ಎಚ್. ಶಟ್ಟಿ, ಶ್ರೀ ಎಂ. ವಿ. ಹೆಗ್ಗಡೆ. ಉಡುಪಿ. (ಆಯುರ್ವೇದ ಸಮ್ಮೇಳನಾಂಕ) ಕ್ರೌನ್ ಚತುರ್ಥಾಂಶದ ೧೩೮ ಪುಟಗಳು ಬೆಲೆ ೧ ರೂ.

ಕತೆಗಾರ (ವಾರ್ಷಿಕ ವಿಶೇಷ ಸಂಚಿಕೆ): ರಾಯಲ್ ಅಷ್ಟಪತ್ರದ ೯೬ ಪುಟಗಳು. ಬೆಲೆ ೮ ಆ.

ಮುದರಾಸಿನಲ್ಲಿ ನೆರದ ೨೯ನೆಯ ಕನ್ನಡ ಸಾಹಿತ್ಯ ಸಮ್ಮೇಲನ ಸಂದರ್ಭದಲ್ಲಿ ಅರ್ಪಿಸಿದ **ಮಿಂತ್ರ ಮಂಡಳಿಯ ಕಾಣಿಕೆ.** ಕ್ರೌನ್ ಚತುರ್ಥಾಂಶ ೯೪ ಪುಟಗಳು ಬೆಲೆ ೧ ರೂ. ೪ ಆ.

ಮಾತೃಭೂಮಿ-ವಿಶೇಷಸಂಚಿಕೆ.

॥ ವಂದೇ ಕರ್ನಾಟಕಮಾತರಂ ॥

ಸುಬೋಧ

ಸರ್ವೇಶನ ನೃಪತಿಯ ಮೇ । ಣುರ್ವೀತಳ ಸೇವೆಯೋ
ಸ್ವಧರ್ಮವದೆಣಿಸು ॥ ತ್ತುರ್ವಿಯೊಳಖಿಳರ ಮೇಲ್ಮೆಯ ।
ನಿರ್ವಹಿಪ್ಪೊಳ್ಪುಡಿಯೆ ತಾಂ "ಸುಬೋಧ"ದ ಧ್ಯೇಯಂ ॥

ಜನವರಿ
ಸಂಪುಟ ೨೧
ಸಂಚಿಕೆ ೨೪೧

ಭಗವನ್ನಾಮಾಮೃತ

ರಾಗ. ಮಧ್ಯಮಾವತಿ ಆದಿತಾಳ.

ಗಜಮುಖನೆ ಸಿದ್ಧಿನಾಯಕನೆ ವಂದಿಪೆ ಶರಣು ಪ
ತ್ರಿಜಗವಂದಿತನಾದ ದೇವದೇವನೆ ಶರಣು
ಸುಜನರಿಗೆ ವಿಘ್ನವನು ಪರಿಹರಿಪೆ ಶರಣು ಅ
ಮಂದಮತಿಯನು ಬಿಡಿಸಿ ಚಂದ ಜ್ಞಾನವನಿತ್ತು
ಇಂದಿರೇಶನ ಪಾದ ಹೊಂದಿಪ್ಪ ತೆರದಿ
ಸುಂದರಾಂಗನೆ ನಿನ್ನ ಪದದ್ವಂದ್ವಕೆರಗುವೆನು
ಸಂದೇಹ ಮಾಡದಲೆ ಇಂದು ಕರುಣಿಪುದು ೧
ಹರನ ತನಯನೆ ಕರುಣಾಕರನೆ ಸುರನರ ವರದ
ಮೊರೆಯಲಾಲಿಸಿ ಎನ್ನ ಕರಗಳನೆ ಪಿಡಿದು
ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು
ತ್ವರಯದಿಂದಲಿ ನೋಡು ಶರಣೆಂಬೆ ನಿನ್ನ ೨
ಸಿದ್ಧಿದಾಯಕ ನಿನ್ನ ಹೊದ್ದಿ ಮೆರೆವೆನೊ ನಾನು
ಅಬ್ಧಿಶಯನನ ಮಹಿಮೆ ಬದ್ಧದಲಿ ಪೇಳ್ವ
ಶುದ್ಧಮತಿಯನು ಕೊಟ್ಟು ಉದ್ಧರಿಸಬೇಕೆನ್ನ
ಮಧ್ವವಲ್ಲಭ ವೇಣುಕೃಷ್ಣ ಗತಿ ಪ್ರಿಯ ೩

★ ★ ★

ಕರ್ಣಾಟಕಾಂಬೆ ನೀ ಧನ್ಯೆ ಧನ್ಯೆ

ಕರ್ಣಾಟಕಾಂಬೆ । ನೀ ಧನ್ಯೆ ಧನ್ಯೆ ಪ
ಬಣ್ಣಿಪೆವು ನಿನ್ನ ನಾ । ನೆಂತು ಜಗಮಾನ್ಯೇ ಅ.ಪ.

ರಾಮಾನುಜಾಚಾರ್ಯ। ರಾ ಶಂಕರಾರ್ಯ ಮೇಣ್
ಶ್ರೀಮದಾನಂದ ತೀ । ರ್ಥಾಚಾರ್ಯರು
ಆ ಮಹಾ ಬಸವೇಶ್ವ । ರಾದಿ ಸದ್ಗುರುವರರು
ಹೇ ಮಾತೆ ನಿನ್ನುದರ । ದಲ್ಲಿ ಜನಿಸಿಹರು ೧

ಯಾದವ ಕದಂಬ ಚಾ । ಲುಕ್ಯ ವರ ರಾಷ್ಟ್ರಕೂ
ಟಾದಿ ಘನ ನೃಪರು ನಿ । ನ್ನನು ಸೇವಿಸಿ
ಈ ಧರಿತ್ರಿಯೊಳು ನಿ । ನ್ನಯ ಕೀರ್ತಿಕೇತುವನು
ಮೋದದಿಂ ಮೆರೆಸಿಹರು । ಭುವನವಂದಿತಳೇ ೨

ಧೀರ ವಿದ್ಯಾರಣ್ಯ । ಗುರುಗಳಿಂದಲಿ ನಿನ್ನ
ವೀರ ಪುತ್ರರಿಗೆ ಪಾ । ಠವ ಪೇಳಿಸೀ
ಚಾರುತರ ವಿಜಯನಗ । ರದ ರಾಜರೊಡನೆ ನೀ
ಸ್ವರಾಜ್ಯ ಸಿಂಹಾಸ । ನದಿ ವಿರಾಜಿಸಿದೇ ೩

ರನ್ನ ಲಕ್ಷ್ಮೀಶ ಹರಿ । ಹರ ಷಡಕ್ಷರಿದೇವ
ಪೊನ್ನ ನಯಸೇನ ನೃಪ । ತುಂಗ ಪಂಪಾ
ಜನ್ನ ಗಜಗಾದಿ ಕವಿ । ವರ್ಯರಿಂ ನುತಿಗೊಂಡ
ಸನ್ನುತಳೆ ನಿನ್ನ ಮಹಿ । ಮೆಯನೆಂತು ವರ್ಣಿಸಲಿ ೪

ಬಲುರಮ್ಯವಿರುವ ದೇ । ವಾಲಯಗಳಿಂದ ಮೇಣ್
ಚೆಲುವ ಪ್ರಾಚೀನ ಕ । ಟ್ಟಡಗಳಿಂದಾ
ಹಲಮಹಾನದಿಗಳಿಂ । ಬೆಲೆಯುಳ್ಳ ಭೂಮಿಯಿಂ
ಸಲೆ ಮೆರೆಯುತಿರುವೆ ನೀ । ಭುವನದೊಳಗೇ

ಪರದೇಶ ಪರಭಾಷೆ । ಗಳಿಗೆ ಮರುಳಾಗಿ ನಾವ್
ಮರೆತು ಬಿಟ್ಟೆವು ನಿನ್ನ । ಮಧುರ ನುಡಿಯಾ
ಮರೆತು ನೀನೀ ಪಾಮ । ರರು ಗೈದ ದೋಷಗಳ
ಪೊರೆಯಮ್ಮ ಶ್ರೀಕೃಷ್ಣ । ಪ್ರಿಯೆ ಕೃಷ್ಣವರ್ಣೇ ೫

★ ★ ★


ವಂದೇ ಕರ್ಣಾಟ ಮಾತರಂ

ನಿವೇದನ

ಸುಬೋಧವು ಜನ್ಮತಾಳಿ ಭಾಷಾ ಸೇವೆಗೆಂದು ನಡುಗಟ್ಟಿ ನಿಂತ ಈ ಇಪ್ಪತ್ತು ವರ್ಷಗಳಲ್ಲಿ ವಿಶೇಷ ಸಂಚಿಕೆಯನ್ನು ಹೊರಡಿಸಿದುದು ಇದೇ ಮೊದಲು. ವಿಶೇಷ ಸಂಚಿಕೆಯು ಪತ್ರಿಕೆಯ ಜೀವಮಾನದ ಒಂದು ವಿಶೇಷ ಸಂದರ್ಭದಲ್ಲಿರಬೇಕೆಂಬುದೇ ಈ ಸಂದರ್ಭದಲ್ಲಿ ನಮಗಿದ್ದ ಮುಖ್ಯ ಆಶಯ. ಅದು ಶ್ರೀಶಾನುಗ್ರಹದಿಂದ ಈಗ ಸಾಧ್ಯವಾದುದಕ್ಕಾಗಿ ಹರ್ಷಿಸುತ್ತೇವೆ.

ಸುಬೋಧದ ವಾಚಕಮಹಾಶಯರಿಗೆ ವಿಶೇಷ ಸಂಚಿಕೆಯ ಉಪಯುಕ್ತತೆಯು ಸಾಧ್ಯವಾದ ಮಟ್ಟಿಗೂ ಹೆಚ್ಚುವಂತಿರಬೇಕೆಂಬ ಉದ್ದೇಶದಿಂದ ಕರ್ಣಾಟಕದ ಅನೇಕ ಮಂದಿ ಸುಪ್ರಸಿದ್ಧ ಲೇಖಕರನ್ನು ಪ್ರಾರ್ಥಿಸಿದ್ದೆವು. ಅವರಲ್ಲಿ ಅನೇಕ ಮಂದಿ ಮಹನೀಯರು ಕೃಪೆಯಿಟ್ಟು ತಮ್ಮ ಲೇಖನ ಕಥೆ ಕವಿತೆಗಳನ್ನು ಕಳುಹಿಸಿ ನಮ್ಮಿ ಕಾರ್ಯದೊಂದಿಗೆ ಸಹಕರಿಸಿದ್ದಾರೆ. ಮೈಸೂರು ಶಾಸನದ ಇಲಾಖೆಯ ಡೈರೆಕ್ಟರ್ ಆದ ಡಾ. ಎಂ. ಹೆಚ್. ಕೃಷ್ಣ ಎಂ. ಎ. ಡಿ. ಲಿಟ್., ಅವರು ಹಳೇಬೀಡಿನ ಸಂಬಂಧ ವಿಶೇಷ ಪರಿಚಯ ಕೊಡುವ ವಿಸ್ತೃತ ಲೇಖನವೊಂದನ್ನು ಬರೆದುಕೊಟ್ಟುದಲ್ಲದೆ, ಅಲ್ಲಿಯ ಶಿಲ್ಪಕಲಾ ಚಾತುರ್ಯವನ್ನು ಸ್ಪಷ್ಟ ರೀತಿಯಿಂದ ಪ್ರದರ್ಶಿಸುವಂತಿರುವ ಪಡಿಯಚ್ಚುಗಳನ್ನು ಒದಗಿಸಿಕೊಟ್ಟು ಉಪಕಾರ ಮಾಡಿರುತ್ತಾರೆ. ಮೈಸೂರು ಅರಮನೆಯ ಆಫೀಸಿನ ಅಧಿಕಾರಿ ವರ್ಗದವರು ಶ್ರೀಮನ್ಮಹಾರಾಜಾ ಜಯಚಾಮರಾಜ ಒಡೆಯರ್ ಜಿ. ಸಿ. ಎಸ್. ಐ., ಜಿ. ಸಿ. ಬಿ. ಅವರ ದಿವ್ಯ ಸುಂದರ ಫೋಟೋವನ್ನು ಒದಗಿಸಿಕೊಟ್ಟು ಸಹಕರಿಸಿದ್ದಾರೆ. ಈ ಮಹನೀಯರಿಗೆಲ್ಲಾ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

'ಸುಬೋಧ ಕುಸುಮಾಂಜಲಿ ಗ್ರಂಥಮಾಲೆ'ಯ ಮೂವತ್ತು ವರ್ಷಗಳ ಸೇವೆಯನ್ನೂ, 'ಸುಬೋಧ' ಮಾಸಪತ್ರಿಕೆಯ ಇಪ್ಪತ್ತು ವರ್ಷಗಳ ಸೇವೆಯನ್ನೂ 'ಶ್ರೀ ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ'ಯ ಮೂಲಕ ನಡೆದ ದಾಸಸಾಹಿತ್ಯ ಪ್ರಕಟಣೆಯ ಲೇಶಮಾತ್ರ ಸೇವೆಯನ್ನೂ ಶ್ರೀ ಕರ್ಣಾಟಕ ಮಾತೃ ದೇವತೆಯ ಹೃತ್ಕಮಲ ನಿವಾಸಿಯಾದ ಶ್ರೀ ಸೀತಾರಾಮಚಂದ್ರ ಸ್ವಾಮಿಯ ಪಾದಾರವಿಂದಗಳಲ್ಲಿ ಸಮರ್ಪಿಸಬೇಕೆಂದಿದ್ದ ನಮ್ಮ ಚಿರಕಾಲದ ಅಭಿಲಾಷೆಗೆ ಸಹಾಯಕವಾಗಿ, ಶ್ರೀ ಕರ್ಣಾಟಕ ಮಾತೆಯ ದಿವ್ಯ ಸುಂದರ ತೈಲ ಚಿತ್ರಪಟವೊಂದನ್ನು, ಬೆಂಗಳೂರಿನ ಚಿತ್ರಕಲಾವಿದರಾದ ಶ್ರೀಮಾನ್ ಕೆ. ಶ್ರೀನಿವಾಸರಾಯರು ಬರೆದುಕೊಟ್ಟು ಸಹಾಯ ಮಾಡಿದರು. ಇವರು ಚಿಕ್ಕಪೇಟೆಯಲ್ಲಿರುವ ತಮ್ಮ 'ಆರ್ಯಪ್ರಭಾ ಸ್ಟೂಡಿಯೋ' ಮೂಲಕ ಅಮೂಲ್ಯವಾದ ಕಲಾಸೇವೆ ನಡೆಯಿಸುತ್ತಿರುವರು. ಕರ್ಣಾಟಕ ಮಾತಾ ಚಿತ್ರರಚನೆಯಲ್ಲಿ ಸ್ವಯಂ ಕನ್ನಡಿಗರಾದ ಇವರು ಕೇವಲ ಭಕ್ತಿ ಶ್ರದ್ಧಾಪೂರ್ವಕವಾಗಿ ಅಭಿಮಾನ ವಹಿಸಿ ಅದನ್ನು ಸರ್ವಾಂಗ ಸುಂದರವಾಗಿ ಚಿತ್ರಿಸಿಕೊಟ್ಟಿರುವರು. ಇದಕ್ಕಾಗಿ ಅವರಿಗೆ ನಮ್ಮ ಅನೇಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ವಿಶೇಷ ಸಂಚಿಕೆಯ ಹೆಚ್ಚುಗಟ್ಟಲೆಯ ವೆಚ್ಚವನ್ನು ಸಹಿಸಿಕೊಂಡು ನಿರ್ವಹಿಸುವುದು ಈ ದುಷ್ಕಾಲದಲ್ಲಿ 'ಸುಬೋಧ'ದಂತಹ ಕೇವಲ ಧಾರ್ಮಿಕ ಮತ್ತು ಸಾಹಿತ್ಯ ಮುಂತಾದ ಪರಿಮಿತ ವಾತಾವರಣದೊಳಗೆ ಸಂಚಾರವಿಟ್ಟುಕೊಂಡಿರುವ ಪತ್ರಿಕೆಗೆ ಕಷ್ಟಸಾಧ್ಯ ವಿಚಾರ. ಇಂತಹ ಸಂದರ್ಭದಲ್ಲಿ ನಮಗೆ ಒತ್ತಾಸೆ ಕೊಟ್ಟು ಸಹಕರಿಸಿದವರು, ಉದಾರಮತಿಗಳಾದ ನಮ್ಮ ಅನೇಕಮಂದಿ ಜಾಹೀರಾತುದಾರರು. ಇದಕ್ಕಾಗಿ ಅವರೆಲ್ಲರ ಉಪಕಾರವನ್ನೂ ಕೃತಜ್ಞತಾಪೂರ್ವಕ ಸ್ಮರಿಸುತ್ತೇವೆ.

ಬಹು ದಿನಗಳಿಂದ 'ಸುಬೋಧ' ಪತ್ರಿಕೆಗೆ ಮುಖಚಿತ್ರ ಮುಂತಾಗಿ ಬರೆದುಕೊಟ್ಟು ಅದರ ಕಲಾಸೇವಾ ವಿಭಾಗದಲ್ಲಿ ಸಹಾಯಕರಾಗಿದ್ದ ಮುಂಬಯಿಯ ಶ್ರೀಯುತ ಹೆಚ್. ಎಸ್. ರಾಘವೇಂದ್ರ ಅವರು, ಈ ಬಾರಿ ಅನಾರೋಗ್ಯ ಕಾರಣವಾಗಿ ತಮ್ಮ ಸೇವೆ ಸಲ್ಲಿಸಲಾಗಲಿಲ್ಲವೆಂದು ವಿಷಾದದಿಂದ ತಿಳಿಸಿದ್ದಾರೆ. ಭಗವಂತನು ಅವರಿಗೆ ಶೀಘ್ರವಾಗಿ ಆರೋಗ್ಯ ಭಾಗ್ಯವನ್ನು ದಯಪಾಲಿಸಿ, ಅವರು ತಮ್ಮ ಸೇವೆಯನ್ನು ಮುಂದುವರಿಸುವಂತೆ ಅನುವಾಗಲೆಂದು ಹಾರೈಸುತ್ತೇವೆ. ಮುಖಚಿತ್ರದ ಸುಂದರವಾದ ಹಂಸವಾಹಿನೀ ಸರಸ್ವತೀ ಚಿತ್ರವನ್ನು ರಚಿಸಿಕೊಟ್ಟ ಮದರಾಸಿನ ಕಲಾವಿದರಾದ ಶ್ರೀಯುತ ಕೆ. ನಾಗೇಶ್ವರರಾವ್ ಅವರಿಗೂ ಈ ತೈಲಚಿತ್ರಗಳ ತ್ರಿವರ್ಣ ಬ್ಲಾಕುಗಳನ್ನು ಬಹು ಶೀಘ್ರ ಕಾಲದಲ್ಲಿ ತಯಾರಿಸಿಕೊಟ್ಟ ಮದರಾಸಿನ ಮೆಸರ್ಸ್ ಕ್ಲೆನ್ ಪರ್ಲ್ ಕಂಪೆನಿಯವರಿಗೂ ಮತ್ತು ತಮ್ಮ ಇತರ ಎಲ್ಲಾ ಕಾರ್ಯಗಳನ್ನೂ ಹಿಂದಕ್ಕಿಟ್ಟು, ಈ ತ್ರಿವರ್ಣ ಚಿತ್ರಗಳನ್ನು ಬಹು ಶೀಘ್ರ ಕಾಲದಲ್ಲೇ ಮುದ್ರಿಸಿಕೊಟ್ಟ, ಬೆಂಗಳೂರಿನ ಮೋಹನ್ ಪ್ರೆಸ್‌ನವರಿಗೂ ನಮ್ಮ ಅನೇಕ ವಂದನೆಗಳು.

ಒಟ್ಟಿನಲ್ಲಿ, ಈ ವಿಶೇಷ ಸಂಚಿಕೆಯು ನಮ್ಮ ವಾಚಕ ಮಹಾಶಯರಿಗೆ ಆನಂದದಾಯಕವಾಗುವಂತೆ ಸಿದ್ಧವಾಗಲು ನಮಗೆ ಅನೇಕ ಮಂದಿ ಮಿತ್ರರ, ಹಿತಚಿಂತಕರ ಅಗಾಧ ಪರಿಶ್ರಮದ ನೆರವು ದೊರೆತಿರದಿದ್ದರೆ ಈ ಕಾರ್ಯವು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ಅವರೆಲ್ಲರ ಉಪಕಾರವನ್ನೂ ಹೃತ್ಪೂರ್ವಕ ಸ್ಮರಿಸುತ್ತೇವೆ.

ವಿಶೇಷ ಸಂಚಿಕೆಗಳ ಪ್ರಕಟಣೆಯಲ್ಲಿ ಪಳಗಿದವರಲ್ಲವಾದ್ದರಿಂದ, ನಮ್ಮಿ ಪ್ರಥಮ ಪರಿಶ್ರಮದಲ್ಲಿ ಕುಂದುಕೊರತೆಗಳು ಕಂಡುಬರದಿರಲಾರವು. ಉದಾರಮತಿಗಳಾದ ಕನ್ನಡಿಗ ಮಹಾಜನರು ಅದನ್ನು ಮಾನಸಿಕ ಮಾಡಿ, 'ಸುಬೋಧ' ಪತ್ರಿಕೆಯ ವಿಷಯದಲ್ಲಿ ತಮಗಿರುವ ನಿರಂತರವಾದ ವಿಶ್ವಾಸವನ್ನೇ ಮುಂದುವರಿಸಿ, ಎಂದಿನಂತೆ ಪ್ರೋತ್ಸಾಹವಿತ್ತು ಅದರ ಸೇವೆಯು ಕನ್ನಡನಾಡಿಗೆ ಹೆಚ್ಚು ರೀತಿಯಿಂದ ದೊರೆಯುವಂತೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

[signature]

ವಂದೇ ಕರ್ಣಾಟಮಾತರಂ

(ಚಿತ್ರ ಪರಿಚಯ)

ಸಮಗ್ರ ಕರ್ಣಾಟಕದ ಸ್ಥಾವರ ಜಂಗಮ ವಸ್ತು ಸಮುದಾಯದ ಅಧಿದೇವತೆಯಾದ ಶ್ರೀ ಕರ್ಣಾಟಕಾಂಬೆಯನ್ನು ವ್ಯಕ್ತಸ್ವರೂಪದಿಂದ ಕಾಣಬೇಕೆಂದಿದ್ದ ಚಿರಕಾಲದ ಒಂದು ಮನೋಭಿಲಾಷೆಯ ಪ್ರಕಟರೂಪಚಿತ್ರವಿದು.

ಇದರಲ್ಲಿ ಪ್ರಾಚೀನ ಕರ್ಣಾಟಕದ ದಕ್ಷಿಣೋತ್ತರ ಮೇರೆಗಳಾದ ಕಾವೇರೀ-ಗೋದಾವರೀ ನದಿಗಳು ಗೋಚರವಾಗುತ್ತಿವೆ. ದೇವಿಯ ವಾಹನವಾದ ಸಿಂಹವು ಗಂಭೀರವಾದ ನೋಟದಿಂದ ನೋಡುತ್ತಾ ಗಮನೋನ್ಮುಖವಾಗಿ ನಿಂತಿದೆ.

ದೇವಿಗೆ ಒಂದು ಪ್ರದಕ್ಷಿಣೆಯನ್ನು ಆರಂಭಿಸಿ ತನ್ಮೂಲಕ ಚಿತ್ರಿತವಾದ ಕನ್ನಡನಾಡಿನ ಅತಿ ಮುಖ್ಯ ಭಾಗಗಳ ಪರಿಚಯ ಮಾಡಿಕೊಳ್ಳೋಣ.

ಸಿಂಹದ ತಲೆಯ ಮೇಲ್ಭಾಗದ ಪ್ರದೇಶದಲ್ಲಿ ಮೈಸೂರು ದೇಶದ ಸುಪ್ರಸಿದ್ಧ ಶೈವಪುಣ್ಯ ಕ್ಷೇತ್ರವೂ ಆರೋಗ್ಯ ಪ್ರದ ಕ್ಷೇತ್ರವೂ ಎಂದು ಕೀರ್ತಿ ಪಡೆದ **ನಂದೀಬೆಟ್ಟ**ವಿದೆ. ಅಲ್ಲಿಂದ ಹಾಗೇ ದಕ್ಷಿಣಕ್ಕೆ ಬರುತ್ತಾ ಚಿತ್ರಪಟದ ಪೂರ್ವಾಗ್ರ ಭಾಗದಲ್ಲಿ ಕಾಣಿಸುವುದು ಕೋಲಾರದ ಚಿನ್ನದ ಗಣಿಗಳನ್ನು ಸೂಚಿಸುತ್ತದೆ. ಅದರ ಪಕ್ಕದಲ್ಲಿರುವುದು **ಬೆಂಗಳೂರು;** ಈಗಿನ ಸರ್ಕಾರದ ಮುಖ್ಯ ಆಡಳಿತ ಕೇಂದ್ರವಾದ ಅಠಾರಾಕಚೇರಿಯ ಚಿತ್ರವು ಅದನ್ನು ಸೂಚಿಸುತ್ತದೆ. ಅದರ ಕೆಳಗಡೆ ಕಾಣಿಸುವುದೇ ಕಾವೇರೀ ನದಿಯ ಜಲಪಾತದಿಂದ ಉತ್ಪತ್ತಿಯಾದ ವಿದ್ಯುಚ್ಛಕ್ತಿಯ ಕೇಂದ್ರಸ್ಥಾನ **ಶಿವಸಮುದ್ರ** (Bluff) ಅದರ ಪಕ್ಕದಲ್ಲಿರುವುದು ಮೈಸೂರಿನ ಪೂರ್ವದ ರಾಜಧಾನಿ **ಶ್ರೀರಂಗಪಟ್ಟಣ.** ಇದು ಅಲ್ಲಿಯ ಭವ್ಯವೂ ಉನ್ನತವೂ ಆದ ಜುಮ್ಮಾ ಮಸೀದಿಯಿಂದ ಚಿತ್ರಿತವಾಗಿದೆ.

ಚಿತ್ರಪಟದ ದಕ್ಷಿಣಾಗ್ರದಲ್ಲಿ ಹರಿಯುತ್ತಿರುವುದು **ಕಪಿಲಾನದಿ.** ಅದರ ದಡದಲ್ಲೇ ಇರುವ **ನಂಜನಗೂಡು** ಶ್ರೀ ನಂಜುಂಡೇಶ್ವರನ ದೇವಾಲಯ ಶಿಖರದಿಂದ ನಿರೂಪಿತವಾಗಿದೆ. ಅದಕ್ಕೆ ವಾಯುವ್ಯ ದಿಕ್ಕಿಗೆ ಗೋಚರವಾಗುತ್ತಿರುವುದೇ ಸಂಸ್ಥಾನದ ಶ್ರೀಮನ್ಮಹಾರಾಜರವರ ಆವಾಸಸ್ಥಾನವಾಗಿರುವ **ಮೈಸೂರು** ರಾಜಧಾನಿ. ಅದು ನೂತನ **ಅರಮನೆಯ ಭವ್ಯ ಸೌಧದ** ಚಿತ್ರದಿಂದ ವ್ಯಕ್ತೀಕರಿಸಲ್ಪಟ್ಟಿದೆ. ಅದಕ್ಕೆ ಸಾಕ್ಷಾತ್ ಉತ್ತರದಲ್ಲಿರುವುದೇ **ಶ್ರೀ ಕೃಷ್ಣರಾಜಸಾಗರ.** ಅದರ ಉತ್ತರಭಾಗದಲ್ಲಿ ಮೇಲಿನಿಂದ ಕ್ರಮವಾಗಿ ಶ್ರೀ ಗೋಮಟೇಶ್ವರನ ಸಾನ್ನಿಧ್ಯದಿಂದ ಜೈನರ ಪವಿತ್ರ ಯಾತ್ರಾಸ್ಥಳವಾದ **ಶ್ರವಣಬೆಳುಗೊಳವೂ, ಹಳೇಬೀಡು** ಮತ್ತು **ಬೇಲೂರು** ಎಂಬೀ ಶಿಲ್ಪಕಲಾ ಕೇಂದ್ರ ಸ್ಥಾನಗಳೂ ಚಿತ್ರಿತವಾಗಿವೆ.

ಬೇಲೂರಿನಿಂದ ವಾಯುವ್ಯ ದಿಕ್ಕಿನಲ್ಲಿ ಪಟದ ಪಶ್ಚಿಮಾಗ್ರದಲ್ಲಿ ಕಂಡುಬರುತ್ತಿರುವ ಸ್ಥಳ ಶ್ರೀ ಕೃಷ್ಣ ಸಾನ್ನಿಧ್ಯದಿಂದ ಪವಿತ್ರ ವೈಷ್ಣವ ಕ್ಷೇತ್ರವೆನ್ನಿಸಿದ **ಉಡುಪಿ.** ಬೇಲೂರಿನಿಂದ ನೇರ ಉತ್ತರದಲ್ಲಿ ಶ್ರೀ **ಶೃಂಗೇರಿ** ಕ್ಷೇತ್ರವಿದೆ. ಶೃಂಗೇರಿಯಲ್ಲಿ ಶ್ರೀ ಶಂಕರಾಚಾರ್ಯರೂ, ಉಡುಪಿಯಲ್ಲಿ ಶ್ರೀ ಮಧ್ವಾಚಾರ್ಯರೂ, ಬೇಲೂರಿನ ಶ್ರೀ ಕೇಶವನ ಸಾನ್ನಿಧ್ಯದಲ್ಲಿ ಶ್ರೀ ರಾಮಾನುಜಾಚಾರ್ಯರೂ ಚಿತ್ರಿಸಲ್ಪಟ್ಟಿದ್ದಾರೆ.

ಶೃಂಗೇರಿಗೆ ವಾಯುವ್ಯಕ್ಕೆ **ಭದ್ರಾವತಿಯ ಕಬ್ಬಿಣ, ಸಿಮೆಂಟು, ಕಾಗದ** ಮುಂತಾದ **ಕಾರ್ಖಾನೆಗಳ ಕಾರ್ಯಾಲಯಗಳು** ಗೋಚರವಾಗುತ್ತಿವೆ. ಅದರ ಮೇಲೆ ಕಂಡುಬರುತ್ತಿರುವುದೇ ಸುಪ್ರಸಿದ್ಧ **ಗೇರುಸೊಪ್ಪೆ ಜಲಪಾತ (ಜೋಗ).** ಭದ್ರಾವತಿಯಿಂದ ಸ್ವಲ್ಪ ಪೂರ್ವಕ್ಕೆ ನಡೆದರೆ ಅಲ್ಲಿ ಕರ್ಣಾಟಕದ ಪ್ರಾಚೀನ ರಾಜವಂಶ ಕದಂಬರ ರಾಜಧಾನಿ **ಬನವಾಸಿಯು** ದೃಷ್ಟಿಗೋಚರವಾಗುತ್ತದೆ. ಅಲ್ಲಿಂದ ನೇರವಾಗಿ ಉತ್ತರಕ್ಕೆ ಪ್ರಯಾಣ ಮಾಡಿದರೆ ಕ್ರಮವಾಗಿ **ಗದಗು, ಬಾದಾಮಿ, ಬಿಜಾಪುರ, ಪಂಡರಾಪುರ**ಗಳ ಸಂದರ್ಶನವಾಗುತ್ತದೆ. ಗದಗು **ವೀರನಾರಾಯಣಸ್ವಾಮಿಯ** ಚಿತ್ರದಿಂದ ಸೂಚಿತವಾಗಿದೆ. ಸುಪ್ರಸಿದ್ಧ ಕನ್ನಡ ಕವಿಶೇಖರ **ನಾರಾಯಣಪ್ಪ (ಕುಮಾರವ್ಯಾಸನು,)** ವೀರನಾರಾಯಣ ಸ್ವಾಮಿಯ ಪಾದತಲದಲ್ಲಿ ಕುಳಿತು ಕಾವ್ಯ ರಚನೆ ಮಾಡುತ್ತಿದ್ದಾನೆ. ಅತ್ತ ವಾಯುವ್ಯ ದಿಕ್ಕಿನಿಂದ ಗ್ರಾಮಸಂಚಾರದಿಂದ ತನ್ನ ಲೋಕಸೇವಾ ಕಾರ್ಯ

ದಲ್ಲಿ ಮುಂದಡಿಯಿಟ್ಟು ಸರ್ವಜ್ಞಕವಿ ನಡೆದು ಬರುತ್ತಿರುವುದು ಕಾಣುತ್ತಿದೆ.

ಕರ್ಣಾಟಕಾಂಬೆಯ ಕಂಠಪ್ರದೇಶದ ಉಭಯ ಪಾರ್ಶ್ವಗಳಲ್ಲೂ ಪ್ರಾಚೀನ ಕರ್ಣಾಟಕ ರಾಜಧಾನಿ ವಿಜಯನಗರದ ಭಗ್ನಾವಶೇಷವನ್ನು ಸೂಚಿಸುವ ಹಂಪೆಯ ಚಿತ್ರಗಳು ಗೋಚರಿಸುತ್ತವೆ. ದೇವಿಯ ಬಲಭಾಗದಲ್ಲಿರುವುದು ಶ್ರೀ ವಿರೂಪಾಕ್ಷೇಶ್ವರನ ದೇವಾಲಯದ ಗೋಪುರ, ಎಡಭಾಗದಲ್ಲಿರುವುದು ಹಾಳ ಹಂಪೆಯಲ್ಲಿರುವ ಹಜಾರ ರಾಮಸ್ವಾಮಿಯ ದೇವಾಲಯ.—

ಚಿತ್ರಪಟದ ಉತ್ತರಾಗ್ರಭಾಗದಲ್ಲಿ ಕಾಣುತ್ತಿರುವುದು **ಕಲ್ಯಾಣ** ಬಿಜ್ಜಳ ರಾಜಧಾನಿ. ಅದರ ಮೇಲ್ಭಾಗದಲ್ಲಿ ಪೂರ್ವಾಭಿಮುಖವಾಗಿ ಹರಿಯುವುದು ಕರ್ಣಾಟಕದ ಉತ್ತರದ ಮೇರೆಯಾದ ಗೋದಾವರಿ. ಅದರ ದಕ್ಷಿಣಕ್ಕೆ ಕೃಷ್ಣಾನದಿಯೂ, ಅದಕ್ಕೂ ದಕ್ಷಿಣಕ್ಕೆ ತುಂಗಭದ್ರೆಯೂ ಪ್ರವಹಿಸುತ್ತಿವೆ. ತುಂಗಭದ್ರಾ ತೀರದಲ್ಲೇ ಸುಪ್ರಸಿದ್ಧರಾದ ಶ್ರೀ ರಾಘವೇಂದ್ರಸ್ವಾಮಿಗಳ ವೃಂದಾವನದಿಂದ ಪುಣ್ಯಕ್ಷೇತ್ರವೆನ್ನಿಸಿದ **ಮಂತ್ರಾಲಯವು** ಚಿತ್ರಿತವಾಗಿದೆ. ಅಲ್ಲಿಂದ ನಾವು ನೇರವಾಗಿ ದಕ್ಷಿಣ ದಿಕ್ಕಿಗಿಳಿದು ಬಂದು ನಂದೀ ಬೆಟ್ಟವನ್ನು ತಲುಪಿ ನಂದೀಶ್ವರನಿಗೆ ನಮಸ್ಕರಿಸಿದರೆ ದೇವಿಯ ಒಂದು ಪ್ರದಕ್ಷಿಣೆಯನ್ನು ಮುಗಿಸಿದಂತಾಗುವುದು.—

ಈ ನಮ್ಮ ಸಂಚಾರದಲ್ಲಿ ನಾವು ಕರ್ಣಾಟಕದ ಸುಪ್ರಸಿದ್ಧರಾದ ಮೂವರು ಧರ್ಮ ಪ್ರಚಾರಕನ್ನು ಕಾಣಬಹುದು. ಶಿವನ ಸಮುದ್ರಸಮೀಪದಲ್ಲಿ **ಶ್ರೀ ಪುರಂದರ ದಾಸರು** ತಂಬೂರಿ ತಾಳಗಳನ್ನು ಧರಿಸಿ ಹರಿಭಜನೆಯಲ್ಲಿ ನಿರತರಾಗಿ ನಿಂತಿದ್ದಾರೆ. ಬೇಲೂರಿನಿಂದ ದಕ್ಷಿಣಕ್ಕೆ **ಶ್ರೀ ಕನಕದಾಸರು** ಕೈಯಲ್ಲಿ ಏಕನಾದವನ್ನು ಧರಿಸಿ ಶ್ರೀ ಆದಿಮೂಲನ ಭಜನೆಯಲ್ಲಿ ತೊಡಗಿ ನಿಂತಿದ್ದಾರೆ. ನಂದಿಯಬೆಟ್ಟಕ್ಕೆ ಉತ್ತರ ಭಾಗದಲ್ಲಿ **ಶ್ರೀ ಚನ್ನಬಸವೇಶ್ವರರು** ಆಸನಾರೂಢರಾಗಿ ಕುಳಿತು ಧರ್ಮಬೋಧೆಯಲ್ಲಿ ತೊಡಗಿದ್ದಾರೆ.

ಈ ನಮ್ಮ ಸಂಚಾರದಲ್ಲಿ ನಾವು ಶೃಂಗೇರಿ ಉಡುಪಿ ಬೇಲೂರುಗಳಲ್ಲಿ ದ್ವೈತಾದ್ವೈತವಿಸಿಷ್ಟಾದ್ವೈತ ಮತೋದ್ಧಾರಕರಾದ ಮೂವರು ಸುಪ್ರಸಿದ್ಧ ಆಚಾರ್ಯರನ್ನು ಸಂದರ್ಶಿಸಿದ್ದಾಗಿದೆ.

ಜೊತೆಗೇ, ಈ ಪ್ರದಕ್ಷಿಣೆಯ ಸಂಚಾರದಲ್ಲಿ ನಮಗೆ ಕರ್ಣಾಟಕದ ಮೂವರು ಕವಿ ಶೇಖರರನ್ನು ನೋಡುವ ಸಂಯೋಗವೂ ಒದಗಿದೆ. ಕರ್ಣಾಟಕದ ಸುಪ್ರಸಿದ್ಧ ಆದಿ ಜೈನಕವಿ ಪಂಪನು ದೇವಿಯ ಪಾದಮೂಲದಲ್ಲೇ ಕುಳಿತು ಗ್ರಂಥ ರಚನೆಯಲ್ಲಿ ತೊಡಗಿದ್ದಾನೆ. ವಿಖ್ಯಾತ ಬ್ರಾಹ್ಮಣ ಕವಿ ಕುಮಾರವ್ಯಾಸನನ್ನೂ, ವೀರಶೈವ ಕವಿ ಸರ್ವಜ್ಞನನ್ನೂ ಈ ಮೊದಲೇ ನೋಡಿದ್ದಾಗಿದೆ.

ದೇವಿಯು ಸರ್ವಾಭರಣ ಭೂಷಿತಳಾಗಿ ಸಂಪದ್ಯುಕ್ತವಾದ ಪದ್ಮ ಪುಷ್ಪದಮೇಲೆ ಮೂರ್ತಿಗೊಂಡಿದ್ದಾಳೆ. ಆಕೆಯುಟ್ಟಿರುವ ಹಸಿರುಡಿಗೆಯು ಕರ್ಣಾಟಕದ ವಿಸ್ತಾರವಾದ ಶಾಲಿವನ ಕ್ಷೇತ್ರಗಳನ್ನೂ, ಮಲೆನಾಡಿನ ಅವಿರಳ ಕಾನನ ಪ್ರದೇಶವನ್ನೂ ಸೂಚಿಸುತ್ತದೆ. ಬಲದ ಒಂದು ಹಸ್ತದಿಂದ ಅಭಯದಾನ ಮಾಡುತ್ತ ದೇವಿಯು ಮತ್ತೊಂದು ಹಸ್ತದಿಂದ ಮಹಾತ್ಮಾಜೀ ಅವರಿಂದ ದತ್ತವಾಗಿರುವ ಚರಕವೇ ಕರ್ಣಾಟಕದ ಭಾಗ್ಯ ಚಕ್ರ—ಅದನ್ನು ಅನುಸರಿಸಿ ನಡೆಯುವುದೇ ವಿಜಯಸಾಧನೆಗೆಮುಖ್ಯ ಗುರಿ ಎಂಬುದನ್ನು ಚಲಿಸುತ್ತಿರುವ ಝೂಂಡಾದಿಂದ ಸೂಚಿಸುತ್ತಿದ್ದಾಳೆ. ಎಡದ ಒಂದು ಕೈಯಲ್ಲಿ, ಜ್ಞಾನದಾನಕ್ಕಾಗಿ ಪುಸ್ತಕವನ್ನೂ ಮತ್ತೊಂದರಲ್ಲಿ ಸೌಭಾಗ್ಯ ಸೂಚಕವಾದ ಪದ್ಮಪುಷ್ಪವನ್ನೂ ಹಿಡಿದು, ಪ್ರಸನ್ನ ಮುಖಮುದ್ರೆಯಿಂದ ಕೂಡಿ ಸಮಗ್ರ ಕರ್ಣಾಟಕ ರಾಷ್ಟ್ರವನ್ನೂ—ಕೃಪಾಕಟಾಕ್ಷದಿಂದ ಅವಲೋಕಿಸುತ್ತಿದ್ದಾಳೆ. ಧ್ವಜದಂಡದ ಅಗ್ರಭಾಗದಲ್ಲಿ—ನಮ್ಮ ಮೈಸೂರು ರಾಜಮನೆತನಕ್ಕೆ ವಿಜಯಧ್ವಜವೆನ್ನಿಸಿರುವ ಗಂಡಭೇರುಂಡವು ಚಿತ್ರಿತವಾಗಿ, ಕರ್ಣಾಟಕದ ಈ ಏಕಮಾತ್ರ ಪ್ರಾಚೀನ ರಾಜವಂಶವನ್ನು 'ಚಿರಮಭಿವರ್ಧತಾಂ ಯದುಸಂತಾನ ಶ್ರೀಃ' ಎಂಬ ಪರಮಾನುಗ್ರಹ ವಾಕ್ಯದಿಂದ ಆಶೀರ್ವದಿಸುತ್ತಾ ಗಂಭೀರವಾಗಿ ಸುಸ್ವಾಗತಗೊಳಿಸುವಂತಿದೆ.

ಇಂತಹ ಸರ್ವಮಂಗಳ ಸ್ವರೂಪಿಣಿಯಾದ, ಸರ್ವ ಸೌಭಾಗ್ಯ ನಿಧಿಯಾದ ಸರ್ವ ಸಂಪತ್ಪ್ರದಳಾದ ಕರ್ಣಾಟಕ ಮಾತೃದೇವತೆಯ ಪಾದತಳದಲ್ಲಿ ನಮ್ಮ ಅನಂತಾನಂತ ಪ್ರಣಾಮಗಳು.

ಕನ್ನಡ ಹರಿದಾಸ ಸಾಹಿತ್ಯ

ಕೀರ್ತನಾಚಾರ್ಯ ಶ್ರೀ ಬೇಲೂರು ಕೇಶವದಾಸರು.

ಸಂಸ್ಕಾರಿಯಾದ ಭಾವುಕ ಮಾನವನ ಮನೋರಾಜ್ಯವನ್ನು ಪ್ರವೇಶಿಸಿದ ಬಾಹ್ಯ ಜಗತ್ತಿನ ಅನುಭವವು, ರಸವತ್ತಾದ ಶಬ್ದರೂಪದಿಂದ ಪ್ರವಹಿಸಿದರೆ, ಆ ಶಬ್ದರಾಶಿ ಸಾಹಿತ್ಯವೆನ್ನಿಸಿಕೊಳ್ಳುತ್ತದೆ.

ಯತಿ, ಗಣ, ಪ್ರಾಸ, ಛಂದಸ್ಸು, ಇಂಗಿತ, ಉಪಮಾನ, ಅಲಂಕಾರಗಳಿಂದೆಲ್ಲಾ ನಿಯಮಬದ್ಧವಾದಂತೆ, ಆ ಸಾಹಿತ್ಯದ ಅಂದಚೆಂದವು ಅಧಿಕವಾಗುತ್ತದೆ. ಓದುವವರನ್ನು, ಕೇಳುವವರನ್ನು, ಕಲಿಯಬೇಕೆಂದು ಕಾತುರಗೊಳಿಸುತ್ತದೆ. ಕಲಿತು ಕಲಿಸಬೇಕೆಂದೂ ಪ್ರೇರಿಸುತ್ತದೆ.

ದರ್ಶನ ವಿಜ್ಞಾನ ಶಾಸ್ತ್ರಗಳಂತೆ ನಿರಲಂಕಾರವಾಗಿರಲು ಸಾಹಿತ್ಯವು ಬಯಸುವದಿಲ್ಲ. ಆದ್ದರಿಂದ ಶಾಸ್ತ್ರಕಾರರು ಕಾವ್ಯವನ್ನು ಕಾಂತಾ ಸಮ್ಮಿತೆಯೆಂದು ಕರೆದಿದ್ದಾರೆ. ಕಾವ್ಯ ಅಥವ ಸಾಹಿತ್ಯವು ಕಾಂತಾ ಸಮ್ಮಿತೆಯಾದರೆ, ಅದಕ್ಕೆ ಕಾಂತೆಗಿರುವಂತೆ ಅಲಂಕಾರಗಳಿರಬೇಕಾಗುತ್ತದೆ. ಭಾವಭಂಗಿಗಳಿರಬೇಕಾಗುತ್ತದೆ. ತನ್ನ ಮನಸ್ಸನ್ನು ಕೊಟ್ಟು ಅನ್ಯರ ಮನಸ್ಸನ್ನು ಆಕರ್ಷಿಸುವ ಶಕ್ತಿ ಇರಬೇಕಾಗುತ್ತದೆ. ಇರದಿದ್ದರೆ ಕಾವ್ಯದಲ್ಲಿ ಲಾಲಿತ್ಯವಿರುವದಿಲ್ಲ; ಲಾವಣ್ಯವಿರುವದಿಲ್ಲ. ಅದು ಹೆಣ್ಣು ಹೆಂಗಸಿನಂತಿರುವದಿಲ್ಲ; ಗಂಡು....ಯಂತಿರುತ್ತದೆ.

ಇಷ್ಟು ಬಗೆಯಿಂದೆಲ್ಲಾ ವಿರಚಿತವಾದ ಕಾವ್ಯವು ಮಣ್ಣಿನ ಹೆಣ್ಣು ಗೊಂಬೆಯಂತೆ ಮಾತ್ರ ಕಂಗೊಳಿಸಿದರೆ—ಶಬ್ದ ಮಾತ್ರವಾಗಿದ್ದು ಭಾವೋದ್ದೀಪನವನ್ನುಂಟುಮಾಡದಿದ್ದರೆ—ನಿರ್ಜೀವ ಪುತ್ಥಳಿಯಂತಿದ್ದರೆ—ಅದರಲ್ಲಿ ಚೈತನ್ಯವನ್ನುಂಟುಮಾಡಲು, ಆಗ ಅದು ನಾದವನ್ನವಲಂಬಿಸಬೇಕಾಗುತ್ತದೆ. ನಾದವನ್ನವಲಂಬಿಸಿದೊಡನೆ, ಕಾಲವು ಅರಿವಿಲ್ಲದೆ ತನ್ನಿಂದ ತಾನೇ ಸುಳಿದುಬಿಡುತ್ತದೆ. ನಾದ ಕಾಲಗಳ ಪ್ರಭಾವದಿಂದ ಭಾಷೆಯ ಭಾವವು ವಿಕಾಸವಾಗುತ್ತದೆ. ಕೇಳಿ ಕಲಿಯಬೇಕೆನಿಸುತ್ತದೆ. ಕಲಿತು ಕಲಿಸಬೇಕೆನಿಸುತ್ತದೆ. ಕಲಿಸಿ ನಲಿಯಬೇಕೆನಿಸುತ್ತದೆ. ನಲಿದು ಒಲಿಸಬೇಕೆನಿಸುತ್ತದೆ.

ಹೀಗಿರದೆ ತನ್ನ ಆನಂದಕ್ಕೆ ತಾನು ಮನಬಂದಂತೆ ಬರೆದೆನೆಂದರೆ, ಇದು ನನ್ನ ಕವಿತೆ, ಸನ್ನ ಸಾಹಿತ್ಯ, ಎಂದರೆ, ಅದು ಸಾಹಿತ್ಯವೆನಿಸುವದಿಲ್ಲ. ತನ್ನನ್ನು ಆನಂದಗೊಳಿಸಿದ ಸಾಹಿತ್ಯ ಎಲ್ಲರನ್ನೂ ಆನಂದಗೊಳಿಸಬೇಕು. ಹಸುವಿನ ಕೆಚ್ಚಲಿನ ಹಾಲು ಹಸುವಿಗಾಗಿ ಅಲ್ಲ; ಅದು ಅದರ ಕರುವಿಗೆ, ಅದನ್ನು ಕರೆದು ಕುಡಿಯುವವರಿಗೆ.

ಮಾನವನು ವಿಶ್ವಮಾನವನಾಗಲು ಬಯಸುತ್ತಾನೆ. ತನ್ನ ಭಾವ ಎಲ್ಲರ ಭಾವವಾಗಿರಬೇಕೆಂದು ಭಾವಿಸುತ್ತಾನೆ. ಅವನು ಪ್ರಪಂಚದ ಎಷ್ಟು ಭಾಗವನ್ನು ತನ್ನದನ್ನಾಗಿ ಮಾಡಿಕೊಂಡಿರುತ್ತಾನೋ ಮಾಡಿಕೊಂಡ ಎಷ್ಟು ಭಾಗವನ್ನು ಪ್ರಪಂಚದ ಜನರಿಗೆ ಕೊಡಲು ಸಮರ್ಥನಾಗಿರುತ್ತಾನೋ ಆ ಪ್ರಮಾಣವನುಸರಿಸಿ ಅವನ ಭಾಷೆ ಅವನ ಭಾವ ಅಥವಾ ಅವನ ಸಾಹಿತ್ಯ ವ್ಯಾಪಕವೆನಿಸುತ್ತದೆ. ಮನಸ್ಸಿನ ಸೃಷ್ಟಿಯನ್ನು ಪ್ರತ್ಯಕ್ಷ ಸೃಷ್ಟಿಯಂತೆ ತೋರಿಸುವ—ಮನಸ್ಸಿನ ಭಾವವನ್ನು ಭಾಷೆಯಲ್ಲಿಳಿಸುವ ತನ್ನದಾದ ಆನಂದವನ್ನು ಎಲ್ಲರದನ್ನಾಗಿ ಮಾಡುವ ಶಕ್ತಿ ಯಾವನಿಗಿದೆ ಅವನು ವಿಶ್ವಮಾನವನಾಗುತ್ತಾನೆ. ಅವನ ಸಾಹಿತ್ಯ ವಿಶ್ವಸಾಹಿತ್ಯವೆನಿಸುತ್ತದೆ.

ಪ್ರತಿಭಾ ಸಂಪನ್ನ ಸಾಹಿತಿಗಳು ಗದ್ಯಗ್ರಂಥಗಳನ್ನು ಬರೆಯುತ್ತಾರೆ. ಗದ್ಯ ಬರೆಯುವವರಿಗೆಲ್ಲಾ ಪದ್ಯ ಬರೆಯಲು ಬರುವದಿಲ್ಲ. ಪದ್ಯ ಬರೆಯುವವರು ಸಹಸ್ರಗಟ್ಟಲೆ ಪದ್ಯ ಬರೆಯುತ್ತಾರೆ. ಒಂದು ವೃತ್ತದಲ್ಲಿ ಅಥವಾ ಒಂದು ಷಟ್ಪದಿಯಲ್ಲಿ ಬರೆದವರು

ಮತ್ತೊಂದರಲ್ಲಿ ಬರೆಯುವದಿಲ್ಲ. ಬರೆಯಲು ಹೊರಟರೆ ಸರಣಿ ಬರುವದಿಲ್ಲ. ಭಾಮಿನಿಯಿಂದಲೋ, ವಾರ್ಧಿಕದಿಂದಲೋ, ಅಥವಾ ಯಾವ ವೃತ್ತದಿಂದಲೋ, ಗ್ರಂಥಗ್ರಂಥಗಳನ್ನು ಬರೆದು ಮುಗಿಸುತ್ತಾರೆ. ವಿವಿಧ ಗದ್ಯ ಪದ್ಯಗಳಲ್ಲಿ ಚಂಪೂ ಗ್ರಂಥ ಬರೆದಿರುವವರನ್ನು ನೋಡಿದರೂ, ಅವರು **ಪದಗ್ರಂಥ** (ಸಂಗೀತ ಸಾಹಿತ್ಯ) ವನ್ನು ಬರೆಯುವದಿಲ್ಲ. ಅವರಿಗೆ ಸಂಗೀತ ಗೊತ್ತಿರುವದಿಲ್ಲ. ಗದ್ಯವೆಂದರೆ ಗದ್ಯ, ಪದ್ಯವೆಂದರೆ ಪದ್ಯ, ಪದವೆಂದರೆ ಪದ, ತಾಳಶಾಸ್ತ್ರದ ವಿವಿಧ ಕಾಲಗಳಲ್ಲಿ—ತ್ರ್ಯಶ್ರ ಮಿಶ್ರ ಖಂಡ ಸಂಕೀರ್ಣ ಜಾತಿಗಳಲ್ಲಿ-ಮುಕ್ತಾಯ ಸ್ವರವನ್ನು ಸಾಹಿತ್ಯದಿಂದ ಪದ ಖಂಡಿತವಾಗಿ ಬರೆಯುವ ಸಾಮರ್ಥ್ಯವಿರುವದು ಸಾಮಾನ್ಯವಲ್ಲ. ಈ ಎಲ್ಲ ದೃಷ್ಟಿಯಿಂದ ನೋಡಿದರೂ **ಕನ್ನಡ ಹರಿದಾಸ ಸಾಹಿತ್ಯವು** ವಿಶ್ವಸಾಹಿತ್ಯದ ಜಾತಿಯಲ್ಲಿ ಅಗ್ರಸ್ಥಾನದಲ್ಲಿರಲು—ಅಭಿಮಾನದಿಂದಲ್ಲ — ತನ್ನ ಯೋಗ್ಯತೆಯಿಂದಲೇ ಸಮರ್ಥವಾಗಿದೆ.

ಸಾಹಿತ್ಯದಲ್ಲಿ ಪಂಡಿತ ಸಾಹಿತ್ಯ, ಸಂತಸಾಹಿತ್ಯ ಎಂಬ ಎರಡು ಭಾಗಗಳು ಭರತಖಂಡದ ಎಲ್ಲ ಭಾಷೆಗಳಲ್ಲೂ ಇವೆ. ಪಂಡಿತ ಸಾಹಿತ್ಯ ಪಾಠಕ್ಕೆ, ಸಂತಸಾಹಿತ್ಯ ಪಠಣೆಗೆ, ಮನೆಮನೆಯಲ್ಲೂ ವ್ಯಾಪಿಸಿದರೆ ಜೀವನವು ಸುಖಮಯವಾಗುತ್ತದೆ. ಸಂತ ಸಾಹಿತ್ಯದ ಪಠಣೆ ಹಿಂದೀ ರಾಷ್ಟ್ರಗಳಲ್ಲಿದ್ದಂತೆ, ಮಹಾರಾಷ್ಟ್ರದಲ್ಲಿದ್ದಂತೆ ಕನ್ನಡನಾಡಿನಲ್ಲಿರದಿರುವದು ದೇಶದ ದುರ್ದೈವವಾಗಿರುತ್ತದೆ.

ಕನ್ನಡ ಹರಿದಾಸ ಸಾಹಿತ್ಯವಾದರೋ—ಒಂದು ಸಾವಿರ ವರ್ಷಗಳ ಪುರಾತನತ್ವವುಳ್ಳದ್ದಾಗಿದೆ. ಕ್ರಿ. ೯ನೇ ಶತಮಾನದಿಂದಲೇ ಕನ್ನಡ ಹರಿದಾಸರ ಸಾಹಿತ್ಯದ ಮಾದರಿಗಳು ದೊರೆಯುತ್ತವೆ. ಸಾಹಿತ್ಯದಲ್ಲಿ ಸಾಹಿತ್ಯ ಸಾಹಿತ್ಯ, ಸಂಗೀತ ಸಾಹಿತ್ಯ ಎಂಬ ಪ್ರಭೇದಗಳಿವೆಯೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು. ಸಂಗೀತ ಸಾಹಿತ್ಯವೆಂಬುವದು ಒಂದು ಸಾವಿರ ವರ್ಷಗಳ ಹಿಂದೆಯೇ ಕನ್ನಡ ಹರಿದಾಸರಿಂದ ಆರಂಭವಾಗಿದೆ. ಇಷ್ಟು ಪುರಾತನ ಸಂಗೀತ ಸಾಹಿತ್ಯ ಪ್ರಪಂಚದ ಯಾವ ಭಾಷೆಯಲ್ಲೂ ಇಲ್ಲ.

"**ಉಗಾಭೋಗ**"ವೆಂಬ ಸಂಗೀತ ಪ್ರಬಂಧವು ಭರತನ ನಂತರ ಬಂದ ಮೊದಲ ಗೀತ ಪ್ರಬಂಧವಾಗಿದೆ. ನೋಡುವದಕ್ಕೆ ವಚನದಂತಿದ್ದರೂ "**ಉಗಾಭೋಗ**" ವಚನವಲ್ಲ. **ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರಾ, ಆಭೋಗ,** ಗಳೆಂಬ ಪಂಚಧಾತುಕ ಗೀತ ಪ್ರಬಂಧ, ಆದ್ಯಂತ ಶಬ್ದಗಳ ಸಂಧಿಯಿಂದ **ಉದ್ಗ್ರಾಹಾಭೋಗ**ವೆಂದು ಕರೆಸಿಕೊಂಡು ಲಾಲಿತ್ಯಕ್ಕಾಗಿ **ಉಗಾಭೋಗ**ವಾಗಿದೆ. ಹಾಡುವ ರೀತಿಯಲ್ಲಿ ಹಾಡಿದರೆ ಇದರಂಥ ಗೀತಪ್ರಬಂಧ ಮತ್ತೊಂದಿರುವದಿಲ್ಲ. ಇದಕ್ಕೆ ಪಲ್ಲವಿ ಅನುಪಲ್ಲವಿಗಳಿಲ್ಲ. ವಿನ್ಯಾಸ ಮಾಡುವಾಗ ಪುನರಾವರ್ತಿಯು ಬೇಸರವಿಲ್ಲ. ಸಪ್ತ ತಾಳಗಳಲ್ಲಿ ತಿರುಗಿಸಿ ಹಾಡಿದರೂ ಉಗಾಭೋಗದ ಶಬ್ದ ಮುರಿಯುವದಿಲ್ಲ. ಹಿಂದುಸ್ತಾನಿ ಕರ್ನಾಟಕ ಸಂಗೀತ ಪದ್ಧತಿಗಳೆರಡಕ್ಕೂ ಮೂಲಾಧಾರ **ಉಗಾಭೋಗ.** ಮೇಲಿನ ಪಂಚಧಾತುಕವಾಗಿ ಶಾಸ್ತ್ರೀಯವಾಗಿ ಬೆಳೆದದ್ದು ಕರ್ನಾಟಕ ಸಂಗೀತ. ಆದ್ಯಂತ ಉದ್ಗ್ರಾಹ—ಆಭೋಗಗಳಿಂದ ಬೆಳೆದದ್ದು ದ್ವಿಧಾತುಕ ಹಿಂದೂಸ್ಥಾನೀ ಸಂಗೀತ. ಎರಡಕ್ಕೂ ಆದಿಪುರುಷರು ಕನ್ನಡಿಗರು, ಮತ್ತೆ ಕೇಳಿದರೆ **ಹರಿದಾಸರು.**

ಉಗಾಭೋಗಕ್ಕಿಂತ ಪ್ರೌಢವಾದ ಸಂಗೀತ ಸಾಹಿತ್ಯವೆಂದರೆ **ಸುಳಾದಿ.** ಸಪ್ತತಾಳಗಳ ಅಲಂಕಾರವೋ ಎಂಬಂತೆ ಪ್ರತ್ಯೇಕ ಸಾಹಿತ್ಯಗಳಿರುವುದು ಸುಳಾದಿಗೆ ಲಕ್ಷಣ. ಸುಳಾದಿಯಲ್ಲೂ ಸಂಗೀತ ಸುಳಾದಿ, ಸಾಹಿತ್ಯ ಸುಳಾದಿ ಎಂಬ ಭೇದಗಳಿವೆ. ಇದರ ಕರ್ತರು **ಶ್ರೀಪಾದರಾಜರು.** ಶ್ರೀಪಾದರಾಜರಿಂದ ಪುರಂದರದಾಸರವರೆಗೆ ಹಾಡಿದ ಸುಳಾದಿಗಳೆಲ್ಲಾ ಸಂಗೀತ ಸುಳಾದಿಗಳು. ವಿಜಯದಾಸರಾದಿಯಾದ ದಾಸರು ಹಾಡಿದ ಸುಳಾದಿಗಳು ಸಾಹಿತ್ಯ ಸುಳಾದಿಗಳು. ಶಾಸ್ತ್ರೀಯವಾಗಿ ಸುಳಾದಿಗಳನ್ನು ಹಾಡಿದರೆ ಆಗುವ ಆನಂದ ಬ್ರಹ್ಮಾನಂದ. ಹಾಡುವ ಕ್ರಮವನ್ನು ಮರೆತವರು ದಂಡಕದಂತೆ ಹಾಡಿದರೂ ಅಂದ ಕೆಡುವದಿಲ್ಲ.

೧೩ನೇ ಶತಮಾನದಿಂದಲೇ ಪಲ್ಲವಿ, ಅನುಪಲ್ಲವಿ, ಮೂರರಿಂದ ಬೆಸ ಸಂಖ್ಯೆಯಲ್ಲಿ ವೃದ್ಧಿ ಹೊಂದಿದ

ನುಡಿಗಳ ದೇವರ ನಾಮಗಳಿಗಾರಂಭವಾಯಿತು. ದೇವರ ನಾಮದ ಮೂಲ ಕರ್ತರು **ನರಹರಿ ತೀರ್ಥರು** (ಸ್ವಾಮಿ ಶಾಸ್ತ್ರಿಗಳು). ದೇವರ ನಾಮಗಳಲ್ಲಿ ಪದಪಲ್ಲವಿಗಳೆಂಬಭಿದಾನದಿಂದ ಕಾಲ ಭೇದಗಳನ್ನಿಟ್ಟು ಹಾಡಲು ಮಾರ್ಗ ತೋರಿಸಿ ನವರತ್ನ ಕೀರ್ತನೆಗಳನ್ನು ಬರೆದವರು **ವಿಜಯದಾಸರು**. ಇವರ ದೇವರನಾಮಗಳನ್ನು ಪಲ್ಲವಿಯಂತೆ ವಿನ್ಯಾಸ ಮಾಡಿ ಸ್ವರ ಕಲ್ಪನೆ ಮಾಡಿದಂತೆ ಸಾಹಿತ್ಯದಿಂದಲೇ ಸ್ವರಲಯಗಳ ಆನಂದವನ್ನುಂಟುಮಾಡುತ್ತ ಹಾಡುವವರು ಇನ್ನೂ ಕರ್ಣಾಟಕದಲ್ಲಿ ಕೆಲವರಿರುತ್ತಾರೆ.

ದೇಶ ಕಾಲಗಳ ವ್ಯತ್ಯಾಸದಿಂದ ಪ್ರತ್ಯೇಕವಾಗಿ ಕಾಣುತ್ತ ಬಂದ ಹಿಂದುಸ್ಥಾನೀ ಕರ್ಣಾಟಕ ಸಂಗೀತಗಳ ಏಕೀಕರಣ ಮಾಡಲು ಹೊರಟು, ವೀಣೆಯ ಗಮಕಗಳಂತೆ ವರ್ಣಮಟ್ಟುಗಳೆತ್ತಿ ಹಾಡಿ, ರಾಜಾಧಿರಾಜರನ್ನು ತಲೆದೂಗಿಸಿ, ಮೈಸೂರರಸರಿಂದ ಕನಕಾಭಿಷೇಕ ಮಾಡಿಸಿಕೊಂಡವರು **ಆನಂದದಾಸರು**. ಇವರ ಕೀರ್ತನದ ಮಾದರಿಯೇ ಗಾಯನಾಚಾರ್ಯ ತ್ಯಾಗರಾಜರ 'ಸಾಧಿಂಚನೇ' ಎಂಬ ಕೀರ್ತನೆಗೆ ಕಾರಣವಾಯಿತು. ಪುರಂದರದಾಸರ ಜೀವನವನ್ನೇ ಆದರ್ಶವಾಗಿಟ್ಟುಕೊಂಡು ಅವರ ಮಾರ್ಗವನ್ನು ಲೇಶವಾದರೂ ಬಿಡದೆ ತೆಲುಗು ಸಾಹಿತ್ಯದಿಂದ ಕರ್ಣಾಟಕ ಸಂಗೀತವನ್ನು ತ್ಯಾಗರಾಜರು ಬೆಳೆಸಿದರು. **"ಸಂಗೀತ ಸಾರಾಮೃತೋದ್ಧಾರ"**ವೆಂಬ ಲಕ್ಷಣಗ್ರಂಥವನ್ನು ಬರೆದ **ತುಳಾಜಿ ಮಹಾರಾಜನಿಗೆ** ಪುರಂದರದಾಸರ ಸುಳಾದಿಗಳು ಮಾರ್ಗದರ್ಶಕವಾದವು. ಶಾಮಶಾಸ್ತ್ರಿಗಳು, ಮುತ್ತುಸ್ವಾಮಿದೀಕ್ಷಿತರು, ಕ್ಷೇತ್ರಜ್ಞರು, ಇವರೆಲ್ಲಾ ಕನ್ನಡ ಹರಿದಾಸರ ಪದ್ಧತಿಯನ್ನು ತಪ್ಪದೆ ಪರಿಪಾಲಿಸಿಕೊಂಡು ಬಂದರು. ಹೀಗಿದೆ—ಕನ್ನಡ ಹರಿದಾಸರು ಹಾಕಿದ ಸಂಗೀತ ಸಾಹಿತ್ಯ ಶಾಸ್ತ್ರಗಳ ತಳಹದಿ.

ಶಬ್ದಸಂಪತ್ತು ಅರ್ಥಸಂಪತ್ತು ಭಾವಸಂಪತ್ತುಗಳೆಲ್ಲಾ ಪರಿಪೂರ್ಣವಾಗಿರುವ ಏಕೈಕ ಸಾಹಿತ್ಯವೆಂದರೆ ಕನ್ನಡ ಹರಿದಾಸ ಸಾಹಿತ್ಯ. ಕನ್ನಡ ಹರಿದಾಸ ಸಾಹಿತ್ಯವೆಂದರೆ ನಾದ ಶಾಸ್ತ್ರ ತಾಳಶಾಸ್ತ್ರ ನೃತ್ಯಶಾಸ್ತ್ರ ತತ್ವಶಾಸ್ತ್ರಗಳಿಂದ ಸಮ್ಮಿಲಿತವಾದ ಸಾಹಿತ್ಯಶಾಸ್ತ್ರ.

ಪಾಶ್ಚಾತ್ಯ ಕವಿಗಳ ಮಾತಿನಂತೆ ನೋಡಿದರೂ :—

೧ ಇಹಪರಗಳೆರಡಕ್ಕೂ ಸಾಧಕವಾದ-ಆತ್ಮಸಿದ್ಧಿಯನ್ನು ಪಡೆದ ಮಹಾನುಭಾವರ ಅನುಭವದ ಉದ್ಗಾರ ದಾಸಸಾಹಿತ್ಯ.

೨ ನಂಬಲಾಗದ ಸಂದೇಹಗ್ರಸ್ತ ವಿಷಯವನ್ನು ಶಬ್ದ ಸಂಪತ್ತಿನಿಂದ ತತ್ಕಾಲದಲ್ಲಿ ನಂಬುವಂತೆ ಮಾಡುವದು **ದಾಸಸಾಹಿತ್ಯ**.

೩ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಾ, ಅವ್ಯಕ್ತ ತತ್ವವನ್ನು ವ್ಯಕ್ತಗೊಳಿಸಿ, ದೇಶಕಾಲಗಳ ಪರಿಮಿತಿಯಲ್ಲಿ ಅಮೂರ್ತವಾದುದನ್ನು ಮೂರ್ತಿಮಂತವಾಗಿ ಕಣ್ಣೆದುರಿಗೆ ನಿಲ್ಲಿಸಿ, ಕಬ್ಬವನ್ನು ಹಬ್ಬಗೊಳಿಸುವದು **ದಾಸಸಾಹಿತ್ಯ**.

೪ ಜೀವನದ ಪರಿಪೂರ್ಣ ವಿಮರ್ಶೆ **ಕನ್ನಡ ಹರಿದಾಸ ಸಾಹಿತ್ಯ**.

ಇಷ್ಟಿದ್ದರೂ ಹೀಗಿದ್ದರೂ ಏನೆಂದು ವಿಚಾರಿಸದಿರುವ 'ಪರರಿಗುಪಕಾರಿ' ಕನ್ನಡಿಗರಿಗೆ ಯಾವ ಮಾತಿನಿಂದ ಹೇಳೋಣ.

ಮಹಾಭಿನಿಷ್ಕ್ರಮಣ

ಶ್ರೀ. ಸರೋವರ ಶ್ರೀನಿವಾಸಾಚಾರ್ಯ

ಕುವರ ನಿದ್ರಿಪನೆಂದು ಸಂಗೀತಗಾತಿಯರು
ವೀಣೆಗಳ ಕೆಲಕೊತ್ತಿ ತಾವತ್ತ ಸರಿದಿರಲು;
ಮಣಿಕವಾಟಗಳೊಳಗೆ ಆಡಿತೀಡುವ ಗಾಳಿ
ತೆರೆತೆರೆಗಳಿಂ ಬಂದು ತಂತಿಗಳ ಮಂದ್ರಗತಿ
ಯಿಂದುಲಿಸಿ ನರ್ತಿಸಲು; ಆ ಭವ್ಯ ಸಂಗೀತ,
ದೇವತತಿಯೇ ಬಂದು ಸ್ವರಸುಖವಿಲಾಸದೊಳ್
ಸಿದ್ಧಾರ್ಥನಂತರಂಗವ ತೇಲಿಸಿದ ವೋಲು
ತೋರಿದುದು; ಅಂತೆಯೇ ಅವನಾತ್ಮ
ಗುಡಿಯಾಯ್ತು.
ವೀಣೆ ಪಲುಕಿದ ಭಾವ ಹೀಗೆಂದು ಊಹಿಸಿದ—
"ಓಡಾಡಿ ಬಳಲಿರುವ ಮಾರುತಗಳೇ ನಾವು
ಅರಸಿ ಶಾಂತಿಯನರಿಯದೆಲ್ಲೆಡೆಯೊಳು ‖
ಎಲ್ಲಿಂದ ಬಂದಿಹೆವು, ಮತ್ತೆಲ್ಲಿ ಪಯಣಗಳು,
ಜೀವ ಜನಿಸಿದುದೆಲ್ಲಿ, ಅಂತ್ಯವೆಲ್ಲಿ?
ಈ ಕರ್ಮವೆತ್ತಣದು, ಈ ಜಗದ ಗುರಿಯೇನು,
ಈ ಎಲ್ಲ ಬಲ್ಲಿರಾ? ಬಲ್ಲರಿಲ್ಲ!
ನಾವು ನಿಮ್ಮಂತಿಹೆವು ಕತ್ತಲೆಯ ಭೂತಗಳು
ದೀವಿಗೆಯ ನೆತ್ತದೆಯೆ ನೋಡಲವುದೆ?
ರೂಪವೇ ಸಂಚಲಿಸೆ ಸುಖದ ಶಾಶ್ವತಮೆತ್ತ
ಸೊರಗುತಿಹ ಪುಷ್ಪದೊಳು ಸೊಗಸು ಎತ್ತ?
ತಂತಿ ಬಾಜಿಸುವಂತೆ, ಒಂದೆ ನುಡಿ ನುಡಿವಂತೆ
ಒಂದುಸಿರು ಬಿಟ್ಟಂತೆ ಕ್ಷಣಿಕವಹುದು;
ಜಗವ ತಿರುಗುವ ನಾವು ಬಗೆಯ
ಕಂಡೊರಲುವೆವು—
ಸೊಗಸೆಂದು ಪಾಡುವರು ಬಗೆಯರಿಯದೆ!
ಪಾಪಕರ್ಮಗಳೆನಿತೊ ಕಂಬನಿಯ ಝರಿಯೆನಿತೊ
ನೆರೆಯ ಕೊರಳನು ಮುರಿವ ಕರಗಳೆನಿತೊ!
ಪ್ರಚ್ಛನ್ನ ಪಾಂಥರಹ ನಾವು ಈ ಕಷ್ಟಗಳ
ನೋಡಿ ಅಣಕಿಸಿ ನಕ್ಕು ಪೋಗುತಿಹೆವು!
ಕರೆಯುತಿದೆ ಕೆರಳುತಿದೆ ಬೇರೊಡೆದು
ಉರುಳುತಿದೆ
ಕಾಲವಾದುದು ಏಳು, ಸಲಹಲೇಳು!

* * *

ತನ್ನಿನಿಯಳತಿಶೋಕದಗ್ನಿಯಿಂ ತನ್ನೆದೆಯೆ
ಇನಿವೆಣ್ಣೆಯೋಲ್ ಕರಗಿ ನೀರಾಯ್ತು; ಹೆಕ್ಕಳಿಸಿ
ರೋದಿಪ ಯಶೋಧರೆಯ, ಮುಗಿಲ
ಮುಗಿಯುವ ತಪನ
ಮುಳುಗುವಂದದ ತನ್ನ ನೋಟದೊಕ್ಕಣೆಯಿಂದ,
ಸಂತೈಸೆ ನುಡಿದನು—"ಎನ್ನನ್ನೆ, ನೀನರಿಯೆ;
ನಿನ್ನ ಕಾಲದ ಚಿಲುಮೆ ತಿಳಿನೀರಿನುಕ್ಕರಿಸಿ
ನಗುವೊಡದೆ ಸಂತಸವು ಎನ್ನ ಈ ಬಾಳ್ವಿಕೆಗೆ!
ನಿನ್ನ ನಲ್ಗನಸುಗಳು ಮುಂದಾಗುವೆಲ್ಲವನು
ತೋರಿದುವು; ದೇವಾಳಿ ತಲ್ಲಣಿಸಿ ಸಗ್ಗದಿಂ
ಬರಲಿ; ಭುವಿ ತನ್ನಿರವ ತಿಳಿಯಲ್ಕೆ ಅದಕಿನಿಸು
ಉಪಕಾರವಾಗುತಿಹ ಸಮಯ ಬಂದೊದಗಿದರು
ನಾ ಮರೆಯೆ ನಿನ್ನನ್ನು, ಎನ್ನ ಮೋಹದ ಚೆನ್ನೆ!
ಈ ಬೆಕ್ಕಸಗಳನ್ನು, ಲೋಕದುಬ್ಬಟೆಗಳನು
ಅದರ ಹಣೆಯಿಂದೊರಸಿ ಶಾಂತಲಿಖಿತವ ಬರೆಯೆ
ಪಥಸ್ಮೃತಿಗಳೊಂದೊಂದೆ ಯೋಚಿಸುತೆ
ಕಾಲವುರುಳಿದೆ. ನೀಲಪಥದೊಳು ನಿತ್ಯ ಚಂದ್ರ
ನೊಂದೊಂದೆ ಅಡಿಯಿಟ್ಟು ಮುಂದುವರಿದಂತೆಲ್ಲ
ಅನಿತನಿತು ವಿಷಯಗಳ ಒರೆಯಿಟ್ಟು ನೋಡಿರುವೆ—
ನೀನರಿಯೆಯಾ, ರನ್ನೆ? ಎಮ್ಮಿಬ್ಬರೀ ಸುಖಕೆ
ಹತ್ತಾರು ನೂರೆಂಟು ಸಾಸಿರದ ಕಡುಬಡುವ

ರೆನಿತೊ ಮೈಮುರಿದುಡುಗಿ ರಕ್ತಪಾತಗಳಿಳಿಸಿ
ಸೊರಗುತಿಹರು—ಎಮ್ಮ ಈ ಭೋಗಕ್ಕೆ ಅವರ ಬಲಿ!
ನೆತ್ತರಿಂದಂಗಣವ ಸಾರಿಸುವ ವೈಭವವೆ?
ಅಹುದು; ಇನ್ನೇನಂತು ಕಾಲವಾಸನ್ನಿಸಿತು.
ಎನ್ನ ಕೋಗಿಲೆ, ಅಂದು ಕನಸೊಳಾಡುದನು ನೆನೆ!
ಹಂಬಲಿಸಿ ಹುಣ್ಣಾಗಿ ಒಡಲ ಸವೆಯಿಸಬೇಡ.
ಇದು ಒಂದು ನೆನಸಿರಲಿ—ನಿನ್ನೆದೆಯು ಬಿರಿದರೇಂ?
ನಿನ್ನಂತೆ ಗೋಳಿಡುವ ಜಗನ ಸಂತೈಸಲ್ಕೆ
ನಾನೋರ್ವನಳುಕಿದರೆ ಉಚಿತ; ಎಮ್ಮಯ ಸೊಗಕೆ
ಎನಿಬರಳುಕಿಹರೆಂದು ಮನಕಿರಲಿ! ಎನ್ನ
ಈ ಸಂಸ್ಫೂರ್ತಿ
ತಂಬಟೆಯ ಹೊಯ್ಯಂತೆ ನಿನ್ನಾತ್ಮದೊಳ್ ಧ್ವನಿಸಿ
ವಿಶ್ವದೊಳ್ ಗುಡುಗಿ ಅನುಕಂಪಿಸಲಿ ಜಗವನ್ನು!
ಇಂತುವರೆ ನಾ ನಿನ್ನ ಎನ್ನೆದೆಯ ಮಂಟಪದಿ
ಸಲಹಿ ಪೂಜಿಸುತಿರ್ದೆ, ಮುಂದಂತೆ ಪೂಜಿಸುವೆ!
ಎನ್ನ ಕಾದಲ ಸೋಗೆ, ಇನ್ನು ನಿದ್ರಿಸಿ ನಿನ್ನ
ಕನಸು ನೆನಸುಗಳನ್ನೆ ನೆನೆದು ಶಾಂತಿಯ ತಾಳು!"
ರಜನಿಯ ಅನಂತದೊಳು ವಿಶ್ವವೇ ಸುಪ್ತಿಯಿಂ
ಲಿಪ್ತವಾದುದು; ರಮ್ಯಮಂಡಲದ ಉಡುಗಣವು,
ಸುಮುಹೂರ್ತ ಸಮಯದೊಳು ನೆರೆದ
ದೇವಾಳಿಗಳು
ಕಣ್ಣೆದೀವಿಗೆಯಾಗೆ ಸಿದ್ಧಾರ್ಥ ನಿಷ್ಕ್ರಮಿಪ
ಕೌತುಕವ ನೋಳ್ಪರೆನೆ, ಕೆಲವು ಸಾಲಿಟ್ಟಿರ್ದು
ಕೆಲಕೆಲವು ಚದುರಿರ್ದು ರನ್ನಗಳ ಕೋದಂತೆ
ಗಗನ ಮಂಡಲವೆಲ್ಲ ಹರಡಿತ್ತು—ನಡುರಾತ್ರಿ!
"ಸಿದ್ಧಾರ್ಥ, ಈ ರಾತ್ರಿ ನಿನ್ನ ಜಗದೊಲುಮೆಗಳ,
ಹೊನ್ನುರನ್ನಗಳನ್ನು ಸುಖ ವಿಲಾಸಗಳನ್ನು,
ಚಕ್ರಾಧಿಪತ್ಯವನು, ಸಿರಿತನವ, ಬಿಲ್ತನವ
ಕಳೆದು ತೋರುವುದಿತರ ಮಾರ್ಗವನು
ಮುನಿಯಾಗಿ!
ಅತ್ತ ಸುಖಲವ ವಿಲ್ಲ, ಐಸಿರಿಯೊಸಗೆಯಿಲ್ಲ
ಬಿಲ್ ಬೆಳ್ಗೊಡೆ ಪರಿಜಿನ ಸೌಧವಾಸಗಳಿಲ್ಲ.
ಎತ್ತ ಸಿಕ್ಕುದ ತಿಂದು, ಮುಗಿಲ ಹೊದ್ದಿಕೆ ಮಾಡಿ
ಉರಿಬಿಸಿಲು, ಚಳಿಗಾಳಿ, ಬಿರುಮಳೆಗಳೊಳು ಕಂದಿ
ಪಾಲೋಗರವನುಂಡ ಬಾಯಿ ಕೀಳುಂಡಿರ್ದು
ವಿಜ್ಞಾನವೇ ಸಿದ್ಧರಾಜ್ಯವೆಂದದ ಪಡೆದು
ತವಸಿಗಳ ಹಿರಿಯನೆಂದಾಡುತಿರೆ ಶ್ರೀ ಬುದ್ಧ
ನೆಂಬ ಗುರುಪದವಿಯನ್ನಾರ್ಜಿಸಲ್ಕನುಗೊಳ್ಳು!
ಈ ಎರಡರಲ್ಲೊಂದು ಬಾಟೆಂಯೊಳಗಡಿಯಿಡಲು
ನಿಶ್ಚೈಸು"—ಎಂದಾಡಿ ಮನವೆಳೆದ ವೋಲಾಯ್ತು.
ತನ್ನ ಸಿದ್ಧಿಗೆ ಮತ್ತೆ ಆಶ್ವಾಸನವೆ? ಎಂದು
ತ್ಯಾಗವೇ ಮೈಗೊಂಡಿತೆನಲು ಸಂಕಲ್ಪಿಸಿದ—
ನಾ ತೆರಳಿ ತೊಳಲುವೆನು, ಸುಮುಹೂರ್ತ
ಸಂಧಿಸಿದೆ;
ಎಲೆ ಮುಗಿದ ವನಜವೇ, ಎನ್ನ ಕೋಮಲಕಾಂತೆ,
ಎನಗೆ ಸಮ್ಮತಿಯಿತ್ತು ಕಳುಹು ಗುರು ಸಾಧನೆಗೆ!
ಇರುಳು ಕರಿಹಲಗೆಯೊಳು ಉಜ್ವಲಿಪದೀಪ್ತಿಯೊಳು
ದೈವವಾಣಿತಿಯೊಂದನೊಕ್ಕಣಿಸಿ ಬರೆದಿಹುದು
ರನ್ನಗಡ್ಡಿಯೊಳತ್ತ, ಇದಕಾಗಿ ಭುವಿಗಾದೆ!
ಇದಕಾಗಿ ಎಲ್ಲವನು ನೀಗುತಿಹೆ—ದೊರೆತನದ
ಪಟ್ಟ ಬಿರುದಾವಳಿಯ ಹಂಗನಾಶಿಸೆನೊಲ್ಲೆ;
ನೆಲದಿ ನೆತ್ತರ ಹರಿಪ ದರ್ಪಗಳ ನಾನೊಲ್ಲೆ;
ಅಂಥ ನೆತ್ತರ ಹೊನಲು ಹರಿದವನಿಕೆಸರಾಗೆ,
ಪಚ್ಚೆ ಬಳೆಯುವ ಸ್ವಚ್ಛದೇಶ ಕೆಂಗೆಡಲಾಗೆ,—
ಹರಣ ಬಿಟ್ಟರು ಖೋಡಿ ಕುಲ್ಲ ಬಿಡನೆಂಬಂತೆ—
ತನ್ನೊಡಲ ಮೇಲೆನಿತೊ ರಕ್ತಮುದ್ರೆಗಳಾಂತು
ಗುಡುಗಿ ಬರುತಿರೆ ಲೋಕಕೆನ್ನ ನೆನಸೇ ತಮ್ಮ
ಮಿತ್ತು ನೆನೆದಂತೆಂದು ಕಂಡವರು ಹೆದರೋಡೆ,
ನಲಿವ ಆ ಪೌರುಷದ ಠೀವಿಗಳ ನಾನೊಲ್ಲೆ!
ರಕ್ತತಿಲಕಾಂಕಿತದ ರಾಯಗದ್ದುಗೆಯೊಲ್ಲೆ!
ಭುವಿಯ ಬಾಟೆಯನಡೆದು ಪಾಪಗಳ
ತೊಡೆತೊಡೆದು,
ಶುದ್ಧಾತ್ಮದಿಂ ಮೂಲೆಮೂಲೆಗಳ ಸಂಚರಿಸಿ,
ಅದರ ಧೂಳಿನೊಳ್ ಮಲಗಿ ಕಲ್ಲು ತಲೆದಿಂಬಿಟ್ಟು
ವಾಸಿಸುವೆ; ಗುಡ್ಡಗುಹೆಗಳೆನಗರಮನೆಯ ಮಾಡಿ,
ಒಡಲ ಕಟ್ಟಿಗೆ ಮಾಡಿ, ದಿವ್ಯಸಿದ್ಧಿಯ ನೋಡಿ,
ಜಗದಿ ಹರಡಿಹ ಬಹುಳದುಃಖಯಾತನೆಗಳಿಂ
ದೆಲ್ಲರುದ್ಧರಿಸುವೆನು; ಎನ್ನ ನೀ ಪಥಕೆಂದು
ಸೆಳೆದೊಯ್ದು ಗುರ್ತಿಸುವುದಿದುವೆ ಸತ್ಪಥವೆಂದು!
ನೂರೆಂಟು ದೇವರಂ ವಿವಿಧೋಪಚಾರದಿಂ

ನಮಿಸಿ ಪೂಜಿಸುತಿಹರು, ಹರಕೆಗಳ ಹೊತ್ತಿಹರು.
ಕೇಳಿಕಾಣದ ಎಲ್ಲೊ ಅಡಗಿ ಮರೆಯಾಗಿರುವ
ದೇವಗೆಂದೊರೆಯುವರು! ಆವ ದೇವರು ತಾನೆ
ಸೃಜಿಸಿ ಬಾಳಿಸಿದಂಥ ಲೋಕದುಬ್ಬೆಗಗಳನು
ತೊಡೆಯೆ ತುಸು ಸಾಧನೆಗಳೇನ ಮಾಡಿಹರಯ್ಯೊ!
ಅವರೆದೆಯೊಳಿಹುದಿಹುದೆ ಅಣುಮಾತ್ರ
ಕರುಣೆಗಳು!
ಅನುರಾಗ, ನಷ್ಟಗಳು, ಜ್ವರ, ರೋಗ ರುಜನೆಗಳು,
ಸಹಿಸಲಾಗದ ತನ್ನ ಗಂತವ್ಯ ಮೃತಿ! ಮತ್ತೆ
ಜೀವ ಚಕ್ರದಿ ಸಿಲುಕಿ ಉರುಳುರುಳಿ ಸುತ್ತುವುದು;
ಅದು ತಿರುಗಿದಂತೆಲ್ಲ ತಾನು ಜನುಮಗಳೆತ್ತಿ
ಮತ್ತೆ ಈ ದುಗುಡಗಳ ಕೂಪದೊಳು ಒರಲುವುದು;
ಹಳೆಯ ಸುಖಗಳ ಬಂಧು ಭಾಗ್ಯಗಳ ನೆಲೆ ಮರೆತು
ಹೊಸ ದುಃಖ, ಹೊಸ ಭೋಗ, ಹೊಸ
ಬಂಧು ವರ್ಗಗಳ
ನೋಡಿ ಹೋಹುದು—ಪಥಿಕರೊಬ್ಬೊಬ್ಬರಿದಿರಾಗಿ
ನಿಂದು ಮಾರ್ಗವ ಕೇಳಿ ಬೇರೆಯಾಗುವ ತೆರದಿ!
ಅದರ ಸ್ಮೃತಿ ಭಯವಹುದು. ಅದರ ಕಟು
ಕಠಿಣಗಳ
ಉದ್ವೇಗಗಳ ತೊಡೆವ ಧರ್ಮದೇವನು ಯಾರು?
ಇವನೆಲ್ಲ ಕಡೆಹಾಯ್ವ ಪಥನಿದರ್ಶಕನಾರು?
ಈ ಹರಣಗಳನೆಲ್ಲ ಕರೆದು ಪೋಷಿಪನಾರು?
ರೋದಿಸುವ ಕೂಸುಗಳ ತಾಯಿ ಸಲಹುವ ತೆರದಿ
ಜಗವ ಸಲಹುವನಾರು? ನಾ ಬಂದೆ!
ಇಂತೆದ್ದು
ಕಾಂತೆ ಶಯ್ಯೆಯ ಬಳಿ ಅರಗಳಿಗೆ ನಿಂತಿದ್ದು
ಮೂರು ಸೂಳ್ಸಲಮಾಡಿ ತನ್ನೆದೆಗೆ ಕರವೆತ್ತಿ
“ಇದು ತಾನೆ ತಳಿರಂತ ಸಂಕಲೆ! ಮೃದುವಾಗಿ
ದುಸ್ಸಹವು! ಮಂದ್ರಭೀಕರ! ಇನ್ನಿರೆನು ಇಲ್ಲಿ!”
ಎಂದಾಡಿ ಹೋಗಲುಜ್ಜುಗಿಸಿದನು. ಮೂರು ಸಲ
ಹೆಜ್ಜೆ ಹೊರಗಿಟ್ಟಂತೆ ಮತ್ತೊಮ್ಮೆ ನೋಡಿದನು
ನಿದ್ರಿಪ ಯಶೋಧರೆಯ, ಆತ್ಮ ಕಾರಾಗಾರ!
‘ಇವಳುಳಿದು ತೆರಳುವುದೆ? ಆಹುದಹುದು,
ಈ ರೂಪ
ಈ ಯೌವನ ಕ್ಷೇತ್ರ ಶೃಂಗಾರ ಸೂತ್ರಗಳು
ಎಲ್ಲಿ ಹೋಹುವು ಕಾಲವೊದಗೆ ಮುಪ್ಪಾಳಲ್ಕೆ!
ಕಾಲ ರಂಧ್ರದಿ ಹೊರಟ ಒಂದೊಂದೆ ವರುಷಗಳ-
ಬಿಲವ ಕಾಯುವ ಬೆಕ್ಕು ಒಂದೊಂದೆ ಮೂಷಕನ
ನುಂಗುವೊಲ್ ಹೊಂಚಿಹುದು! ಕಾಲಕೀರೂಪಗಳ
ತಿಂದು ತೇಗದೆ ಬಿಡುವ ಕೃಪೆಯುಂಟೆ? ಆಮೇಲೆ
ಇದನು ಕಾಷ್ಠದವೋಲು ಉರಿಹೊತ್ತಿ ಬೂದಿಯಾ
ಗುವ ಮುನ್ನ ಮರೆಯುವರು, ಇಂಥ
ಜೀವಿತಗಳನು!
ಹಿಂದೊಮ್ಮೆ ಸುಖವಿಲಾಸಿನಿಯಿವಳು ಎಂಬ ಪರಿ
ಚಯ ವಿಹುದೆ ಅನಲಂಗೆ! ಅಯ್ಯೊ, ಈ ಭವ್ಯ
ರೂಪಗಳ ಗಂತವ್ಯ ಮಿತ್ತುವಿನ ಹೊಲೆಗುಡಿ!
ದೇಹ ಬೂದಿಗಳಾಗಿ ಮೂಳೆ ಸುಣ್ಣಗಳಾಗಿ
ಬೂದಿ ಸುಣ್ಣಗಳೆರಡು ಮಣ್ಣೊಳಗೆ ಬೆರೆಯುವುವು,
ಈ ರೂಪ ಹೋಗುವುದು!
ಇಂತೆಂದು ನೋರೆ ಮುಸು
ಕಿಟ್ಟು ತೆರಳಿದ ನಮ್ಮ ವಿಶ್ವಕಲ್ಯಾಣಾರ್ಥಿ
ಬುದ್ಧ ಸಿದ್ಧಾರ್ಥ! ಸನ್ಮಾನ ಸಾಧನಕೆ
ಧರ್ಮೆಯೇ ನಡೆದಂತೆ ಧರಣೇಂದ್ರ ಹೊರನಡೆದ!
ವಿಮಲ ಕಾಸಾರದೊಳು
ಅಲ್ಲಲ್ಲಿ ಮುಗಿದಿರ್ದ ಮಲಗಿ ಭೋಗಿಸುತಿರ್ದ
ಕುವಲಯದ ಮೊಗ್ಗೆಗಳ ತೆರದಿ ಇಕ್ಕೆಲದೊಳಗೆ
ಕಡದೆಡೆಯೊಳೊರಗಿಹರು-ಗಂಗೆ, ಗೌತಮಿ! ಅತ್ತ
ಮುಗಿದ ಪಟಲಕಟಿಯೊಳು ಮುದುರಿದೆಳೆದಳಿರುಗಳ
ಮೃದು ಮೈಯ ಹೋಲುತಿಹ ಯೌವನದ
ಮುತ್ತುಗಳ,
ಭೋಗವನ ಭೋಗಿಗಳ, ಶೃಂಗಾರ ಪ್ರತಿಮೆಗಳ,
ಯುವತೀ ಕದಂಬಗಳ ನೋಡಿ,
“ಎಲೆ ರಜನಿ, ಕಾಳಿರುಳೆ,
ನಿನ್ನೊಳಿಹ ಕಿರುವಟ್ಟಲಿಂ ನಿಶಾ ಮಧುವನ್ನು
ಹನಿಯಿಸಾ, ಇವರೆರಡು ನೇತ್ರಗಳ ಮುಗಿಯಿಸಾ
ಸುಪ್ತಿ ಮಂತ್ರಗಳಿಂದ! ನಿನಗಲ್ತೆ ಅದು ಸಾಧ್ಯ!
ನಾ ದೂರ ಹೋಹನಕ ಬಿಗಿಯಿಸಿರು ಮುಗಿಯಿಸಿರು!
ತುಟಿಗಳೊಂದಿಸು! ಇವರ ದುಃಖಾಶ್ರುಗಳ ನೋಡಿ
ದೈನ್ಯದಾಲಾಪಗಳ ಕೇಳಿ ಸಹಿಸೆನು! ತಮ್ಮ
ಸುಖವಸತಿಗಳ ನೀಗಿ ಎನ್ನ ಹದುಳಕ್ಕೆಂದು

ದುಡಿದುಡಿದು ಸೊರಗಿಹರು ! ಈ ಎನ್ನ ಬಾಳಿಂತು
ಇವರ ಬೆವರ್ವನಿಗಳಿಂ ಬಳೆದು ಸುಖಪಟ್ಟಿಹುದು !”
ಎಂದೊರೆದು ಕದತೆರೆದು ನಡೆದು ಶಾಂತಾನಂತ
ಲುಪ್ತ ರಜನಿಯ ಬೆರೆದು ನಡೆದನಾ ಸಿದ್ಧಾರ್ಥ !
ಗುರುಯೋಗಿ ನಿಷ್ಕ್ರಮಿಸಿ ಹೊರಟನಾ ಸಿದ್ಧಾರ್ಥ!
ಪರಿಜನರು ಮಲಗಿ ನಿದ್ರಾ ಮುದ್ರಿತ
ವಿಲೋಚನದಿ
ಮುಗಿದ ಕುಟ್ಮಲದಂತೆ ಮೃದುಮುಖದಿ
ನೊರಗಿಹರು !

ಆಕಾಶರಾಶಿಯಿಂ ತಾರಕಾನಿವಹಗಳು
ತಮ್ಮ ಕಣ್ಗಳ ಬಿಟ್ಟು ಸುಖವಿಲಾಸಗಳಿಂದೆ
ಅಭಿಮಾನ ದೃಷ್ಟಿಯಿಂ ದಿಣಿಕಿಣಿಕಿ ನೋಡಿಪುವು;
ಚುಕ್ಕೆ ದೀವಿಗೆಯಿಂದ ದಾರಿ ತೋರುತ್ತಿರಲು,
ವಿಶ್ವವೇ ಚೇತರಿಸಿಕೊಂಡಂತೆ ತೆಂಗಾಳಿ
ತೀಡಿ ವೈರಾಗ್ಯನಿಧಿಯುಟ್ಟ ಸೆರಗನು ಪಿಡಿಯೆ,
ಅರುಣೋದಯಕೆ ಬಿರಿವ ಹೂ ಮೊಗ್ಗು ರಾಸಿಗಳು
ಇರುಳಲ್ಲೆ ಅರಳರಳಿ ತಮ್ಮ ಸುಖವಾಸನೆಯ
ಗಂಧ ಕಿಂಜಲ್ಕಗಳ ತೀಡಿದವು; ಹಿಮಗಿರಿಯ
ಬುಡದಿಂದೆ ತೆಂಕಣದ ಜಲಧಿಯುಗಲದ ಭುವಿಯ.
ಪಸರಿಸಿತು ಕಂಪನೆ—ಭೂದೇವಿಯೇ ಒಂದು
ಅಜ್ಞೇಯ ಆಶಯವ ಪಡೆದು ಪುಳಕಿಸಿದಂತೆ !
ಆಗಸದಂಹತಗಳ ವ್ಯಾಪಿಸಿರ್ದಮರಗಣ
ತಮ್ಮ ಕಾಂತಿಯಿನಂದು ನಡುರಾತ್ರಿಯಂ ದಿವ್ಯ
ದಿವಸದ ಬಿಸಿಲೆಂಬಂತೆ ಬೆಳಗುತ್ತೆ ನಿಂದಿಹರು,
ಅಜ್ಞಾನಲೋಕಕ್ಕೆ ಸ್ಫೂರ್ತಿಯಂ ಬೀರಿದರು !
ದೈವ ಸಂಗೀತಗಳಿ ನವತಾರ ಸ್ತವನಗಳಿ
ನಾಷೇರ್ಣಯ ವೈಭವದಿ ಸ್ವರ್ಗಮುಂ ನೆಲಕಿಳಿಸಿ
ಮೇಳ ಮಾಡಿತ್ತಿರಲು; ಸಿದ್ಧಾರ್ಥ ತಾರೆಗಳ
ದಿಟ್ಟಿಸುತೆ ತುಟಿಗಚ್ಚಿ ಮಾರ್ಗಮುಂ ನೋಡವೆಯೆ,
ವಿಶ್ವಾಭಿಮಾನಮಂ ಸಾಧಿಸುವ ಸಂಕಲ್ಪ
ತನ್ನ ನೂಂಕುತ್ತಿರಲು, ಯತ್ನದಿಂ ಮುನ್ನಡೆದ !

* * *

ಅಭಿಮಾನದಿಂ ಹಯವ ಬರಸೆಳೆದು ಮೈತಟ್ಟಿ
‘ಸುಮ್ಮನಿರು, ಎಲೆ ಮಿತ್ರ! ಎನ್ನನೀ ರಜನಿಯೊಳು
ಮುನ್ನ ನೀ ಹೋಗದಿಹ ದೂರದೇಶಕೆ ಒಯ್ದು
ಎನ್ನ ಸಂಕಲ್ಪಗಳ ನೋಡೆ, ಸತ್ಯಾರ್ಜನೆಯ
ಭಂಡಾರ ಸುಜ್ಞಾನವನು ಪಡೆಯೆ ನೆರವಾಗು.
ಎನ್ನಾಶೆ ಎಂದಿಗೋ ಎತ್ತಲೋ ನಾ ಕಾಣೆ,
ಅದ ಪಡೆವ ಮುನ್ನ ನಾ ನಾಡಿಂಗೆ ಹಿಂದಿರುಗೆ !
ಎಲೆ ಮಿತ್ರ ಕಂಥಕವೆ, ಈ ರಾತ್ರಿ ವೇಗದೊಳ್
ಧೈರ್ಯದೊಳ್ ಕುಂದಿ ಮರಳೆನ್ನನೀ ಪಂಜರಕೆ
ಸಿಲ್ಕಿಸದೆ ಮುನ್ನಡೆಯೊ ! ಮನಸಿಗೂ ನಿನಗೊಂದು
ಪಂಥವೆನೆ ಭಾವಿಸಾ ! ಕೂರಸಿಯ ಶತಕಗಳು
ಇರಿಯ ಬಂದರು ನಿಲ್ಲಬೇಡ; ಕಷ್ಟವ ಸಹಿಸು
ಈ ರಾತ್ರಿಯೊಂದು ಸಲ ! ಉರಿಯಂತೆ ವಾಯ್ವಂತೆ
ಮುನ್ನುಗ್ಗು ! ಎಲ್ಲವನು ಸೋಲಿಸಾ, ನಾ ಹತ್ತಿ
‘ಕಂಥಕಾ’ ಎನೆ. ಎನ್ನನೊಯ್ದು ತೇಜವ ತೋರು.
ಇದರಿಂದೆ ಎನ್ನಂತೆ ನೀಪೂಜ್ಯಪದವಿಯೊಳು
ಭಾಗಿಯಹೆ, ದಿವ್ಯಾಶ್ವ, ನಾ ಸಿದ್ಧಿಯನು ಪೊಂದೆ !
ಅದರಿಂದ ನಾ ಹೊರಟೆ—ಜನಗಣಕೆ ಎಂದಲ್ಲ;
ನಿನ್ನಂಥ ಮೂಕರಿಗು, ವಿಶ್ವ ಜೀವಕ್ಕೆಲ್ಲ
ಮೀಸಲಾಗಿಹ ನಾನು ಹೊರಟಿರುವೆ; ಕಾರಣದಿ
ನಿನ್ನ ಯಜಮಾನನನು ಅತಿವೇಗ ಧೃತಿಯಿಂದ
ಕೊಂಡು ನಡೆ, ಹಾಯ್ದು ನಡೆ, ತೇಲಿ ನಡೆ !
ಅಂತಾಡಿ
ಕಂಥಕವನೇರಿ ತಲೆವಟ್ಟಿ ಚಪ್ಪರಿಸಲ್ಕೆ
ದೇಹವೇ ತೇಲ್ವಂತೆ ವೇಗದಿಂ ಮುನ್ನುಗ್ಗಿ
ಚಿಮ್ಮಿ ಓಡಿತು ! ಯಾರು ಈ ರಾತ್ರಿ ವೃತ್ತಗಳ
ತಿಳಿಯದೆಂದಾದೇವ ತತಿ ಮಾರ್ಗಮಾರ್ಗವನು
ಹೂ ಚೆಲ್ಲಿ ಹುಡಿಗಂಧವನು ಹಾಸಿ, ಖುರಪುಟದ
ಸಪ್ಪಳಾಗದವೋಲು ಮಿದುಮಾಡಿ, ಕಡಿವಾಣ
ಗಂಟೆಗಳು ಗೆಜ್ಜೆಗಳು ದನಿಮಾಡದಿಹವೋಲು
(ವೈರಿಗು ಸ್ವಾರ್ಥವಿಹುದೆಂಬುದನು ತಿಳಿಪಂತೆ)
ಅಜ್ಞಾತರೂಪದಿಂ ಹಿಡಿದು ಮುಂದೋಡಿದರು.
ಹಲವು ದೇವರು ಅಂತೆ ಕೋಟೆ ಬಾಗಲುಗಳಿಗೆ
ಬಿಗಿದಿರ್ದ ಸರಪಳಿಗಳ ಕಡಿದು ಕದತೆರೆದು
ಹಯ ಹಾಯ್ದ ಬಳಿಕ ಆ ಬಾಗಲುಗಳನು ಬಿಗಿದು
ಮುನ್ನಿರ್ದವೊಲ್ ಬಿಟ್ಟು ಮರೆಯಾದರಂತೆಯೇ !

ವಿಜ್ಞಾನಶಾಲೆ

ಸೂರ್ಯಕಿರಣವ ಹಿಡಿದು ಅದ್ಭುತವ ತೋರುವರು
ಬೆಳ್ಳರಿಯ ಒಡಲೊಡೆದು ಬಣ್ಣ ಬಿಡಿಸುವರು !
ಕೆಂಪು ಕಿತ್ತಿಳೆ ಹಳದಿ ಹಸುರು ನೀಲಿಯ ಬಿಲ್ಲು
ನಡುವೆ ಗಂಧಕ ರೇಖೆ, ಲವಣರೇಖೆಯನು !
ಹರಿವ ಬೆಳಕಿನ ಹೊನಲ ಅಲೆಯೆಳೆಯನಳೆದು
ತಾರೆ ಚಂದ್ರರ ಕುರುಹ ಗಣಿಸಿ ತಣಿಯುವರು.
ಹಬ್ಬಿದುದಯದ ಹಬ್ಬ, ಇಳಿವನೇ ಸರತೇರು
ಬಗೆಗುರುಡ ತೆರೆದಿತ್ತ ಚೆಲುವೂಡುತಿರಲು,
ಬೆಳಕುತುಂಬಿದ ಬಣ್ಣ, ಬಣ್ಣವೊಡೆಸಿದ ಬೆಳಕು
ಶುಚಿರಾಗ, ರಾಗ ಶುಚಿ ಬಾಳ್ಗೆ ಬರುವಂತೆ
ಪುಳಕದಲಿ ಮೈಯುಬ್ಬಿ ಅಚ್ಚರಿಯ ಸವಿಯುತಿರೆ
ಆಡಿ ಜರೆಯುವರೆಮ್ಮ ಮಡ್ಡಿತನಕಿವರು.—
ತಿಳಿಯದಜ್ಞರ ಮಬ್ಬು ಬೆಳಕಿಂದ ಕಳೆಯುತಿದೆ;
ತಿಳಿದ ಪ್ರಾಜ್ಞರಿಗಿಲ್ಲಿ ಬೆಳಕೆ ಮಬ್ಬು.

—ವಿ. ಸೀ.

ಅನಂತತ್ವದ ಸಾಕ್ಷಾತ್ಕಾರ

ಶ್ರೀ. ಶಂ. ಬಾ. ಜೋಶಿ, ಧಾರವಾಡ.

ಸತ್ಯವು ಅನಂತವೆಂದು ಅನಾದಿ ಕಾಲದಿಂದ ಹೇಳುತ್ತಾ ಬಂದಿದ್ದಾರೆ. ಬ್ರಹ್ಮವೇ ಸತ್ಯವೆಂದು ವೇದಾಂತವು ಹೇಳುತ್ತದೆ. ಆದುದರಿಂದ ಸತ್ಯವೇ ಬ್ರಹ್ಮವೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನೇ ಪಡುವಣರು God is truth, truth is God, ಎಂದು ಎನ್ನುವರು. ಸತ್ಯವೇ ದೇವರೆಂದ ಬಳಿಕ, ಸತ್ಯವು ಅನಂತವಾಗಿರುವುದೆಂದಮೇಲೆ, ದೇವರೂ ಅನಂತರೂಪಿ ಎಂಬ ಮಾತು ಸ್ವತಃ ಸಿದ್ಧವಾಗಿದೆ. ಆದುದರಿಂದಲೇ ಹಿಂದೂ ಧರ್ಮದಲ್ಲಿ ಬ್ರಹ್ಮ, ವಿಷ್ಣು, ಮಹೇಶ, ಸೂರ್ಯ, ಗಣಪತಿ, ದುರ್ಗೆ, ಸರಸ್ವತಿ, ಲಕ್ಷ್ಮಿ ಮೊದಲಾದ ಲೆಕ್ಕವಿಲ್ಲದಷ್ಟು ರೂಪದಲ್ಲಿ ಆ "ಸತ್ಯ" ಸ್ವರೂಪವನ್ನು ಪೂಜಿಸುವುದು ವಾಡಿಕೆಯಾಗಿದೆ. ದೇವರು ಒಬ್ಬನೇ ಎಂಬ ವಿಶಾಲ ಅರ್ಥವನ್ನು ಮರೆತು, ಅವನು ಕೇವಲ "ಒಂದೇ" (ವ್ಯಕ್ತಿ); ಅವನೂ ತಮ್ಮ ಮತದೊಳಗಿನವನೇ, ಎಂಬ ಭ್ರಮೆಯಲ್ಲಿ ಇರುವ ಎಷ್ಟೋ ಧರ್ಮಮತಗಗವೆ. ಅಲ್ಲಾನು ಒಬ್ಬನೇ ದೇವರು ಉಳಿದ ದೇವತೆಗಳು ದೇವತೆಗಳೇ ಅಲ್ಲ, ಎಂಬುದೂ, ದೇವನು (ಸತ್ಯವು) ಅನಂತವೆಂದು ಅದೇ ಬಾಯಿಂದ ನುಡಿಯುವುದೂ, ಒಂದಕ್ಕೊಂದು ವಿಪರೀತವಾಗಿವೆ. ದೇವರು ಒಬ್ಬನೇ, ಎಂದರೆ ಯಾವರೂಪದಲ್ಲಿದ್ದರೂ ಆತನು ಭಿನ್ನನಲ್ಲ ಎಂಬ ತಿಳುವಳಿಕೆಯು ಇನ್ನೂ ಎಲ್ಲಧರ್ಮಗಳಲ್ಲಿಯೂ ಸಾಕಷ್ಟು ದೃಢವಾಗಿಲ್ಲ. ಹಾಗಿಷ್ಟರೆ ಜಾತಿಮತಗಳ ಅಸೂಯೆಯು ಅದೆಷ್ಟೋ ಕಡಿಮೆಯಾಗಬಹುದಿತ್ತು.

ದೇವನೆಂಬ ಕಲ್ಪನೆ ಹಿಂದೂಧರ್ಮದಲ್ಲಿ ಅತ್ಯಂತ ಶಾಸ್ತ್ರೀಯವೂ, ಅನುಭವಪೂರ್ಣವೂ ಆಗಿದೆ. ದೇವರ ಅನಂತ ಸ್ವರೂಪದಲ್ಲಿ ಒಂದಿಲ್ಲೊಂದು ಅಂಶದ ಸಾಕ್ಷಾತ್ಕಾರವಾಗದ ಮಾನವರು ದೊರೆಯುವುದೇ ಅಪರೂಪ. ದಿವ್, ಎಂದರೆ ಹೊಳೆ, ಪ್ರಕಾಶಿಸು. ತನ್ನ ದಿವ್ಯ ರೂಪದಿಂದ ಯಾವುದು ಮಾನವನನ್ನು ತನ್ನೆಡೆಗೆ ಸೆಳೆಯುವುದೋ ಅದೆಲ್ಲವೂ 'ದೇವ' ಸ್ವರೂಪವೇ. ಭಗವದ್ಗೀತೆಯಲ್ಲಿ 'ಯದ್ ಯದ್ ವಿಭೂತಿಮತ್‌ಸತ್ವಂ, ಶ್ರೀಮತ್ ಊರ್ಜಿತಮ್, ಏವ ವಾ' ಅದೆಲ್ಲವೂ ಪರಮಾತ್ಮನ ಅಂಶವೆಂದು ಶ್ರೀವ್ಯಾಸರೂ ಹೇಳಿದ್ದಾರೆ. ಧನ-ಕನಕಾದಿಗಳಿಂದ, ಶಕ್ತಿ-ಸಾಮರ್ಥ್ಯಗಳಿಂದ, ವಿಚಾರ-ಪ್ರತಿಭೆಗಳಿಂದ, ಆಕರ್ಷಿತರಾಗದ ವ್ಯಕ್ತಿಗಳಾರು? ಹೀಗೆ ಆಕರ್ಷಣ ಮಾಡುವ ಆ ದಿವ್ಯ ಶಕ್ತಿಯೇ ದೇವರು.

ಹೃದಯವನ್ನು ಸೆಳೆಯುವುದು, ಮನವನ್ನು, ಮೋಹಿಸುವುದು, ಸೌಂದರ್ಯದ ಧರ್ಮವೆಂದು ಹೇಳುವ ಅವಶ್ಯಕತೆ ಇಲ್ಲ. ಯಾವುದು ತನ್ನತ್ತ ಸೆಳೆದು ತನ್ನಲ್ಲಿ ಲೀನ ಮಾಡಿಕೊಳ್ಳುವದೋ, ಅಳಿಗಾಲಕ್ಕೆ ಕಾರಣವಲ್ಲದ ವಿಶೇಷ ಆನಂದವನ್ನೀಯುವುದೋ, ಅದೆಲ್ಲವೂ ಸೌಂದರ್ಯವೆಂದು ಹೇಳಲು ಅಡ್ಡಿ ಇಲ್ಲ. ಹೀಗೆ ತನ್ನತ್ತ ನಮ್ಮನ್ನು ಸೆಳೆಯುವ ವಸ್ತುವು ದಿವ್ ಎಂದರೆ ದಿವ್ಯವಾಗಿರಬೇಕಷ್ಟೇ? ಆದುದರಿಂದಲೇ ದೇವತೆಗಳು ಚೆಲುವಿನ ಮೂರ್ತಿಗಳೆಂದು ಒಪ್ಪತಕ್ಕ ಮಾತಾಗಿದೆ.

ಸತ್ಯವು ಸ್ವಯಂ ಜ್ಯೋತಿಃಸ್ವರೂಪವಾಗಿದೆ. ಏಕೆಂದರೆ ಹೊರಗಿನ ಬೆಳಕಿನಿಂದ ಇದು ತಿಳಿಯತಕ್ಕ ವಸ್ತುವಲ್ಲ. ಒಳಗೆ ತಿಳಿಯದೇ, ಯಾವ ಜ್ಞಾನವೂ ಆಗಲಾರದು. ಆದುದರಿಂದಲೇ ಜ್ಞಾನಕ್ಕೆ ಜ್ಯೋತಿ ಎಂದು ಹೇಳುವುದು. 'ಮಾತು, ಎಂಬುದು ಜ್ಯೋತಿರ್ಲಿಂಗ' ಎಂದು ಶ್ರೀ ಅಲ್ಲಮ ಪ್ರಭುಗಳು ಹೇಳಿದುದೂ ಇದೇ ಕಾರಣದಿಂದಲೇ. ಆದುದರಿಂದಲೇ ಬಲ್ಲವರು ದೇವರನ್ನು ಪ್ರಕಾಶರೂಪನೆಂದೂ, ಅಲ್ಲದೇ ಸತ್ ಸ್ವರೂಪನೂ ಚೆಲುವ ಚೆನ್ನಿಗನೂ

ಎಂದೂ ಹೇಳುವರು. ಕೀಟ್ಸನು ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯವೆಂದು ಹೇಳಿ ದುದೂ ಈ ದೃಷ್ಟಿಯಿಂದಲೇ.

ಸತ್ಯವು ಅನಂತವೆಂಬುದನ್ನು ಅಂತಃಕರಣ ಆಳದ ಸ್ಫೂರ್ತಿಯಿಂದ ತಿಳಿದವರು ಕೆಲವರು. ತತ್ವಜಿಜ್ಞಾ ಸೆಯಿಂದ ವಿವೇಚಿಸಿ ಆ ನಿರ್ಧಾರಕ್ಕೆ ಬಂದವರು ಹಲವರು. ಆಧುನಿಕ ಸಂಶೋಧನೆಯಲ್ಲಿ ಗಣಿತಶಾ ಸ್ತ್ರವೂ ಅನಂತತ್ವದ ಸಾಕ್ಷಾತ್ಕಾರಕ್ಕೆ ತುಂಬ ನೆರವ ನ್ನೀಯುತ್ತಿದೆ. ವೈಟ್‌ಹೆಡ್ ಮೊದಲಾದ ಭೌತಶಾಸ್ತ್ರ ಜ್ಞರು ಈ ದಿಕ್ಕಿನಿಂದ ಮುಂದುವರೆದವರಾಗಿದ್ದಾರೆ.

ಆದರೆ ಈ ಅನಂತತ್ವದ ಸಾಕ್ಷಾತ್ಕಾರವಾಗದೆ, ಅ ನಂತವು ತಿಳಿಯಿತು, ಎಂಬುದು ಹೇಗೆ? ಸಂಪೂರ್ಣ ತಿಳಿದರೆ ಅದು ಅನಂತವು ಹೇಗೆ? ಅನಂತವು ಶಬ್ದ ಗಳಿಗೆ ನಿಲುಕದ್ದು; ಎಂದರೆ ಎಷ್ಟು ಹೇಳಿದರೂ ಕೊನೆಗೆ ಮತ್ತೆ ಕೆಲವೊಂದು ಉಳಿಯುವುದು. ಅನಂತವನ್ನು ವಿವರಿಸುವ ಒಂದು ಸೋಜಿಗದ ಬಗೆ ಯನ್ನು ಪುರಾತನರು ಕಂಡು ಹಿಡಿದಿದ್ದಾರೆ. 'ಗುರೋಸ್ತು ಮೌನಂ ವ್ಯಾಖ್ಯಾನಂ; ಶಿಷ್ಯಾಃ ತು ಛಿನ್ನ ಸಂಶಯಃ"! ಆದರೆ ಈ ಬಗೆಯ ಮೌನ- ವ್ಯಾಖ್ಯಾನದಿಂದ ಶಿಷ್ಯರ ಸಂದೇಹಗಳನ್ನು ನಾಶ ಮಾಡುವ ಆಚಾರ್ಯರು ಎಲ್ಲ ಕಾಲದಲ್ಲಿಯೂ ಎಲ್ಲಿ ದೊರೆಯುವರು?

ಗಣಿತವಿಶಾರದರು ನಕ್ಷ ಎಂದು ಬರೆದು ಅನಂತ ತ್ವದ ಸೂಚಕವೆಂದು ಹೇಳುವರು. ಕ್ಷ ಎಂಬುದು ನ.... ಎಂದರೆ ಅನಂತ ಘಾತಗಳವರೆಗೆ, ಎಂದು ವಿವರಿಸುವರು. ಆದರೆ ಇದು ಜನ ಸಾಮಾನ್ಯರಿಗೆ ತಿಳಿಯದ ವಿಷಯ. ದಾರಿಹೋಕರಿಗೂ ಅನಂತನ ದರ್ಶನ ಮಾಡಿಸುವ ಸಾಹಸವನ್ನು ಪಶ್ಯಂತಿ-ವಾಣಿ ಯ ಭಾರತೀಯ ದೃಷ್ಟಾರನೊಬ್ಬನು ಸಾಧಿಸಿದ್ದಾ ನೆಂದು ಹೇಳಬಹುದಾಗಿದೆ. ಆ ಅಜ್ಞಾತ ಪ್ರತಿಭಾ ಶಾಲಿಯು ಯಾವನೋ ತಿಳಿಯದು. ಆತನ ದೇಶ, ಕಾಲ, ಗೊತ್ತಿಲ್ಲ. ಆದರೆ ಆತನದು ಅದು ಅಮರ ಕೃತಿ.

ಶೇಷಶಾಯಿಯಾದ ಪರಮಾತ್ಮನ ಚಿತ್ರವನ್ನು ಎಲ್ಲರೂ ಕಂಡಿರಬಹುದು. ಆದರೆ ಆ ಚಿತ್ರದೊಳ ಗಿನ ಸಂಕೇತ (Symbolism) ಗಳನ್ನು ಸರಿಯಾಗಿ ಈ ವರೆಗೆ ಯಾರೂ ಬಿಡಿಸಿ ಹೇಳಿದುದನ್ನು ನಾನು ಕೇಳಿಲ್ಲ. ಪರಮಾತ್ಮನು ಅಲ್ಲಿ ಶೇಷಶಾಯಿಯೇಕೆ? ಸಾಮಾನ್ಯವಾಗಿ ಗರುಡವಾಹನನೆಂದು ಲೋಕ ವಿಖ್ಯಾತನಾದ ವಿಷ್ಣುವು ಇಲ್ಲಿ ಶೇಷನನ್ನು ಸ್ವೀಕರಿ ಸಿದ ಕಾರಣವೇನು? ಸಾಗರ ಶಯನನಾದುದಕ್ಕೆ ಕೆಲರು ಏನೋ ಒಂದು ಕಾರಣವನ್ನು ಕಲ್ಪಿಸುವರು. ಲಕ್ಷ್ಮಿಯ ತವರು ಕ್ಷೀರಸಾಗರ. ವಿಷ್ಣುವಿಗೆ ಮಾವನ ಮನೆಯಲ್ಲಿ ಇರುವುದಕ್ಕೆ ಮನಸು ಮೆಚ್ಚುವದು. ಹೀಗೆ ಕಲ್ಪಿಸಿದವರಿಗೆ ಹೆಂಡತಿಯ ಸಂತೃಪ್ತಿಗಾಗಿ ಮಾವನಲ್ಲಿಯೇ ಬಿದ್ದುಕೊಂಡಿರುವ ಅಳಿಯನ ಸಮಾಚಾರವೊಂದೇ ತಿಳಿದಿರಬೇಕಲ್ಲದೆ, ಇಲ್ಲಿರುವ ಸಂಕೇತದ ಸೊಗಸು ಗೊತ್ತಾಗಿಲ್ಲ.

ಶೇಷಶಾಯಿಯಾದ ವಿಷ್ಣುವಿಗೆ 'ಅನಂತ'ನೆಂದು ಕರೆವ ಔಚಿತ್ಯವು ಪುರಾತನರ ಸೂಕ್ಷ್ಮವಾದ ದಿವ್ಯ ದೃಷ್ಟಿಯ ದ್ಯೋತಕವಾಗಿದೆ. 'ಶೇಷ' ಎಂದರೆ ಉಳಿದುದು; ಶಿಲ್ಕು. ಎಷ್ಟು ವೆಚ್ಚವಾದರೂ ಮತ್ತೆ ಉಳಿಯುವುದಕ್ಕೆ ಕೊನೆ ಇಲ್ಲದುದು, ನೆಲೆ ಇಲ್ಲದು ದು, ಎಂದು ಹೇಳಬೇಕಾಗುತ್ತದೆ. ಕೊನೆ ಎಂದರೆ ಅಂತವು ಇಲ್ಲದುದೇ ಅನಂತವಷ್ಟೆ? ಆದುದರಿಂದಲೇ ಸಂಸ್ಕೃತದಲ್ಲಿ ಶೇಷ ಎಂಬುದಕ್ಕೆ ಅನಂತವೆಂದೂ ಅರ್ಥ ಉಂಟು. ನಿಃ-ಶೇಷನು ಎಂದೂ ಅನಂತನಾ ಗಲಾರ. ಆದುದರಿಂದಲೇ 'ಅನಂತ'ನನ್ನು ಶೇಷನ ಮೇಲೆ ಇರಿಸಿದ್ದಾಗಿದೆ. ಇದೊಂದು ಶ್ಲೇಷಾಲಂಕಾ ರದ ಅಪೂರ್ವ ಚಮತ್ಕೃತಿ. ಇಲ್ಲಿ ಆ ಶೇಷನೂ ಒಂದೇ ಹೆಡೆಯವನಲ್ಲ, ಮತ್ತೆ! ಸಾವಿರ ಹೆಡೆಗಳು ಳ್ಳವನು. 'ಸಾವಿರ' 'ಕೋಟಿ' ಎಂಬ ಅಂಕೆಗಳು ನಮ್ಮಲ್ಲಿ ಲೆಕ್ಕವಿಲ್ಲದಷ್ಟು, ಅನಂತ ಎಂಬುದರ ಸೂಚಕವಾಗಿವೆ. 'ಸಹಸ್ರ ಶೀರ್ಷಃ ಪುರುಷಃ,' ಎಂಬ ಋಙ್ಮಂತ್ರದಲ್ಲಿ ಸಹಸ್ರವೆಂದರೆ ಅನೇಕ ಎಂಬ ರ್ಥವು ಸ್ಪಷ್ಟವಿದೆ. ಪರಮಾತ್ಮನು ಒರಗಿದ ಶೇಷನಿಗೆ ಸಾವಿರ ಹೆಡೆಗಳಂತೆ; ಮತ್ತೆ ಇದೂ ಅನಂತತ್ವದ ಸೂಚಕ. ಸಾಗರವೂ ಅನಂತತ್ವದ ನಿದರ್ಶಕವೆಂದು ಅನೇಕ ಉಪಮಾನಗಳಲ್ಲಿ ಮನಗಾಣಬಹುದು. ಕೃಪಾ-ಸಾಗರನೆಂದರೆ ತುಂಬ ಕೃಪೆಯುಳ್ಳವನು.

ಸಾಗರವೂ ಅನಂತತ್ವದ ಸಂಕೇತವಾಗಿರುವದರಿಂದ ಅನಂತನನ್ನು ಸಾಗರಶಾಯಿಯಾಗಿ ನಿರೂಪಿಸಿದ್ದಾಗಿದೆ. ವಿಶಾಲವಾದ ಆಕಾಶದ ಬಣ್ಣವು ನೀಲ. ನೀಲವು ವಿಶಾಲತೆ, ಗಂಭೀರತೆ, ನೆಲೆ ಇಲ್ಲದ ಆಳದ ಸೂಚಕವಾಗಿದೆ. ಆದುದರಿಂದಲೇ ಪರಮಾತ್ಮನು ನೀಲ ವರ್ಣನೆಂದು ಹೇಳುವುದು ವಾಡಿಕೆಯಾಗಿದೆ. 'ಶುಕ್ಲಾಂಬರಧರಂ ದೇವಂ ಶಶಿವರ್ಣಂ....' ಎಂದು (ಹೇಳುವ) ಹೊಗಳುವ ದೇವರನ್ನು ನೀಲ ವರ್ಣನೆಂದು ಹೇಳುವದು ವಿಚಿತ್ರ ಕಾಣುವಂತಿದೆ. ಸತ್ಯವು ಸ್ವಯಂ ಜ್ಯೋತಿಸ್ವರೂಪವು ಜ್ಯೋತಿಯು ಶುಭ್ರ-ಧವಲವರ್ಣದ್ದು. ಆದುದರಿಂದ ಸತ್ಯಸ್ವರೂಪಿಯಾದ ಪರಮತತ್ವವು ಧವಲವರ್ಣದ್ದೆಂಬಲ್ಲಿ-ಶಶಿವರ್ಣದ್ದೆಂಬಲ್ಲಿ ಸಂದೇಹವೇ ಇಲ್ಲ. ಆದರೆ ಅದರ ಅನಂತತ್ವದ ಸೂಚನೆಗಾಗಿ ಆ ಒಳಗಣ್ಣಿಗೆ ಹೊಳೆ-ಹೊಳೆವ ಮೂರ್ತಿಯ ದರ್ಶನವನ್ನು ಹೊರಗಣ್ಣಿನವರಿಗೂ ಮಾಡಿಸಿಕೊಡುವುದಕ್ಕಾಗಿ ಮೇಲೆ ಕಾಣಿಸಿದ ಹಲವು ಸಂಕೇತಗಳಿಂದ ಶ್ರೀ ಅನಂತನನ್ನು ಚಿತ್ರಿಸಿದ್ದಾಗಿದೆ.

ಈ ಸಂಕೇತಗಳು ತಿಳಿಯದವರಿಗೆ, ಹಳೆಯ ಅಕ್ಷರಗಳ ಪರಿಚಯ ಇಲ್ಲದವರಿಗೆ, ಅರ್ಥಪೂರ್ಣವಾದ ಶಿಲಾಶಾಸನವೂ ಒಂದು ಕಲ್ಲೇ ಆಗಿರುವಂತೆ ಅನಂತನ ಚಿತ್ರವೂ ಅರ್ಥವಿಹೀನವೆನಿಸಿದರೆ ಸೋಜಿಗವೇನು? *



*ಪ್ರಕಟವಾಗಲಿರುವ 'ಸೌಂದರ್ಯಾನುಭೂತಿ' ಅಥವಾ 'ದೇವತಾ ಸಾಕ್ಷಾತ್ಕಾರ' ಎಂಬ ಗ್ರಂಥದ ಒಂದು ಅಂಶ.

ಎಂದು ಕೊನೆ?

ಎಂದು ಕೊನೆ?-ಹಾ-ಎಂದು ಕೊನೆ?
ಒಬ್ಬರನೊಬ್ಬರು ಕೊಂದುಕಳೆವ ಕೊಲೆ
ಹಬ್ಬಕೆ ತಾ ಬರದೇನು ಕೊನೆ?
ಈ ಕೊಳೆಕೊಬ್ಬಿಗೆ, ಈ ಬಗೆಮಬ್ಬಿಗೆ,
ಎಂದು ಕೊನೆ?––ಓ––ಎಂದು ಕೊನೆ?

ಯುಗಯುಗದಿಂದಲು, ಬಗೆಬಗೆಯಿಂದಲು,
ನಗುವಿನೊಳೂ ಯಾತನೆಯೊಳಗೂ,
ನರನೆದೆಯಾಳವನಳಲಿಪ ಅಳುಕಿದು ;
'ಬರದೆ ಕೊನೆ?––ಇದ—ಕಿರದೆ ಕೊನೆ?

ಎನಿಬರೊ ನರವರರೆದ್ದುಬಂದು ಕಡೆ
ಕಡೆದರು ನರನೆದೆಯ,
ಹಾಲಾಹಲವೇ ಹರಿಯಿತು, ಮೊರೆಯಿತು;
ಬಾರದೇನೊ ಅಮೃತ?—ಎಂದಿಗೂ—
ಬಾರದೇನೊ ಅಮೃತ?

ಮುಗಿಲಲಿ ಮೂಡಿದ ಒಲವಿನ ಕನಸು
ಮನಸಿಗಿಳಿಯದಲ್ಲ!––ಇಳಿದರು—
ನನಸನಾಳದಲ್ಲ!
ಅರಿವಿಗು ಇರುವಿಗು ಇರುವೀ ಅಂತರ
ಕಳೆಯಲಾರದೇನೋ?—ಎಂದಿಗು—
ಅಳಿಯಲಾರದೇನೋ?

ಎದೆಗು ಎದೆಗು ನಡುವಿದೆ ಹಿರಿಗಡಲು ;
ಮುಟ್ಟಲಾರೆವೇನೋ?—ಸೇತುವೆ––ಕಟ್ಟ
ಲಾರೆವೇನೋ
ನಡುವಿನ ತೆರೆಗಳ ಮೊರೆಹವೆ ಮಾನವ
ಜೀವಗಾನವೇನೋ!--ದೇವನ--ದಿವ್ಯದಾನ
ವೇನೋ!

ಒಬ್ಬರನೊಬ್ಬರು ನಂಬುವ ತುಂಬುವ
ಹಬ್ಬವು ಕಬ್ಬದ ಕಾದಂಬಿನಿಯಲಿ
ಮೂಡುವ ಮಸುಳುವ ಮಳೆಬಿಲ್ಲಾಯಿತೆ?
ಮೊಳೆಯದೆ, ಅದು ಎದೆಯಾಳದಲಿ?
ಬೆಳೆಯದೆ, ನಮ್ಮಾ ಬಾಳಿನಲಿ?

ತಿಳಿಯುವ ಹೃದಯದ ಈ ತಳಮಳಕೆ,
ಬೆಳೆಯುವ ಬುದ್ಧಿಯ ಈ ಕಳವಳಕೆ,
ಬಲಿಯುವ ನರಕುಲದೀ ಒಳರೋಗಕೆ,
ಎಂದು ಕೊನೆ?—ಹಾ—ಎಂದುಕೊನೆ?

ಒಬ್ಬರನೊಬ್ಬರು ಕೊಂದುಕಳೆವ ಕೊಲೆ
ಹಬ್ಬಕೆ ತಾ ಬರದೇನು ಕೊನೆ?
ಈ ಕೊಳೆಕೊಬ್ಬಿಗೆ ಈ ಬಗೆಮಬ್ಬಿಗೆ
ಎಂದು ಕೊನೆ?—ಹಾ—ಎಂದುಕೊನೆ?

—ಎಂ. ಗೋಪಾಲಕೃಷ್ಣ ಅಡಿಗ.

ಈಗಿನ ಪರಮಾಣುಯುಗ

ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ.,
ಸೂಪರಿಂಟೆಂಡೆಂಟ್, ಇಂಟರ್ಮೀಡಿಯೆಟ್ ಕಾಲೇಜ್, ತುಮಕೂರು.

ಶಿಲಾಯುಗದಲ್ಲಿ ಮಾನವನು ಕಪಿಯಂತೆ ಜೀವಿಸುತ್ತಾ, ತನ್ನ ಪ್ರಾಣರಕ್ಷಣೆಗಾಗಿ ಕ್ರಮೇಣ ಪ್ರಗತಿಯ ಹಾದಿಯನ್ನು ಹಿಡಿದು, ಹಲವು ಸಾವಿರ ವರ್ಷಗಳ ಮೇಲೆ ಕಬ್ಬಿಣದ ಯುಗದಲ್ಲಿ ಕಾಲಿಟ್ಟು, ನವನಾಗರಿಕತೆಯ ಶಿಖರವನ್ನು ಹತ್ತತೊಡಗಿದನು. ಭೂಮಿಯ ಮಡಿಲಿನಿಂದ ಕಬ್ಬಿಣದ ಅದುರನ್ನು ತೆಗೆದು ಕಬ್ಬಿಣದ ಯಂತ್ರಗಳನ್ನು ಮಾಡುವ ಸಾಹಸಕಾರ್ಯಗಳು ಫಲಕಾರಿಯಾದಂತೆಲ್ಲಾ ಮಾನವನ ನಾಗರಿಕ ಜೀವನದಲ್ಲಿ ಹೆಚ್ಚು ಮಾರ್ಪಾಟುಗಳು ತಲೆದೋರಿದುವು. ಆವಿಶಕ್ತಿ ಮತ್ತು ವಿದ್ಯುಚ್ಛಕ್ತಿಗಳ ಸಹಾಯದಿಂದ ಸರ್ವತೋಮುಖವಾಗಿ ನವನಾಗರಿಕತೆಯ ರಾಜ್ಯವನ್ನು ವಿಸ್ತರಿಸಿ, ಕಾಲದೇಶಗಳ ಮೇರೆಗಳನ್ನು ಜಯಿಸತೊಡಗಿದನು. ಆದರೆ ಮಾನವನ ಹೃದಯವು ಮಾತ್ರ ಈ ಮುಂದೋಟಗಳಿಗೆ ತಕ್ಕಂತೆ ಮಾರ್ಪಾಟಾಗಿ ವಿಶ್ವಪ್ರೇಮದ ನೆಲೆಮನೆಯಾಗಲಿಲ್ಲ; ಅದುಮಾತ್ರ ದ್ವೇಷಾಸೂಯೆಗಳಿಂದಲೂ, ಸ್ವಾರ್ಥಪ್ರೇಮದಿಂದಲೂ ತುಂಬಿ ತುಳುಕುತ್ತಾ ಶಿಲಾಯುಗದ ಮಾರ್ಗದಿಂದ ಅಡ್ಡಾಡಲಿಲ್ಲ. ಇದರಿಂದ ಮಾನವನ ಬುದ್ಧಿಶಕ್ತಿಯಿಂದ ಸೃಷ್ಟಿಸಲ್ಪಟ್ಟ ಯಂತ್ರಗಳು ಅವನ ದುರಾಸೆಯ ದುಷ್ಕೃತ್ಯಗಳಿಗೆ ನೆರವಾದುವು. ಈಗ ನಾಗರಿಕರೆಂದು ಹೆಮ್ಮೆಪಡುವ ಜನಾಂಗಗಳಲ್ಲಿ ಹಲವರು ಈಗ ಇಪ್ಪತ್ತನೆಯ ಶತಮಾನದಲ್ಲಿ ಎರಡು ಘೋರಯುದ್ಧಗಳನ್ನು ನಡೆಸಿ, ಕೋಟ್ಯಂತರ ಜನರನ್ನು ಮೃತ್ಯುವಿಗೆ ತುತ್ತುಮಾಡಿರುವರು. ದೈವವು ಮಾನವನಿಗೆ ಕ್ರೀಡಾವನವೆಂದು ಧಾರೆಯೆರೆದ ಭೂಲೋಕದಲ್ಲಿ ಸ್ವಾರ್ಥಪರರಾದ ಜನರು ರಕ್ತದ ಕಾಲುವೆಗಳನ್ನು ಹರಿಸಿದರು. ಈ ರಾಕ್ಷಸೀ ಕೃತ್ಯಗಳನ್ನು ಸಾಧಿಸಲು ಮಾನವನಿಗೆ ಸಾಕಷ್ಟು ಶಕ್ತಿಯಿಲ್ಲವೆಂದು ದೈವವು ಹೊಸದಾಗಿ "ಆಟಂ ಬಾಂಬು"ಗಳನ್ನು ತಂದೊಡ್ಡಿದಂತೆ ಕಾಣುತ್ತದೆ. ಪರಮಾಣುಗಳಿಂದ ಹೊರಹೊಮ್ಮುವ ಈ ಹೊಸ ಶಕ್ತಿಯ ವಿಷಯವನ್ನು ಪ್ರೆಸಿಡೆಂಟ್ ರೂಜವೆಲ್ಟರಿಗೆ ಲೋಕವಿಖ್ಯಾತನಾದ ಆಲ್ಬರ್ಟ್ ಐನ್‌ಸ್ಟೈನನೆಂಬ ವಿಜ್ಞಾನಿಯು ೧೯೩೯ನೆ ಆಗಸ್ಟ್ ೨ನೆ ತಾರೀಕಿನಲ್ಲಿ ಬರೆದ ಒಂದು ಪತ್ರದಲ್ಲಿ ತಿಳಿಸಿದ್ದನಂತೆ! ಆಧುನಿಕ ವಿಜ್ಞಾನ ಶೋಧನೆಗಳ ಫಲವಾಗಿ ಯುರೇನಿಯಂ ಮೂಲವಸ್ತುವಿನ ಪರಮಾಣುಶಕ್ತಿಯನ್ನು ಶೀಘ್ರದಲ್ಲಿಯೇ ಉಪಯೋಗಿಸಿಕೊಂಡು ಪ್ರಲಯಶಕ್ತಿಯುತವಾದ ಬಾಂಬುಗಳನ್ನು ತಯಾರಿಸಬಹುದೆಂದು ಸಲಹೆಕೊಟ್ಟನು. ಆರುವರ್ಷಗಳಾದ ಮೇಲೆ ಈ ಪರಮಾಣು ಬಾಂಬುಗಳು ರೂಪಗೊಂಡು ಜಪಾನರಮೇಲೆ ದುರಂತ ಪರಿಣಾಮವನ್ನು ಬೀರಿದವು. ಇನ್ನು ಮುಂದೆ ಜನಾಂಗಗಳು ಕದನಕ್ಕೆ ಕಾಲಿಟ್ಟರೆ, ಆಟಂ ಬಾಂಬುಗಳ ಪ್ರಯೋಗದಿಂದ ಇಡೀ ಜನಾಂಗಗಳೇ ನಾಶಹೊಂದುವುದೂ ಅಸಂಭವವಲ್ಲ. ತ್ರಿಕಾಲಜ್ಞಾನಿಯಾದ ಹೆಚ್. ಜಿ. ವೆಲ್ಸೆಂಬ ಪಂಡಿತನು ಪ್ರಪಂಚದಿಂದ ಮಾನವನು ಮಾಯವಾಗಿ ಮಂಗಗಳು ರಾಜ್ಯಭಾರ ಮಾಡುವ ಕಾಲ ಸನ್ನಿಹಿತವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾನೆ. ಇದು ಆತನು ತನ್ನ ಹೃದಯವೇದನೆಯಿಂದ ಮಾನವನಿಗೆ ಕೊಟ್ಟಿರುವ ಎಚ್ಚರಿಕೆಯೆಂದು ನನ್ನ ಭಾವನೆ. ಪರಮಾಣುವಿನ ಪ್ರಲಯಶಕ್ತಿಯನ್ನು ಸಾಧಿಸಿರುವ ಈಗಿನ ಯುಗವು ಪರಮಾಣುಯುಗ. ಈ ಯುಗದ ಮಹತ್ತರವಾದ ಶಕ್ತಿಗೆ ತಕ್ಕಂತೆ ಮಾನವನ ಹೃದಯವು ಮಾರ್ಪಟ್ಟು ಅಹಿಂಸೆಗೂ ವಿಶ್ವಪ್ರೇಮಕ್ಕೂ ಎಡೆಕೊಡದಿದ್ದರೆ ಸರ್ವನಾಶವಾಗುವುದು ನಿಶ್ಚಯ. ಇಂತಹ ಅನಾ

ಹುತಕ್ಕೆ ದಾರಿಯಾಗದಿದ್ದರೆ ಪರಮಾಣುಶಕ್ತಿಯಿಂದ ಮಾನವನು ಕನಸಿನಲ್ಲೂ ಕಾಣದ ಸುಖಮಯವಾದ ಸ್ವರ್ಗಸಮಾನವಾದ ಹೊಸ ಪ್ರಪಂಚವನ್ನು ಕಟ್ಟಬಹುದು.

೧೯೩೯ರಲ್ಲಿ ಪ್ರಾರಂಭವಾದ ಎರಡನೇ ಘೋರ ಯುದ್ಧದಲ್ಲಿ, ಅಸಹಾಯ ಶೂರರಾದ ಜರ್ಮನರು ಪರಾಜಿತರಾಗಿ ಶಸ್ತ್ರಾಸ್ತ್ರಗಳನ್ನು ಬಿಸುಟು ಮಿತ್ರಪಕ್ಷದವರಿಗೆ ಶರಣಾಗತರಾದರು. ಹೀಗೆ ಜರ್ಮನಿಯು ಮಣ್ಣುಪಾಲಾದರೂ ತಾವು ಮಾತ್ರ ಯುದ್ಧವನ್ನು ಧೈರ್ಯದಿಂದ ಮುಂದುವರಿಸುವುದಾಗಿ ಜಪಾನರು ಜಂಭ ಕೊಚ್ಚುತ್ತಾ, ಮೆಲ್ಲಮೆಲ್ಲನೆ ಹಿಮ್ಮೆಟ್ಟುತ್ತಿದ್ದರು. ಜಪಾನಿನೊಡನೆ ಹೋರಾಟವು ಕೊನೆಯಾಗುವ ದಿನವು ಬಹುದೂರವಿದ್ದಂತೆ ಕಾಣುತ್ತಿತ್ತು. ಮಿತ್ರಸೇನಾನಾಯಕರೂ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ಖಂಡಿತವಾಗಿ ಸೂಚಿಸಲಿಲ್ಲ. ಜಪಾನು ಮಾತ್ರ ತನ್ನ ಶಕ್ತಿಗೆ ಮೀರಿದ ಸಾಹಸವನ್ನು ತೋರುತ್ತಾ, ಮಿತ್ರಯೋಧರನ್ನು ಎಲ್ಲಾ ರಣರಂಗಗಳಲ್ಲಿಯೂ ಎದೆಗುಂದದೆ ಪ್ರತಿಭಟಿಸುತ್ತಿರುವಂತೆ ಕಾಣುತ್ತಿತ್ತು. ಹೀಗಿರುವಲ್ಲಿ, ೧೯೪೫ನೇ ಇಸವಿ ಆಗಸ್ಟು ತಿಂಗಳು ಆರನೆ ತಾರೀಕಿನ ದಿನ ಮಿತ್ರ ವೈಮಾನಿಕರು ಜಪಾನಿನ ಹಿರೋಷಿಮಾ ನಗರದ ಮೇಲೆ 'ಆಟಂ ಬಾಂಬ್' ಎಸೆದರೆಂದು ವದಂತಿ ಹಬ್ಬಿತು. ಇಡೀ ಪಟ್ಟಣವೇ ಸುಟ್ಟು ಭಸ್ಮವಾಗಿ ಲಕ್ಷಾಂತರ ಜನರ ಮರಣ ಸಂಭವಿಸಿತೆಂದು ವರದಿಯಾಯಿತು. ಈ ವಿಪತ್ತಿನಿಂದ ತನಗಾದ ನಷ್ಟವನ್ನು ಜಪಾನರು ಗೊತ್ತುಹಚ್ಚುವ ಮೊದಲೇ, ಅವರ ಕೈಗಾರಿಕಾ ಕ್ಷೇತ್ರವಾದ ನಾಗಸಾಕಿನಗರದ ಮೇಲೆ ಆಗಸ್ಟು ೯ನೇ ತಾರೀಕು ಮಧ್ಯಾಹ್ನ ಮತ್ತೊಂದು "ಆಟಂ ಬಾಂಬು" ಬಿತ್ತು. ಇದರ ಪರಿಣಾಮವಾಗಿ ಉಂಟಾದ ಅಪಾರ ನಷ್ಟದಿಂದ ಭಯಗ್ರಸ್ತರಾಗಿ, ದಿಕ್ಕುತೋಚದೆ ಜಪಾನರು ಒಂದು ವಾರದೊಳಗಾಗಿ ಮಿತ್ರ ಸೈನಿಕರಿಗೆ ಶರಣುಹೊಂದಿದರು. ಹೊಸ ಟ್ಯಾಂಕುಗಳಿಂದಲೂ, ಸಬ್‌ಮೆರೀನುಗಳಿಂದಲೂ, ಜರ್ಮನರ ವಿ-ಶಸ್ತ್ರಗಳಿಂದಲೂ ಆಗದ ಭಯೋತ್ಪಾದನೆಯು ಆಟಂ ಬಾಂಬಿನಿಂದ ಒಮ್ಮೆಲೇ ಉಂಟಾಗಿ ಜರ್ಪಾ ಯುದ್ಧವು ಕೊನೆಗಂಡು ಶಾಂತಿ ನೆಲಸಿತು.

ಹಿರೋಷಿಮಾ, ನಾಗಸಾಕಿ ನಗರಗಳಲ್ಲಿ ಉಂಟಾದ ಸರ್ವನಾಶವನ್ನು ಜ್ಞಾಪಿಸಿಕೊಂಡರೆ "ಆಟಂ ಬಾಂಬಿ"ಗೆ ಯುದ್ಧದಲ್ಲಿ ಪ್ರಯೋಗಿಸಬಹುದಾದ ಭಯಂಕರವಾದ ಅಸ್ತ್ರಗಳಲ್ಲಿ ಪ್ರಥಮಸ್ಥಾನವನ್ನು ಕೊಡಬಹುದು. ಇದರಿಂದ ಮಿತ್ರಪಕ್ಷದವರು ಆಶಿಸುತ್ತಿದ್ದುದಕ್ಕಿಂತ ಮೊದಲೇ ವಿಜಯಸಂಭವಿಸಿತು. ಮಾನವನ ಸಂಶೋಧನೆಗಳಲ್ಲೆಲ್ಲಾ ಅತ್ಯಂತನಾಶಕಾರಿಯಾದ ಈ "ಆಟಂ ಬಾಬ್" ಬ್ರಿಟಿಷ್ ೨೦,೦೦೦ ಪೌಂಡಿನ ಬಾಂಬಿಗಿಂತ ೨೦೦ ಪಾಲು ಶಕ್ತಿಯುತವಾದುದೆಂದು ತಿಳಿಯಬಂದಿದೆ. ಇದು ಬಿದ್ದ ಸ್ಥಳದ ಸುತ್ತುಮುತ್ತ ಸುಮಾರು ೯ ಚದುರ ಮೈಲಿಗಳವರಿವಿಗೆ ಪ್ರಾಣಿಗಳನ್ನೂ ಮನುಷ್ಯರನ್ನೂ ಸುಟ್ಟು ಬೂದಿಮಾಡಿದೆ. ಈ ಬಾಂಬನ್ನು ಎಸೆದ ಸೂಪರ್ ಫಾಟ್ರೆಸ್ಸುವೈಮಾನಿಕರು ಆಟಂ ಬಾಂಬು ಬಿದ್ದ ಉತ್ತರ ಕ್ಷಣದಲ್ಲಿ ನಡೆಯುವ ವಿದ್ಯಾಮಾನಗಳನ್ನು ಕಣ್ಣಾರೆ ನೋಡಿ ವಿವರಿಸಿರುತ್ತಾರೆ. ಕಣ್ಣು ಕೋರೈಸುವಂತೆ ಬೆಳಕಿನ ಮಿಂಚು ಹರಿದು, ಕರ್ಣ ಕಠೋರವಾದ ಗುಡುಗಿನಿಂದೊಡಗೂಡಿ, ಸರ್ವತೋಮುಖವಾಗಿ ಒತ್ತಡದ ಅಲೆಯನ್ನು ಬೀರುತ್ತದೆ. ಕೆಲವು ಮೈಲಿಗಳಷ್ಟು ದೊಡ್ಡದಾದ ಬೂದಿಯ ಮೊಟ್ಟೆಯೊಂದು ಒಡೆದು ಬೆಳದು, ಆಕಾಶದಲ್ಲಿ ೭-೮ ಮೈಲಿಗಳ ಎತ್ತರವಿರುವ ಭಸ್ಮಸ್ತಂಭ ತಲೆದೋರುತ್ತದೆ. ಇಡೀ ನಗರವೇ ಕುದಿಯುತ್ತಿರುವ ಭಸ್ಮದ ಉಪಟಳದಿಂದಾವೃತವಾಗಿ, ಹೊಗೆಯ ಸುಳಿಗಳಿಂದಲೂ, ಧೂಳಿನ ಅಲೆಗಳಿಂದಲೂ ಮುಚ್ಚಿಹೋಗುತ್ತದೆ. ಎರಡು ೫೦೦ ಪೌಂಡುಗಳ "ಆಟಂ ಬಾಬು"ಗಳ ಸಿಡಿತದಿಂದಾದ ಕಷ್ಟನಷ್ಟಗಳು ಅಷ್ಟಿಷ್ಟಲ್ಲ; ಸುಮಾರು ಎರಡುಲಕ್ಷ ಜಪಾನರು ಸತ್ತರು. ಈ ವಿಧವಾದ ಅತಿ ವಿನಾಶಕಾರಿಯಾದ ಬಾಂಬನ್ನು ಸೃಜಿಸಿದ ವಿಜ್ಞಾನಿಗಳನ್ನೂ ಅದನ್ನು ಪ್ರಯೋಗಿಸಿದ ಮಿತ್ರಸೇನಾನಾಯಕರನ್ನೂ ದೂಷಿಸುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ಇನ್ನೂ ಹಲವಾರು ವರ್ಷಗಳು ಯುದ್ಧನಡೆದು ದಿನಂಪ್ರತಿಯಲ್ಲೂ ನೂರಾರುಜನರು ಮಡಿದು, ದೇಶಗಳಲ್ಲೆಲ್ಲಾ ಖಾಯಿಲೆ, ಕ್ಷಾಮ ತಲೆದೋರಿ,

ಸರ್ವತೋಮುಖವಾಗಿ ಮನುಷ್ಯನು ಲಕ್ಷಾಂತರ ಗಟ್ಟಲೆ ಸತ್ತು ವಿಜಯಾರ್ಜನೆ ಮಾಡುವುದಕ್ಕಿಂತ, ಎರಡು ದಿನದ 'ಆಟಂ ಬಾಂಬು' ಪ್ರಯೋಗದಿಂದ ಎರಡು ಲಕ್ಷಜನರು ನಾಶವಾದರೂ, ಒಡನೆಯೇ ಘೋರಯುದ್ಧವು ಕೊನೆಗಂಡು ಶಾಂತಿಸ್ಥಾಪನೆ ಯಾದದ್ದು ಮೇಲೆಂದು ಹೇಳುವವರೂ ಉಂಟು. ಈ ಬಾಂಬುಗಳ ಉಪಟಳವನ್ನು ತಾಳಲಾರದೆ ಜಪಾನು ಶರಣಾಗತವಾಯಿತೆಂದು ಹೇಳುವುದಕ್ಕೆ ಸಾಕಷ್ಟು ಆಧಾರಗಳಿವೆ. ಜಪಾನಿನ ಮುಖ್ಯಮಂತ್ರಿ ಯಾದ ಹಿಗಾಷಿ ಕುನಿಯು "ಆಟಂ ಬಾಂಬುಗಳ ಪ್ರಯೋಗದಿಂದುಂಟಾದ ತೊಂದರೆಗಳನ್ನು ತಡೆ ಗಟ್ಟಲು ಸರ್ಕಾರಕ್ಕೆ ಅಸಾಧ್ಯವೆಂದು ಕಂಡುಬಂ ದದ್ದೇ ಯುದ್ಧವು ಕೊನೆಗಂಡುದಕ್ಕೆ ಕಾರಣವೆಂ ದು ಘಂಟಾಘೋಷವಾಗಿ ಹೇಳಿರುವನು. ಟೋಕಿ ಯೋ ಪಟ್ಟಣವೇ ಆಟಂ ಬಾಂಬಿನ ಮೂರನೆಯ ಗುರಿಯೆಂಬ ಸುದ್ದಿ ಜಪಾನಿನಲ್ಲಿ ಹರಡಲು, ಜಪಾ ನೀಯರು ತಮ್ಮ ಚಕ್ರವರ್ತಿ ಹಿರೋಹಿಟೊರವರು ಎಲ್ಲಿ ಭಸ್ಮವಾಗುವರೋ ಎಂಬ ಭಯದಿಂದ ಭಗ ವಂತನಲ್ಲಿ ಮೊರೆಹೊಕ್ಕು ಮಿತ್ರಸೈನಿಕರಿಗೆ ಶರಣು ಹೊಡೆದರಂತೆ!

ಜರ್ಮನರು ಸೋತು ಶರಣಾಗತರಾಗುವ ವೇಳೆ ಗೆ ಜರ್ಮನ್ ವಿಜ್ಞಾನಿಗಳು ಪರಮಾಣು ಶಕ್ತಿ ಯನ್ನು ಉಪಯೋಗಿಸಿಕೊಳ್ಳುವ ಶೋಧನೆಗಳಲ್ಲಿ ವಿಜಯಿಗಳಾಗಿದ್ದರೆಂದು ತಿಳಿದುಬಂದಿದೆ. ಆದರೆ "ಜರ್ಮನಿಯು ಮೊದಲು ಆಟಂ ಬಾಬುಗಳನ್ನು ತಯಾರಿಸದಿದ್ದದ್ದು ದೈವಕೃಪೆ" ಎಂದು ಬ್ರಿಟಿಷ್ ಯುದ್ಧ ಪ್ರಧಾನಮಂತ್ರಿಯಾದ ವಿನ್‌ಸ್ಟನ್ ಚರ್ಚಿ ಲ್ಲರು ನಿಟ್ಟುಸಿರುಬಿಟ್ಟರಂತೆ! ಅದರ ತಯಾರಿಕೆಯಲ್ಲಿ ಜರ್ಮನರು ವಿಜಯಿಗಳಾಗಿದ್ದರೆ ಬ್ರಿಟಿಷ್‌ದ್ವೀಪಗ ಳಾಗಲೀ, ಬ್ರಿಟಿಷರಾಗಲೀ ಈ ಪ್ರಪಂಚದಲ್ಲಿರುತ್ತಿ ರಲಿಲ್ಲ. ಪ್ರೆಸಿಡೆಂಟು ಟ್ರೂಮನ್ನರೂ ಇದೇ ಅಭಿ ಪ್ರಾಯಪಟ್ಟಿದ್ದಾರೆ. "ಜರ್ಮನರು ವಿ-ಅಸ್ತ್ರಗಳ ನ್ನು ಕೂಡ ಸಾಕಷ್ಟು ತಯಾರಿಸಲು ಸಾಧ್ಯವಾಗದು ದಕ್ಕೆ ನಾವು ದೇವರಿಗೆ ಕೃತಜ್ಞರಾಗಿರಬೇಕು; ಆದರೆ ಆಟಂ ಬಾಂಬು ಅವರ ಹಸ್ತಗತವಾಗದಿದ್ದುದಕ್ಕೆ ಇನ್ನೂ ಹೆಚ್ಚು ಕೃತಜ್ಞರಾಗಿರಬೇಕು." ಆಟಂ ಬಾಂಬಿನ ನಿರ್ಮಾಣ ಮಾನವನ ಬುದ್ಧಿಶಕ್ತಿಗೆ ಬಹು ಯಶಸ್ವಿಯಾದ ಕಾರ್ಯಸಾಧನೆ. ಇಡೀ ಪ್ರಪಂಚವೇ ಇದರ ಉಪಕಾರ ಅಪಕಾರಗಳನ್ನು ಚರ್ಚಿಸುತ್ತಿದೆ. ಜನಸಾಮಾನ್ಯಕ್ಕೆ ಇದರಿಂದ ಮುಂದೆ ಸಾಧಿಸಬಹುದಾದ ಕಾರ್ಯಕಲಾಪಗಳು ಸುಲಭವಾಗಿ ಅರ್ಥವಾಗದಿದ್ದರೂ, ಕೈಗಾರಿಕಾಕ್ಷೇ ತ್ರದಲ್ಲಿ ಈ ಪರಮಾಣು ಶಕ್ತಿಯ ಪ್ರಯೋಗದಿಂದ ಈಗ ಊಹಿಸಲಸಾಧ್ಯವಾದ ಕಾರ್ಯಸಾಧನೆಗಳು ಕೈಗೂಡಿ ಎಲ್ಲೆಡೆಯಲ್ಲೂ ಕ್ರಾಂತಿ ತಲೆದೋರಬ ಹುದು. ಈಶಕ್ತಿಯನ್ನು ಮಾನವನ ಹಿತಚಿಂತನೆಗಾಗಿ ಉಪಯೋಗಿಸಿದರೆ, ಪ್ರಗತಿಯ ಪರಮಾವಧಿಯನ್ನು ಮುಟ್ಟಿದ ನವೀನ ಪ್ರಪಂಚದಲ್ಲಿ ಮನುಷ್ಯನು ಭ್ರಾತೃ ಭಾವದಿಂದ ಬದುಕಬಹುದು. ಇಲ್ಲದಿದ್ದರೆ ಶಸ್ತ್ರಾಸ್ತ್ರ ಗಳು ಬಾಂಬುಗಳು ಇವುಗಳ ಉಪಟಳಗಳಿಗೆ ತುತ್ತಾ ಗಿ ರಾಕ್ಷಸರಂತೆ ಜೀವಿಸಬಹುದು. ಈ ಆಟಂ ಬಾಂಬಿ ನೊಡನೆ ಕಪಿಚೇಷ್ಟೆಮಾಡಿ ಸರಸವಾಡಿದರೆ ಪ್ರಪಂ ಚವೇ ಸಿಡಿದು ಭಸ್ಮವಾಗಬಹುದೆಂದು ಜಾರ್ಜ್ ಬರ್ನಾರ್ಡ್ ಷಾರವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅನರ್ಥಕಾರಿಯಾಗಬಹುದಾದ ಬಾಂಬಿನ ಒಳಗುಟ್ಟನ್ನು ಎಲ್ಲರಿಗೂ ತಿಳಿಯದಂತೆ ಕಾದಿಡ ಬೇಕೆಂದು ಹಲವರು ಪ್ರಯತ್ನ ನಡೆಸುತ್ತಿದ್ದಾರೆ. ಇದು ಫಲಕಾರಿಯಾಗಲಾರದು. ಭೌತ ವಿಜ್ಞಾನದಲ್ಲಿ ಮುಂದೆ ನುಗ್ಗಿ ಶೋಧನೆಗಳನ್ನು ನಡೆಸುತ್ತಿರುವ ಯಾವ ಸ್ವತಂತ್ರ ಜನಾಂಗವೇ ಆಗಲಿ ಈ ಬಾಂಬಿನ ಮರ್ಮವನ್ನು ಕೆಲವು ವರ್ಷಗಳಲ್ಲಿ ಭೇದಿಸಿ, ತಿಳಿ ಯಬಲ್ಲುದೆಂದು ಗೊತ್ತಾಗಿದೆ. ಈಗಲೂ ಆಟಂ ಬಾಂಬುಗಳಲ್ಲಡಗಿರುವ ಅನೇಕ ಭೌತಮರ್ಮಗಳು ವಿಜ್ಞಾನಿಗಳಿಗೆಲ್ಲರಿಗೂ ಗೊತ್ತುಂಟು. ಆದರೆ ಇದ ನ್ನು ತಯಾರಿಸಲು ಬೇಕಾಗುವ ಸಲಕರಣೆಗಳಾ ಗಲೀ ದ್ರವ್ಯಸಹಾಯವಾಗಲೀ ದೊರಕುವುದು ಬಹು ದುರ್ಲಭ. ಅಮೇರಿಕಾ ಸರ್ಕಾರದವರು ಪರಮಾ ಣುಶಕ್ತಿಯ ಸಂಶೋಧನೆಗೆ ಅಪಾರವಾದ ದ್ರವ್ಯ ವನ್ನು ಖರ್ಚುಮಾಡಿದ್ದಲ್ಲದೆ, "ಆಟಂ ಬಾಂಬು" ನಿರ್ಮಾಣಕ್ಕೇ ಸಾವಿರಾರು ಕೋಟಿ ರೂಪಾಯಿಗ ಳನ್ನು ವಿನಿಯೋಗಿಸಲಾಗಿಟ್ಟು! ವೆಚ್ಚವಾಗಿದರು; ಇದು ಎಲ್ಲಾ ಜನಾಂಗಗಳಿಗೂ ಸಾಧ್ಯವಲ್ಲ. ಆದಾಗ್ಯೂ

ಈ ಬಾಂಬು ಪ್ರಪಂಚವನ್ನೇ ಸಂಬೋಧಿಸಿ "ಮಾನವನಲ್ಲಿ ಅನ್ಯೋನ್ಯ ಸಹಕಾರ, ಅಲ್ಲದಿದ್ದರೆ ಸರ್ವನಾಶ--ಇವೆರಡರಲ್ಲಿ ಯಾವುದು ಬೇಕು? ಎಂದು ಕೇಳುತ್ತಿರುವ ಪೆಡಂಭೂತವಾಗಿ ಪರಿಣಮಿಸಿದೆ.

ಆಟಂ ಬಾಂಬುಗಳು ಬಿದ್ದ ಹಿರೋಷಿಮಾ, ನಾಗಸಾಕಿನಗರಗಳ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಹೊಸ ಉಪದ್ರವಗಳು ಎರಡು ಮೂರು ತಿಂಗಳು ಕಾಲ ತಾಂಡವವಾಡಿ ಜನರನ್ನು ಹಿಂಸಿಸಿ ಮಣ್ಣುಪಾಲು ಮಾಡುತ್ತಿದ್ದುವಂತೆ. ನೋಡುವುದಕ್ಕೆ ಆರೋಗ್ಯದಿಂದಿರುವಂತೆ ಕಾಣುತ್ತಿದ್ದವರನೇಕರುಗಳಿಗೆ ಕೆಂಪುರಕ್ತ ಕಣಗಳು ಕ್ಷಯವಾಗಿ, ಕೂದಲು ದುರಿ, ಸಾವು ತಲೆದೋರುತ್ತಿತ್ತು. ಇವೆಲ್ಲ ಈ ಬಾಂಬುಗಳ ಪ್ರಭಾವವೇಯೆಂದೂ, ಇವುಗಳ ಕಾರಣಗಳನ್ನು ಕಂಡುಹಿಡಿಯಬೇಕೆಂದೂ ಅನೇಕ ವೈದ್ಯ ವಿಜ್ಞಾನಿಗಳು ಆ ಕ್ಷೇತ್ರಗಳಿಗೆ ಹೊರಟರು. ಹೀಗೆ ಸರ್ವತೋಮುಖವಾಗಿ ಭಯೋತ್ಪಾದನೆಯನ್ನುಂಟುಮಾಡಿ ಯುದ್ಧದಲ್ಲಿ ಬೇಯುತ್ತಿದ್ದ ಪ್ರಪಂಚಕ್ಕೆ ಶಾಂತಿ ಸ್ಥಾಪನೆಮಾಡಿದ ಆಟಂ ಬಾಂಬುಗಳು ಈಗಿನ ಪರಮಾಣುಯುಗಕ್ಕೆ ಸೂತ್ರಧಾರಿಯಂತೆ ಕಾಲಿಟ್ಟಿವೆ. ಸ್ವಾರ್ಥಿಗಳು ವಿಜ್ಞಾನದ ಮೂಲಕ ಪಡೆದ ಶಕ್ತಿಯನ್ನು ಸದ್ಯದಲ್ಲಿ ದುರುಪಯೋಗಪಡಿಸಿಕೊಂಡುದು ಆಧುನಿಕ ನಾಗರಿಕತೆಯ ಒಂದು ದುರಂತ ಪರಿಣಾಮವೆಂದು ಒಪ್ಪಬೇಕಾಗುವುದು. ಜರ್ಮನ್ ಯುದ್ಧ ಕೊನೆಗಂಡಮೇಲೆ ರಷ್ಯನರು ಬರ್ಲಿನ್ ನಗರದ ಕೈಜರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟಿನಲ್ಲಿದ್ದ ಪರಮಾಣು ಶಕ್ತಿಶೋಧನಾ ಯಂತ್ರಗಳನೆಲ್ಲಾ ತಮ್ಮ ದೇಶಕ್ಕೆ ಸಾಗಿಸಿ, ಜರ್ಮನ್ ವಿಜ್ಞಾನಿಗಳಿಗೆ ಅಧಿಕವಾದ ಸಂಬಳದ ಆಸೆ ಹುಟ್ಟಿಸಿ ಆಟಂ ಬಾಂಬು ಮಾಡಲು ಪ್ರಯತ್ನಿಸಿದ್ದಾರೆ. ಇದಕ್ಕೆ ಬೇಕಾದ ಯುರೇನಿಯಂ ಭೂತವನ್ನು ಎಂದಿಗಿಂತ ನಾಲ್ಕರಷ್ಟು ಹೆಚ್ಚಾಗಿ ಗಣಿಗಳಿಂದ ಬೇರ್ಪಡಿಸಬೇಕೆಂದು ಕಟ್ಟಾಜ್ಞೆ ಮಾಡಿದ್ದಾರಂತೆ.

ಈಗ ಜಗತ್ತಿನ ನಾಶಕ್ಕೆ ನಿರ್ಮಿಸಲ್ಪಟ್ಟ ಆಟಂ ಬಾಂಬಿನ ಭೌತತತ್ವಗಳು ಮುಂದೆ ಶಾಂತಿಯು ನೆಲೆಸಿದಾಗ ಮಾನವನ ಉನ್ನತಿಗೆ ಸಹಕಾರಿಯಾಗುವ ಭರವಸೆ ಇದೆ. ಒಂದು ಗ್ರಾಂ ಯುರೇನಿಯಮ್ಮೆಂಬ ವಸ್ತುವಿನ ಪರಮಾಣು ಶಕ್ತಿಯು ಬಹು ಅಗಾಧವಾದುದು; ಮೈಸೂರು ದೇಶದಲ್ಲಿ ಯೂನಿಟ್ಟಿಗೆ ನಾಲ್ಕಾಣೆಯಂತೆ ನಾವು ಉಪಯೋಗಿಸುವ ವಿದ್ಯುಚ್ಛಕ್ತಿಗೆ ಹೋಲಿಸಿದರೆ ಈ ಪರಮಾಣು ಶಕ್ತಿಯ ಬೆಲೆ ಎರಡೂವರೆಲಕ್ಷ ರೂಪಾಯಿಗಳಿಗೆ ಮೀರುವುದು. ಒಂದು ಔನ್ಸಿಗಿಂತ ಕಮ್ಮಿ ಯುರೇನಿಯಮ್ಮಿನಿಂದ ಹೊರಚೆಲ್ಲುವ ಪರಮಾಣು ಶಕ್ತಿಯಿಂದ ಭಾರಿ ಹಡಗು ಭೂಪ್ರದಕ್ಷಿಣೆಮಾಡಿ ಬರಬಹುದು. ಇದರಿಂದ ಕಲ್ಲಿದ್ದಲು ಎಣ್ಣೆಗಳ ಮಿಗುತಾಯವು ಬಹು ಹೆಚ್ಚುವುದು; ಇವುಗಳಿಗಾಗಿ ಆಗಾಗ್ಗೆ ತಲೆದೋರುವ ಪರಸ್ಪರ ವೈಷಮ್ಯಗಳು ಜನಾಂಗಗಳಲ್ಲಿ ಮಾಯವಾಗುವುವು. ಒಂದು ಪೌಂಡು ಪರಮಾಣು ಶಕ್ತಿಯು ಐವತ್ತುಲಕ್ಷ ಪೌಂಡು ಕಲ್ಲಿದ್ದಲಿಗಾಗಲೀ, ಮೂವತ್ತು ಲಕ್ಷ ಗ್ಯಾಲನ್ ಪೆಟ್ರೋಲೆಣ್ಣೆಗಾಗಲೀ ಸರಿತೂಗುವುದೆಂದು ಲೆಕ್ಕಹಾಕಲ್ಪಟ್ಟಿದೆ. ಆದಕಾರಣ ಪರಮಾಣು ಶಕ್ತಿಯನ್ನು ಉಪಯೋಗಿಸಿಕೊಂಡು ಅನುಕೂಲವಾದ ವಿಮಾನಗಳಲ್ಲಿ ಚಂದ್ರ, ಶುಕ್ರ ಲೋಕಗಳನ್ನು ತಲ್ಪಿ ಹಿಂತಿರುಗುವ ಆಶೆ ಸಹ ಮೂಡಿರುತ್ತದೆ. ಜಗತ್ತಿನ ಶಾಂತಿಸ್ಥಾಪನೆಯಾದಮೇಲೆ ಪರಮಾಣುಶಕ್ತಿಯ ಪ್ರಯೋಗದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿ ತಲೆದೋರಬಹುದು. ಆವಿಶಕ್ತಿ ವಿದ್ಯುಚ್ಛಕ್ತಿಯನ್ನೂ ಕಂಡುಹಿಡಿದನಂತರ ಸಂಭವಿಸಿದ ಕ್ರಾಂತಿಗಳಿಗಿಂತ ಇದು ಬಹು ಹೆಚ್ಚಿನದಾಗಿ ಪರಿಣಮಿಸುವುದೆಂದು ವೈಜ್ಞಾನಿಕರು ಅಭಿಪ್ರಾಯಪಟ್ಟಿದ್ದಾರೆ. ಈಗಾಗಲೇ ರೈಲು, ಟ್ರಾಂ, ಮೋಟಾರುಗಳನ್ನು ಪರಮಾಣು ಶಕ್ತಿಯ ಸಹಾಯದಿಂದ ನಡೆಸುವ ಯೋಚನೆಗಳು ಸಾಗುತ್ತಿವೆ. ಹಡಗುಗಳಿಗೂ, ವಿಮಾನಗಳಿಗೂ ಈ ಶಕ್ತಿಯನ್ನು ಉಪಯೋಗಿಸುವ ದಿನವು ಬಹುದೂರವಿಲ್ಲ. ಈಗತಾನೇ ಪ್ರಾರಂಭವಾಗಿರುವ ಪರಮಾಣುಯುಗದ ವಿಸ್ಮಯಕಾರಕವಾದ ಸುಖಸೌಲಭ್ಯಗಳು ಇನ್ನು ಹಲವಾರು ವರ್ಷಗಳಲ್ಲಿ ಮಾನವನ ಹಸ್ತಗತವಾಗುವುದರಲ್ಲಿ ಸಂದೇಹವಿಲ್ಲ; ಆದರೆ ಈ ಅಪೂರ್ವ ನಾಗರಿಕತೆಯ ಪರಮಾವಧಿಯನ್ನು ಅನುಭವಿಸಲು, ಅವನ ಹೃದಯದಲ್ಲಿ ನಿಶ್ಚಲವಾದ ವಿಶ್ವಪ್ರೇಮವು ನೆಲಸಿ "ಸರ್ವೇಜನಾಃ ಸುಖಿನೋಭವಂತು" ಎಂಬ ಆರ್ಯೋಕ್ತಿಯು ಬೇರೂರಬೇಕು.

ಕನ್ನಡಿಗನ ಕಾರಭಾರ

ಶ್ರೀ ಬಿ. ಎಚ್. ಶ್ರೀಧರ, ಎಂ.ಎ., ಭಟಕಳ.

೧. ಕರ್ನಾಟಕದ ಪ್ರಾಂತೀಕರಣ.

ಕರ್ನಾಟಕವು ಭಿನ್ನ - ಭಿನ್ನವಾಗಿದೆಯೆಂಬುದು ಸರ್ವವಿದಿತ. ಕರ್ನಾಟಕದ ಪ್ರಾಂತೀಕರಣದ ಸಲುವಾಗಿ ದುಡಿಯಬೇಕೆಂಬುದು ಸರ್ವಸಮ್ಮತ. ಈಗಾಗಲೇ ಆ ಬಗ್ಗೆ ಒಂದು ವಿಶಿಷ್ಟ ಸಂಸ್ಥೆ ಕಂಕಣಕಟ್ಟಿ ಶ್ರಮಿಸತೊಡಗಿದೆ ಎಂಬುದು ಸ್ಪಷ್ಟ. ಆದರೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಕೆಲವು ಮಹನೀಯರು ಇತ್ತೀಚೆಗೆ ಆ ಸಂಸ್ಥೆಯಲ್ಲಿ ಕಾಂಗ್ರೆಸ್ಸೇತರ ವಿವಿಧ ಜನರಿರುವುದರಿಂದ ಭಾರತ ಸ್ವಾತಂತ್ರ್ಯವನ್ನೇ ಆದ್ಯೋದ್ದೇಶವಾಗಿಟ್ಟುಕೊಂಡ ತಮ್ಮ ಸಾಧನೆಗೆ ಅದರಿಂದ ವಿಘ್ನಬಂದೀತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಏಕೀಕರಣದವರಾದರೋ ಕಾಂಗ್ರೆಸ್ಸಿನವರಾದರೇನು, ಅವರೂ ಕನ್ನಡಿಗರೇ ಅಲ್ಲವೇ; ಆದಕಾರಣ ಅವರಾದರೂ ಏಕೀಕರಣಕ್ಕೆ ಮಹತ್ವ ಕೊಡಲೇಬೇಕು ಎಂದು ಸಾರುತ್ತಾರೆ. ಇಂದು ಕರ್ನಾಟಕದಲ್ಲಿ ಎಷ್ಟೋ ರಾಜಕೀಯ ಪಕ್ಷಗಳಿದ್ದರೂ ಜನಸಾಮಾನ್ಯದಲ್ಲಿ ಯಾರೂ ಭಾರತ ಸ್ವಾತಂತ್ರ್ಯವನ್ನು ಉಪೇಕ್ಷಿಸುವವರಿಲ್ಲವೆಂದೂ ಅದನ್ನು ಎತ್ತಿಹಿಡಿದವರಿಗೆ ಪೂರ್ಣಬೆಂಬಲ ಕೊಡದಿರರೆಂದೂ ಎದೆತಟ್ಟಿ ಹೇಳಬಹುದಾಗಿದೆ. ಮತ್ತು ಮೊದಲು ಭಾರತ ಸ್ವಾತಂತ್ರ್ಯ, ಕಡೆಗೆ ಪ್ರಾಂತತ್ವ ಸಾಧನೆ ಎಂಬುದು ಯೋಗ್ಯವೇ ಆದರೂ "ಕಡೆಗೆ" ಎಂಬುದರ ಕಾಲಾವಧಿಮಾತ್ರ ಲಂಬವಾಗುತ್ತ ಹೋಗಬಾರದೆಂದು ಯಾವ ಕನ್ನಡಿಗನಿಗೆ ಎನಿಸದಿರಲಿಕ್ಕಿಲ್ಲ? ನ್ಯಾಯವಾಗಿ ವಿಚಾರಮಾಡಿದರೆ ಕರ್ನಾಟಕದಲ್ಲಿ ಪ್ರಾಂತೀಕರಣವಾಗಬೇಕಾದರೆ ಕರ್ನಾಟಕ ಕಾಂಗ್ರೆಸ್ಸಿನ ಬೆಂಬಲವಿರುವುದು ಅತ್ಯಗತ್ಯ. ಕರ್ನಾಟಕ ಕಾಂಗ್ರೆಸ್ಸಿಗರಾದರೂ ಮೊದಲು ತಾವು ಕನ್ನಡಿಗರೆಂಬುದನ್ನು ಹೇಗೆ ಮರೆತಾರು? ಭಾರತ ಸ್ವಾತಂತ್ರ್ಯವು ತಂದೆಯಂತಿದ್ದರೆ ಕರ್ನಾಟಕ ಪ್ರಾಂತೀಕರಣ ತಾಯಿಯಂತೆ. ಎರಡೂ ಕನ್ನಡಿಗನಿಗೆ ಅತ್ಯಾವಶ್ಯಕವಾದವುಗಳೇ. ಹೀಗಿರುವ ಉಭಯಸಂಸ್ಥೆಗಳೂ ಒಂದಕ್ಕೊಂದು ಬೆಂಬಲಕೊಡುವೆವೆಂದು ಪ್ರಕಟಿಸಿ ಅದರಂತೆ ನಡೆದರೆ ಕರ್ನಾಟಕದ ಹಿತವು ಸಂಪೂರ್ಣವಾಗಿ ಸಿದ್ಧಿಸುವಂತಾದೀತು. ಭಾರತ ಸ್ವಾತಂತ್ರ್ಯದ "ಬಳಿಕ" ಎಂದರೆ "ಮರುದಿನ"ವೇ ಪ್ರಾಂತೀಕರಣಕ್ಕೆ ಕನ್ನಡ-ಕಾಂಗ್ರೆಸ್ಸಿಗರು ಪಣ ತೊಡಬೇಕು. ಏಕೀಕರಣದವರಾದರೂ ತಮ್ಮ ಹಿತದ ದೃಷ್ಟಿಯಿಂದಲೇ ಭಾರತ ಸ್ವಾತಂತ್ರ್ಯ ಸಾಧನೆಗೆ ಬೆಂಬಲ ಕೊಡಬೇಕು. ಹೀಗಾದರೆ ಪರಸ್ಪರ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲದಂತಾಗಿ ಎಲ್ಲವೂ ಸುಗಮವಾಗಿ ಸಾಗುವುದರಲ್ಲಿ ಸಂದೇಹವಿಲ್ಲ. ಭಾರತದ ಸ್ವಾತಂತ್ರ್ಯಸಿದ್ಧಿಯೆಂದರೆ ಕ್ರಾಂತಿಯುಗದ ಅಪೂರ್ವ ವಿಜಯ. ಅದು ಮುಂದೆ ತರಬಹುದಾದ ಸುಧಾರಣೆಗಳು ಬಹು ಮುಖವಾಗಿ ಪ್ರಗತಿಶೀಲವಾದುವು. ಇಂದಿನ ಮತದಾರರ ಬಗ್ಗಟ್ಟು ಯಾವ ಸಂಸ್ಥೆಯನ್ನೇ ಆಗಲಿ ಅಹಿತಕರವೆಂದು ಕಂಡರೆ ಮುರಿಯಬಹುದು, ವಿಹಿತಕರವೆಂದು ಕಂಡರೆ ಬೆಳೆಸಬಹುದು. ಜನೇಚ್ಛೆಯೇ ಜನಾರ್ದನನಿಚ್ಛೆ.

೨. ಅಖಿಲ ಕರ್ನಾಟಕ ವಿಶ್ವವಿದ್ಯಾನಿಲಯ.

ಕರ್ನಾಟಕಕ್ಕೊಂದು ಸ್ವತಂತ್ರ ವಿಶ್ವವಿದ್ಯಾನಿಲಯ ಬೇಕೆಂಬುದಕ್ಕೆ ವಿರೋಧಿಗಳು ಬಹಳ ಕಡಮೆ. ಈ ಕೆಲಸಕ್ಕಾಗಿ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಒಂದು ಸಮಿತಿ ತಯಾರಾಗಿದೆ. ಸಮಿತಿಯವರು ಒಂದು ಪ್ರಶ್ನಾವಳಿ (Questionnaire) ಯನ್ನು ರೂಪಗೊಳಿಸಿ ಬ್ರಿಟಿಷ್ ಕರ್ನಾಟಕದ ಹೈಸ್ಕೂಲುಗಳಮುಖ್ಯೋಪಾಧ್ಯಾಯರ ಅಭಿಪ್ರಾಯದ ಬಗ್ಗೆ ಕಳುಹಿದ್ದು ನನ್ನ ಗಮನಕ್ಕೆ ಬಂದಿದೆ. ಅದರಲ್ಲಿ ಧಾರವಾಡವನ್ನು ಸಂಸ್ಥೆಯ ಕೇಂದ್ರವಾಗಿ

ಮಾಡಿ ಅಲ್ಲಿ ಮತ್ತು ಬೆಳಗಾವಿಯಲ್ಲಿ ಅದರ ಚಾಲಕಸಭೆ ಕೂಡಿಸುವುದು ಎಂದಿದೆ; ಮತ್ತು ಮೊದಲು ಬೊಂಬಾಯಿ ಕರ್ನಾಟಕ ಅಷ್ಟನ್ನೇ ವಿದ್ಯಾಲಯದ ವ್ಯಾಪ್ತಿಯ ಮಿತಿಯಾಗಿ ಇಡಬೇಕೊ ಇಲ್ಲವೇ ಮದ್ರಾಸು ಕರ್ನಾಟಕವನ್ನೂ ಸೇರಿಸಿಕೊಳ್ಳಬೇಕೋ ಎಂಬ ಪ್ರಶ್ನೆಯೂ ಇದೆ. ಅಖಿಲ ಕರ್ನಾಟಕ ದೃಷ್ಟಿಯು ಬೆಳೆಯುತ್ತ ಬಂದ ಈ ಕಾಲದಲ್ಲಿ ಉಕ್ತ ಸಮಿತಿಯವರು ಮೈಸೂರು ವಿದ್ಯಾನಿಲಯದ ಅಧಿಕಾರಿಗಳ ಸಹಾಯ ಸಮಾಲೋಚನೆಗಳನ್ನು ಪಡೆಯಲು ಪ್ರಯತ್ನಿಸುವುದು ಹಿತಕರವಲ್ಲವೆ? ಮೈಸೂರು ಎಷ್ಟೇ ಸ್ವಾವಲಂಬಿಯಾದರೂ ಮೈಸೂರು ಕನ್ನಡಿಗನಾವನಿಗಾಗಲೀ ಹಿಂದಿನ ಇತಿಹಾಸ ಪ್ರಸಿದ್ಧ ಕರ್ನಾಟಕದ ಬೃಹಸ್ಸ್ವರೂಪವನ್ನು ಪುನಃ ಸಾಧಿಸಿ ಕರ್ನಾಟಕವನ್ನು ಸಾಗರ ಪರ್ಯಂತವೆನಿಸಬೇಕೆಂಬ ಹಂಬಲವಿಲ್ಲವೇ ? ಇದ್ದೇ ಇದೆ. ವೈಯಕ್ತಿಕ ಲಾಭ ಅಷ್ಟೇನಿಲ್ಲದಿದ್ದ ಪಕ್ಷದಲ್ಲೂ ಮೈಸೂರು ಸಿಡಿದುಹೋದ ತನ್ನ ಇತಿಹಾಸ ಪರಿಚಿತ ಭಾಗದ ಬಾಂಧವರಿಗೆ ಎಂದೂ ನೆರವಾಗದಿರಲಾರದು. ಇದರಲ್ಲಿ ರಾಜಕೀಯ ವಿಚಾರವೇನೂ ಹೆಚ್ಚಿಲ್ಲ; ಇದೊಂದು ಸಾಂಸ್ಕೃತಿಕ ಸಂಘಟನಾ ಪ್ರಯತ್ನವೆಂಬುದುಸ್ಪಷ್ಟ. ಅಂತಹ ಸಂಘಟಿತ ಸಂಸ್ಥೆಯಾಗಿ ಇಂದು ಕನ್ನಡ ಸಾಹಿತ್ಯ ಪರಿಷತ್ತು ಕೆಲಸಮಾಡುತ್ತಿದೆಯಲ್ಲವೆ? ಈ ಕಡೆಗೆ ಬಲ್ಲವರು ಗಮನ ಕೊಡಬೇಕು.

ಇನ್ನು ಈಗಿನ ಮೈಸೂರು ವಿಶ್ವವಿದ್ಯಾನಿಲಯದಲ್ಲಾಗಲೀ ಭಾವೀ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಾಗಲೀ ಬೋಧಕ ಭಾಷೆಯು ಕನ್ನಡವೇ ಆಗಬೇಕೆನ್ನುವವರು ಹಲವರಿದ್ದಾರೆ. ಇದೇನೋ ಸದಾಶಯವೇ; ಆದರೆ ಬರಿದೆ (ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಉದಾಹರಣೆ ಕೊಟ್ಟರೆ ಸಾಲದು. ಆದರಿಂದಾಗುವ ಲಾಭಾಲಾಭಗಳನ್ನು ಸ್ವಲ್ಪವಿಮರ್ಶಿಸಬೇಕು. ಇದು ಅಂತರ್‍ರಾಷ್ಟ್ರೀಯತ್ವ ಬೆಳೆಯುತ್ತಿರುವ ಯುಗ. ವಿಶ್ವವಿದ್ಯಾನಿಲಯವೆಂದಮೇಲೆ ವಿವಿಧವಾದ ಶಾಸ್ತ್ರಗಳ ವಿಶೇಷವಾದ ಅಭ್ಯಾಸ, ಸಂಶೋಧನೆ ಇತ್ಯಾದಿಗಳು ನಡೆಯಬೇಕಾಗುತ್ತದೆ. ಅಂತರ್‍ರಾಷ್ಟ್ರೀಯ ಪಂಡಿತರೊಡನೆ ವ್ಯವಹರಿಸಬೇಕಾಗುತ್ತದೆ. ಎಂದಮೇಲೆ ವಿದ್ಯಾರ್ಥಿಗೆ ಅಂತರ್‍ರಾಷ್ಟ್ರೀಯ ಭಾಷೆಯಲ್ಲಿ ಪ್ರಾವೀಣ್ಯವಿರಬೇಕು ಎಂದಾಯಿತು. ಅದರ ಆಲೋಚನೆಯನ್ನು ಬಿಟ್ಟರೂ ಹಿಂದುಸ್ಥಾನದ ಅಂತಃಪ್ರಾಂತೀಯ ಭಾಷೆಯ ಜ್ಞಾನ ಅವಶ್ಯವೆನಿಸುವುದಿಲ್ಲವೆ ? ಹಿಂದುಸ್ಥಾನದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಶಾಸ್ತ್ರಾಭ್ಯಾಸಿಗಳು, ಶಾಸ್ತ್ರಾಧ್ಯಾಪಕರು ಭಾಷೆ ಪರಿಭಾಷೆಗಳಲ್ಲಿ ಏಕತ್ವವನ್ನು ಇಟ್ಟುಕೊಳ್ಳದಿದ್ದರೆ ವ್ಯವಹಾರವು ಸುಲಭಸಾಧ್ಯವಾದೀತೆ ? ಇಂದು ಇಂಗ್ಲೀಷು ಅಂತರ್‍ರಾಷ್ಟ್ರೀಯವೂ ಆಗಿದೆ ಅಂತಃಪ್ರಾಂತೀಯವೂ ಆಗಿದೆ ಎಂದು ಹೇಳಬಹುದು. ಆದರಿಂದಲೇ ವ್ಯವಹಾರ ಸುಲಭವಾಗಿದೆ. ಅಷ್ಟಲ್ಲದೆ ಅದು ರಾಜಭಾಷೆ (ಸರಕಾರದಭಾಷೆ)ಯೂ ಹೌದು. ಶಾಸ್ತ್ರಾಭ್ಯಾಸಿಗೆ ಬಹು ಭಾಷೆಗಳನ್ನು ಕಲಿಯುವುದರಲ್ಲಿ ಕಾಲ ಕಳೆವುದು ಪ್ರಗತಿದಾಯಕವಲ್ಲ; ಪ್ರತಿಯೊಬ್ಬನೂ ದ್ವಿಭಾಷಿಯನ್ನಿಟ್ಟುಕೊಳ್ಳುವುದಾಗಲಿ, ಪ್ರತಿಸಲ ಪರಿಭಾಷೆಗಳನ್ನು ಭಾಷಾಂತರಿಸಿಕೊಳ್ಳುತ್ತಿರುವುದಾಗಲಿ ಅನನುಕೂಲವಾದುದು. ಮುಂದಿನ ಭಾರತದಲ್ಲಿ ಅಂತರ್‍ರಾಷ್ಟ್ರೀಯ ಭಾಷೆ (ಯಾವುದೇ ಆಗಲಿ, ಹಿಂದುಸ್ಥಾನದ ದೇಶಭಾಷೆ (ಅಂತಃ ಪ್ರಾಂತೀಯ ಭಾಷೆ) ಮತ್ತು ಪ್ರಾಂತ ಭಾಷೆ(Regional Language) ಈ ಮೂರಕ್ಕಿಂತ ಹೆಚ್ಚು ಭಾಷೆಯನ್ನು ಶಾಸ್ತ್ರಾಭ್ಯಾಸಿಗೆ ವಿಶ್ವವಿದ್ಯಾನಿಲಯದಲ್ಲಿ ಕಲಿ ಎಂದು ಒತ್ತಾಯಿಸುವುದು ಹಿತಕರವಲ್ಲ. ಕಲಾಭ್ಯಾಸಿಗಾದರೂ ಇಷ್ಟರ ಜೊತೆಗೆ ಭಾರತದ ಗುರುಭಾಷೆ (Classical Language) ಯಾದ ಸಂಸ್ಕೃತವೊಂದಲ್ಲದೆ ಬೇರೆ ಭಾಷೆಯನ್ನು ಕಲಿವ ಅವಶ್ಯಕತೆ ಕಡಮೆ; ಅದು ಐಚ್ಛಿಕವೇ ಸರಿ. ಈ ವಿಚಾರವನ್ನು ವಿಶ್ವವಿದ್ಯಾನಿಲಯದ ಚಾಲಕರು ಮತ್ತು ಘಟಕರು ಗಮನಿಸುವುದು ಅತ್ಯಾವಶ್ಯಕ.

೩. ಭಾಷೆಯ ಬೆಳವಣಿಗೆ.

ಕನ್ನಡ ನುಡಿಯು ಕರ್ನಾಟಕದ ವಿವಿಧ ಭಾಗಗಳಲ್ಲಿ ಹೆಚ್ಚುಕಡಿಮೆ ಒಂದು ಮಟ್ಟ (Standard) ವನ್ನು ಗುರಿಯಾಗಿಟ್ಟುಕೊಂಡು ಬೆಳೆಯುವಂತಾಗುವುದು ಶ್ರೇಯಸ್ಕರ. 'ಸ್ಟೇಂಡರ್ಡ್' ಇಂಗ್ಲೀಷಿನಂತೆ

'ಸ್ಟೇಂಡರ್ಡ್' ಕನ್ನಡವು ಕರ್ನಾಟಕದಲ್ಲಿ ಸರ್ವಸಾಮಾನ್ಯವಾಗಿ ಬೆಳೆದು ಬರಬೇಕಾದರೆ ವಿವಿಧ ವಿದ್ಯಾ ಖಾತೆಗಳ ಪಠ್ಯಪುಸ್ತಕ ರಚನೆಯಲ್ಲಿ ಅಖಿಲ ಕರ್ನಾಟಕ ವಿದ್ವಾಂಸರ ಕೈವಾಡ ಅವಶ್ಯಕ. ಇಂದಿನ ಕನ್ನಡ ಪಠ್ಯ ಪುಸ್ತಕಗಳಲ್ಲಿ ಅವ್ಯವಸ್ಥೆಯೇ ಎದ್ದು ಕಾಣುವ ಗುಣವಾಗಿದೆ! ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯಗಳ ಕಲಸುಮೇಲೋಗರವೇ ನಮ್ಮಲ್ಲಿಯ ಪಠ್ಯ ಪುಸ್ತಕಗಳ ಸ್ವರೂಪ. 'ಮೆಟ್ರಿಕ್', 'ಇಂಟರ್‌ಮೀಡಿಯಟ್', 'ಬಿ.ಎ.', ತರಗತಿಗಳ ಅಭ್ಯಾಸಕ್ಕಾಗಿಟ್ಟ ಪುಸ್ತಕಗಳಲ್ಲಿ ಅನೇಕ ದರ್ಜೆಯ ಕನ್ನಡ ಭಾಷೆಯನ್ನು ಕಾಣಬಹುದಾಗಿದೆ. 'ಮಿಡಲ್ ಸ್ಕೂಲು' ಮುಗಿದ ಕೂಡಲೇ ವಿದ್ಯಾರ್ಥಿಗೆ ಕನ್ನಡದ ವಿಶ್ವರೂಪ ದರ್ಶನ ಮಾಡಿಸಲು ಹೊರಟು ಅವನಿಗೆ 'ಹೊಸಗನ್ನಡ ಸಾಕಷ್ಟು ಬರುವುದಿಲ್ಲ, ಹಳಗನ್ನಡ ತಿಳಿಯುವುದೇ ಇಲ್ಲ' ಎಂಬ ಸ್ಥಿತಿಗೆ ಮುಟ್ಟಿಸುವುದು ವಿಚಿತ್ರವಲ್ಲವೆ? ಕನ್ನಡದ ವಿಕ್ರಮಾರ್ಜುನ ವಿಜಯದ ಭಾಷೆ, ಗದುಗಿನ ಭಾರತದ ಭಾಷೆ, 'ಸೊಹ್ರಾಬ್ ಮತ್ತು ರುಸ್ತುಂ'ದ ಭಾಷೆ—ಎಲ್ಲವೂ ಒಂದೇ ಮಟ್ಟದವೆ? 'ಮೆಟ್ರಿಕ್ ಸೆಲೆಕ್ಷನ್'ನಲ್ಲಿ ಪಂಪನ ಕಾವ್ಯದ್ದೊಂದು ಚೂರು, ಬಿ.ಎ.ಯಲ್ಲಿ 'ದುರ್ಗೇಶನಂದಿನಿ'ಯ ಗದ್ಯ; ಕನ್ನಡ ಕಾವ ಪರೀಕ್ಷೆಗೆ 'ಹೂಮಾಲೆ'ಯಂಥ ಪದ್ಯಸಂಗ್ರಹ, 'ಮಿಡಲ್' ನಾಲ್ಕನೆ ತರಗತಿಯಲ್ಲಿ ಜೈಮಿನಿ ಭಾರತದ ಭಾಗಗಳು—ಈ ಮಾದರಿಯ ಕನ್ನಡದುಣಿಸು ಕನ್ನಡ ಮಕ್ಕಳ ತಲೆನೋವನ್ನು ಹೆಚ್ಚಿಸೀತೇ ವಿನಃ ಅವರಿಗೆ ಕನ್ನಡದಲ್ಲಿ ಆಸಕ್ತಿ, ಅಭಿರುಚಿ, ಪಾಂಡಿತ್ಯ ಇವನ್ನುಂಟುಮಾಡಲಾರದು. ಈ ದುರ್ಯೋಗವನ್ನು ದೂರೀಕರಿಸುವುದು ವಿದ್ಯಾಧಿಕಾರಿಗಳ ಆದ್ಯಕರ್ತವ್ಯ.

ಎಲ್ಲದಕ್ಕಿಂತ ಮೊದಲು 'ಆಕ್ಸ್‌ಫರ್ಡ್' ಇಂಗ್ಲಿಷ್ ನಿಘಂಟಿನ ಮಾದರಿಯ ಅಖಿಲ ಕರ್ನಾಟಕ ಯೋಗ್ಯವಾದ ಕನ್ನಡ-ಕನ್ನಡ ನಿಘಂಟೊಂದು ಶಾಸ್ತ್ರೀಯವಾಗಿ ತಯಾರಾಗುವುದು ಅತ್ಯಾವಶ್ಯಕ. ಇದರ ಬಗ್ಗೆ ಎಲ್ಲೂ ಪ್ರಯತ್ನ ನಡೆದಿಲ್ಲ. ಇದಕ್ಕೆ ಶ್ರೀ ಶಿವರಾಮ ಕಾರಂತರೊಂದು ನಾಂದಿ ಮಾಡಿದ್ದಾರೆ. ಈ ಮಹಾ ಕಾರ್ಯಕ್ಕೆ ಅಖಿಲ ಕರ್ನಾಟಕ ವಿದ್ವಾಂಸರ ಒಂದು ಸಮಿತಿಯನ್ನು ನೇಮಿಸಿ ಇಂದಿನ ಕನ್ನಡ ವಿದ್ಯಾರ್ಥಿಗೆ ಹಳ-ನಡು-ಹೊಸಗನ್ನಡ ಸಾಹಿತ್ಯವನ್ನು ಅಭ್ಯಾಸಮಾಡಲು ಸರ್ವಾನುಕೂಲ ಒದಗಿಸುವಂಥ ದೊಡ್ಡ-ಚಿಕ್ಕ ಶಬ್ದಕೋಶಗಳನ್ನು ರಚಿಸಿಕೊಡುವುದು ಕನ್ನಡದ ಮುನ್ನಡೆಯ ಮೊದಲ ಮೆಟ್ಟಲು. ಇಂದು ಇಂಗ್ಲೀಷಿನಲ್ಲಿ ಕಾಣುವ ಉತ್ತಮ ಗದ್ಯಶೈಲಿ ಕನ್ನಡದಲ್ಲಿ ಉದಯಿಸಬೇಕಾದರೆ ಇಂಥ ಒಂದು ಶಬ್ದಕೋಶ, ತದನುಸಾರಿಯಾದ ಶಾಸ್ತ್ರ-ಸಾಹಿತ್ಯ ಪುಸ್ತಕಗಳು—ಇವು ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಗೂ ದೊರೆಯುವಂತಾಗುವುದು ಅನಿವಾರ್ಯ. ಕನ್ನಡ ಸಾಹಿತ್ಯಪರಿಷತ್ತು ಈ ಕಡೆಗೆ ಗಮನ ಕೊಡದಿರುವುದು ಆಶ್ಚರ್ಯ.

ಒಂದು ಭಾಷೆಯಲ್ಲಿ ಗಂಭೀರ ಶೈಲಿಯು ನಿಲ್ಲಬೇಕಾದರೆ ಅದರಲ್ಲಿ ಭಾಷಾವಿದರು ಶಾಸ್ತ್ರಗ್ರಂಥಗಳನ್ನು ಹೆಚ್ಚು ಹೆಚ್ಚಾಗಿ ಬರೆದು ವಿದ್ಯಾರ್ಥಿಯ ಕೈಗೆ ಕೊಡಬೇಕಾಗುತ್ತದೆ. ಶಾಸ್ತ್ರ ಸಾಹಿತ್ಯ ಗ್ರಂಥಗಳು ವಾಙ್ಮಯದ ಎರಡು ಮುಖಗಳಾಗಿವೆ. ವಿವೇಚನಾತ್ಮಕವಾದ ತರ್ಕ, ದರ್ಶನ, ವಿಜ್ಞಾನ, ವಿಮರ್ಶೆ—ಇವು ಒಂದು ಭಾಷೆಯ ವಾಙ್ಮಯದಲ್ಲಿ ಕಂಡುಬರದಿದ್ದಲ್ಲಿ ಅದು ಅಪೂರ್ಣ ಮತ್ತು ಗೌರವಹೀನವೆನ್ನಬೇಕಾಗುತ್ತದೆ. ಇದರಿಂದ ಮೇಲಿನ ದರ್ಜೆಯ ವಿದ್ಯಾರ್ಥಿಗಳು ಪರಭಾಷೆಗೆ ಶರಣು ಹೊಗುಂತಾಗುತ್ತದೆ. ಈ ಕಾರಣದಿಂದಲೇ ಇಂದು ಶಾಲೆ 'ಕಾಲೇಜು'ಗಳಲ್ಲಿ ವಿದ್ಯಾರ್ಥಿ ಮತ್ತು ಅಧ್ಯಾಪಕ ಇಬ್ಬರೂ ಕನ್ನಡದ ಬಗ್ಗೆ ಹೆಚ್ಚಿನ ಆದರ ಆತಿಥ್ಯ ತೋರಿಸುವುದು ಕಂಡುಬರುತ್ತಿಲ್ಲ. ಅವರಿಗೆ ಬೇಕಾದ ಎಲ್ಲ ಆವಶ್ಯಕ ವಿಷಯಗಳನ್ನೂ ಒದಗಿಸಲು ಇಂದು ಕನ್ನಡವು ಸಮರ್ಥವಾಗಿಲ್ಲ. ಅದರಿಂದಲೇ ಇಂದು ಕನ್ನಡ ವಿದ್ಯಾಪ್ರಸಾರದಲ್ಲಿ ಕ್ರಾಂತಿಯಾಗಬೇಕಾಗಿದೆ ಎಂಬ ಸಿದ್ಧಾಂತಕ್ಕೆ ಯಾವನಾದರೂ ಬರಲೇಬೇಕಾಗುತ್ತದೆ. ಈ ವಿಷಯದ ಪರವಾಗಿ ಎಷ್ಟು ಹೇಳಿದರೂ ಕಡಿಮೆಯೇ. ಇಂಥ ಪ್ರಯತ್ನಗಳನ್ನು ಸಂಸ್ಥೆಯಲ್ಲದೆ ವ್ಯಕ್ತಿ ಮಾಡಲಾರನು. ಎಚ್ಚೆತ್ತ ಕರ್ನಾಟಕವು ಈ ಪ್ರಶ್ನೆಯನ್ನು ಮೊದಲು ಬಗೆ

ಹರಿಸಬೇಕು. ಇದರ ಬಗ್ಗೆ ನಮ್ಮ ಅಧಿಕೃತ ಮುಖಂಡರು ಏನಾದರೂ ಮಾಡುವರೇ?

೪. ಲೇಖಕರ ಸಂಘಟನೆ.

ಅಖಿಲ ಕರ್ನಾಟಕದ ಲೇಖಕರು ಸಂಘಟಿತರಾಗುವುದರಿಂದ ಅವರಿಗೂ ನಾಡಿಗೂ ಬಹುಮುಖದ ಲಾಭವುಂಟು. ಅದೊಂದು ಸಾಹಿತಿಗಳ ಮತ್ತು ಶಾಸ್ತ್ರಜ್ಞರ ಸಂಘವೆನಿಸಬೇಕು. ಮೊನ್ನೆ ಮದ್ರಾಸಿನಲ್ಲಿ ಸಾಹಿತ್ಯ ವಿದ್ವಾಂಸರು ಹೇಗೆ ಸಾಹಿತ್ಯವಿಚಾರಗಳನ್ನು ಚರ್ಚಿಸಿದರೋ ಹಾಗೇ ಕನ್ನಡನಾಡಿನ ಕವಿ ಪಂಡಿತರಾದಿ ವಾಗ್ಮಿಗಳು ಆಗಾಗ ಸೇರಬೇಕು; ವಿಜ್ಞಾನ, ತತ್ವಶಾಸ್ತ್ರ ಮೊದಲಾದವುಗಳಲ್ಲಿ ಬಲ್ಲಿದರಾದವರು ಕರ್ನಾಟಕದ ನಾನಾಭಾಗಗಳಿಂದ ಬಂದು ವಿಶೇಷ ವಿಷಯಗಳನ್ನು ವಿಮರ್ಶಿಸಬೇಕು, ತಮ್ಮ ತಮ್ಮ ಸಂಶೋಧನೆಗಳನ್ನು ವಿವರಿಸಬೇಕು, ಅಭಿಪ್ರಾಯ ವಿನಿಮಯ ಮಾಡಿಕೊಳ್ಳಬೇಕು. ಇಂತಹ ಕೆಲಸವು ಸಾಹಿತ್ಯಪರಿಷತ್ತಿನ ಆಶ್ರಯದಲ್ಲಾದರೂ ನಡೆಯಬಹುದು, ಬೇರೆಯಾಗಿಯಾದರೂ ಸಾಗಬಹುದು. ಈ ಸಮ್ಮೇಳನ (Congress) ಚರ್ಚೆ, ಅವುಗಳ ಫಲಿತಾಂಶಪ್ರಕಟನ—ಇವುಗಳಿಂದ ಬರಹಗಾರರೂ ಓದುಗರೂ ತಮ್ಮ ತಮ್ಮ ದೃಷ್ಟಿಯನ್ನು ತಿದ್ದಿಕೊಳ್ಳಲಾಗುವುದು, ರುಚಿಯನ್ನು ಬೆಳೆಯಿಸಿಕೊಳ್ಳಲಾಗುವುದು. ಪೂರ್ವದಲ್ಲಿ ರಾಜಾಸ್ಥಾನಗಳಲ್ಲಿ ಪಂಡಿತ ಸಭೆಯಲ್ಲಿ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಹೊರಟ ಗ್ರಂಥಗಳು ಮಾತ್ರ ಬೆಳಕನ್ನು ಕಾಣುತ್ತಿದ್ದವಾದುದರಿಂದಲೇ ಇಂದು ನಮಗೆ ಮಹಾ ಕವಿಗಳ ಅಪ್ರಬುದ್ಧಾವಸ್ಥೆಯಲ್ಲಿ ಬರೆದಿರಬಹುದಾದ ಅಪಕ್ವ ಶೈಲಿಯ ಯಾವ ಸಾಹಿತ್ಯದ ತುಣುಕಿನ ಹಸ್ತಪ್ರತಿಯೂ ಸಿಕ್ಕದಂತಾಗಿದೆ. ಇಂದಾದರೆ ಹಾಗಲ್ಲ; ಹೊಸಗನ್ನಡದ ಸಾಹಿತ್ಯಾಚಾರ್ಯ, ಸಾಹಿತ್ಯಾಲಂಕಾರ ಎನಿಸಿದವರ ಕೃತಿ ಸಮುದಾಯದಲ್ಲಿಯೇ ಎಷ್ಟೋ ಅಪರಿಪಕ್ವ ಕೃತ್ಯಾಭಾಸಗಳು ಕಣ್ಣಿಗೆ ಬೀಳುವುವೆಂಬುದು ವಿದ್ವದ್ವೇದ್ಯವೇ ಇರುತ್ತದೆ. ಇಂದಿನವರು ತಮ್ಮ ಹಸ್ತಕರಾದವರ ಗೋಷ್ಠಿಯಲ್ಲಲ್ಲದೆ ವಿದ್ವತ್ಸಮುದಾಯಗಳಲ್ಲೆಲ್ಲ ಓದಿ ತೋರಿಸಿ ಗುಣ ದೋಷ ವಿಮರ್ಶೆಗೆ ಲಕ್ಷ್ಯಕೊಟ್ಟು ತಿಳಿದು ತಿದ್ದಿಕೊಂಡು ತಮ್ಮ ಬರಹಗಳನ್ನು ಬೆಳಕಿಗೆ ತರುವ ಪದ್ಧತಿಯನ್ನು ಸ್ವಾಗತಿಸಿಲ್ಲ. ಅದರಿಂದಲೇ ಇಂದಿನ ಕನ್ನಡ ಕತೆಗಳ ರಾಶಿಯಲ್ಲಿ ಕವಿತೆಗಳ ಬಂಬಲಲ್ಲಿ ಎಷ್ಟೋ "ಶುಷ್ಕೋ ವೃಕ್ಷಸ್ತಿಷ್ಠತ್ಯಗ್ರೇ"ಗಳು ತುಂಬಿಹೋಗಿವೆ. ಅಚ್ಚಿನ ಖಾನೆಯಿಂದ ಹೊರಬೀಳುವ ಅಪೂರ್ಣ ಪಿಂಡಗಳು ,ಒಂದಲ್ಲ; ಎರಡಲ್ಲ "ಕಡಿಮೆ ಕಾಗದಖರ್ಚು ಮಾಡು" ಎಂಬ ಈ ಯುದ್ಧಕಾಲದಲ್ಲೂ ಕಡಿಮೆಯಿಲ್ಲದಷ್ಟು ಕಡಿಮೆ ದರ್ಜೆಯ ಬರಹಗಳು ಬಯಲಾಗಿವೆ! ಇದರಿಂದ ಕನ್ನಡ ನಾಡಿನಸಾಹಿತ್ಯದ ಬರಗಾಲದಲ್ಲಿ ಕಸುಗಾಯಿಗಳನ್ನು ಹೊಟ್ಟೆಗೆ ತುಂಬಿದಂತಾಗುವುದೇ ವಿನಾ ಕಳಿತ ಆರೋಗ್ಯಕರವಾದ ಹಣ್ಣುಗಳನ್ನು ಸೇವಿಸಿದಂತಾಗಲಿಲ್ಲ. ಈ ಬಗೆಯ ದೋಷವನ್ನು ತಡೆಗಟ್ಟಲು ಲೇಖಕ, ಸಂಪಾದಕ, ಪ್ರಕಾಶಕ ಇತ್ಯಾದಿ ಸರ್ವಸಾಹಿತ್ಯ ಸೇವಕರೂ ಪ್ರಯತ್ನಿಸಬೇಕು; ಪರಸ್ಪರ ಸೌಹಾರ್ದದಿಂದ ತಮ್ಮ ತಮ್ಮ ವಿಚಾರಗಳನ್ನು ಶುದ್ಧಿಗೊಳಿಸಿಕೊಳ್ಳಬೇಕು. ಇಂಥ ಕೆಲಸ ನಡೆಯಬೇಕಾದರೆ ಪೂರ್ವೋಕ್ತವಾದ ಸಂಘಟನಾ ಕೇಂದ್ರವು ತಲೆಯೆತ್ತಬೇಕು ಎಂಬುದು ಸಹಜವಲ್ಲವೇ? "ಸಾಹಿತ್ಯಮಂದಿರದಲ್ಲಿ ಸಂಸ್ಕಾರಸಂಪನ್ನರಿಗೆ ಮಾತ್ರ ಪ್ರವೇಶ; ಜ್ಞಾನಲವದುರ್ವಿದಗ್ಧರಿಗೂ ಅಸಂಸ್ಕೃತರಂತೆ ಮತ್ಸರಗ್ರಸ್ತರಾಗಿ ವರ್ತಿಸುವವರಿಗೂ ಪ್ರವೇಶವಿಲ್ಲ" ಎಂಬುದು ಸಂಘದ ಮೂಲಮಂತ್ರವಾದ ಹೊರತೂ ಏಳಿಗೆಯಾಗಲಾರದು. ಋಷಿತ್ವಕ್ಕೆ ಮೊದಲು ಮರ್ಯಾದೆ ಸಲ್ಲಬೇಕು, ಕವಿತ್ವಕ್ಕೆ ಕಡೆಗೆ. ಜ್ಞಾನವೃದ್ಧರಲ್ಲದ ವಯೋವೃದ್ಧರೂ, ಧನವೃದ್ಧರೂ, ಅಧಿಕಾರವೃದ್ಧರೂ ಇಂತಹ ಸಂಸ್ಥೆಯ ನೇತಾರರಾದರೆ ಪ್ರಯೋಜನವಿಲ್ಲ. "ಗುಣಾಃ ಪೂಜಾಸ್ಥಾನಂ" ಎಂಬುದೇ ಸಂಸ್ಕೃತರ, ಸುಜ್ಞರ, ರಸಿಕರ ಗಾಯತ್ರಿಯಲ್ಲವೇ?

೫. ಕನ್ನಡತನದ ಪ್ರಬೋಧ.

ಕನ್ನಡ ಸಂಸ್ಕೃತಿಯ ಪ್ರಸಾರವು ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ನಡೆದರೆ ಮಾತ್ರ ಕನ್ನಡ ಜನತೆಯ ಕನ್ನಡತನವು ವೃದ್ಧತ್ವವನ್ನಳಿದು ಚ್ಯವನತ್ವವನ್ನು

ಕಂಡೀತು. ಈ ಪ್ರಸರಣವು ಮುಖ್ಯವಾಗಿ ಸಾಹಿತ್ಯಮುಖದಿಂದಲೇ ಆಗುವಂಥದು. ಸಾಹಿತ್ಯಪ್ರಚಾರಕ್ಕೆ ನಾಗರಿಕಸಾಧನಗಳು ಆವಶ್ಯಕ. ಶಾಲೆಯು ಹಳ್ಳಿಯ ಅನಿವಾರ್ಯ ಸಂಸ್ಥೆಗಳಲ್ಲೊಂದೆಂದು ಇಂದು ಸರಕಾರವೂ ಸಾರ್ವಜನಿಕರೂ ಒಮ್ಮತದಿಂದ ನುಡಿಗೊಡುತ್ತಿದ್ದಾರೆ. ಅದನ್ನೇ ಕನ್ನಡ ಸಂಸ್ಕೃತಿಯ ಮೊದಲ ತೊಟ್ಟಿಲಾಗುವಂತೆ ಪರಿವರ್ತಿಸುವುದು ಸುಲಭವಾದ ಸುಧಾರಣೆ. ಈಗಿನ ಪ್ರಾಥಮಿಕಶಾಲೆಗಳ ಕನ್ನಡಶಿಕ್ಷಕರ ಉತ್ಸಾಹ, ಭಾಷಾಸಂಪತ್ತು, ಸಾಹಿತ್ಯ ಪರಿಜ್ಞಾನ ಇವುಗಳು ಅವರ ವೇತನದ ಜೊತೆಗೇ ದ್ವಿಗುಣವಾಗಬೇಕು, ತ್ರಿಗುಣವಾಗಬೇಕು. ಕನ್ನಡಸಾಹಿತ್ಯದ ವಿಶೇಷಜ್ಞಾನವು ಶಿಕ್ಷಕನಿಗೆ ಶಾಲೆಯಲ್ಲಿ ಇತರರಿಗಿಂತ ಹೆಚ್ಚಿನ ಸ್ಥಾನ, ಮಾನ, ಧನ ಇವುಗಳನ್ನು ಕೊಡುವಂತೆ ವ್ಯವಸ್ಥೆಯಾಗಬೇಕು. ಬರಿಯ "ಟ್ರೇಂಡ್" ಆದ ಮಾತ್ರಕ್ಕೆ ಅವನು ಶಿಕ್ಷಕನಾದನೆಂಬುದು ಸೂಕ್ತವಲ್ಲ. ವಿಷಯಜ್ಞಾನ, ವಾಕ್ಸಂಪತ್ತು ಇವೇ ಶಿಕ್ಷಕನ ಗುರುತ್ವವನ್ನು ಹೆಚ್ಚಿಸತಕ್ಕವು. ಅಂತಹ ಜನರ ಕೈಕೆಳಗೆ ಶಾಲೆ ನಡೆದಂತಾಗಿ ಹಳ್ಳಿಯ "ಹತ್ತು ಸಮಸ್ತರು" ಅವರ ಬೆಂಬಲಕ್ಕೆ ನಿಲ್ಲುವಂತೆ ಪ್ರೋತ್ಸಾಹಿಸಿ ವಿದ್ಯಾಧಿಕಾರಿಗಳು ಕನ್ನಡ ಕಲಾ ಕೌಶಲ ಪ್ರದರ್ಶನಗಳಿಗೆ ಉತ್ತೇಜನ ಕೊಡುವುದು—ಈ ಮಾರ್ಗದಿಂದಲ್ಲದೆ ಬರಿಯ ಪತ್ರಿಕೆ ಪುಸ್ತಕಗಳ ಮುದ್ರಣ ಪ್ರಕಾಶನಗಳಿಂದ ಸ್ಥಾಯಿಯಾದ ಸಾಹಿತ್ಯಪ್ರಚಾರಕ್ರಮ, ಸಂಸ್ಕೃತಿ ಸಂಜೀವನ—ಇವು ಸಿದ್ಧಿಸಲಾರವು. ಕನ್ನಡತನದ ಪ್ರಸಾರದಿಂದ ಸಾರ್ವತ್ರಿಕ ಸಮಾಜೋನ್ನತಿಯಾಗುವುದರಲ್ಲಿ ಸಂದೇಹವಿಲ್ಲ. ಇಂದು ನಮ್ಮಲ್ಲಿ ತಲೆಹಾಕಿದ ಜಾತೀಯತೆಯ ಭೂತದ ಶ್ವಾಸ ಬಂದಾಗಬೇಕಾದರೆ ಕನ್ನಡತನದ ಗುಳಿಗೆಯನ್ನೇ ಅದರ ಮೂಗಿಗೆ ಹಿಡಿಯಬೇಕು. "ನೀನು ಯಾವನು? ನಾನು ಮರಾಠ!" ಎಂದು ಪುಣೆಯಲ್ಲಿ ಕಾಣುವ ಹೆಸರು ಹಲಗೆಗಳಂತೆ ಕನ್ನಡದೇಶದಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಾಲೆಯ "ರಿಜಿಸ್ಟರಿ"ನಲ್ಲಿ ಜಾತಿ ಮತಗಳನ್ನು ಕಾಣಿಸುವ ನಿರ್ಬಂಧದಿಂದ ಮುಕ್ತನಾಗಿ ಕೇವಲ ಕನ್ನಡಿಗನೆಂದು ಬರೆಯಿಸುವ ಕಾಲ ಯಾವಾಗ ಬರುವುದೋ ಆಗ ಮಾತ್ರ ಕನ್ನಡಿಗನು "ಇದು ಪ್ರಬುದ್ಧ ಕರ್ನಾಟಕ" ಎಂದು ತನ್ನ ಸೋದರ ಪ್ರಾಂತೀಯರಲ್ಲಿ ಎದೆತಟ್ಟಿ ಹೇಳಿಕೊಳ್ಳಬಹುದು. ಈ ಶಾಲೆಯ ಪುನರ್ರಚನೆಗೆ ಸಾಹಿತಿಗಳು, ಸಾರ್ವಜನಿಕರು, ಸರಕಾರದ ವಿದ್ಯಾಖಾತೆಯವರು ಎಲ್ಲರೂ ಸಹಕರಿಸತಕ್ಕದ್ದು ಧರ್ಮ, ನ್ಯಾಯ, ಅನಿವಾರ್ಯ. ಪುಸ್ತಕ ಭಂಡಾರ, ವಾಚನಾಲಯ, ಗಮಕ ನಾಟ್ಯಾದಿ-ಕಲಾಪ್ರದರ್ಶನ, ಹಾಡು-ಲಾವಣಿಗಳ ವಿಚಾರ-ಇವೇ ಮೊದಲಾದ ವಿಶೇಷ ಕಾರ್ಯಕಲಾಪಗಳು ಸಾಮಾನ್ಯವಾಗುವಂತೆ ಶಾಲೆಯಲ್ಲಿ ವ್ಯವಸ್ಥೆ ಮಾಡಲು ಅಧಿಕೃತಖಾತೆಯು ಮುಂದೆಬರಬೇಕು. ಜವಾಬ್ದಾರಿಯಿಲ್ಲದ ಆಡಳಿತದಲ್ಲಿ ಕೆಲಸಗಾರರೂ "ಆಳುಮಾಡಿದ್ದು ಹಾಳು" ಎಂಬ ಗಾದೆಯನ್ನು ಹೌದು ಮಾಡಿಕೊಡಲು ಕಂಕಣಬದ್ಧರೇ ಆಗಿರುತ್ತಾರೆಂಬುದು ಯಾರಿಗೂ ತಿಳಿಯದ ವಿಷಯವಲ್ಲ. ಆದರೆ ಕರ್ನಾಟಕವು ಎಚ್ಚತ್ತರೆ ಯಾವ ಸುಧಾರಣೆಯೂ ಅಸಾಧ್ಯವಲ್ಲ; ಕರ್ನಾಟಕವು ಏಳಬೇಕಾದರೆ ನಮ್ಮ ಇಂದಿನ ಕನ್ನಡ ಸಂಸ್ಥೆಗಳು ಮತ್ತು ಅವುಗಳ ನೇತೃಗಳು "ಅಲಾರಂ" ಕೊಡಬೇಕಾಗಿದೆ—ಅಷ್ಟೆ!

"ಇಂದಿನ ವಿದ್ಯಾರ್ಥಿಗಳು ಮುಂದಿನ ಜನಾಂಗ; ಶಿಕ್ಷಕರು ಭಾವೀಪ್ರಜೆಗಳ ಸ್ವರೂಪವನ್ನು ತಿದ್ದುವವರು; ಭಾವೀಪ್ರಜೆಗಳು ನಾಡನ್ನು ಉತ್ತಮಸ್ಥಿತಿಗೆ ತರುವವರು"—ಎಂಬೀಮಾತು ಎಲ್ಲ ವೇದಿಕಾ ವಾಗ್ಮಿಗಳ ಬಾಯಿಂದಲೂ ಕೇಳಿಬರುತ್ತಿದೆ; "ಸಾಹಿತ್ಯವು ಜೀವನದ ಪ್ರತಿಬಿಂಬ; ಸಾಹಿತಿಯು ಮೂಕಕೋಟಿಯ (Dumb Million) ಮುಖ"—ಹೀಗೆಲ್ಲ ಹೇಳುವುದು ಇಂದು ರೂಢಿಯಾಗಿದೆ. ಆದರೆ ಹೇಳಿಕೆಯನ್ನು ಕಾರ್ಯಕ್ಕೆ ಭಾಷಾಂತರಿಸುವುದು ಮಾತ್ರ ಎಲ್ಲಿಯೂ ಕಂಡುಬರುತ್ತಿಲ್ಲವೆಂಬುದು ಬಹಳ ವಿಷಾದಕರವಾದುದು. ಅನ್ನವಿಲ್ಲದೆ ಉಣ್ಣುತ್ತಿದ್ದೇನೆಂದು ಹೇಗೆ ಹೇಳಲಾಗುವುದಿಲ್ಲವೋ ಹಾಗೇ ಸಾಧನವಿಲ್ಲದೆ ಸಿದ್ಧಿಯಾಗುತ್ತಿದೆಯೆನ್ನಲಾಗುವುದಿಲ್ಲ. ಕನ್ನಡವು ಬೆಳೆಯುತ್ತಿದೆಂದು ತೃಪ್ತಿಯ ನಗೆಯನ್ನು ಮಿಂಚಿಸಿ

ಕುಳಿತುಕೊಳ್ಳುವ ಕಾಲವಲ್ಲವಿದು. ಈಗ ಬೇಕಾದುದು ಆಸಕ್ತಿಯೋಗ, ಅವಿಶ್ರಾಂತ ಪ್ರಯತ್ನ, ಅದಮ್ಯಸಂಕಲ್ಪ! ಪ್ರಗತಿಪರವಾದ ಮಾತುಗಳೆಲ್ಲ "ಗಾಳಿಗೋಪುರ"ವೆಂದು ಹಾಸ್ಯಮಾಡುವ ಹಳವಗೆಯವರಿಗೆ ಬಹಿಷ್ಕಾರ ಹಾಕಬೇಕು. ಆಗಮಾತ್ರ ಕನ್ನಡಿಗನ ಕಾರಭಾರ ವ್ಯವಸ್ಥಿತವಾಗಿ ನಡೆದು ಗುರಿಯನ್ನು ಮುಟ್ಟೀತು. ತಾರುಣ್ಯವು ಈ ಕಡೆಗೆ ಲಕ್ಷ್ಯಕೊಡಲಿ; ಆಗ ವಿಘ್ನಗಳ ಬುಡಕ್ಕೆ ಬಿತ್ತೆನ್ನಿರಿ ಕೊಡಲಿ!

೬. ಮೋಸ.

ಅಪ್ರಾಮಾಣಿಕತೆಯು ಜನಾಂಗದ ಆತ್ಮಶಕ್ತಿಗೆ ಹತ್ತುವ ಗೆದ್ದಲು ಕನ್ನಡ ರಸಿಕರ ಮನದ ಹಸಿವನ್ನು ಹಿಂಗಿಸಲು ಹೊರಟು ಹಲವು ಗ್ರಂಥಮಾಲೆಗಳು ಇಂದು ಕತೆಕಾದಂಬರಿಗಳನ್ನು ಅಜಸ್ರವಾಗಿ ಹೊರಗೆ ತೂರಲಾರಂಭಿಸಿವೆ. ಉತ್ತಮ ದರ್ಜೆಯವಿರಲಿ, ಸಾಮಾನ್ಯವಾದುವುಗಳನ್ನೂ ಸ್ವತಂತ್ರವಾಗಿ ಬರೆಯಿಸಲಾರದೆ ಬೇರೆ ಭಾಷೆಗಳಿಂದ ಭಾಷಾಂತರಿಸಿ ಕೊಡಲಾಗುತ್ತಿದೆ. (ಅದೂ ಹೋಗಲಿ ಎಂದುಬಿಟ್ಟರೆ) ಅದರಲ್ಲೂ ಮೋಸವಿದೆಯೆಂಬುದು ಈಗೀಗ ಪ್ರಕಟವಾಗುತ್ತಿದೆ. ಇತ್ತೀಚೆಗೆ ಹಿಂದೆ ಒಂದು ಹೆಸರಿನಿಂದ ಭಾಷಾಂತರವಾಗಿ ಪ್ರಕಟವಾದ ಪುಸ್ತಕಗಳೇ ಇಂದು ಬೇರೆಯ ಹೆಸರಿನಿಂದ ಬೇರೆಯವರಿಂದ ಮೊದಲಿನದಕ್ಕಿಂತ ಅಷ್ಟೇನೂ ಉತ್ತಮವೆನಿಸದೆ ಭಾಷಾಂತರಿತವಾಗಿ ಗ್ರಂಥಮಾಲೆಯ ಮೂಲಕ ಹೊರಬಿದ್ದ ಉದಾಹರಣೆಗಳಿವೆ. ಬಂಗಾಲೀ ಕತೆಕಾದಂಬರಿಗಳ ಕನ್ನಡ ಭಾಷಾಂತರ ಹೀಗೆ ಕೆಲವೆಡೆ ಚಂದಾದಾರರನ್ನು ಮೋಸಗೊಳಿಸಿದೆ. "ಬಿ.ಎ." ಎಂಬ ಹಲಗೇರಿಯವರ ನಾಟಕಕ್ಕೆ "ಪ್ರೌಢವಿದ್ಯಾಭ್ಯಾಸ" ಎಂಬ ಹೆಸರಿಟ್ಟು ಆಡಿತೋರಿಸಿದಂತೆ ಇಲ್ಲವೆ "ಊಟ" ಎಂಬುದಕ್ಕೆ "ಮುಂಡವಲಕ್ಕಿಯ ಪಳಾರ" ಎಂದಹಾಗೆ ಈ ಕಣ್ಣಿಗೆ ಮಣ್ಣೆರಚುವ ಸಾಹಸ ಸಾಗಿದೆ. 'ಚಂದ್ರಕಾಂತ' 'ಚಂದ್ರನಾಥ'ಗಳಲ್ಲಿ ಈ ಪ್ರಕಾರವಾಗಿ ಏಕಜೀವ ನಾಮದ್ವಯ , ನ್ಯಾಯವಿದೆಯೆಂದು ಗೊತ್ತಾಗಿದೆ. 'ಭಾಮಿನಿ' ಎಂಬ ಹಳೆಯಪುಸ್ತಕವೂ ಈ ನ್ಯಾಯಕ್ಕೆ ಉದಾಹರಣೆಯಾಗಿದೆಯೆನ್ನುತ್ತಾರೆ. ಮೊದಲೇ ಓದಿದ್ದ ಕಥೆಯನ್ನು ಅಲ್ಪಸ್ವಲ್ಪ ಅಂದಗೆಡಿಸಿ ನಾಮಾಂತರ ಮಾಡಿದ್ದನ್ನು ಹೊಸಪುಸ್ತಕವೆಂದು ಓದಲು ಹೊರಟಾಗ ವಾಚಕನಿಗೆ ಹೇಗೆನಿಸಬೇಕು?

ಎರಡನೆಯದಾಗಿ ಲೇಖಕ, ಭಾಷಾಂತರಕಾರ—ಇವರ ಕಡೆ ಹೊರಳಿದರೆ 'ಹಲ್ಲಿದ್ದವನಿಗೆ ಕಡಲೆಯಿಲ್ಲ ಕಡಲೆಯಿದ್ದವನಿಗೆ ಹಲ್ಲಿಲ್ಲ' ಎಂಬ ಗಾದೆ ನೆನಪಾಗುತ್ತದೆ. ನನ್ನ ಗೆಳೆಯರೊಬ್ಬರು ಕರಾರಿನ ಪ್ರಕಾರ ಒಂದು ಗ್ರಂಥವನ್ನು ಒಬ್ಬ ಪ್ರಕಾಶಕರಿಗೆ ಭಾಷಾಂತರಿಸಿ ಕೊಟ್ಟರಂತೆ. ಆಗ ಆ ಪ್ರಕಾಶಕರು ಕರಾರಿನಂತೆ ಹಣಕೊಡಲೊಪ್ಪದೆ 'ಇದೇನೂ ಅಷ್ಟು ಚೆನ್ನಾಗಿಲ್ಲ, ನೀವು ಕಡಿಮೆಗೆ ಒಪ್ಪುವುದಾದರೆ ತೆಗೆದುಕೊಳ್ಳುತ್ತೇನೆ' ಎಂದು ಹೆದರಿಸಿ ಬಹಳ ಕಡಿಮೆಗೆ ಪರಿಗ್ರಹಿಸಿದರಂತೆ. ಭಾಷಾಂತರಮಾಡಿದವರು ಬಡವರಾದುದರಿಂದ ತಮ್ಮ ಶ್ರಮವನ್ನು ವ್ಯರ್ಥವಾಗಿ ಹಾಳುಮಾಡಲಾರದೆ, ಸ್ವತಂತ್ರವಾಗಿ ಪ್ರಕಟಿಸುವ ಚೈತನ್ಯವಿಲ್ಲದೆ ಆ ರೀತಿ ಅಡ್ಡಾದುಡ್ಡಿಗೆ ಗ್ರಂಥವನ್ನು ಹರಾಜುಮಾಡಬೇಕಾಯ್ತು! ಬರಹಗಾರನ ಈ ದಾಸ್ಯದ ದುರಂತವನ್ನು ಅರ್ಥಮಾಡಿಕೊಳ್ಳಬಲ್ಲ ಹೃದಯಗಳು ಜಗತ್ತಿನಲ್ಲಿ ಬಹಳ ಕಡಿಮೆ. ಕೂಲಿಯು ಅನ್ನಾಹಾರವಿಲ್ಲದಿದ್ದರೆ ಒಂದೆರಡು ದಿನಗಳಲ್ಲಿ ಸಾಯುವನು; ಇವನಾದರೋ ನರಳಿ ನರಳಿ ಸಾಯಬೇಕಾಗಿದೆ—ಇದನ್ನು ಬಲ್ಲಿರಾ? ಪತ್ರಿಕೆ ಗ್ರಂಥ ಇವುಗಳ ಪ್ರಕಾಶನ, ಮಾರಾಟ—ಇವು ಒಂದು ವ್ಯವಸಾಯ. (ಅದಕ್ಕಿಂತ ಹೆಚ್ಚಾಗಿ) ವ್ಯಾಪಾರ ಎಂಬುದು ನಿಜವಾದರೂ ಪುಗಸಾಟೆ ಸಿಕ್ಕುವುದೆಂದು ಕಾವ್ಯಾಭಾಸಗಳನ್ನು ಪ್ರಕಟಿಸುವುದೂ, ಕಾಸು ಕೊಡದೆ ಒಳ್ಳೆಯ ಬರಹಗಾರರನ್ನೂ ಒಳ್ಳೆಯ ಬರಹಗಳನ್ನೂ ನಷ್ಟಕ್ಕೆ ಗುರಿಪಡಿಸುವುದೂ ಸಣ್ಣ ಮೋಸವೇನು? ಇನ್ನು ಬರೆವವರು ಮಾಡುವ ಮೋಸವೆಂದರೆ ಕೃತಿಚೌರ್ಯ. ಇದರ ಬಗ್ಗೆ ಆಗಲೇ ಅಲ್ಲಲ್ಲಿ ವಿಮರ್ಶಕರು ತಮ್ಮ ವಿರೋಧವನ್ನು ಗರ್ಜಿಸಿದ್ದಾರೆ. ಇದೂ ಮಹಾ ಮೋಸವೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಕೃತಿಚೌರ್ಯವೆಂದರೇನೆಂ

ಬುದನ್ನೂ ಬಲ್ಲವರು ಆಗಲೇ ವಿಶದಪಡಿಸಿದ್ದಾರೆ. ಇದೊಂದು ಭ್ರಾತೃದ್ರೋಹ. ಇದರ ಬಗ್ಗೆ ಎಷ್ಟು ಹೇಳಿದರೂ ಅಷ್ಟೂ ಸ್ವಲ್ಪವೇ. ಪದಚೌರ್ಯ, ಅರ್ಥಚೌರ್ಯ, ವಾಕ್ಯಚೌರ, ಪೂರ್ಣಕೃತಿಚೌರ್ಯ ಹೀಗೆ ಇದು ನಾನಾ ವಿಧವಾಗಿದೆ. ಎರಡು ಎರಡು ನಾಲ್ಕು ಎಂಬಂತಿರುವ ಛಂದಸ್ಸನ್ನೂ ರಾಗಚ್ಛಾಯೆಯನ್ನೂ ಚೌರ್ಯವೆನ್ನಲಾಗುವುದಿಲ್ಲ. ಅನುಕರಣವಿದ್ದರೂ ಅಂಗೀಕರಿಸಿದರೆ ನಿಂದ್ಯವೆನಿಸುವುದಿಲ್ಲ. ಸಾಮಾನ್ಯ ವಿಚಾರಗಳು ಸರ್ವರ ಸೊತ್ತಾಗಿರುವ ಅವುಗಳ ಬಳಕೆ ಸ್ವಾಭಾವಿಕವಲ್ಲದೆ ಕಳ್ಳತನವಲ್ಲ. ಸಾಹಿತ್ಯದಲ್ಲಿದ್ದಷ್ಟು ಶಾಸ್ತ್ರದಲ್ಲಿ ಚೌರ್ಯಾವಕಾಶವಿಲ್ಲ. ಕಾರಣ ಅದರ ಅನಲಂಕೃತ ಅರ್ಥಪ್ರಕಾಶಕಶೈಲಿ ಮತ್ತು ಗುರಿಯ ಸ್ಪಷ್ಟತೆ, ತತ್ವದ ಸಾಮಾನ್ಯತೆ, ವೈಶಿಷ್ಟ್ಯ ನಿರ್ಬಂಧ—ಇವುಗಳೇ. ಇದನ್ನರಿತು ಸಾಹಿತ್ಯಸೇವಕರು ಜೀವನ ಸೌಂದರ್ಯವನ್ನು ಹೆಚ್ಚಿಸುವುದು ಶ್ಲಾಘ್ಯವೆಂಬುದು ಸರ್ವಗ್ರಾಹ್ಯವಾದುದು. ಇಲ್ಲದೆ ಹೋದರೆ ವಿಮರ್ಶಕರ ಅಮರ್ಷಕ್ಕೆ ತುತ್ತಾಗುವುದು ಖಂಡಿತ.

೭. ಸ್ವಾಭಾವಿಕತೆ ಮತ್ತು ಕಲೆ.

ಕಲಾಕೃತಿಯು ವಾಸ್ತವವಿರಬೇಕೆಂಬುದೂ, ಕಲ್ಪನಾ ರೂಪವಿರಬೇಕೆಂದೂ ಎರಡು ವಿರುದ್ಧ ಪಂಥಗಳೆಂದು ತಿಳಿದು ವಾಸ್ತವತಾವಾದ ಮತ್ತು ಧ್ಯೇಯವಾದಗಳ ಬೆಂಬತ್ತಿ ಕವಿಗಳೂ ವಿಮರ್ಶಕರೂ ನಮ್ಮ ನಾಡಿನಲ್ಲಿ ಕಾಳಗಕ್ಕೆ ನಿಂತದ್ದುಂಟು. ಇಲ್ಲಿ ಮೊದಲನೆಯದರ ಸ್ಥೂಲತ್ವವೂ ಎರಡನೆಯದರ ಸೂಕ್ಷ್ಮತ್ವವೂ ವಿರುದ್ಧವಾಗಿ ಕಂಡರೂ ಅಂತರ್ದೃಷ್ಟಿಯುಳ್ಳ ಯಾವನಿಗಾದರೂ ಅದು ಕೇವಲ ಆಭಾಸಿಕ ಎಂದು ತೋರದಿರದು. ಜೀವನದ ಸರ್ವವನ್ನೂ ಸ್ಥೂಲವಾಗಿ ಇದ್ದುದ್ದನ್ನಿದ್ದಂತೆ ಹೇಳುವುದು ಕಲೆಯಲ್ಲ. ಹಾಗೆಂದು ಜೀವನದಲ್ಲಿ ಅತ್ಯಂತಾಭಾವವಿರುವ ಕಲ್ಪನೆಯೂ ಕಲೆಯಲ್ಲ. "I have looked at a chair and seen how it hates standing; its purpose conceals not its beauty, but the curse which lies on it and its fate. Everything is constraint and bondage. It is not true that the chair stands; it is held; otherwise it would fly away and unite with the spirit-ನಾನು ಒಂದು ಕುರ್ಚಿಯನ್ನು ನೋಡಿದ್ದೇನೆ ಮತ್ತು ಅದು ಹೇಗೆ ನಿಂತುಕೊಂಡಿರುವುದನ್ನು ದ್ವೇಷಿಸುತ್ತದೆ ಎಂಬುದನ್ನು ತಿಳಿದಿದ್ದೇನೆ. ಅದರ ಉದ್ದೇಶವು ಅದರ ಸೌಂದರ್ಯವನ್ನು ಅಡಗಿಸುವುದಿಲ್ಲ, ಅದರ ಮೇಲಿರುವ ಶಾಪ ಮತ್ತು ಅದರ ಅದೃಷ್ಟ ಇವನ್ನು ಅಡಗಿಸುತ್ತದೆ. ಪ್ರತಿಯೊಂದೂ ಹಿಡಿತ, ಬಂಧನ. ಕುರ್ಚಿಯು ನಿಂತಿದೆ ಎಂಬುದು ಸುಳ್ಳು; ಅದು ಹಿಡಿತದಲ್ಲಿ ಸಿಕ್ಕಿದೆ; ಹಾಗಲ್ಲದಿದ್ದಲ್ಲಿ ಅದು ಹಾರಿಹೋಗಿ ಆತ್ಮದೊಡನೆ ಸೇರಿಕೊಳ್ಳುತ್ತಿತ್ತು" ಎಂಬ ಮಾತನ್ನು ಮನನಮಾಡಿದರೆ "ಸಧೀಃಸ್ವಪ್ನೋಭೂತ್ವಾ ಇಮಂ ಲೋಕ ಮನುಸಂಚರೇತ್" ಎಂಬುದರಿಂದ ಸೂಚ್ಯವಾದ ಕವಿದೃಷ್ಟಿಯ ಸೂಕ್ಷ್ಮಪರಿಚಯ ಉಂಟಾಗುತ್ತದೆ. ಕಲೆಗಾರನ ಗ್ರಹಣಶಕ್ತಿಯನ್ನು Emotional Apprehension—ಭಾವನಾದೃಷ್ಟಿಯ ಕಾಣ್ಕೆ ಎಂದು ಕರೆವ ರೂಢಿಗಾದರೂ ಇದೇ ಕಾರಣ. ಶಬ್ದ ವರ್ಣಾದಿ ಸಾಧನಗಳಿಂದ ಸಹೃದಯ ಹೃದಯಂಗಮವಾಗಿ ಕೊಡುವ ಪದಾರ್ಥವೆಂದರೆ ಅದೇ—ಸ್ವಾಭಾವಿಕವಾಗಿ ಇಂದ್ರಿಯಗೋಚರವಾಗುವ ಪದಾರ್ಥಗಳು ಕಲೆಗಾರನ ಭಾವನಾಮಯ ಚಿತ್ತಭಿತ್ತಿಯಮೇಲೆ ಹೇಗೆ(ಪ್ರತಿ)ಬಿಂಬಸುವುವೋ ಹಾಗೇ ಶಬ್ದಾದಿ ರೂಪಕಸಾಮಗ್ರಿಗಳಿಂದ ಬಂಧಿಸಲಾದುದು. ಇದು ವಾಸ್ತವಿತೆಯಿಂದ ದೂರವಾಗಿಲ್ಲ, ಕೇವಲ ಕಲ್ಪನೆಯೂ ಅಲ್ಲ; ವಾಸ್ತವಿಕ ಪ್ರಪಂಚದ ಪಡಿನೆರಳು—ಪಡಿಯಚ್ಚಲ್ಲ. ಒಂದು ಕನ್ನಡಿಯಲ್ಲಿ ಒಂದು ಹೂದೋಟದ ದೃಶ್ಯವನ್ನು ಕಂಡರೆ ಅದು ಹೂದೋಟಕ್ಕೆ ಸದೃಶವಷ್ಟೇ ಅಲ್ಲದೆ ಹೂದೋಟದ ಎಲ್ಲಗುಣಗಳೂ ಅಲ್ಲಿ ಕಾಣುವುದಿಲ್ಲ. ಇದರಿಂದಲೇ ಕಾವ್ಯಾಲಂಕಾರಗಳಿಗೆಲ್ಲ ಉಪಮೆಯು ಆಡಿಗಲ್ಲಾದುದು. ಕವಿದೃಷ್ಟಿಯು ಮೂಲತಃ ಉಪಮ್ಯೈಕಪರ. ಕಾವ್ಯವು ಜೀವನದ ವ್ಯಾಖ್ಯೆ (Interpretation)

ಇದರಲ್ಲಿ ವಾಸ್ತವವೂ ಇದೆ ಕಲ್ಪಕತೆಯೂ ಇದೆ ಎಂಬುದನ್ನು ಗಮನಿಸಿದಾಗ ಇಂದಿನ ಜೀವನೋದ್ಧಾರಕ, ಕೇವಲ ವೈಲಾಸಿಕ ಎಂದು ವರ್ಗೀಕರಿಸಿದ ಸಾಹಿತ್ಯವಿಭಾಗಗಳ ಒಳ ಸೂತ್ರವು ಮುಂದಟ್ಟಾಗುವುದು. ಜೀವನದ ಒಂದೊಂದು ಪ್ರಶ್ನೆಗೆ ಕಲೆಗಾರನು ಒಂದೊಂದು ಸಲ ಒಂದೊಂದು ಉತ್ತರ ಕೊಡುವಂತೆ ಕಂಡುಬಂದರೂ ವಸ್ತುತಃ ಅವನ ವ್ಯಕ್ತಿತ್ವಕ್ಕೆ ಸಹಜವಾದ ಸ್ಥಾಯಿಭಾವವು ಒಂದೇ—ಜಗತ್ತಿನ ಕಡೆ ಅವನದೃಷ್ಟಿಯು ಒಂದು ವಿಧ ಎಂಬುದು ಅವನ ಅನೇಕ ಕೃತಿಗಳ ಅನುಶೀಲನದಿಂದ ಗೊತ್ತಾಗದಿರದು. ಕಲೆಗಾರನ ದೃಷ್ಟಿಯ ಮೇಲೆ ವಿಮರ್ಶಕರ ಅಧಿಕಾರ ಏನೂಇಲ್ಲ. ಅದರಿಂದಲೇ ಇಂತಹ ಸಾಹಿತ್ಯವನ್ನೇ ರಚಿಸಬೇಕು ಎಂದು ಕೂಗುವ ಇಂದಿನ ಒಂದು ಪಂಗಡವು ತಪ್ಪುದಾರಿಯಲ್ಲಿ ನಡೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಸಾಹಿತ್ಯದಲ್ಲಿ ಆಗ್ರಹಕ್ಕೆ ಸ್ಥಾನವಿಲ್ಲ; ವಿಮರ್ಶೆಯಲ್ಲಿ ಪೂರ್ವಗ್ರಹಕ್ಕೆ ಎಡೆಯಿಲ್ಲ. ಇದನ್ನರಿತ ಹೊರ್ತು ಹೊಸಗನ್ನಡ ಬರಹಗಾರ ವಿಮರ್ಶಕ ವಾಚಕರಲ್ಲಿ ಸೌಹಾರ್ದ ನೆಲೆ ನಿಲ್ಲದು. ಸಂಪಾದಕ ಪ್ರಕಾಶಕರು ತಮತಮಗೆ ಇಷ್ಟವಾದ ಧ್ಯೇಯಗಳನ್ನಿಟ್ಟುಕೊಂಡು ಅಂತಹ ಲೇಖನಗಳನ್ನೇ ತಮ್ಮ ಸಂಘದಿಂದ ಹೊರಗೆಡಹಿದರೆ ಯಾವತಪ್ಪೂ ಇಲ್ಲ. ಪ್ರಗತಿಶೀಲ ಮತ್ತು ತದಿತರ ಪಂಥದವರು ಮೇಲಿನ ಮಾತನ್ನು ಲಕ್ಷ್ಯಕ್ಕೆ ತಂದುಕೊಂಡರೆ ಬಹಳ ಆರೋಗ್ಯಕರವಲ್ಲವೆ? ಕಲ್ಪನೆಯು (ಕವಿಯಲ್ಲಿ) ಸತ್ಯಚುಂಬಕ. "Does not the artist know that the play of his imagination is the shadow-reflex of a materially real, psycho-physical process ಕಲೆಗಾರನು ತನ್ನ ಪ್ರತಿಭೆಯ ಪ್ರಯೋಗವೆಂಬುದು ವಾಸ್ತವ ಪ್ರಪಂಚದ ಮನೋ-ದೇಹ ಸಹಜವಾದ ಕಾರ್ಯದ ಛಾಯಾ ರೂಪ ಪ್ರತಿಬಿಂಬವೆಂದು ತಿಳಿದಿಲ್ಲವೇ?"

೮. ಉಪಸಂಹಾರ.

ಕನ್ನಡದ ಸರ್ವಾಂಗೀಣ ಉನ್ನತಿಯಬಗ್ಗೆ ಮಾಡಬೇಕಾದ ಸಾಹಸೋದ್ಯಮಗಳಲ್ಲಿ ಕೆಲವೊಂದನ್ನು ಮಾತ್ರ ಮೇಲೆ ಉಚ್ಚರಿಸಲಾಯಿತೇಹೊರತು ಎಲ್ಲವನ್ನೂ ಅಲ್ಲ. ಕನ್ನಡಿಗನ ಕಾರಭಾರವು ಬಹಳ ಭಾರವಾದುದು. ಹಾಗೆಂದು ಉದಾಸೀನದಿಂದಿರುವುದು ಹಾನಿಕರ. ಉಳಿಯಬೇಕಾದರೆ ಬೆಳೆಯಬೇಕು.ನಮ್ಮ ನೆರೆಯ ಮಹಾರಾಷ್ಟ್ರ, ಆಂಧ್ರ, ದ್ರಮಿಳ, ಮೊದಲಾದಗೆಳೆಯರ ಸಾಹಸಲಬ್ಧ ಸಾಹಿತ್ಯ ಸಂಪತ್ತನ್ನು ನೋಡಿದರೆ ನಾವು ಮಾಡಬೇಕಾಗಿರುವ ಕೆಲಸದ ಅರಿವು ನಮಗಾದೀತು. ಎಲ್ಲಕ್ಕೂ ಮೊದಲು ಮಾತ್ಸರ್ಯರಹಿತವಾದ ಸಂಘ ಶಕ್ತಿಯನ್ನು ಬೆಳೆಯಿಸಿಕೊಳ್ಳಬೇಕಾಗಿದೆ. ನಮ್ಮ ಇಂದಿನ ಕರ್ನಾಟಕ ಸಾಹಿತ್ಯಾದಿ ಸಂಘಗಳು ಧನಜನ ಕ್ರಿಯಾಶಕ್ತಿಗಳಲ್ಲಿ ಬಹಳ ಹಿಂದಿವೆಯೆಂಬುದು ಅಸಹನೀಯ. ಗಣ್ಯಸಂಸ್ಥೆಗಳಲ್ಲೇ ಗಣ್ಯವಾದ ಕಾರ್ಯಗಳು ಸಾಕಷ್ಟು ಸರಿಯಾಗಿ ನಡೆಯುತ್ತಿಲ್ಲವೆಂದಮೇಲೆ ಬಡಸಂಸ್ಥೆಗಳ ಮಾತೇ ಅಲ್ಲಿ ಬರುವುದಿಲ್ಲ. ದಕ್ಷತೆಗೆ ಪರಮಾಶ್ರಯರಾದ ಧೀಮಂತರು ಕನ್ನಡವನ್ನು ಹೀಗೆ ಕಟ್ಟಲು ನೆರವಾಗಬೇಕು; ಕಡಲೆಯಿದ್ದವರು ಕಲ್ಲಿದ್ದವರಿಗೆ ಅದನ್ನು ಕೊಡಬೇಕು. ಕಲ್ಲಿದ್ದವರು ಬೀಸಿಕೊಟ್ಟವರಿಗೂ ಕೊಟ್ಟು ತಾವೂ ಪಂಚಕಜ್ಜಾಯವನ್ನು ಸವಿಯಬೇಕು. ಧನಬಲ ಬುದ್ಧಿಬಲ, ಕ್ರಿಯಾಶಕ್ತಿ ಈ ಮೂರನ್ನುಳ್ಳವರು ಸೇರಬೇಕು. ಹಾಗಾದರೆ ಮಾತ್ರ ಕನ್ನಡಿಗನ ಕಾರಭಾರವು ಯಶಸ್ವಿಯಾಗಿ, ಜಯಪ್ರದವಾಗಿ ನೆರವೇರೀತು!

"ಶೃಣ್ವಂತೋsಪಿಬಹವೋಯಂ ನವಿದ್ಯುಃ"

———



—: ಸ್ಟಾಕಿಸ್ಟರು :—

ದಿ ಸಿಟಿ ಮೆಡಿಕಲ್ ಅಂಡ್ ಜನರಲ್ ಏಜೆನ್ಸಿ, ಬೆಂಗಳೂರು ಸಿಟಿ.



ಶ್ರೀ ಅಂಬಾಳ್ ಆಫೀಸರ್ಸ್ ನಶ್ಯ

ಆಫೀಸರಿಗಾಗಿ ವಿಶೇಷವಾಗಿ ತಯಾರಿಸಿದ್ದು. ೩ ತೊಲ ಟಿನ್ನುಗಳಲ್ಲಿ ಎಲ್ಲೆಡೆಯಲ್ಲೂ ಸಿಕ್ಕುತ್ತದೆ.


ಶ್ರೀ ಅಂಬಾಳ್ & ಕೊ.

ಪೋಸ್ಟ್ ಬಾಕ್ಸ್ ನಂ. ೩, ಮದರಾಸು.

ಸ್ಥಳೀಯ ಸ್ಟಾಕಿಸ್ಟರು:—

ಯೂಸುಫ್ ಷರೀಫ್ ಸಾಹೇಬ್ & ಸನ್ಸ್

೨೫೨, ಅವೆನ್ಯೂ ರಸ್ತೆ, :: ಬೆಂಗಳೂರು ಸಿಟಿ.



ತಲೆಯ ಬೆಲೆ

★
ಶ್ರೀ ಎಂ. ವಿ. ಪ್ರಭು,
ಎಂ. ಎ., ಎಲ್. ಟಿ.

ನಮ್ಮ ಸುತ್ತಲೆಲ್ಲ ಇರುವ ಪ್ರತಿ ವಸ್ತುವಿಗೂ ಬೆಲೆಯಿರುವಾಗ ಮನುಷ್ಯನ ತಲೆಗೆ ಮಾತ್ರ ಬೆಲೆ ಇಲ್ಲವೆಂದು ಹೇಳಲು ನಮಗೆ ಧೈರ್ಯವು ಸಾಲದು. ಅದರ ಬೆಲೆಯು ಅದಕ್ಕೆ ಇದ್ದೇ ಇದೆ. ಎಷ್ಟು ಎಂದು ನಿರ್ಧರಿಸುವುದು ಮಾತ್ರ ಕಷ್ಟದ ಕೆಲಸ. ದೊಡ್ಡ ದೊಡ್ಡ ತಲೆಯವರು ನಮ್ಮಲ್ಲನೇಕರಿರುವರು. ಅವರ ತಲೆಯ ಬೆಲೆಯ ಅರಿವು ಅವರಿಗೇ ಇರುವುದಿಲ್ಲ. ಪರರಿಗೆ ಅದನ್ನು ಕಂಡುಹಿಡಿಯುವುದು ಹೇಗೂ ಅಸಾಧ್ಯವೆ.

ಸಾಧ್ಯವಿರುವ ಕೆಲಸವಾವುದು? ನಮ್ಮ ಸ್ವಂತ ತಲೆಯ ಬೆಲೆಯನ್ನು ನಿಶ್ಚಯಿಸುವುದು ತಲೆಯೂ ಸಣ್ಣದಾದರೆ ಕೆಲಸವು ಮತ್ತಷ್ಟು ಸುಲಭವಾಗುತ್ತದೆ. ನಮ್ಮ ತಲೆಯ ಬೆಲೆ ಒಂದೇ ಮಾತಿನಲ್ಲಿ ಹೇಳಿ ತೀರಿಸಬಹುದಾದರೆ ನಾವು ಅದರ ಬೆಲೆ ಒಂಭತ್ತು ಪೈ ಮಾತ್ರವೆಂದು ಹೇಳುತ್ತೇವೆ. ನಮ್ಮ ತಲೆಯನ್ನು ಮಾತ್ರವೇ ಉಪಯೋಗಿಸಿ ಬರೆದ ಎಂತಹ ದೀರ್ಘವಾದ ಲೇಖನವಾದರೂ ಬರೀ ಒಂಭತ್ತು ಪೈ ಖರ್ಚಿನಿಂದ ಹಿಂದುಸ್ಥಾನದ ಯಾವ ಮೂಲೆಗಾದರೂ ಪ್ರಯಾಣ ಮಾಡಬಲ್ಲುದು. ನಮ್ಮ ಣಿಕೆಯಲ್ಲಿ ತಲೆಯನ್ನು ಪ್ರಯೋಗಿಸಿ, ತಲೆಯ ವಿಷಯವನ್ನೆತ್ತಿ ಬರೆದುದರಿಂದ ತಲೆಯ ಸಂಬಂಧವಿರುವ ಯಾವ ಲೇಖನವಾದರೂ ತಲೆಗೆ ಸರಿಸಮಾನವೆಂದಿರುವುದರಿಂದ, ನಮ್ಮ ತಲೆಯ ಬೆಲೆಯೂ ಅಷ್ಟೆ ಎಂದು ನಾವು ಹೇಳುವುದರಲ್ಲಿ ತಪ್ಪೇನು?

ಬರೀ ಒಂಭತ್ತು ಪೈ ಬೆಲೆ ಬಾಳುವ ತಲೆಯಿಂದ ಪ್ರಯೋಜನವಿಲ್ಲವೆಂದೆಣಿಸಬಾರದು. ಏಕೆಂದರೆ ನಮ್ಮ ಕಡೆಯಲ್ಲಿ ಪೈ ಎಂದರೆ ನೂರಾರು ಜನರು ತಮ್ಮ ಕೆಲಸವನ್ನು ಬಿಟ್ಟು ಆ ಹೆಸರಿನ ಹಿಂದೆ ಓಡುವವರಿರುವರು. ಪೈ ಎಂದರೆ ಎಲ್ಲೆಲ್ಲಿಯೂ ಮನ್ನಣೆಯು ದೊರಕುವುದು. ಆ ಹೆಸರಾಂತವರೆಲ್ಲ ದೊಡ್ಡವರು, ಕೀರ್ತಿ ಪಡೆದವರು. ಕಾರಣವೇನು? ರೂ. ಆ. ಪೈ. ಎಂಬ ಸಾಲಿನಲ್ಲಿ ಪೈಯ ಸ್ಥಾನವು ಆಖೇರಿನಲ್ಲಿ ಬರುವುದಾದರೂ, ನಿಜವಾಗಿ ರೂ, ಆ ಎಂಬೆರಡು ವಸ್ತುಗಳೂ ಕಡೆಯವರ ಆಶ್ರಯದಲ್ಲಿರುವಂಥವುಗಳು. ಆದುದರಿಂದ ಪೈಯನ್ನು ಬಿಡುವುದೆಂದರೆ ಜೀವನಕ್ಕೆ ಆಧಾರವಾದ ರೂ. ಆ. ಗಳನ್ನು ಬಿಟ್ಟಂತೆಯೆ.

ಒಂದು ಪೈ ಇರುವಲ್ಲಿ ಹನ್ನೊಂದು ಪೈಗಳು ಸಹಜವಾಗಿ ಬಂದು ಕೂಡುವುವು. ಇವರನ್ನು ನೋಡಿದ ಆಣೆಯೂ ತಲೆಯನ್ನು ಎತ್ತುವುದು. ಈ ಆಣೆಯ ಸಂದರ್ಶನಕ್ಕಾಗಿ ಬೇರೆ ಹದಿನೈದು ಆಣೆಗಳೂ ಬಂದು ಸೇರಿದಾಗ, ರೂಪಾಯಿಯೂ ಈ ಕೂಟವನ್ನು ಸೇರುವುದು. ಒಂದು ರೂಪಾಯಿಯು ಹಲವು ರೂಪಾಯಿಗಳನ್ನು ಆಕರ್ಷಿಸುವುದು. ಆದುದರಿಂದ ರೂಪಾಯಿಯಿರುವಲ್ಲಿ ಅವರುಗಳೂ ಇವರುಗಳೂ, ಎಲ್ಲಾ ರೂ. ಗಳೂ ಬಂದು ಸೇರಿ ಸುಲಭವಾಗಿ ದೊಡ್ಡದೊಂದು ಕೂಟವಾಗಿ ರೂ. ಆ. ಪೈಗಳ ರಾಜ್ಯವು ಸ್ಥಾಪಿಸಲ್ಪಡುವುದು. ಮತ್ತೆ ಜಗತ್ತನ್ನೆಲ್ಲ ಆಳುವ ಕೆಲಸವೂ ಈ ಕೂಟದ ಆಡಳಿತೆಗೆ ಸೇರುವುದು. ಇದೊಂದು ಆಶ್ಚರ್ಯದ ಸಂಗತಿಯಲ್ಲ. ನಮಗೂ ನಿಮಗೂ ತಿಳಿದಿರುವ ವಿಷಯವೇ.

ಪ್ರತಿಯೊಂದು ತಲೆಗೂ a ರೂಪಾಯಿಗಳು, b ಆಣೆಗಳು ಅಲ್ಲವಾದರೆ c ಪೈಗಳಷ್ಟು ಬೆಲೆಯಿದೆ. ನಮ್ಮ ತಲೆಗೆ ಮಾತ್ರ c ಎಂದರೆ ಒಂಭತ್ತು ಪೈಗಳು ಎಂದಿಟ್ಟುಕೊಂಡರೆ ಗಣಿತ ಶಾಸ್ತ್ರಜ್ಞರೂ ಇದರಲ್ಲಿ ತಪ್ಪು ಹುಡುಕುವಂತಿಲ್ಲ.

ತಲೆಗೊಂದು ನಿಶ್ಚಿತವಾದ ಬೆಲೆಯು ಇಲ್ಲವಾದರೂ ಅದನ್ನು ಸಂದರ್ಭಾನುಸಾರವಾಗಿ, ಕಾಲಾನುಸಾರವಾಗಿ ಹೆಚ್ಚಿಸುವ ಶಕ್ತಿಯು ನಮ್ಮ ನಿಮ್ಮ ಕೈಯಲ್ಲಿದೆ. ಈಗ ಸಾಧಾರಣವಾಗಿ ಎಲ್ಲಾ ತಲೆಗ

ಳಿಗೂ ಬೆಲೆಯೇರಿದೆಯೆಂಬುದು ನಿರ್ವಿವಾದ. ಹಿಂದಿನ ಬೆಲೆಗೆ ಇಂದಿನ ಜನರು ಕೆಲಸ ಮಾಡಲೊಪ್ಪುವುದಿಲ್ಲ. ಹಾಗೆ ಮಾಡುವುದು ಯಾರಿಗೂ ಸಾಧ್ಯವಿಲ್ಲ.

ತಲೆಯ ಬೆಲೆಯನ್ನು ಏರಿಸುವ ವಿಧಾನವಾವುದೆಂದು ಇಲ್ಲಿ ಸ್ವಲ್ಪ ವಿಸ್ತಾರವಾಗಿ ಹೇಳಿದರೆ ನಮ್ಮಿಂದ ಲೋಕೋಪಕಾರವಾಗಬಹುದು. ಬರೇ ಕೋಪಕಾರವಾಗದಿರಲೆಂದು ನಮ್ಮ ಬಯಕೆ.

ಬರೇ ಕಪ್ಪು ಕೂದಲಿನ ಕೇಶರಾಶಿಯುಳ್ಳ ಯುವಕರ ತಲೆಯಬೆಲೆಯುಹೆಚ್ಚಾಗುವುದು ಅವರು ತಲೆಗೆ ಮಾಡುವ ಕ್ರೋಪಿನಿಂದಲೆ. ಕ್ರೋಪಿನಿಂದ ಕುರೂಪಿಯಾದವರಿಗೂ ವಿಶೇಷ ಪ್ರಯೋಜನವಿದೆ. ಒಳ್ಳೇ ಹಜಾಮನಿಂದ ಎರಡು ಮೂರು ಜಾವದಷ್ಟು ಸಮಯವನ್ನು ವ್ಯಯಿಸಿ ಸೆಲೂನಿನಲ್ಲಿ ತಪಸ್ಸು ಮಾಡಿ ಒಂದು ರೂಪಾಯಿಯ ಬೆಲೆಬಾಳುವ ಕ್ರೋಪನ್ನು ಮಾಡಿಸುವವರ ತಲೆಯ ಬೆಲೆಯು ನಿಸ್ಸಂಶಯವಾಗಿ ಏರುತ್ತದೆ. ಇದನ್ನು ಈಗಿನ ಯುವಕರೆಲ್ಲ ಬಲ್ಲರು. ಆದುದರಿಂದ ಕ್ರೋಪಿಗಲ್ಲದಿದ್ದರೂ, ಕ್ರೋಪನ್ನು ಸರಿಪಡಿಸಲಿಕ್ಕೆಂದು ಪ್ರತಿದಿನವೂ ಸೆಲೂನಿಗೆ ನಮ್ಮ ಯುವಕರು ನುಗ್ಗದಿರುವುದಿಲ್ಲ. ನಮ್ಮ ಯುವಕರಿಗೆ ಹಜಾಮರ ಬಾಚಣಿಗೆಯ ಪ್ರಯೋಜನವು ಅವಶ್ಯವಾಗಿದೆ. ಮತ್ತೆ ತಮ್ಮ ಕ್ರೋಪುಗಳನ್ನು ಬಿಡಿಸಿ, ತಿದ್ದಿ ಸರಿಪಡಿಸಿ, ಆ ಸಿಲುಗನ್ನಡಿಗಳ ಹತ್ತಿರ ನಿಂತು ತಮ್ಮ ಮನೋಹರವಾದ ಕ್ರೋಪುಗಳನ್ನು ಪರೀಕ್ಷಿಸುವುದರಲ್ಲಿ ಯುವಕರಿಗೆಲ್ಲ ಅತಿ ಸಂತೋಷವಿದೆ. ಸಾಧಾರಣ ಗದ್ದೆಗಳಲ್ಲಿ ಉತ್ತಮವಾದ ಕ್ರೋಪ್ ಬೆಳೆದರೆ ರೈತನಿಗೆಷ್ಟು ಸಂತೋಷವಾಗಬಹುದೊ, ಅದರ ಹತ್ತರಷ್ಟು ಸಂತೋಷವು ಯುವಕರಿಗೆ ತಮ್ಮ ಸ್ವಂತ ಕ್ರೋಪುಗಳನ್ನು ದಿಟ್ಟಿಸುವುದರಲ್ಲಿದೆ ಎಂದರೆ ಹೆಚ್ಚಾಗದು.

ಯುವಕರಿಗೆ ಸುಮಾರು ೨೫ ವರುಷ ಪ್ರಾಯವಾಗಿ ಅವರ ತಲೆಗೆ ಸಿಲ್ವರ್ ಜೂಬಿಲಿಯ ಸಮಯವು ಬಂದೊದಗುತ್ತದೆ. ಆಗ ಇರುವ ಕರಿ ಕೂದಲು ಕಮ್ಮಿಯಾಗಿ, ಬಿಳಿ ಕೂದಲಿನ ಸಂಖ್ಯೆಯು ಹೆಚ್ಚಾಗುತ್ತದೆ. ತಲೆಯ ಮೇಲೆ ಸಿಲ್ವರ್ ಹೆಚ್ಚಾಗುವಾಗ ಪಾಕೇಟಿನಲ್ಲಿಯೂ ಸಿಲ್ವರು ಹೆಚ್ಚಾಗುತ್ತದೆ; ಎಂದರೆ ಆ ತಲೆಯ ಬೆಲೆಯು ಏರುತ್ತದೆ. 'ರಜತ ಕೇಶಕ್ಕೆ ಮನ್ನಣೆ ಕೊಡಿರಿ' ಎಂಬುದು ಆಂಗ್ಲ ಭಾಷೆಯ ಗಾದೆ. ಅರ್ಥಾತ್ ಅರ್ಥವು ಹೆಚ್ಚುತ್ತದೆ. ಮಣೀ ಇಲ್ಲದಿದ್ದರೆ ಮನ್ನಣೆಯು ಸಿಗುವುದೆಂತು? ಆದುದರಿಂದ ಬಿಳಿ ಕೂದಲು ಹೆಚ್ಚಾಗುವಾಗ ಸಿಗುವ ಹಣವೂ ಹೆಚ್ಚಾಗಿ ಗೌರವವೂ ಹೆಚ್ಚುತ್ತದೆ. ಆದುದರಿಂದ ಬಿಳಿ ಕೂದಲಿನ ಹೆಚ್ಚುವಿಕೆಯನ್ನು ಕರಿ ಬಣ್ಣದ ಸಹಾಯದಿಂದ ಅಡಗಿಸಬಾರದೆಂಬುದು ನಮ್ಮ ಹಿತ ಸೂಚನೆ.

ಪ್ರಾಯವು ಮತ್ತಷ್ಟು ಹೆಚ್ಚಾಗುವಾಗ ತಲೆಯು ಹಣ್ಣಾಗುತ್ತದೆ, ಎಂದರೆ ಕೇಶಗಳೆಲ್ಲ ಬಂಗಾರದ ವರ್ಣವುಳ್ಳವುಗಳಾಗುತ್ತವೆ. ಇದರಿಂದ ತಲೆಯ ಬೆಲೆಯು ಇನ್ನೂ ಏರುತ್ತದೆ. ಆಗ ಸ್ವರ್ಣೋತ್ಸವವೆಂಬ ಸಂಭ್ರಮದ ಉತ್ಸವವು ಜಹಳ ಉತ್ಸಾಹದಿಂದ ಜರಗುತ್ತದೆ. ಮನುಷ್ಯನೂ ಬಂಗಾರದಂತಹ ಮನಷ್ಯನಾಗುತ್ತಾನೆ. ಕೀರ್ತಿಯನ್ನೂ ಹಣವನ್ನೂ ಮಣಿಕಟ್ಟಿಯಲ್ಲಿ ಸಂಪಾದಿಸುತ್ತಾನೆ. ಆ ಬಂಗಾರದ ಸಂಗ್ರಹದಿಂದ ಎಲ್ಲರಿಂದಲೂ ಪೂಜಿಸಲ್ಪಡುತ್ತಾನೆ. ಹೀಗೆ ಎಲ್ಲಾ ವಿಧದಲ್ಲಿ ಅವನ ತಲೆಯ ಬೆಲೆಯು ಹೆಚ್ಚಾಗುತ್ತದೆ. ಇಂತಹ ಮನಷ್ಯನು ಹಲವು ಕೂಟಗಳ ಅಧ್ಯಕ್ಷನಾಗುತ್ತಾನೆ. ವಿಶ್ವವಿದ್ಯಾಲಯಗಳ ಮುಖ್ಯ ಪರೀಕ್ಷಾಕರ್ತನಾಗುತ್ತಾನೆ. ಪೇಟೆ ಬೀದಿಗಳಲ್ಲಿ ಇಂಥ ಪುರುಷರು ತಿರುಗಾಡುವಾಗ ಅವರಿಗೆ ಸಿಗುವ ನಮಸ್ಕಾರಗಳ ಸಂಖ್ಯೆಯನ್ನು ಲೆಕ್ಕಿಸುವುದು ಅತಿ ದೊಡ್ಡ ಗಣಿತಶಾಸ್ತ್ರಜ್ಞನಿಗೂ ಅಸಾಧ್ಯವಾದ ಕೆಲಸವಾಗುತ್ತದೆ.

ಕೆಲವರು ಇಷ್ಟು ಮನ್ನಣೆಯೂ ಹಣದರಾಶಿಯೂ ಸಾಕಾಗದೆ ತಲೆಯ ಬೆಲೆಯನ್ನು ಇನ್ನಷ್ಟು ಹೆಚ್ಚಿಸುವ ವಿಧಾನವನ್ನು ಕಂಡುಹಿಡಿದಿರುವರು. ಬಂಗಾರದ ತಲೆಗೆ ಬಂಗಾರದ ಮುಂಡಾಸನ್ನು ಸಿಕ್ಕಿಸಿದರೆ ಬೆಲೆಯೂ ಏರುತ್ತದೆಂಬುದು ಅವರ ಹೊಸತಾದ ಶೋಧನೆ. ಬರೇ ಬಿಳಿ ಮುಂಡಾಸಿನಿಂದ ತಲೆಯ ಶೋಭೆಯು ಹೆಚ್ಚುವುದಿಲ್ಲ. ಅದಕ್ಕೊಂದು ಬಂಗಾರದ ಜರಿಯ ಪಟ್ಟಿಯಿರಬೇಕು. ಆಗ ಮಾತ್ರ ಅದು ಒಂದು ಯೋಗ್ಯವಾದ, ಗಮನಾರ್ಹವಾದ ಮುಂಡಾಸಾಗಿ ಅದನ್ನು ಧರಿಸುವ ತಲೆಯ ಬೆಲೆಯೂ ಬಹುಮಟ್ಟಿಗೆ ಮೇಲಕ್ಕೇರುತ್ತದೆ. ಇಂತಹವರಿಗೆ

ಎಲ್ಲಿ ಹೋದರೂ ಟೀಪಾರ್ಟಿಗಳು, ಮಾನಪತ್ರಗಳು; ಸವಾರಿ ಮಾಡಲಿಕ್ಕೆ ಖರ್ಚಿಲ್ಲದೆ ಕಾರುಗಳು. ಅವರಿಗೆ ಕಾಲ್ನಡೆಯ ಆವಶ್ಯಕತೆ ಲೇಶವೂ ಇರುವುದಿಲ್ಲ. ಮುಂಡಾಸಿನಲ್ಲಿ 'ಲೇಸು' ಇರುವಾಗ ಅವರಿಗೆ ಜೀವಮಾನದಲ್ಲಿ ಕಷ್ಟದ ಲೇಶವೂ ತಗಲುವುದಿಲ್ಲ.

ಇದಕ್ಕಿಂತ ಹೆಚ್ಚಿನ ಮಟ್ಟಕ್ಕೆ ತಲೆಯ ಬೆಲೆಯನ್ನು ಏರಿಸುವುದು ಅಸಾಧ್ಯವೆಂದು ನಾವಿಲ್ಲಿ ಹೇಳುತ್ತಿದ್ದರೆ ಒಂದು ದೊಡ್ಡ ತಪ್ಪಾಗುತ್ತಿತ್ತು. ಅಂತಹ ತಪ್ಪನ್ನು ಮಾಡಲಿಕ್ಕೆ ನಾವು ತಯಾರಾಗಿಲ್ಲ. ಏಕೆಂದರೆ ನಮ್ಮ ಮುಂದಾಳುಗಳಲ್ಲಿ ಅನೇಕರು ಲೇಸು ಮುಂಡಾಸಿಗಿಂತ ಹೆಚ್ಚಿನ ಬೆಲೆಯನ್ನು ಬರೇ ಒಂದು ಖದ್ದರ್ ಟೊಪ್ಪಿಯಿಂದ ಸಂಪಾದಿಸಿರುತ್ತಾರೆ. ಬಂಗಾರದ ತಲೆಗೆ ಧವಳ ವರ್ಣದ, ದೋಣಿಯ ಆಕಾರದ, ಸುದೀರ್ಘವಾದ, ವೃತ್ತಾಕಾರವಾಗಿ ಶೋಭಿಸುವ ಟೊಪ್ಪಿಯೊಂದನ್ನು ಹೊಂದಿಸಿದರೆ ಆ ಒಂದು ಸಾಧನದಿಂದ ಮನುಷ್ಯನಿಗೆ ಸಿಗುವ ಮನ್ನಣೆಗೆ ಎಣೆಯಿಲ್ಲ, ಆದರೆ ಇಂತಹ ಟೊಪ್ಪಿಯನ್ನು ಇಡಲಿಕ್ಕೆ ಅರ್ಹತೆಯಿರಬೇಕು. ಅದು ಹೇಗೆ ಬರುತ್ತದೆ? ಅಭ್ಯಾಸಬಲದಿಂದ ಹಲವು ಜನರಿಗೆ ಹಲವು ವಿಧದಲ್ಲಿ ಟೊಪ್ಪಿಯನ್ನು ಇಟ್ಟು ಅನಂತರ ತಾವೇ ಅದನ್ನು ಇಟ್ಟುಕೊಂಡರೆ ಮಾತ್ರ ಈ ಧವಳ ಟೊಪ್ಪಿಯ ಧಾರಣೆಗೆ ಅವಶ್ಯವಾದ ಯೋಗ್ಯತೆಯು ನಮಗೆ ಲಭಿಸುತ್ತದೆ.

ಇವಕ್ಕೆಲ್ಲಕ್ಕಿಂತಲೂ ಹೆಚ್ಚಿನ ಬೆಲೆಯು ತಲೆಗೆ ಸಿಗಬೇಕಾದರೆ ಇರುವುದು ಒಂದೇ ವಿಧಾನ. ಅದಾವುದೆಂದರೆ—ತಲೆಯನ್ನು ಶುದ್ಧವಾಗಿರಿಸುವುದು. ಶುದ್ಧವಾದ ತಲೆಯೆಂದರೆ—ಬೋಳುತಲೆ. ಅದರ ಮೇಲೆ ಇಲೆಕ್ಟ್ರಿಕ್ ಟೋರ್ಚಿನ ಬೆಳಕನ್ನು ಹಾಕಿ ಹುಡುಕಿದರೆ ಒಂದು ಕೂದಲು ಕೂಡ ಅದರಲ್ಲಿ ಸಿಗಬಾರದು. ಅಂತಹ ತಲೆಗೆ ಮುಂಡಾಸಿನ ಆವಶ್ಯಕತೆಯೂ ಇಲ್ಲ, ಟೊಪ್ಪಿಯ ಆವಶ್ಯಕತೆಯೂ ಇಲ್ಲ; ಆದು ಸ್ವಾಭಾವಿಕವಾಗಿ ಪ್ರಕಾಶಿಸುವ ತಲೆ. ಎಲ್ಲರಿಂದಲೂ ಮನ್ನಿಸಲ್ಪಡುವ ತಲೆ: ನಮ್ಮಲ್ಲಿ ಬರುವ ಸನ್ಯಾಸಿಗಳಿಗೆ ಇಂತಹ ಶುದ್ಧ ತಲೆಯಿದೆ. ಅವರಿಗೆ ನಮಸ್ಕಾರಗಳು ಮಾತ್ರವಲ್ಲ—ಪಾದಪೂಜೆ, ದೇವರಿಗೆ ಸಲ್ಲಬೇಕಾದ ಮರ್ಯಾದೆ. ಇಂತಹ ತಲೆಗೆ ಬೆಲೆಯು ಅತಿ ಹೆಚ್ಚು. ಅದರ ಬೆಲೆಯನ್ನು ನಿರ್ಧರಿಸಲಾಗುವುದಿಲ್ಲ. ಏಕೆಂದರೆ ಅದು 'ಬೆಲೆಯ ತಲೆ'; ನಿಜವಾದ ತಲೆ.

ಎಲ್ಲಿದೆ ಶಾಂತಿ?

ಶ್ರೀ. ರಾ. ವೆ. ಕರಗುದರಿ,
ಸಂಪಾದಕರು 'ಹುಬಳಿ ಗಜೆಟ್',

ಈ ಜಗತ್ತಿನಲ್ಲಿ ಎಲ್ಲಿ ಮತ್ತು ಯಾವ ಕಾಲಕ್ಕೆ ನೋಡಿದರೂ ದ್ವಂದ್ವದ ತಿಕ್ಕಾಟವಿದೆ. ಅಷ್ಟೇ ಏಕೆ? ದ್ವಂದ್ವದ ಮೂಲಕವೇ ಈ ಜಗತ್ತಿನ ಸೃಷ್ಟಿಯಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಶಾಂತಕಾಲದಲ್ಲಿ ಅಥವಾ ವಾತಾವರಣದಲ್ಲಿ ಏನೂ ನಡೆಯುವುದಿಲ್ಲ. ಏನೂ ನಡೆಯದಿರುವ, ನಿಃಶಬ್ದವಾದ ಸ್ಥಿತಿಗೇ 'ಶಾಂತಪರಿಸ್ಥಿತಿ' ಎನ್ನುತ್ತಾರೆ. ಅಂತಹ ಕಾಲದಲ್ಲಿ ಜಗತ್ತಾದರೂ ಹುಟ್ಟುವುದು ಹೇಗೆ? ಆ ಶಾಂತಮಯವಾದ ವಾತಾವರಣದಲ್ಲಿ ಅಶಾಂತಿ ಹುಟ್ಟಿತೆಂದೇ ಅಥವಾ ಪಂಚಮಹಾಭೂತಗಳಲ್ಲಿ ಚಲನವಲನೆಯುಂಟಾಗಿ ಶಾಂತಿಗೆ ಭಂಗವುಂಟಾಯಿತೆಂದೇ ಈ ಜಗತ್ತು ನಿರ್ಮಾಣವಾಗಿದೆ.

ಇಂತಹ ಕಾರಣಕ್ಕಾಗಿ ಜನ್ಮ ತಾಳಿದ ಜಗತ್ತಿನಲ್ಲಿ ಶಾಂತಿಯನ್ನು ಹುಡುಕುವುದು ದಡ್ಡತನವೇ ಸರಿ. ಇಂದು ಅಥವಾ ಯಾವುದೇ ಕಾಲಕ್ಕೆ, ಎಲ್ಲಿನೋಡಿದರೂ ಸುಖ—ದುಃಖ; ಶ್ರೀಮಂತಿಕೆ—ಬಡತನ; ಹೆಣ್ಣು—ಗಂಡು, ಹಿರಿಯ—ಕಿರಿಯ; ಸಬಲ—ದುರ್ಬಲ ಇವೇ ಮೊದಲಾದ ದ್ವಂದ್ವಗಳು ಅಥವಾ ಎರಡುತನಗಳು ಕಾಣುತ್ತಿವೆ. ಈ ಸ್ಥಿತಿಗಳು ಜಗತ್ತು ಹುಟ್ಟಿದಂದಿನಿಂದ ಅದರೊಡನೆ ಇವೆ. ಮತ್ತು ಅದು ಇರುವತನಕ ಅವು ಇರತಕ್ಕಂಥವೇ.

ಪ್ರಪಂಚದಲ್ಲಿ ಜೀವನಕ್ಕಾಗಿ ಹೋರಾಟವು ನಡೆದಿದೆ. ಇದಕ್ಕೇ ಓರ್ವ ಇಂಗ್ರಜಿ ವಿಚಾರಿಯು 'Struggle for existence' ಎಂದು ಕರೆದಿದ್ದಾನೆ. ಪಂಚಮಹಾಭೂತಗಳ ಕಾಯಿದೆಗನುಸರಿಸಿ ಪ್ರಾಣಿಗಳು ಹುಟ್ಟುತ್ತವೆ ಮತ್ತು ಹುಟ್ಟಿದ ತಪ್ಪಿಗೆ ಅವು ಬದುಕಲೇಬೇಕಾಗುವುದರಿಂದ, ಸಾಧ್ಯವಿದ್ದಷ್ಟು ದಿವಸ ಆದಷ್ಟು ಸುಖದಿಂದ ಜೀವಿಸಲು ಹೆಣಗುತ್ತವೆ. ಮತ್ತು ಅವೇ ಪಂಚಮಹಾಭೂತಗಳ ನಿಯಮಕ್ಕನುಸರಿಸಿ ಅವು ಸಾಯುತ್ತವೆ.

ಒಂದು ಪ್ರಾಣಿಯು ತನ್ನ ಜೀವನವನ್ನು ಸುಖಮಯವಾದುದನ್ನಾಗಿ ಮಾಡಲು ಹೊರಟಾಗ ಅದು ಇನ್ನೊಂದರ ಸುಖಕ್ಕೆ ಅಡ್ಡ ಬರುವುದು ಖಂಡಿತ. ಎಲ್ಲ ಪ್ರಾಣಿಗಳೂ ಇಂದು ಜೀವನಮಾಡುತ್ತಿರುವುದು ಇತರ ಪ್ರಾಣಿಗಳನ್ನು ಕಷ್ಟಕ್ಕೆ ಈಡುಮಾಡಿಯೇ. ಹೀಗೆ ಜೀವನದ ಹೋರಾಟವು ನಡೆದಿರುವಾಗ ದುರ್ಬಲ ಪ್ರಾಣಿಯು ಹಿಂದೆಬೀಳುತ್ತದೆ. ಸಬಲ ಪ್ರಾಣಿಯು ಮುಂದೆ ಬರುತ್ತದೆ. ಇದೇ ನೀತಿಗನುಸರಿಸಿ ಇಂದು ಜಗತ್ತಿನಲ್ಲಿ ವಿಷಮತೆಯು ಕಂಡುಬರುತ್ತದೆ. ಹಲವರು ಶ್ರೀಮಂತರಾಗಿ, ಅನೇಕರು ಬಡವರಾಗಿ; ಕೆಲವರು ಸ್ಥಿತಿವಂತರಾಗಿ, ಇನ್ನಿತರರು ಕಷ್ಟಮಯ ಜೀವಿಗಳಾಗಿ; ಹಲವರು ಜಾಣರಾಗಿ, ಬೇರೆಯವರು ದಡ್ಡರಾಗಿ ಇಂದು ತೋರುತ್ತಿರುವುದು ಇದೇ ಕಾಯಿದೆಗನುಸರಿಸಿ.

ಜೀವನ ಹೋರಾಟವು ಅನೇಕವಿಧವಾಗಿ ನಡೆಯುತ್ತಿದೆ. ಕೆಲವರು ತಮಗಾಗಿ, ಹಲವರು ತಮ್ಮ ಕುಟುಂಬಕ್ಕಾಗಿ, ಬೇರೆಯವರು ತಮ್ಮ ಧರ್ಮದವರಿಗಾಗಿ, ಇನ್ನಿತರರು ತಮ್ಮ ವರ್ಗದವರಿಗಾಗಿ, ಅನೇಕರು ತಮ್ಮ ದೇಶಕ್ಕಾಗಿ ಈ ಹೋರಾಟವನ್ನು ನಡೆಸಿದ್ದಾರೆ. ಸಣ್ಣಪುಟ್ಟ ಹೋರಾಟಗಳಿಗೆ ನಾವು ಜಗಳ, ತಂಟೆ, ವ್ಯಾಜ್ಯ ಎಂದು ಕರೆಯುತ್ತೇವೆ. ದೇಶದೇಶಗಳಲ್ಲಿ ನಡೆಯುವಂಥವುಗಳಿಗೆ 'ಯುದ್ಧ'ಗಳೆಂದು ಹೆಸರನ್ನು ಇಟ್ಟುಕೊಂಡಿದ್ದೇವೆ. ಇವೆಲ್ಲವುಗಳ ದೃಷ್ಟಿಯು ಒಂದೇ ಆಗಿದೆ. ಆ ದೃಷ್ಟಿಯು ಸಣ್ಣದು ಮತ್ತು ದೊಡ್ಡದು ಆದಾಗ ಈ ಘಟನೆಗಳ ಸ್ವರೂಪವು ಭಿನ್ನತೆ ಹೊಂದುತ್ತದೆ.

ನಾವು ಇಂದು ಕ್ರಾಂತಿಯುಗದಲ್ಲಿದ್ದೇವೆ. ಎಲ್ಲಿ ನೋಡಿದರೂ ಅಲ್ಲೋಲಕಲ್ಲೋಲವೇ ಕಾಣುತ್ತಿದೆ. ಅದರ ಜಳವನ್ನು ತಾಳಲಾರದೆ ಇಡೀ ಜಗತ್ತು 'ಶಾಂತಿ ಶಾಂತಿ' ಎಂದು ಕೂಗುತ್ತಿದೆ. ಈ ಕ್ರಾಂತಿ, ಶಾಂತಿಗಳು ದೇಶದೇಶಗಳಲ್ಲಿ ನಡೆದ ತಂಟೆ ಅಥವಾ ಯುದ್ಧಗಳಿಗೆ ಸಂಬಂಧಪಟ್ಟಂಥವು. ಶಾಂತಿಗಾಗಿ ನಡೆದಿರುವ ಕೂಗೇ ಎಲ್ಲೆಡೆಗೆ ಕೇಳುತ್ತಿರುವುದೇ ಹೊರತು ಆ ಶಾಂತಿಯು ಇದುವರೆಗೆ ಸಿಕ್ಕಿಲ್ಲ ಮತ್ತು ಸಿಗುವ ಚಿನ್ಹೆಗಳೂ ಕಾಣುತ್ತಿಲ್ಲ. ಅಂದ ಬಳಿಕ ಈ ಶಾಂತಿಯ ಉಗಮವೆಲ್ಲಿ? ಅದು ಸಿಗುವು ದಾದರೆ ಎಂದು? ಮತ್ತು ಹೇಗೆ? ಎಂಬುದನ್ನು ನಾವು ವಿಚಾರಮಾಡಬೇಕಾಗಿದೆ. ಈ ಬಗ್ಗೆ ಅನೇಕರು ಇದುವರೆಗೆ ಶೋಧಮಾಡಿ ಅದರ ನಿಜಾಂಶವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನೇ ನಾವು ಇಂದಿನ ಪರಿಸ್ಥಿತಿಗೆ ಅನ್ವಯಿಸಿಕೊಂಡು ನೋಡಿಕೊಳ್ಳಬೇಕಾಗಿದೆ.

ಇಂದಿನ ಜಾಗತಿಕ ರಾಜಕೀಯ ಪರಿಸಿತ್ಥಿಯ ಬಗ್ಗೆ ನಾವು ಆಲೋಚಿಸಿದರೆ ಅದರಿಂದ ಇಡೀ ಜಗತ್ತಿನ ಸರ್ವದೃಷ್ಟಿಯ ಸಂಗತಿಗಳ ಬಗ್ಗೆ ನಾವು ವಿಮರ್ಶೆಗೈದಂತಾಗುತ್ತದೆ. ಏಕೆಂದರೆ ಈ ಪ್ರಪಂಚದಲ್ಲಿಯ ಸರ್ವ ಸಂಗತಿಗಳೂ ಆ ಪಂಚಮಹಾಭೂತಗಳ ಕಾಯಿದೆಗಳಿಗೆ ಒಳಪಟ್ಟವೇ ಎಂಬ ಮಾತು ಮೇಲೆಯೇ ಬಂದಿದೆ. ಒಂದು ವಿಷಯವು ಇನ್ನೊಂದರಿಂದ, ಬಾಹ್ಯರೂಪದಲ್ಲಿ ಭಿನ್ನವಾಗಿ ತೋರಿದರೂ ಅವೆರಡರ ಮೂಲವು ಒಂದರಲ್ಲಿಯೇ ಇದೆ. ಮತ್ತು ಸ್ವಾಭಾವಿಕ ದೃಷ್ಟಿಯಿಂದ ಅವುಗಳಲ್ಲಿ ಭೇದವೆಂಬುದು ಇಲ್ಲ.

'ಯುದ್ಧವಾಗುವ ಪರಿಸ್ಥಿತಿಯೇ ಇರಕೂಡದು' ಇಂತಹ ವಾತಾವರಣವು ಎಂದು ಉಂಟಾಗುವುದು? ಎಂದು ಕೇಳುವವರು ಅನೇಕರು ಇದ್ದಾರೆ. ರಾಮರಾಜ್ಯದ ಕಲ್ಪನೆಯು ಇಂಥವರ ತಲೆಯಲ್ಲಿ ಇರುತ್ತದೆ. ಅದೂ ಕೂಡ ತಪ್ಪು ಕಲ್ಪನೆಯೆಂದೇ ಹೇಳಬೇಕಾಗುವುದು. ಏಕೆಂದರೆ ರಾಮರಾಜ್ಯದ ಕಾಲಕ್ಕೆ ಯುದ್ಧವಾಗಲಿಲ್ಲವೇ? ಅಥವಾ ಸ್ವಾರ್ಥಜನರು ಆ ಕಾಲಕ್ಕೆ ಇದ್ದೇ ಇಲ್ಲವೇ? ಎಂಬುದೊಂದು ಪ್ರಶ್ನೆ. ದ್ವಂದ್ವವಿಲ್ಲದಿದ್ದರೆ ಈ ಜಗತ್ತೇ ನಿಂತುಹೋಗುವುದು. ಸ್ವಾರ್ಥ, ನಿಸ್ವಾರ್ಥಗಳು ತಾಕಲಾಡುತ್ತಿದ್ದರೇ ಜೀವನವು ನಡೆಯುವುದು. ಅಂದ ಬಳಿಕ ರಾಮರಾಜ್ಯದ ಕಾಲಕ್ಕೆ ಸ್ವಾರ್ಥವಿದ್ದಿಲ್ಲವೆಂದು ಹೇಳುವುದು ವಸ್ತುಸ್ಥಿತಿಯ ಜ್ಞಾನವಿಲ್ಲದವರ ಮಾತು. ರಾಮರಾಜ್ಯವು ರಾಮನಂತಹ ಉತ್ತಮ ರಾಜನ ಕೈಯಲ್ಲಿ ನಡೆದಿತ್ತೆಂದೂ ಅವನ ಮೂಲಕ ಅವನ ರಾಜ್ಯದಲ್ಲಿ ಅನ್ಯಾಯಗಳಿಗೆ ಕಡಿಮೆ ಆಸ್ಪದವಿರುತ್ತಿತ್ತೆಂದೂ ಹೇಳಿದರೆ ಅದನ್ನು ಒಪ್ಪಲು ಅಡ್ಡಿಯಿಲ್ಲ.

ಅಂದಬಳಿಕ ರಾಮರಾಜ್ಯದ ಕಾಲದಲ್ಲಿ ಕೂಡ ಯುದ್ಧವಾಗದ ಸ್ಥಿತಿಯಿರಲಿಲ್ಲ ಎಂಬುದು ಮೇಲಿನ ಮಾತಿನಿಂದ ಸಿದ್ಧವಾಗುತ್ತದೆ. ಇಂದಿನ ಕಾಲವಂತೂ ಸ್ವಾರ್ಥಮಯ ವಾತಾವರಣಕ್ಕೆ ಹೆಸರಾಗಿದೆ. ಹಲಕೆಲವು ರಾಷ್ಟ್ರಗಳು ಇಡೀ ಜಗತ್ತಿನ ರಾಜಕೀಯ ವ್ಯವಸ್ಥೆಯ ಗುತ್ತಿಗೆಯನ್ನು ತೆಗೆದುಕೊಂಡು ಕುಣಿಯುತ್ತಿವೆ. ಈ ಕುಣಿದಾಟದ ಕಾರಣದಿಂದಲೇ ಮೇಲಿಂದ ಮೇಲೆ ಜಾಗತಿಕ ಯುದ್ಧಗಳು ಒದಗುತ್ತಿವೆ.

೧೯೧೪ನೇ ಇಸ್ವಿಯಲ್ಲಿ ಯುದ್ಧವು ಪ್ರಾರಂಭವಾಗಿ ಅದು ಆ ಮೊದಲಿನ ಎಲ್ಲ ಯುದ್ಧಗಳ ಭೀಕರತೆಯನ್ನು ಮೀರಿಸಿತು. ಅದಕ್ಕಾಗಿ ಅದಕ್ಕೆ (Great War) ಮಹಾಯುದ್ಧವೆಂದು ಕರೆವ[illegible]. ಆದರೆ ೧೯೩೯ರಲ್ಲಿ ಪ್ರಾರಂಭವಾದ ಯುದ್ಧವು ಇನ್ನೂ ಹೆಚ್ಚಾಗಿ ಪ್ರಪಂಚವನ್ನು ತಲ್ಲಣಿಸಿತು. ಇದರ ಘಟನೆಗಳು ಹಿಂದಿನ ಕೌರವ ಪಾಂಡವರ ಯುದ್ಧದ ಸಂಗತಿಗಳನ್ನು ನೆನಪು ಮಾಡಿಕೊಟ್ಟವು. ಅಗ್ನ್ಯಸ್ತ್ರ, ವಾಯ್ವಸ್ತ್ರ, ವಾರುಣಾಸ್ತ್ರ, ಸರ್ಪಾಸ್ತ್ರ, ಗರುಡಾಸ್ತ್ರಗಳನ್ನು ಉಪಯೋಗಿಸಿದ ವರ್ಣನೆಯನ್ನು ಓದಿ ನಾವು ತಲೆ ಕೆರೆದುಕೊಳ್ಳುತ್ತಿದ್ದೆವು. ಈ ಯುದ್ಧದಲ್ಲಿ ಹಿಟ್ಲರ್ ಮೊದಲಾದವರು ಉಪಯೋಗಿಸಿದ ವಿವಿಧ ಸ್ವರೂಪದ ಬಾಂಬುಗಳಿಂದ ಆ ನಮ್ಮ ಭ್ರಮೆಯು ದೂರಾಯಿತು.' ಇಂದಿನ ಶಾಸ್ತ್ರೀಯ ಸಂಶೋಧನೆಕಾರರು ತಮ್ಮ ಶೋಧನಾ ಕಾರ್ಯವನ್ನು ಇನ್ನಿಷ್ಟು ಮುಂದುವರಿಸಿದರೆ ಆ ಪುರಾಣ ಕಾಲ

ದಲ್ಲಿಯ ಅಸ್ತ್ರಗಳನ್ನು ಇವರು ಪುನಃ ಕಾರ್ಯದಲ್ಲಿ ತರಲು ಏನೂ ಅಡ್ಡಿಯಿಲ್ಲವೆಂಬ. ಮನವರಿಕೆಗೆ ನಾವು ಬರುವಂತಾಗಿದೆ.

ಈ ಜಗತ್ತಿನ ಯುದ್ಧಗಳಿಂದ ಕೋಟಿಯ ಅಳತೆಗೆ ನಿಲುಕುವಷ್ಟು ಜನರ ಸಂಹಾರವಾಯಿತು. ಜಗತ್ತಿನ ಅಪಾರ ಸಂಪತ್ತು ನೀರುಪಾಲಾಯಿತು. ಮಾನವಕೋಟಿಯು ಅನನ್ವಿತ ಕಷ್ಟಪರಂಪರೆಗಳನ್ನು ಅನುಭವಿಸಿತು. ಯುದ್ಧಗಳಿಗೆ ಕಾರಣರಾದವರ ವಿಷಯದಲ್ಲಿ ಜನತೆಗೆ ಸೀಮೆಗೆಟ್ಟ ಕ್ರೋಧವುಂಟಾಗಿದ್ದರೂ ಅದರ ಸಿಟ್ಟುರಟ್ಟೆಯಲ್ಲಿಲ್ಲದ್ದರಿಂದ ಬಂದ ಪರಿಸ್ಥಿತಿಯನ್ನು ಶಾಂತರೀತಿಯಿಂದ ಸಹಿಸಿಕೊಂಡು ಅದು ಸುಮ್ಮನಿರಬೇಕಾಯಿತು.

ಇದರಿಂದ ವ್ಯಕ್ತವಾಗುವುದೇನೆಂದರೆ, ಸಬಲರ ಬಲದ ಮುಂದೆ ಅಬಲರು ತಲೆಬಾಗಿಸುವ!ಪ್ರಸಂಗವುಂಟಾಗಿದೆ. ಸಬಲರು ಮಾಡಿದ್ದೇ ಸತ್ಯವೆಂದು ಒಪ್ಪಿಕೊಳ್ಳಬೇಕಾಗಿದೆಯೇ ಹೊರತು, ಸತ್ಯವನ್ನು ಸಬಲರು ಒಪ್ಪಿಕೊಳ್ಳುವ ಕಾಲವು ಇಹಾಗಿಲ್ಲ. ಅಷ್ಟೇ ಏಕೆ? ಯಾವ ಕಾಲಕ್ಕೂ ಈ ಮಾತು ಸಂಭವಿಸಿಲ್ಲ. ಸತ್ಯಪ್ರಿಯನಾದವನು ಅಧಿಕಾರದಲ್ಲಿದ್ದಾಗ ಸತ್ಯವು ಸತ್ಯವಾಗಿ ಪರಿಣಮಿಸಿರಬಹುದು. ಅದಕ್ಕೇ ನಾವು ರಾಮರಾಜ್ಯವೆಂದು ಕರೆಯುತ್ತೇವೆ. ಅಸತ್ಯವಂತನು ಅಥವಾ ಸ್ವಾರ್ಥಪರಾಯಣನು ಅಧಿಕಾರದಲ್ಲಿದ್ದರೆ ಸತ್ಯವು ಮೂಲೆಗೆ ಬೀಳುವುದು ಖಂಡಿತ. ಆದ್ದರಿಂದ: ಬಲವಿದ್ದವನು ತೋರಿಸಿದುದೇ ಪೂರ್ವದಿಕ್ಕು ಎಂಬುದು ಈ ಮಾತಿನಿಂದ ಮತ್ತಷ್ಟು ದೃಢವಾಗುತ್ತದೆ.

ಮೊದಲನೆಯ ಜಾಗೃತಿಕ ಯುದ್ಧವು ಪ್ರಾರಂಭವಾದುದು ಕ್ಷುಲ್ಲಕ ಕಾರಣಕ್ಕಾಗಿಯೇ. ಅದರ ಪರಿಣಾಮವಾಗಿ ಜರ್ಮನಿಯು ಕಾಲುಕೆಳಗೆ ತುಳಿಯಲ್ಪಟ್ಟಿತು. ಯೂರೋಪದಲ್ಲಿಯ ಹಲಕೆಲವು ಭಾಗಗಳು ಇತರ ಎಡಬಲದ ರಾಜ್ಯಗಳಲ್ಲಿ ಹಂಚಲ್ಪಟ್ಟು ಅದೃಶ್ಯವಾದವು. ಹಲಕೆಲವು ಹೊಸ ರಾಜ್ಯಗಳು ಜನ್ಮ ತಾಳಿದುವು.

ಆ ಯುದ್ಧದ ಕೊನೆಗೆ, ಆದ ಒಪ್ಪಂದದಮೇಲೆ ಅಂಕಿತವಾಗುವಾಗ, ಈ ತರಹದ ವ್ಯವಸ್ಥೆಯಿಂದ ಎರಡನೆಯ ಯುದ್ಧಕ್ಕೆ ಆಮಂತ್ರಣಕಟ್ಟಂತಾಗವುದೆಂದು ಅನುಭವಿಕ ಮುತ್ಸದ್ದಿಗಳು ಹೇಳಿದರು. ಮುಂದೆ ಅವರ ಭವಿಷ್ಯವು ಅಕ್ಷರಶಃ ನಿಜವಾಯಿತು. ತನಗಾದ ಅನ್ಯಾಯದ ಮುಯ್ಯ ತೀರಿಸಲು ಜರ್ಮನಿಯು ಒಳಗಿಂದೊಳಗೇ ಅಣಿಯಾಯಿತು. ಆ ಸಿದ್ಧತೆಯ ಅಗ್ನಿಯು ೧೯೩೯ನೇ ಇಸ್ವಿಯಲ್ಲಿ ಒಮ್ಮಿಂದೊಮ್ಮೆಲೆ ಸ್ಫೋಟವಾಯಿತು.

ಎರಡನೆ ಯುದ್ಧವು ಮುಗಿಯುತ್ತಲೇ, ಅದರ ಮುಕ್ತಾಯದಿಂದುಂಟಾದ ಪರಿಸ್ಥಿತಿಯನ್ನು ವಿಮರ್ಶಿಸಿ ಹಲಕೆಲವು ದೂರದರ್ಶಿಗಳು ಈ ಒಪ್ಪಂದವು ಮೂರನೆಯ ಯುದ್ಧಕ್ಕೆ ಆಹ್ವಾನವನ್ನು ಕೊಡುತ್ತಿದೆಯೆಂದು ಹೇಳಿದರು. ಮೂರನೆಯ ಯುದ್ಧವು ಇನ್ನೂ ಬಂದಿರಲಿ ಅಥವಾ ಬಾರದಿರಲಿ, ಜಗತ್ತಿನ ಸರ್ವಭಾಗಗಳಲ್ಲಿ ಇಂದು ತಿಕ್ಕಾಟವು ನಡೆದಿದೆ. ಈ ತಿಕ್ಕಾಟವೇ ಮೂರನೆಯ ಯುದ್ಧದ ಪ್ರಾರಂಭವಾಗಿದೆಯೆಂಬುದು ಕೆಲವರ ಅಭಿಪ್ರಾಯವಿದೆ.

ಹೀಗಿರುವಾಗ, ಈ ಯುದ್ಧಗಳನ್ನು ತಪ್ಪಿಸುವುದಕ್ಕೆ ಏನುಮಾಡಬೇಕೆಂದು ಸರ್ವರೂ ಆಲೋಚಿಸುವುದು ಸ್ವಾಭಾವಿಕವಾಗಿದೆ. ಅನೇಕರು ಹಾಗೆ ಆಲೋಚಿಸಿಯೂ ಇದ್ದಾರೆ. ಮಹಾತ್ಮಾ ಗಾಂಧಿಯವರು ಅಹಿಂಸಾ ತತ್ವವನ್ನು ಉಪದೇಶಿಸುತ್ತ, ಶತ್ರುವು ರಾಜ್ಯದ ಮೇಲೆ ದಾಳಿ ಮಾಡಿದರೆ, ಅವರ ಸಂಗಡ ಅಹಿಂಸಾ ವ್ರತದಿಂದ ಹೋರಾಡಬೇಕೆಂದು ಹೇಳುತ್ತಿದ್ದಾರೆ. ಶಸ್ತ್ರ ಸನ್ಯಾಸವನ್ನು ಆಚರಿಸಬೇಕೆಂದು ಸರ್ವ ರಾಷ್ಟ್ರಗಳ ಅಂಬೋಣವಿದೆ. ಇಂದು ಯುದ್ಧಕ್ಕೆ ಕಾರಣವಾಗುವ ಹಾಗೆ ವರ್ತಿಸುವ ರಾಷ್ಟ್ರಗಳೇ ಯುದ್ಧವನ್ನು ತಪ್ಪಿಸಲು ಆತುರರಾಗಿರುವರೆಂಬುದು ಆಶ್ಚರ್ಯದ ಸಂಗತಿಯಾಗಿದೆ. ಆದರೆ ಅವರ ವರ್ತನೆಯು ಮಾತ್ರ ಅವರ ಮಾತಿನಂತೆ ಇರುವುದಿಲ್ಲ. ಪರಸ್ಪರ ಸಂಶಯಗಳಾದ ಈ ರಾಷ್ಟ್ರಗಳು ಇತರರು ಮೊದಲು ಶಸ್ತ್ರಸನ್ಯಾಸ ಮಾಡಬೇಕೆಂದು ಹೇಳುವರೇ ಹೊರತು ತಾವು ಅದನ್ನು ಮೊದಲು ಆಚರಿಸಲು ಸಿದ್ಧವಿಲ್ಲ. ತದ್ವಿರುದ್ಧವಾಗಿ ಒಬ್ಬರನ್ನು ಕಂಡು ಇನ್ನೊಬ್ಬರು ಹೆಚ್ಚು ಶಸ್ತ್ರಾಸ್ತ್ರಗಳನ್ನು ಸಂಗ್ರಹ ಮಾಡುತ್ತಿದ್ದಾರೆ.

‘ರಾಷ್ಟ್ರಸಂಘ’ವೆಂಬ ಸಂಸ್ಥೆಯು ಈ ಸಂಬಂಧವಾಗಿ ರಚಿಸಲ್ಪಟ್ಟಿತು. ಆದರೆ ಅದರ ಕಾರ್ಯವು ಕೂಡ ಜಗತ್ತಿನಲ್ಲಿಯ ಸ್ವಾರ್ಥದ ಮೂಲಕ ಇಚ್ಛಿಸಿದ ಮೇರೆಗೆ ಸಾಗಲಿಲ್ಲ. ಪ್ರಬಲರಾಷ್ಟ್ರಗಳು ತಮ್ಮ ಕಾರ್ಯಸಾಧನೆಗಾಗಿಯೇ ಅದನ್ನು ಸೇರಿದ್ದವು. ಅದಕ್ಕೆ ಭಂಗವುಂಟಾಗುವುದೆಂದು ಕಂಡು ಬಂದಾಗ ಅಥವಾ ತಮ್ಮ ಸ್ವಾರ್ಥ ಸಾಧಿಸುವುದು ಆ ಸಂಘದಲ್ಲಿದ್ದರೆ ಸಾಧ್ಯವಿಲ್ಲವೆಂದು ತೋರಿದಾಗ ಅದಕ್ಕೆ ಶರಣು ಹೊಡೆದವು. ಕೊನೆಗೆ ಆ ಸಂಘವು ದುರ್ಬಲ ರಾಷ್ಟ್ರಗಳ ಕೂಟವಾಗಿ ಪರಿಣಮಿಸಿತು.

ಮೊನ್ನೆ ಯುದ್ಧವು ಪ್ರಾರಂಭವಾಗುವಾಗ, ಸಂಯುಕ್ತ ರಾಷ್ಟ್ರಗಳು ‘ಜರ್ಮನಿ, ಜಪಾನ್ ಮೊದಲಾದ ಅಚ್ಚಿನ ರಾಷ್ಟ್ರಗಳು ಮಾನವರ ಸ್ವಾತಂತ್ರ್ಯಾಪಹರಣ ಮಾಡುವ ಉದ್ದೇಶದಿಂದ ಪ್ರೇರಿತವಾಗಿ ಮುಂದೆ ಬಂದಿವೆ. ಅವುಗಳನ್ನು ನಿರ್ನಾಮ ಮಾಡಿ ಜಗತ್ತಿನಲ್ಲಿ ಸ್ವಾತಂತ್ರ್ಯ, ಶಾಂತಿಗಳನ್ನು ಪ್ರಸ್ಥಾಪಿಸುವುದೇ ನಮ್ಮ ಉದ್ದೇಶವಾಗಿದೆ’ ಎಂದು ಹೇಳಿ ಯುದ್ಧಕ್ಕೆ ಕೈಹಾಕಿದವು. ಆದರೆ ಯುದ್ಧ ಮುಗಿದು ತಮಗೆ ಜಯವಾದ ಕೂಡಲೆ ಇವೇ ರಾಷ್ಟ್ರಗಳು ತಮ್ಮ ಉದ್ದೇಶವನ್ನು ಮರೆತು ಇತರ ಸಣ್ಣ ಪುಟ್ಟ ರಾಷ್ಟ್ರಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಈಗ ಯತ್ನಿಸುತ್ತಿವೆ.

ಹಿಂದೂಸ್ಥಾನದ ದಾಸ್ಯವಂತೂ ಬಹುದಿನಗಳಿಂದ ನಡೆದುಬಂದ ವಿಷಯವಾಗಿದೆ. ಈ ಯುದ್ಧವು ಪ್ರಾರಂಭವಾಗುತ್ತಲೇ, ಹಿಂದೂಸ್ಥಾನವನ್ನು ಹಿಡಿತದಲ್ಲಿಟ್ಟುಕೊಂಡ ಬ್ರಿಟಿಷರು ಅದನ್ನು ಬಲತ್ಕಾರದಿಂದ ಅದರಲ್ಲಿ ದೂಡಿದರು. ಅದರ ಜನಧನಗಳನ್ನು ಮನಬಂದಂತೆ ಸೂರೆಗೊಂಡರು. ಆದರೆ ಹಿಂದೂಸ್ಥಾನವು ಇವರ ಚಟುವಟಿಕೆಗಳಿಗೆ ಮನಃಪೂರ್ವಕವಾಗಿ ಸಹಾಯಮಾಡುವುದಕ್ಕೆ ಮನಸ್ಸುಮಾಡದೆ ತಟಸ್ಥವಾಗಿ ಉಳಿಯಿತು. ಜಗತ್ತಿನ ಸ್ವಾತಂತ್ರ್ಯವನ್ನು ಕಾಯುವುದಕ್ಕಾಗಿ ಟೊಂಕ ಕಟ್ಟಿದ ಈ ರಾಷ್ಟ್ರಗಳು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಇದುವರೆಗೆ ಕೊಡಲಿಲ್ಲ. ಮತ್ತು ಇನ್ನು ಮುಂದೆ ಕೂಡ ಕೊಡುವ ಚಿಹ್ನಗಳು ತೋರುತ್ತಿಲ್ಲ.

‘ಶಾಂತಿ’ ‘ಶಾಂತಿ’ ಎಂದು ಕೂಗುತ್ತಿರುವವರು ಈ ಘಟನೆಗಳ ಮತ್ತು ಅವುಗಳಿಗೆ ಮೂಲವಾದ ಪರಿಸ್ಥಿತಿಯ ಕಡೆಗೆ ಲಕ್ಷ್ಯಕೊಡುವುದ ಅವಶ್ಯವಿದೆ. ಶಾಂತಿಯ ಬಗ್ಗೆ ಕೂಗುಮಾತ್ರ ಎಲ್ಲೆಡೆಗೆ ಕೇಳಿಸುತ್ತಿರುವುದಲ್ಲದೆ ಅದರಬಗ್ಗೆ ನಿಜವಾದ ಕಾರ್ಯವು ಮಾತ್ರ ಎಲ್ಲಿಯೂ ಕಂಡುಬರುವುದಿಲ್ಲ. ತಮ್ಮಲ್ಲಿ ಶಕ್ತಿಯಿಲ್ಲದೆ ‘ಶಾಂತಿ’ ಎಂದು ಒದರುತ್ತಿರುವುದಕ್ಕೆ ಬೆಲೆಯಿಲ್ಲ. ಅದು ಅರಣ್ಯದಲ್ಲಿ ಅತ್ತಂತೆಯೇ ಸರಿ. ಕೈಯಲ್ಲಿ ಶಕ್ತಿ ಇದ್ದವರು ‘ಶಾಂತಿ’ ಎಂದು ಕೂಗುತ್ತಿರುವುದು ತಮ್ಮ ಕಾರ್ಯಸಾಧನೆಗಾಗಿ ಅಥವಾ ತಾವು ಮಾಡುತ್ತಿರುವ ಅನ್ಯಾಯಗಳಮೇಲೆ ಬಣ್ಣ ಬಳಿಯುವುದಕ್ಕಾಗಿ ಇರುವುದರಿಂದ ಅದಕ್ಕೂ ಬೆಲೆಯಿಲ್ಲ. ಈ ಶಕ್ತಿವಂತರು ಎರಡನೆಯವರ ಉಪದೇಶಕ್ಕೂ ಮಹತ್ವ ಕೊಡುವುದಿಲ್ಲ. ತಮಗಿಂತ ಇತರರು ಬಲಿಷ್ಠರಿಲ್ಲವೆಂಬ ಬಗ್ಗೆ ಅವರಿಗೆ ಮನವರಿಕೆ ಇರುವಾಗ ಅವರು ಏಕೆ ಆಲೋಚಿಸಬೇಕು?

ನಮ್ಮ ಮುಂದೆ ಈ ಪರಿಸ್ಥಿತಿ ಇರುವಾಗ ಶಾಂತಿಯು ಹುಟ್ಟುವುದೆಂತು? ಇದುವರೆಗಿನ ವಿವೇಚನೆಯಿಂದ, ಶಾಂತಿಯು ಪ್ರಸ್ಥಾಪಿಸಲ್ಪಡಬೇಕಾದರೆ ಎರಡು ಕಾರಣಗಳು ಬೇಕೆಂಬುದು ಸಿದ್ಧವಾಗುತ್ತದೆ. ಒಂದನೆಯದೆಂದರೆ ಜಗತ್ತಿನಲ್ಲಿಯ ಸ್ವಾರ್ಥವು ಮಾಯವಾಗಬೇಕು. ಈ ಮಾತಂತೂ ಅಸಂಭವನೀಯವಾದುದೆಂಬುದು ಮೇಲೆಯೇ ಬಂದಿದೆ. ಅಂದಮೇಲೆ ಈ ತರದ ಸ್ವಾರ್ಥಸಾಧನೆಯ ಕಾರ್ಯಗಳು ಅರ್ಥಾತ್ ಅಲ್ಲೋಲಕಲ್ಲೋಲಗಳು, ಸಣ್ಣದರಿಂದ ದೊಡ್ಡದರವರೆಗೆ, ನಡೆಯುವುದು ಬಿಟ್ಟದ್ದಲ್ಲ.

ಮತ್ತೊಂದು ಮಾರ್ಗವು ನಮ್ಮ ಎದುರಿಗಿದೆ. ಅದೆಂದರೆ ತನ್ನ ಮಾತಿಗೆ ಬೆಲೆ ಬರಬೇಕೆನ್ನುವವನು ತನ್ನಶಕ್ತಿಯನ್ನು ಆ ಪ್ರಮಾಣದಲ್ಲಿ ಬೆಳೆಸಿಕೊಳ್ಳಬೇಕೆಂಬುದು. ಇದೊಂದೇ ಮಾರ್ಗದಿಂದ ಶಾಂತಿಯು ಸಾಧ್ಯವಿದೆ. ಸ್ವಭಾವಮೂಲಕವಾಗಿರುವ ಸಬಲತ್ವ ಮತ್ತು ದೌರ್ಬಲ್ಯಗಳ ಮೂಲಕ ಇಂದು ಈ ಅನಿಷ್ಟ ಘಟನೆಗಳು ನಡೆದಿವೆಯೆಂಬುದು ಸ್ಪಷ್ಟವಿದೆ.

ಅದಕ್ಕಾಗಿಯೇ ಇಂದು ಎಲ್ಲ ರಾಷ್ಟ್ರಗಳು ತಮ್ಮ ಬಲವನ್ನು ಬೆಳೆಸಿಕೊಂಡು ಎರಡನೆಯವರಿಗೆ ಹಣಿಯುವ ಪರಿಸ್ಥಿತಿಯನ್ನುಂಟುಮಾಡಿಕೊಳ್ಳುತ್ತಿವೆ. ಒಂದು ರಾಷ್ಟ್ರವು ತನ್ನ ಕೂಟ ಬಲಿಷ್ಠವಾಯಿತೆಂದು ಕಂಡಾಗ ಆ ದುರ್ಬಲ ರಾಷ್ಟ್ರವು ತನ್ನ ಶಕ್ತಿಯನ್ನು ಲಗುಬಗೆಯಿಂದ ಬೆಳೆಸಿಕೊಂಡು ಅಥವಾ ಹತ್ತಿರಿನ ಇನ್ನೊಂದು ರಾಷ್ಟ್ರವನ್ನು ಕೂಡಿಕೊಂಡು, ಆ ಸಬಲ ರಾಷ್ಟ್ರದ ಭಯವು ತನಗೆ ಇಲ್ಲದಂತೆ ಮಾಡಿಕೊಳ್ಳುತ್ತಿದೆ.

'ಅಣು ಬಾಂಬಿ'ನ ವಿಷಯವು ಈ ವಿಷಯದಲ್ಲಿ ಬಹಳ ಉಪಯುಕ್ತವಾದ ಮತ್ತು ಬೋಧಕವಾದ ಉದಾಹರಣೆಯಾಗಿದೆ. ಆ ಶಸ್ತ್ರದ ಕಾರಣದಿಂದ ಅಮೇರಿಕೆಯು ಇಂದು ಜಗತ್ತಿನಲ್ಲಿಯೇ ಅಂಜಿತ್ಯವಾಗಿದೆ. ರಶಿಯಾ ಮತ್ತು ಬ್ರಿಟನ್ನುಗಳು ಈ ಪರಿಸ್ಥಿತಿಯ ಮೂಲಕ ಚಿಂತಾಮಗ್ನವಾಗಿ ಅತ್ತಿತ್ತ ಹುಡುಕಾಡಹತ್ತಿವೆ. ಇವರ ಹುಡುಕಾಟದ ಫಲವಾಗಿ ಅದಕ್ಕಿಂತ ದೊಡ್ಡದಾದ ಮತ್ತೊಂದು ಶಸ್ತ್ರವು ಸಿಕ್ಕರೆ ಆಗ ಅಮೇರಿಕೆಯು ವಿಚಾರದಲ್ಲಿ ಬೀಳಬೇಕಾಗುವುದು.

ಒಟ್ಟಿನಲ್ಲಿ ಹೇಳುವುದಾದರೆ, ಈ ಸೃಷ್ಟಿಯಲ್ಲಿ ದುರ್ಬಲನಿಗೆ ಸ್ಥಾನವಿಲ್ಲ. ದಾಳಿಮಾಡುವವನನ್ನು ದೂರದೆ, ದಾಳಿಗೀಡಾದವನು ಅವನಲ್ಲಿಯ ಅಸಮರ್ಥತೆಯ ಮೂಲಕ ಆ ಸ್ಥಿತಿಗೆ ಮುಟ್ಟಿದನು ಎಂದು ಅವನ ದೌರ್ಬಲ್ಯವನ್ನೇ ದೂರುವುದು ಸಮಂಜಸವಾದುದು. ಇಂದು ಜಗತ್ತಿನಲ್ಲಿ ಈ ತರಹದ ಅಶಾಂತತೆಯ ಅನ್ಯಾಯವು, ಬಲಾತ್ಕಾರವು ನಡೆಯುತ್ತಿದ್ದರೆ ಅದಕ್ಕೆ ಕೆಲವು ರಾಷ್ಟ್ರಗಳು ಸೀಮೆಯಿಲ್ಲದ ಹಾಗೆ ತಮ್ಮ ಶಕ್ತಿಯನ್ನು ಬೆಳಸಿಕೊಂಡಿರುವುದೇ ಕಾರಣವಾಗಿದೆ. ಇಂತಹ ಪರಿಸ್ಥಿತಿಯು ಉಂಟಾಗದಂತೆ ಸಣ್ಣ ದೊಡ್ಡ ಸರ್ವ ರಾಷ್ಟ್ರಗಳು ಯತ್ನಿಸುವುದು ಅವಶ್ಯವಾಗಿದೆ. ಒಂದು ವೇಳೆ ಯಾರಾದರೂ ಹಾಗೆ ಬೆಳೆದುಕೊಂಡರೆ ಅವರ ವಿರುದ್ಧ ಇತರ ರಾಷ್ಟ್ರಗಳು ಒಂದಾಗಿ ಅವರಿಂದ ಜಗತ್ತಿಗೆ ಆಗಬಹುದಾದ ಗಂಡಾಂತರವನ್ನು ದೂರ ಮಾಡಲು ಟೊಂಕ ಕಟ್ಟಬೇಕು.

ಹೊಸದಾಗಿ ಈ ಮಾತನ್ನು ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ವಿಚಾರ ಮಾಡಿಯೇ ರಾಷ್ಟ್ರಸಂಘವನ್ನು ನಿರ್ಮಿಸಿದ್ದರು. ಆದರೆ ಅದರಲ್ಲಿ ಸೇರಿದವರು ಮನಃಪೂರ್ವಕವಾಗಿ ಅದರ ಉದ್ದೇಶವನ್ನು ಸಾಧಿಸಲು ದುಡಿಯಲಿಲ್ಲ.

ತಲೆತಾಕದೆ ಬುದ್ಧಿ ಬರುವುದಿಲ್ಲ. ಸ್ವಾರ್ಥಿಗಳಾದವರಿಗೆ ಉಪದೇಶಿಸಿ ಫಲವಿಲ್ಲ. ಅವರು ತಮ್ಮ ಕೃತಿಗಳಿಗಾಗಿ ತಮ್ಮ ತನ್ಮೊಳಗೆ ಹೊಡೆದಾಡಿ ಯಾದವರಂತೆ ನಾಶಹೊಂದಿದಾಗಲೇ ಅವರ ಕಣ್ಣು ತೆರೆಯುವವು. ಇಲ್ಲದಿದ್ದರೆ ಇವರನ್ನು ಬೊಗ್ಗಿಸುವ ಶಕ್ತಿಯುಳ್ಳ ಒಂದು ಜಾಗತಿಕ ಸಂಘಟನೆಯು ಬೇಕು. ಇಷ್ಟಾಗದಿದ್ದರೆ ಶಾಂತಿಯ ಬಗ್ಗೆ ಬಣ ಕೂಗಾಟದಿಂದ ಏನೂ ಪ್ರಯೋಜನವಿಲ್ಲ. ಅದು ಮುಂಗೈಯಲ್ಲಿ ಬಲವಿಲ್ಲದವರ ಕಂಠಶೋಷಣೆ ಎಂದು ಹೇಳಲ್ಪಡುವುದು.

ಜಂಗಮ ವೀರಪ್ಪ

ಶ್ರೀ. ಎಂ. ಎಸ್. ಅನಂತಪದ್ಮನಾಭರಾವ್, ಮಡಿಕೇರಿ.

ಕರ್ಣಾಟ ಸಾಮ್ರಾಜ್ಯ ಒಡೆದು ಹರಿಹಂಚಾಗೆ
ಮಹಮದೀಯರ ದಾಳಿಯಲಿ ನುಚ್ಚು ನೂರಾಗೆ
ಬಾಂಬೊಳೆಯ ಪರಿವಹದ ತೊರೆಯಂತೆ ಹಿಂದುಗಳ
ಆಳರಸ ಪಡೆಯೆಲ್ಲ ರಕ್ತ ಪ್ರವಾಹದಲಿ
ಕೊಚ್ಚಿ ಹೋಗುತ್ತಿರಲು; ಹಿಂದಿನಾ ವೈಭವವ
ಚಂಗಾಳ್ವ, ಕೊಂಗಾಳ್ವ, ಪಾಂಡ್ಯರಾ ಹೊಯ್ಸಳರ,
ಚಾಲೂಕ್ಯ ವೈಭವವ ನೆನೆನೆನೆದು ಕಣ್ಣೀರ
ಗರೆಯುತ್ತ ನೀರವದ ನೀಲಿಮಾಕಾಶಮಂ
ನೋಡುತ್ತ ತರುಣನೋರ್ವಂ ತಾನೆ ನುಡಿಯುತ್ತ
ಮರದ ನೆಳಲಲಿ ಕುಳಿತು ರಾಜ್ಯ ಪದ ಕಟ್ಟುತಿಹ:

ಇವನಾರು? ಬಾಲನೇಂ! ಕೆಚ್ಚೆದೆಯ ಅಭಿಮನ್ಯು,
ಇಕ್ಕೇರಿ ರಾಜವಂಶದ ಶೂರ, ಕ್ಷಾತ್ರಮಣಿ,
ಭೀಮಾರ್ಜುನರ ಸಾಹಸಂಗಳಂ ಸ್ಮರಿಸುತ್ತ
ತಾನೋರ್ವನೇ ಕುಳಿತು ಹೊಸೆಯುತಿಹ ನವರಾಜ್ಯ
ಪಟ್ಟಮಂ ಸೃಷ್ಟಿಸುವ; ಆಕಾಶ ಪತ್ರದಲಿ
ಕಣ್ಣೋಟ ಲೇಖನಿಯ ಹರಿಸಿ ಬರೆಯುವ ಮನದ
ವೀರಪತ್ರವನೊಂದ, ಪಾರ್ಥಿವರ ಪಂಥದಲಿ
ಇಕ್ಕೇರಿ ವಂಶದಲಿ ಬಂದೊಡಲ, ಬರಿಗೈದು
ಹಂದಿ ನಾಯಿಗಳಂತೆ ಸಾಯುವುದೆ? ನೋಯುವುದೆ?

ಸ್ವಾತಂತ್ರ್ಯ ಮರೆತಿಹರು, ಶಕ್ತಿಗಳನೀಗಿಹರು,
ಒಕ್ಕೊರಲು ಒಕ್ಕೂಟವೆಂದರರಿಯರು ಇವರು,
ಕಯ್ದುಗಳ ಬಿಸುಟಿಹರು, ಹೊತ್ತ ಭೂಮಿಯ ಋಣವ
ತೀರಿಸಲ್ಕರಿಯರಹ, ಆರಿಗೋ 'ಜೀ'ಯೆಂದು
ತಲೆವಾಗಿ ಹಣೆ ಬಾಚಿ ಬಾಳ್ಗಡಿದು ಹಣ್ಣಾಗಿ,
ಸತ್ತು ಸಾಯದ ಜನರ ನಂಬಿ ರಾಜ್ಯವ ಕಟ್ಟಿ
ಆಳ್ವುದೆಂತೋ, ಹೇಗೊ; ಸಾಮುದಾನದೊಳಿವರ
ಮನವೊಲಿಸಿ, ಬಾಳ್ವಿಗಳ ಹಸನೆನಿಸಿ ಕರವಾಳ
ಬಲಮೊರೆದು, ನನ್ನ ದೇಶದ ಹಿರಿಮೆ ಕೈಮೆಗಳ
ನರುಹುತ್ತ, ಬೆಚ್ಚರದೊಳೆಚ್ಚರಿಸಿ ನಡೆಯಿಸುತ
ಉಳುಹುವೆನು ನಮ್ಮ ಹಿರಿಯರ ಪೆರ್ಮೆ ಕೂರ್ಮೆಗಳ.

ರಾಜ್ಯ ಕಟ್ಟುವುದೆಂತು ಪ್ರಬಲ ಶತ್ರುಗಳಿದಿರು?
ಅಸ್ತ್ರಶಸ್ತ್ರಗಳಿಲ್ಲ, ಕಾಯ್ಪುದಕೆ ಆಳಿಲ್ಲ,
ಎಲ್ಲೆಲ್ಲು ಶತ್ರು ಸಾಮ್ರಾಜ್ಯಗಳು ಸುತ್ತಿಹವು,
ಅವರ ಹಂಗಿನ ಬಾಳು, ಅವರಿತ್ತ ಕೂಳಿನಲಿ
ಬದುಕಿರುವ ಕನ್ನಡಿಗ ಚೆನ್ನರಂ ಒಲಿಸುವುದೆ?
ಎಂತಹುದು?

ಹಿಂದೆ ವಿದ್ಯಾರಣ್ಯ ಕರ್ಣಾಟ
ರಾಜ್ಯವನು ಸ್ಥಿರಗೊಳಿಸಿ, ನೆಲೆಗೊಳಿಸಿ, ಮೆರೆದಿಹರು,
ಋಷಿವರರು ತಪದ ಬಲ್ಮೆಯಲಿ ನೆಲವಾಳಿಹರು
ಜ್ಞಾನಿಗಳ ಜ್ಞಾನಕ್ಕೆ ಮನವೊಲಿವರೀ ಜನರು,
ಉಪದೇಶಗಳ ನಂಬಿ ಅದರಂತೆ ನಡೆಯುವರು,

ಹಿಂಸೆಯಿಂ ನೊಂದಿಹರು ಬೆಂದಿಹರು ಕರುಣಮಂ
ಮನ್ನಿಸುತ ನೆರವಾಗಿ ನಿಲ್ಲುವರು ಸಂದೆಗವೆ ?
ಜನವೊಲಿದರೇನಹುದು ! ಸಾಮ್ರಾಜ್ಯ ಕಟ್ಟುವೊಡೆ
ನಿವಿಸವಲ-ಅವರ ಕೂರ್ಮೆಯು ಗೆಲಿದು ಹಗೆವರಂ
ಒಕ್ಕಲಿಕ್ಕುವೆ ಮತ್ತೆ..................................
.................ಹಾಲೇರಿ ನಾಡಿನಲಿ
ಕ್ಷೀರ ಪುರನಿಲಯದಲಿ ಕಾರ್ಗಾಡ ಮಧ್ಯದಲಿ
ಲಿಂಗಭಕ್ತರ ಭಕ್ತ ಜಂಗಮಾತ್ಮನು ಕುಳಿತು
ಧ್ಯಾನದಲಿ ಮುಳುಗಿಹನು. ನಿರವದ್ಯ ನಿಸ್ತುಲದ
ಆ ತೇಜ ಆ ಓಜ ಅರ್ಗಿಹುದು ಬುವಿಯಲ್ಲಿ !
ಶಿವನೆ ಜಂಗಮನಾಗಿ ಬಂದಿಲ್ಲಿ ಭವಿಗಳಂ
ಉದ್ಧರಿಸೆ ಕಾದಿಹನೊ, ಪಂಚಾಕ್ಷರಿಯ ಬೋಧಿ
ಸುತ ಪಾಪ ತೊಡೆಯುತ್ತ ಶಿವಮತವ ಪಸರಿಸಲು
ಬಸವಣ್ಣ ಬಂದಿಹನೊ, ಅವತಾರ ಮುಗಿಸದಿಹ
ಪ್ರಭುದೇವ ಮತ್ತೊರ್ಮೆ ಕಾಣಿಸಿದನೋ !
ಮೇಣು
ನಂದೀಶ್ವರಂ ಮನುಜ ರೂಪಿಂದೆ ಕುಳಿತಿಹನೊ ?
ಭಾಪು, ಯೋಗಾರೂಢ, ಕಲ್ಯಾಣಗುಣಪ್ರೌಢ
ನವನೆ ಆ ಇಕ್ಕೇರಿಯನ್ವಯದ ಹಿರಿ ತರುಣ-
ಭೋಯೆಂದು ಭಕ್ತ ತತಿ ಹರಿತಂದು ಓಲೈಸಿ
ಚಾಮರವ ಬೀಸುತಲಿ, ಸೇವೆಗಳ ಮಾಡುತಲಿ
ಪಣ್ ಪೂವು, ಹೊನ್ನು ಹಣ, ಧನಧಾನ್ಯ ಸರ್ವಸ್ವ
ಮಂ ಸುರಿದು ಆ ವಿರಾಗಿಯ ಮುಂದೆ ಚೆಲ್ಲಿದರು ;
ದೇಹಮಂ ಅರ್ಪಿಸುತ ಅವನ ಕಣ್ಸನ್ನೆಯಲಿ
ಪ್ರಾಣವರ್ಪಿಸೆ ಒಪ್ಪಿ ಸಿದ್ಧರಾಗಿಹರೆಲ್ಲ.

ಧನಕನಕ ನಾರಿಯರ ಮೋಹಮೆಳ್ಳನಿತಿಲ್ಲಿ,
ತನ್ನ ಕೀರ್ತಿಯನೊಲ್ಲ, ತನ್ನಜನ ತನ್ನತನ
ಮಂ ಮರೆತು ಊಳಿಗವ ಮಾಡುವುದು ತರವಲ್ಲ,
ಅವರ ನಡೆಯಿಸಿ ಮರೆಸಿ ನೆಲವನವರಲ್ಲಿಟ್ಟು
ನರ-ಸಿಂಹರೆನಿಪುದೇ ಮನದ ಬಯಕೆಯದಾಗೆ,
ಏಕಾಂತದಲಿ ಕುಳಿತು ಅಣಿಯಾಗುತಿಹನಾತ
ಉಣಿಸಿಲ್ಲ-ತಿನಿಸಿಲ್ಲ, ಹಸಿವುತೃಷೆಗಳನರಿಯ.

ಭಕ್ತರಿತ್ತೊಡವೆಗಳ ಭಕ್ತರಿಗೆ ಹಂಚುವನು.
ಭಕ್ಷ್ಯಭೋಜ್ಯವನೆಲ್ಲ ಜಂಗಮಗಣಂಗಳಿಗೆ
ಪಚ್ಚುಗೊಡುತಲಿ ಮಿಕ್ಕ ಶೇಷಾನ್ನಮಂ ಸವಿದು,
ಮತ್ತೆ ಧ್ಯಾನದಿ ಮುಳುಗಿ, ಎಚ್ಚರದಿ ಲೌಕಿಕವ
ಬೋಧಿಸುವ ಸರ್ವರಿಗೆ, ಭಕ್ತಬಂಧುವು ಶಿವನ
ಲೀಲೆಗಳ ಬಣ್ಣಿಸುವ - ಮಾನಿಸರ ಧರ್ಮಗಳ
ಕರ್ಮಗಳ ನೀತಿಗಳ ಗೀತೆಗಳ ಹೇಳುವನು
ಜಂಗಮರ ನಡೆಯಿಸಲು ಸಾಧುಗಳ ಸೇವಿಸಲು
ವೀರಶೈವರ ನಿಲುವ ಸ್ಥಿರಗೊಳಿಸೆ - ನರರಾಗಿ
ಬಂದುದಕೆ ಮಾಳ್ಪಕಾರ್ಯವ ತಿಳುಹಿ - ಭವಿಗಳಂ
ತಿದ್ದುತಲಿ ನಂಬದರ ಶಿಕ್ಷೆಯಲಿ ತಿದ್ದುವುದ
ಹೇಳುತ್ತ ವೀರಶೈವಾಗಮದ ತತ್ವವೊರೆ
ದಾ ಯೋಗಿ, ನಿತ್ಯವಲ್ಲದ ನೆಲದ ಬಗೆ ತನಗೆ
ಬೇಹುದೇ ? ವಿಶಸನದ ಐಶ್ವರ್ಯ ಪೆರ್ಮೆಗಳು,
ತನಗೇಕೆ ? ಆದೊಡಂ ಭಕ್ತರನ್ನುದ್ಧರಿಸೆ,
ಲೋಕಮಂ ನೀತಿಯಲಿ ನಡೆಸಲ್ಕೆ ಒಬ್ಬೊಬ್ಬ
ನಾದೊಡಂ ಐಹಿಕದಿ ನಿಲ್ಲುವುದೆ ಸರಿಯಹುದು,
ಒಬ್ಬ ಗುರು ಧರ್ಮದಲಿ ನಡೆಯುತಿರೆ ಕಂಡದನು
ನಡೆಯುವುದು ಜನಮದನು ಅನುಸರಿಸಿ ಧರ್ಮದಲಿ
ರಾಜನೇ ಪ್ರತ್ಯಕ್ಷ ದೇವತೆಯು - ರಾಜನೇ
ಮತಿವಂತನಾಗಿರಲು, ತನ್ನಂತೆ ಪ್ರಜೆಗಳಂ
ನಡೆಯಿಸಲು ಬಲ್ಲವನು, ಪ್ರಜೆಗಳೆಲ್ಲರ ಮುಕ್ತಿ
ನರಪತಿಯ ಹಸ್ತದಲಿ ಅಡಗಿಹುದು, ಅವರಿಂದ
ಉತ್ತಮರೆ - ಜಂಗಮರೆ, ಧರ್ಮಾತ್ಮನನ್ನರಸಿ
ಪಟ್ಟಗಟ್ಟುತ ನೀವು ನಿಮ್ಮರಸನನ್ನಾಗಿ
ಮಾಳ್ಪುದಿಂದೇ ನೀವು.
ಸುಜ್ಞಾನ ದೀವಿಗೆಯ,
ತೋರುತಿರಲಾ ಲಿಂಗ ಭಕ್ತನಂ ಪೂಜಿಸುತ
ಗುರುಪೀಠಮಂ ರಚಿಸಿ ಪೂಜಿಸುವರೆಲ್ಲರುಂ
ಆರೋಗಣೆಗೆ ಸಿದ್ಧಮಾಡುವರು ಕೆಲಜನರು,
ಅಗ್ಘವಣಿ ಮೊದಲಾದ ಸಾಮುಗ್ರಿಗಳ ತಂದು
ಪೂಜೆಗಣಿ ಮಾಡುವರು ಕೆಲಜನರು, ಕಸದೆಗೆದು
ಸಾರಿಸುತ ರಂಗವಲ್ಲಿಯನಿಟ್ಟು, ಸಿಂಗರಿಸಿ
ಹೊಸ ಹೂವು ಬಿಲ್ವಗಳ ಶೋಧಿಸುತ ತರುವವರು
ಸ್ನಾನಕಣಿ ಮಾಡುವರು : ಅನುದಿನಕೆ ನೂರಾರು
ಜನ ನೆರೆದು ಸೇವಿಸುವರಾ ಗುರುವಿನಡಿಕಮಲ
ಕಣ್ನೋಟವೊಂದರಲೆ ಇಂಗಿತವನರಿಯುತ್ತ
ಬೇಕಾದ ಸೇವೆಗಳ ಕೆಲಸಗಳ ಮಾಡುವರು
ದೇವಾರಚಮಂ ರಚಿಸಿ ದಿವ್ಯಪೀಠವನಿರಿಸಿ
ಪಾದಪೂಜೆಯ ಮಾಡಿ ಕೊಟ್ಟ ಪ್ರಸಾದಗಳ,

ಕಣ್ಗೊತ್ತಿಕೊಳ್ಳುವರು :
ಹೊಸಬರಚ್ಚರಿಯಿಂದ
ಇವನಾವ ರಾಯನೋ, ರಾಜಋಷಿಯೋ ಮೇಣು
ಇವನಾವ ಯೋಧನೋ, ಸಾಧು ಸತ್ಪುರುಷನೋ !
ಅಮರನಾಥನೆ ಜಂಗಮ ಸ್ವರೂಪದಿ ಬಂದು
ಹಾಲೇರಿಯಲಿ ನಿಂದು ಭವಿಗಳಂ ಕರುಣಿಪನೊ !
ಕರ್ಣಾಟ ಜನರಿರವ ಕಂಡುಬ್ಬೆಗಂಗೊಂಡು
ಹಿಂದಿನಾ ವೈಭವವ ಮತ್ತೆ ಮೆರೆಯಲ್ಕೆಳಸಿ
ಬಂದಿಹನೊ ಎನುವಂತೆ ಕ್ಷಾತ್ರ ತೇಜವ ಬಿತ್ತಿ
ಸಾಮ್ರಾಜ್ಯ ಮಣಿಮುಕುಟ ಧರಿಸಿರ್ದ ಧಾರುಣಿಯು
ಮುಸಣಕಿಂ ಕಡೆಯಾಗಿ ಕಾರ್ಗಲ್ಲ ಕಗ್ಗಾಡು,
ಆ ಸಿರಿಯು ಆ ಸೊಬಗು ಹೊನ್ನಹೊಳೆ ವೈಭವವ
ನೀಗುತಲಿ ಪರರೆಂಜಲಿಗೆ ನಿಂದು ಭಯಗೊಂಡು
ನಿಲ್ಲುವುದೆ !!
ಏಳಿರಿನ್ನೇಳೇಳಿ ವೀರರೇ,
ಭೂಲಕ್ಷ್ಮಿ ಕೃಪೆದೋರಿ ಇಲ್ಲಿಯೇ ಮೂಡಳೇ
ಹಾಲೇರಿ ನಾಡಿನಲಿ ಪ್ರತ್ಯಕ್ಷಮಾಗಳೇ
ವರ ತಪೋಭೂಮಿಯಿದು, ಇದುವೆ
ಗೋವ್ರಜಮಹುದು
ಕ್ಷೀರಪರಿವಹ ಹರಿಸಿ ಮೆರೆದ ಹಾಲೇರಿಯಿದು
ನಿಮ್ಮ ಭುಜಭಲದಿಂದ ಇಂದೊಮ್ಮೆ ಸಾಮ್ರಾಜ್ಯ
ಸ್ಥಿರಮಾಗಿ ನಿಲ್ಲಲೀ ತಾಣದಲಿ, ನಿಮ್ಮೊಳಗೆ
ವೀರನೊಬ್ಬನ ನಿಲಿಸಿ ಪಟ್ಟದಲಿ ನಾಯಕನ
ಮಾಡುವೆವು ; ನಿಮ್ಮ ನೆರವೊಂದಿರಲು
ಜಯಮಹುದು :
ಧರ್ಮಮಾರ್ಗದಿ ನಡೆಯೆ ದುರ್ಬಲವ
ಗೆಲಬಹುದು.
ಕೊಡಗುನಾಡಿನ ಪೆರ್ಮೆ ನಿಮ್ಮಿಂದ ಮೆರೆಯಲ್ಕೆ
ವೀರ ನರಸಿಂಹರೇ ಎಚ್ಚರಿರಿ ! ಎದ್ದೇಳಿ !!
ಎನ್ನುತಿರೆ ಜೈಯೆಂದು ಜಯಘೋಷಮಾಡಿದರು.
ಎಮಗಾರು ನಾಯಕರು ! ತಾಪಸೋತ್ತಮ ನೀನು
ಎಮಗೆ ನಾಯಕನಾಗಿ ಎಮ್ಮ ನಡಿಯಿಡಿಸುತ
ಹಾಲೇರಿ ಸಂಸ್ಥಾನವಾಳುವುದು, ಮುಂದೆಮ್ಮ
ಸ್ವಾತಂತ್ರ್ಯ ಸಾಮ್ರಾಜ್ಯ ಕಟ್ಟುವುದು ಕರುಣದಿಂ
ಎಂದು ಹಾ ಹಾರುತ್ತ ಕುಸುಮ ವೃಷ್ಟಿಯ ಕರೆದು
ಸಿಂಹಾಸನವ ರಚಿಸಿ ಪೀತಾಂಬರವ ಹಾಸಿ
ಕಟ್ಟಿದರು ಪಟ್ಟಮಂ ವೀರಪ್ಪ ಜಂಗಮಂ
ಹಾಲೇರಿ ಮನೆತನದ ಮೂಲ ವಂಶನು ಮಾಗಿ
ಮೆರೆದ ಸಿಂಹಾಸನದಿ ಕೊಡಗು ರಾಜ್ಯವ ನಾಳೆ.

ಎಮಗೆ ರಾಜ್ಯಮಿದೇಕೆ, ವೈರಾಗ್ಯದಲಿ ಬಂದು
ಊಂಛವೃತ್ತಿಯ ತಾಳಿ - ಉದುರಿರುವ ಧಾನ್ಯದಿಂ
ಪಾಡಳಿವ ಎಮಗೇಕೆ ರಾಜ್ಯವಾಳುವ ತೊಡಕು ?
ಕಟ್ಟುಗಳ ಕಳಚಿರುವೆ ಮತ್ತೇಕೆ ಬಂಧನವು
ಸಕಲಮಂ ತಿಳಿದಿರುವ ನಿಮಗೆ ಬೋಧಿಸಲೇಕೆ ?
ತೋರುವೆಂ ದಾರಿಯಂ ರಾಜ್ಯಮಂ ಕಟ್ಟುವೆಂ
ನಿಜ ತಪೋ ಶಕ್ತಿಯಲಿ ಬೆಳೆಯಿಸುವೆ ಪದವಿಯಂ
ಎನ್ನ ಮತದಿಂ ನಡೆಯೆ ನಿಮ್ಮದೀ ನಾಡೆಲ್ಲಿ
ಇದು ಮಣ್ಣೆ ! ಎಮ್ಮ ಜೀವದ ಕಣ್ಣು ಈ ಮಣ್ಣು.
ಎಮ್ಮ ಕಾಪಾಡುವಳು ಸುಧೆಯ ಹೊಳೆ ಹರಿಸುವಳು
ಇವಳ ಮಹಿಮೆಯನರಿತು ನಡೆಯುತಿರೆ ತಾನಾಗಿ
ಜಯಲಕ್ಷ್ಮಿ ಒಲಿಯುವಳು ನಮಗೆ ಜಯ
ಸ್ಥಿರಮಹುದು.

ವೀರಪ್ಪ ಜಂಗಮಂ ಜನಗಳಾಸೆಯನರಿದು
ಅವರ ಕ್ಷೇಮವ ಬಯಸಿ ರಾಜ್ಯ ಸೂತ್ರವ ಧರಿಸಿ
ಸಿಂಹಾಸನದಿ ಮೆರೆದ ಬಸವಣ್ಣರಂತೆಸೆದು
ಕೊಡಗರೆಲ್ಲರ ವೀರ ಸಾಹಸದಿ ದಿನದಿನಕೆ
ಹಾಲೇರಿ ರಾಜ್ಯ ವಿಸ್ತರಿಸಿದುದು ; ಜಂಗಮರ
ಪದತಲದಿ ಮಣಿಮುಕುಟ ನೊಸಲೊತ್ತು ತೊಪ್ಪಿದರು
ಕೊಡಗು ರಾಜ್ಯದ ಸಿಂಹ ಘರ್ಜಿಸಲು ಗರಹೊಡೆದು
ವೀರ ನರಪತಿ ಮುಕುಟ ಮಣಿಯಿಂದ ರಂಜಿಸಲು
ಬೆಳ್ಗೊಡೆಯ ನೆಳಲಿನಲಿ ಕಾಂಚನಾಸನವೇರಿ
ವೀರ ಬಾಹುಗಳೆತ್ತಿ ಬಾಳಲೀ ಧರೆಯೆಂದು
ಯೋಗ ಜಪ ತಪ ಧ್ಯಾನ ಮೌನ ದಾನ ಸಮಾಧಿ
ಗಳ ಬಲುಮೆಯಿಂ ರಾಜ್ಯ ಕಟ್ಟಿರಲು ಜೈಯೆಂದು
ನೆರೆಯೂರ ಸಾಮಂತರೆಲ್ಲರೂ ನೊಸಲಿಕ್ಕಿ
ಒಪ್ಪಿದರು ವೀರ ರಾಜೇಂದ್ರನೇ ಸಮ್ರಾಟ
ಕರ್ಣಾಟ ಜನಪದದ ರವಿಯೆಂದು ಮೊಳಗಿದರು.
ಕೊಡಗು ರಾಜ್ಯವ ಕಟ್ಟಿ ಹಾಲೇರಿಯರಸೆನಿಸಿ
ಕನ್ನಡಿಗ ರಾಷ್ಟ್ರಮಂ ಮೆರೆಯಿಸಿದ ವೈಭವದಿ
ಮಂಗಳವು ಮೂಡಿದುದು ವೀರನೃಪನಾಳ್ಕೆಯಲಿ,

ಸಾಹಿತ್ಯ

ಶ್ರೀ. ದೇವುಡು ನರಸಿಂಹಶಾಸ್ತ್ರಿ ಎಂ.ಎ.,

ಸಾಹಿತ್ಯವೆಂಬುದೊಂದು ಕನಸು. ಈ ಕನಸನ್ನು ಒಂದಲ್ಲ ಒಂದು ರೂಪದಲ್ಲಿ ಕಾಣುವ ಶಕ್ತಿ ಎಲ್ಲರಿಗೂ ಉಂಟು. ಆದರೆ ಕೆಲವರಲ್ಲಿ ಮಾತ್ರ ಈ ಕನಸು ದೀರ್ಘಕಾಲ ನಿಂತು ವ್ಯಕ್ತರೂಪವನ್ನು ಪಡೆದು ಘನವಾಗಿ, ಮೂರ್ತಿಯಾಗಿ ಹೊರಬೀಳುವುದು.

ಮಾಡುವುದಕ್ಕೆ ಕೆಲಸವಿಲ್ಲದಾಗ ನಾವು ಎಷ್ಟೋ ವೇಳೆ ಕಲ್ಲಿನ ಮೇಲೆ ಏನಾದರೂ ತೆಗೆದುಕೊಂಡು ಕುಟುಕುತ್ತಿರುತ್ತೇವೆ. ಆದರೆ ಆ ಕುಟುಕುವ ಪ್ರಯತ್ನ ಉದ್ದೇಶಪೂರ್ವಕವಾಗಿ, ಘನವಾಗಿ, ದೀರ್ಘಕಾಲ ನಡೆದರೆ, ಅಲ್ಲಿ ಪ್ರಯತ್ನದ ಫಲವಾಗಿ ಮೂರ್ತಿಯು ಏರ್ಪಡುತ್ತದೆ. ಇಲ್ಲದಿದ್ದರೆ ಬರಿಬರಿಯ ಕರ ಚಪಲದಲ್ಲಿ ಮುಗಿಯುತ್ತದೆ.

ಪಕ್ಷಿಮಿಥುನದ ರೋದನವನ್ನು ಕಂಡು ಎಷ್ಟು ಜನರು ಮರುಗಿಲ್ಲ? ಆದರೆ, ಒಬ್ಬನಲ್ಲಿ ಆ ಮರುಕವು ತೀವ್ರನಾಗಿ ಮನಸ್ಸಿನ ವೃತ್ತಿಗೊಂದು ಏಕಾಗ್ರತೆಯು ಹುಟ್ಟಿ ಆ ಏಕಾಗ್ರತೆಯು ಪ್ರತ್ಯೇಕ ವ್ಯಕ್ತಿಯಾಗಿ ಏರ್ಪಟ್ಟಿತು. ಆಗ ಅದು ಕಾವ್ಯವಾಯಿತು.

ಕಾವ್ಯವಾಗುವುದೂ ಮಕ್ಕಳಾಗುವಂತೆಯೇ. ಸ್ತ್ರೀ-ಪುರುಷರ ಸಂಪರ್ಕವಾದಾಗ ಶುಕ್ಲದೊಂದು ಸೂಕ್ಷ್ಮ ಬಿಂದುವು ಶೋಣಿತಾಂಡವನ್ನು ಹಿಡಿದು ಗರ್ಭವನ್ನು ಸೇರಿ, ಅಲ್ಲಿ ನಿರ್ವಿಘ್ನವಾಗಿ ಬೆಳೆದರೆ ಸಕಾಲದಲ್ಲಿ ಸಜಾತೀಯ ಪಿಂಡವೊಂದು ಹೊರಬೀಳುವುದು. ಎಂದರೆ ಸಂತತವಾದ ವೀರ್ಯಧಾರೆಯಲ್ಲಿ ಒಂದು ಸೂಕ್ಷ್ಮ ಬಿಂದುವು ಪ್ರತ್ಯೇಕತೆಯನ್ನು ಪಡೆದು ವ್ಯಕ್ತಿತ್ವವನ್ನು ಸ್ಥಾಪಿಸಿಕೊಂಡು ಮೂರ್ತಿಯಾಗುವುದು. ಕಾವ್ಯವೂ ಅದರಂತೆಯೇ! ಪ್ರತೀಕವೊಂದು ಏರ್ಪಟ್ಟು ಮನಸ್ಸನ್ನು ಪ್ರವೇಶಿಸಿ ಅದರಲ್ಲಿ ವೃತ್ತಿಯನ್ನು ಪ್ರಚೋದಿಸುವುದು. ಆಗ ವೃತ್ತಿಯು ಘನವಾಗಿ, ತೀವ್ರವಾಗಿ ಪ್ರತ್ಯೇಕವಾಗಿ, ರೂಪಗೊಳ್ಳುವುದು.

ಬೀಜಕ್ಷೇತ್ರಗಳೆರಡರ ಗುಣವೂ ಸಂಸ್ಕಾರದ ಫಲವೂ ಸೇರಿ ವೃಕ್ಷದ ಯೋಗ್ಯತೆಯಾಗುವಂತೆ, ಬೀಜವಾದ ಪ್ರತೀಕ, ಕ್ಷೇತ್ರವಾದ ಮನಸ್ಸಿನ ಗುಣ, ಅದಕ್ಕೆ ದೊರೆಯುವ ಸಂಸ್ಕಾರ ಇವುಗಳನ್ನು ಅನುಸರಿಸಿ ಕಾವ್ಯವು ಹುಟ್ಟುವುದು. ಪ್ರತೀಕವೆನ್ನುವುದು ಅನುಭವ. ಮನಸ್ಸು ಇಂದ್ರಿಯಗಳ ಮೂಲಕ ಧಾವಿಸಿ ವಿಷಯಗಳನ್ನು ಮುಟ್ಟುತ್ತಲೇ ಇರುವುದು. ಹೀಗೆ ಸದಾ ಉಂಟಾಗುತ್ತಿರುವ ವಿಷಯೇಂದ್ರಿಯ ಸನ್ನಿಕರ್ಷವು ಮನಸ್ಸಿಗೆ ಪ್ರಿಯಾಪ್ರಿಯ ಅನುಭವಗಳನ್ನು ತುಂಬುತ್ತಿರುವುದು. ಹೊಟ್ಟೆಬಾಕನು ಕಂಡುಕಂಡುದನ್ನೆಲ್ಲ ತಿನ್ನುವಂತೆ, ಗ್ರಾಹ್ಯಾಗ್ರಾಹ್ಯವಿವೇಕವಿಲ್ಲದ ಮನಸ್ಸೂ, ಬಂದ ಬಂದ ಅನುಭವವನ್ನೆಲ್ಲ ಮೂಟೆಗಟ್ಟುತ್ತಿರುವುದು. ಇದೇ ಪ್ರತೀಕ ಸಂಗ್ರಹ. ಅಂತಃಕರಣದಲ್ಲಿ ಸಂಗೃಹೀತವಾದ ಅನುಭವಗಳಲ್ಲಿ ಕೆಲವು ಜೀರ್ಣವಾಗುವುವು; ಇನ್ನೂ ಕೆಲವು ಜೀರ್ಣವಾಗದೆ ಉಳಿಯುವುವು; ಮತ್ತೆ ಕೆಲವು ಅನುಭವಾಂತರಗಳಾಗಿ ಮಾರ್ಪಾಡಾಗುವುವು. ಇವು ಕಾವ್ಯ ಪ್ರಚೋದನ ಸಾಮಗ್ರಿ. ಇದೇ ಕಾವ್ಯವಾಸನಾ.

ಈ ಮನೋವಾಸನೆಗಳೇ ಕನಸಾಗುವುದು ಎಂದು ಶಾಸ್ತ್ರಜ್ಞರ ಮತ. ಕೆಲವು ವೇಳೆ ಕನಸು ದೇಹ, ಆಹಾರಗಳಿಗೂ ಸಂಬಂಧಪಟ್ಟಿರಬಹುದು. ಅರಗದ ಆಹಾರವು ಒಂದು ಜಾತಿಯ ಕನಸಿಗೆ ಕಾರಣವಾಗುವುದಂತೆ! ಹಾಗೆಯೇ ಮಲಗಿರುವಾಗ ಎದೆಯ ಮೇಲೆ ಕೈಯಿಟ್ಟುಕೊಂಡಿದ್ದರೆ ಯಾರೋ ಮೇಲೆ ಕುಳಿತಿರುವಂತೆ ಕನಸಾಗುವುದಂತೆ. ಹಲವು

ಕೆಟ್ಟ ಕನಸುಗಳಿಗೆ ರೋಗವೂ ಕಾರಣವಂತೆ!

ಹಾಗೆಯೇ ಕಾವ್ಯವಾಸನೆಯೂ ನಾನಾ ವಿಧವಾಗಿರಬಹುದು. ಅವರೂ ಸಾಧಾರಣ, ಸಮ್ಮಿಶ್ರ, ವಿಪರೀತ, ಎಂದು ಇವನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಸಾಧಾರಣ ವಾಸನೆಯು ಪೋಸ್ಟಾಫೀಸಿನ ಹಾಗೆ. ಬಂದ ಕಾಗದವನ್ನು ಕಚೇರಿಯ ಮುದ್ರೆ ಹೊಡೆದು ತೆಗೆದುಕೊಂಡು ಹೋಗಿ ಕೊಡುವುದು. ಈ ಜಾತಿಯೂ 'ಸಾಹಿತ್ಯ'ವನ್ನು ಹುಟ್ಟಿಸುವುದುಂಟು.

ಸಮ್ಮಿಶ್ರ, ವಿಪರೀತಗಳ ಜಾತಿ ಬೇರೆ. ವಿಪರೀತವು 'ಹಾವಿಗೆ-ಹಾಲೆರೆದರೆ' ಎಂಬಂತೆ. ಸುಖಾನುಭವವಾಗಲಿ, ದುಃಖಾನುಭವವಾಗಲಿ ಮನಸ್ಸು ಒಂದೇ ಜಾತಿಯ ಚಿತ್ರವನ್ನೇ ಬರೆದಿಡುವುದು. ಧರ್ಮರಾಯನು ಲೋಕದಲ್ಲಿ ಎಲ್ಲರೂ ಒಳ್ಳೆಯವರು ಎಂದನಂತೆ; ದುರ್ಯೋಧನನು ಎಲ್ಲರೂ ದುಷ್ಟರೇ ಎಂದನಂತೆ. ವಿಪರೀತ ಭಾವನೆಯು ಅಂತರಂಗದಲ್ಲಿ ನೆಲಸಿದರೆ, ಅದಕ್ಕೆ ಬರುವ ಅನುಭವವೆಲ್ಲ ವಿಪರೀತವೇ! ಇಂಗ್ಲಿಷಿನಲ್ಲಿ 'he has a quarrel with the world' ಎನ್ನುವಂತಹ ಭಾವನೆ ಇದು. ಇದೂ ಕಾವ್ಯ ಸೃಷ್ಟಿಗೆ ಅಷ್ಟು ಸೊಗಸಲ್ಲ. ಈ ಭಾವನೆಯಿಂದ ಪ್ರಚೋದಿತವಾಗುವ ಕಾವ್ಯವು ತೀವ್ರವಾಗಿರಬಹುದು; ಆದರೆ ಅದು ಸಹಜವಲ್ಲ; ಅದರಿಂದ ಅದು ಸುಂದರವಲ್ಲ.

ಮೂರನೆಯ ಜಾತಿ ಸಮ್ಮಿಶ್ರ. ಸಮ್ಮಿಶ್ರವಾಸನೆಗೆ ಕಾವ್ಯ ಸೃಷ್ಟಿಯಲ್ಲಿ ಪ್ರಥಮಸ್ಥಾನ. ನಾನಾ ಜಾತಿಯ ಗಿಡಗಳನ್ನು ತಂದು ಅವಕ್ಕವಕ್ಕೆ ಬೇಕಾಗುವ ಗೊಬ್ಬರ, ಮಣ್ಣು ಮುಂತಾದ ಆನುಕೂಲ್ಯಗಳನ್ನು ಕಲ್ಪಿಸಿ ನಂದನವನ್ನು ಸೃಷ್ಟಿಸುವ ಜಾತಿಯದು ಈ ವಾಸನೆ. ಈ ವಾಸನೆಯಲ್ಲಿ ಅದೃಷ್ಟವಶಾತ್ ಉತ್ತಮ ಕಾವ್ಯಗಳು ಹುಟ್ಟುವುವು. ಪ್ರತಿಭೆ ಎಂದು ಸಂಸ್ಕೃತ ಲಾಕ್ಷಣಿಕರು ಕರೆಯುವ ಮನಶ್ಶಕ್ತಿಯ ಮೂಲವಿದು.

ಈ ವಾಸನೆಗಳೆಲ್ಲ ಪ್ರಾಕ್ತನವಾಗಿಯೂ ಇರಬಹುದು: ಅದ್ಯತನವೂ ಆಗಿರಬಹುದು. ಅದ್ಯತನವಾದರೆ ಅದಕ್ಕೆ ತೀವ್ರತೆ ಕಡಿಮೆ. ಹೊಸದಾಗಿ ಕಲಿತವರು ವೀಣೆ ಬಾರಿಸಿದ ಹಾಗೆ: ಇನ್ನೂ ಅದು ಕಲಿಕೆ. ಪ್ರಾಕ್ತನವಾದರೆ ಅದು ಪ್ರೌಢ. ಬೀಜಗಳನ್ನು ನೆಡುವವರು ಬೀಜವನ್ನು ಕೊಂಚ ಹಳೆದು ಮಾಡಿ ನೆಡುವರು. ಹಳೆಯ ಬೀಜ ಚೆನ್ನಾಗಿ ಫಲಿಸುವುದು. ಹಾಗೆಯೇ ವಾಸನೆಯಲ್ಲೂ ಪ್ರಾಕ್ತನವೇ ಚೆನ್ನಾಗಿ ಫಲಿಸುವುದು.

ಇದಿಷ್ಟೂ ಸಾಹಿತ್ಯ ಸೃಷ್ಟಿಯ ಮನೋಭಾವದ ವಿಚಾರ; ಎಂದರೆ ತೋಟ ನೆಡಬೇಕೆಂದವನು ಬೀಜಗಳನ್ನು ಸಂಗ್ರಹಿಸಿದಂತೆ.

ಪ್ರಾಕ್ತನವಾದ ಸಮ್ಮಿಶ್ರ ವಾಸನೆಯು ಪ್ರೌಢವಾದರೆ, ಅದು ರಸಮಯ ಸೃಷ್ಟಿಯನ್ನು ಮಾಡುವುದು. ಆಗ ಸಚ್ಚಿದಾನಂದವಾದ ಜೀವದ ಸಿಸೃಕ್ಷುತಾ ಶಕ್ತಿಯು ಹೊರಹೊಮ್ಮುವುದು. ಪ್ರೌಢೆಯ ರತಿ ಚಾತುರ್ಯದಂತೆ; ನುರಿತ ವೈಣಿಕನ ವೀಣಾವಾದನದ ಮಾಧುರ್ಯದಂತೆ, ಒಂದು ಅಲೌಕಿಕ ಸೃಷ್ಟಿಯಾಗುವುದು. ಹೊರ ಹೊಮ್ಮುವುದಕ್ಕೆ ಕ್ಷೇತ್ರವಾದ ಮನಸ್ಸು ಪಕ್ವವಾಗಿ, ಸತ್ಯಗುಣ ಸಂಪನ್ನವಾಗಿದ್ದರೆ ಕಾವ್ಯವು ಶಾಂತಿಯಿಂದ ಶೃಂಗಾರದಿಂದ ಕೂಡಿರುವುದು. ತುಂಬು ಬಗೆಯ ಇಂಪು ಸೊಂಪುಗಳು ಅಲ್ಲಿ ತಾವೇ ತಾವಾಗಿರುವುವು. ಇಲ್ಲದಿದ್ದರೆ ಕಾಮಕ್ರೋಧಾದಿಗಳ ವಿಪರೀತ ನರ್ತನವು ತುಂಬಿ ಭಯಾನಕವಾದ ದುಃಸ್ವಪ್ನದಂತಿರುವುದು.

ಆಯಿತು. ವಾಸನಾ ಬೀಜವು ಮೊಳೆತು ಕಾವ್ಯವಾದರೆ, ವಸ್ತು ಮೊದಲಾದವೆಂತು? ಎಂದರೆ, ಬೀಜವೊಂದಾಗಿ ಗಿಡವೊಂದಾಗುವುದೇನು? ವಾಸನೆಯು ಅದ್ಯತನವಾಗಿದ್ದಾಗ ಎಂದರೆ ಇನ್ನೂ ಪಕ್ವವಾಗದಿದ್ದಾಗ ಹುಟ್ಟಿದ ಕಾವ್ಯದ ವಸ್ತು ಅದ್ಯತನ ಪ್ರಪಂಚ. ಚಿತ್ತಕ್ಷೋಭವು ಹೆಚ್ಚಿ ಹೊರಬಿದ್ದ ಅಲ್ಲಿರುವ ವಸ್ತು, ಪಾತ್ರ ಎಲ್ಲವೂ ಸುತ್ತಮುತ್ತಿನ ಪ್ರಪಂಚದಲ್ಲಿ ಕಾಣುವುದರ ಪ್ರತಿಬಿಂಬ. ಕ್ಯಾಮರ ಮುಚ್ಚದೆ ನೆಗಟಿವ್ ಲೋಡ್ ಮಾಡಿದಾಗ ಅದರ ಮೇಲೆ ಎಲ್ಲ ಜಾತಿಯ ಬಿಂಬಗಳೂ ಬಿದ್ದು ಏನೋ ಒಂದು ವಿಲಕ್ಷಣ ಚಿತ್ರವಾಗುವುದು. ಕೆಟ್ಟ ಫೊಟೋಗ್ರಾಫರ್ ತೆಗೆದ ಫೋಟೋ ಹಾಗೆ ಫೋಕಸ್ ತಪ್ಪು, ಫ್ರೇಂ ತಪ್ಪು, ಎಕ್ಸ್‌ಪೋಜರ್ ತಪ್ಪು,

ನಾಷಿಂಗ್ ತಪ್ಪು, ಫಿಕ್ಸಿಂಗ್ ತಪ್ಪು, ಆಗಿರುವ ಚಿತ್ರ ಒಂದಿದೆ ಎನ್ನಿ, ಅದರ ಹಾಗೆ. ಎಷ್ಟೋ ಜನ ಬಡವರು ಮೆಣಸಿನಕಾಯಿ, ಉಪ್ಪು, ನೆಂಜಿಕೊಂಡು ಹಿಟ್ಟು ತಿಂದು ಹೊಟ್ಟೆ ತುಂಬಿಕೊಳ್ಳುತ್ತಾರೆ, ಹಾಗೆ ಈ ಕಾವ್ಯ ಸೃಷ್ಟಿ.

ಈ ಸೃಷ್ಟಿಗೆ ಕಾರಣ ಚಿತ್ತ ಕ್ಷೋಭ. ಸೃಷ್ಟಿಯಲ್ಲಿ ಕಾಣುವುದು ಕ್ಷೋಭಕಾರಣವಾದ ಪದಾರ್ಥಗಳು, ಅದರಿಂದಾಗುವ ಫಲ ಇನ್ನಷ್ಟು ಚಿತ್ತಕ್ಷೋಭೆ. ಇದು ಸಾಹಿತ್ಯವೇನು ?

ಹಾಗಾದರೆ ಸಾಹಿತ್ಯ ಯಾವುದು ಎಂದರೆ, ಒಳ್ಳೆಯ ಕುಶಲನಾದವನು ತೆಗೆದ ಫೋಟೋ ಹಾಗೆ ಸಾಹಿತ್ಯ. ಕಾವ್ಯವನ್ನು ಬರೆದವನ ಅನುಭವ ಎಷ್ಟು ವಿಸ್ತಾರವೋ ಅಷ್ಟು ವೈವಿಧ್ಯ ತುಂಬಿರುತ್ತದೆ ಅದರಲ್ಲಿ. ಆದರೆ ಆ ವೈವಿಧ್ಯ ಇಟ್ಟಿಗೆ ಗೂಡಿನ ಬಳಿ ಬಿದ್ದಿರುವ ಇಟ್ಟಿಗೆ ತುಂಡುಗಳ ವೈವಿಧ್ಯವಲ್ಲ. ಸೊಂಪಾಗಿ ಬೆಳೆದಿರುವ ಮರದ ಎಲೆ ಹೂ ಕಾಯಿ ಕೊಂಬೆಗಳಲ್ಲಿರುವ ವೈವಿಧ್ಯ. ಎಲ್ಲದಕ್ಕೂ ಒಂದೊಂದು ವ್ಯಕ್ತಿತ್ವವಿದೆ. ಆದರೂ ಭೇದವಿದೆ. ಭೇದದಲ್ಲಿ ಸಜಾತೀಯ ವಿಜಾತೀಯ ಭೇದಗಳೆರಡೂ ಇವೆ. ಆದರೆ ಒಂದಕ್ಕೊಂದು ವಿಸಂವಾದಿಗಳಲ್ಲ. ಕುಶಲನಾದವನು ತೆಗೆದ ಫೋಟೋದಲ್ಲಿ ವ್ಯಕ್ತಿಯ ವ್ಯಕ್ತಿತ್ವ ಮೂಡಿದೆ. ಕಣ್ಣಿನ ಕೊಂಕು, ಮೂಗಿನ ಸೇರ, ಬಾಯಿನ ಬೆಡಗು ಎಲ್ಲವೂ ಮೂಲಬಿಂಬದ್ದೇ. ಆದರೂ ತಟ್ಟನೆ ನೋಡುವ ಕಣ್ಣಿಗೆ ಕಾಣದ ಒಂದು ವೈಖರಿ, ಒಂದು ನಿಲುವು, ಒಂದು ಭಾವ ಹೆಚ್ಚಾಗಿದೆ. ಸುತ್ತುಮುತ್ತಿನ ಪದಾರ್ಥಗಳ ಜೋಡಣೆಯೋ, ಅಥವಾ ನೆರಳು ಬೆಳಕುಗಳ ಹೊಂದಾಣಿಕೆಯೋ, ವ್ಯಕ್ತಿಯನ್ನು ನಿಲ್ಲಿಸಿರುವ ಠೀಕೋ, ಅಂತೂ ಏನೋ ಒಂದು ಹೊಸದು, ಅನಿರ್ವಚನೀಯ, ಅಲೌಕಿಕ, ಅದು ಇದೆ. ಅದು ವ್ಯಕ್ತಿಯ ಮನಸ್ಸನ್ನು ನಮಗೆ ತೋರಿಸುತ್ತದೆ. ಅವನ ಹೃದಯದ ಪರಿಚಯ ನಮಗಾಗುತ್ತದೆ. ಅದು ಚಿತ್ರ. ಮಿಕ್ಕವೆಲ್ಲ 'ಚಿತ್ತಾರ' 'ನಾನೂ ತಿರುಮಲದೇವರ ಸೂಳೆ ಎಂಬಂತೆ.

'ವಸ್ತು ವಿಷಯಕವಾಗಿ ಇನ್ನೆರಡು ಮಾತು ಆಡಿದರೆ ತಪ್ಪಿಲ್ಲ. ಎಷ್ಟೋ ಜನರು ಸಾಹಿತ್ಯವನ್ನು ಲೋಕದ ಪ್ರತಿಬಿಂಬ; ಸಮಾಜದ ಫೊಟೋ ಏನೇನೋ ಹೇಳುತ್ತಾರೆ. ಅದನ್ನೆಲ್ಲ ಕೇಳಿದಾಗ ನನಗೇ ನಗು ಬರುತ್ತದೆ. ಇಸ್ಪೀಟು ಆಡುವಾಗ ತುರಫ್ ಯಾವುದು ಎಂದರೆ ನಾಲ್ಕರಲ್ಲಿ ಒಂದು, ಐದನೆಯದು ಬರುವ ಹಾಗೇ ಇಲ್ಲ. ಕತ್ತೆಯು ನಾಯಂತೆ ಬೊಗಳುವುದೂ ಉಂಟೇನು ? ಆಡು ಹಸುವಿನಂತೆ ಅಬ್ಬರಿಸುವುದೂ ಉಂಟೇನು ? ಹಾಗೆ. 'ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ' ಎಂಬಂತೆ. ಮನುಷ್ಯನ ಮನಸ್ಸು ಮನುಷ್ಯನನ್ನಲ್ಲದೆ ಮತ್ತೇನನ್ನು ಸೃಷ್ಟಿಸಬಲ್ಲುದು ? ವಿಪರೀತವಾದಾಗ ವಿಕಾರವನ್ನು ತೋರಿಸುವುದು ಸಹಜವಾಗಿದ್ದರೆ ಸಹಜಮಾನವನನ್ನೇ ಕಾಣುವುದು: ತೋರುವುದು. ಕನಸಿನಲ್ಲಿ ದಿನ ದಿನದ ವ್ಯವಹಾರವಲ್ಲದೆ ಮತ್ತೇನು ಬರಬೇಕು ? ತಮಿಳು ಕಲಿತವನು ರಷ್ಯನ್ ಭಾಷೆಯಲ್ಲಿ ಮಾತನಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅದ್ಯತನ ವಾಸನೆಯು ಅದ್ಯತನ ಪ್ರತೀಕವನ್ನೇ ತೋರುವುದು. ಆ ಪ್ರತೀಕವು ತಾನೆಲ್ಲಿಂದ ಬಂತೋ ಅದನ್ನೇ ತೋರುವುದು.

ಆದರೆ ಕೆಲವರು ಅದೃಷ್ಟವಂತರ ರೀತಿ ಬೇರೆ. ಸಾಮಾನ್ಯವಾಗಿ ಸಂಗೀತಗಾರರು ಸಂಗತಿಗಳನ್ನು ಹಾಕುವ ಮರ್ಮ ನಮಗೆಲ್ಲ ಗೊತ್ತು. ಆದರೆ ಕೆಲವರು ಅಪೂರ್ವವಾದ ಸಂಗತಿಗಳನ್ನು ಹಾಕಿ ರಾಗಕ್ಕೆ ಹೊಸದೊಂದು ಕಳೆಯನ್ನು ಹುಟ್ಟಿಸುತ್ತಾರೆ. ಹಾಗೆ ಹೊಸತು ತರಬೇಕಾದರೆ, ಅದ್ಯತನ ವಾಸನೆಯೇ ಯಾಕಾಗಲೊಲ್ಲದು ; ಅದನ್ನು ತನ್ನ ಬಲ್ಲಹತನದಿಂದ ಪಕ್ವಮಾಡಿ ತನ್ನ ತಪೋಬಲದಿಂದ ಊರ್ಜಿತ ಪಡಿಸಬೇಕು. ಅದರಲ್ಲೊಂದು ಚತುರಿಮಾ ಹುಟ್ಟಿಸಬೇಕು. ಮಂತ್ರಶಾಸ್ತ್ರದಲ್ಲಿ ಉಪಬೃಂಹಣಮಾಡಿ ವೀರ್ಯವತ್ತತೆಯನ್ನು ಕಲ್ಪಿಸುವ ಹಾಗೆ,ಪೂಜೆ ಮಾಡಬೇಕೆಂದ ಮೂರ್ತಿಗೆ ತನ್ನಪ್ರಾಣ ಇಂದ್ರಿಯಗಳನ್ನು ಕೊಟ್ಟು ಸಚೇತನಗೊಳಿಸಿ ತನಗೆ ಬೇಕಾದ ವರಗಳನ್ನು ಪಡೆದುಕೊಳ್ಳುವಂತೆ, ಕನ್ನಡಿಯೊಂದು ಇಟ್ಟುಕೊಂಡು ತನ್ನ ಮುಖವನ್ನು ಪ್ರತಿ

ಬಿಂಬ ಸಹಾಯದಿಂದ ಅಲಂಕರಿಸಿಕೊಳ್ಳುವಂತೆ ರಾಗದ ವರ್ಜ್ಯ ಅವರ್ಜ್ಯ ಸ್ವರಗಳನ್ನೇ ಹೊಸದಾಗಿ ಸಂವಿಧಾನ ಮಾಡಿ ಕಳೆ ಕಟ್ಟಿಸುವಂತೆ, ಪ್ರಾಣಿಗಳು ಮೆಲಕು ಹಾಕಿ ತೃಣವನ್ನು ಅಮೃತ ಮಾಡುವಂತೆ, ಚಾತುರ್ಯವನ್ನು ಪಡೆಯಲು ತನ್ನ ಅಂತರಂಗದ ಭಾವಿಯನ್ನು ತೋಡುವವನು ಇದ್ದರೆ, ಅವನು ಕವಿ, ಸಾಹಿತಿ· ಅವನ ಕರ್ಮ ಸಾಹಿತ್ಯ·

ಆ ಪುಣ್ಯವಂತನ ಕಾವ್ಯ ಒಗೆದುಬಂದ ಮಡಿಯಾದ ಬಟ್ಟೆಯಂತೆ ಶುಭ್ರವೂ ನಿರ್ಮಲವೂ ಆದ ಭಾವಗಳನ್ನು ಪ್ರತಿಬಿಂಬಿಸುವುದು. ಭಾವಗಳು ಅದೃಷ್ಟವಂತರ ವ್ಯಾಪಾರದಲ್ಲಿ ಬರುವ ಲಾಭದಂತೆ ವಿಪುಲವೂ ಸಂತತವೂ ಆಗಿದ್ದು ಭಾವ ಶಬಲತೆಯನ್ನು ತರುವುವು. ವೀಣಾವಾದನದಲ್ಲಿ ಬರುವ ತಾನಗಳು ರಾಗವನ್ನು ರಂಜಿಸುವಂತೆ ಭಾವ ಶಬಲತೆಯು ಬೆಳೆದು ಭಾವ ಸಮಾಧಿಯಾಗುವುದು. ಭಾವ ಸಮಾಧಿಯು ಪಕ್ವವಾದ ಹಣ್ಣಿನ ರಸದಂತೆ ಮಧುರವಾದ ರಸವಾಗುವುದು. ಆಗ ಕಾವ್ಯವು ಇನ್ನೊಬ್ಬರ ಮನೆಯಿಂದ ಬಂದರೂ ಗಂಡನ ಮನೆಯನ್ನು ತನ್ನದು ಮಾಡಿಕೊಂಡು ಹೊಸದೊಂದು ನಂದನವನ್ನು ಸೃಷ್ಟಿಸುವ ಮಡದಿಯಂತೆ ಲೋಕಸ್ಥಿತಿಯ ಸರೂಪವಾಗಿಯೇ ಹುಟ್ಟಿ ಬಂದಿದ್ದರೂ ಅಲೌಕಿಕವಾದ ಆನಂದವನ್ನು ತನ್ನದು ಮಾಡಿಕೊಂಡು ತಂದುಕೊಡುವುದು.

ಇನ್ನು ಉದ್ದೇಶದ ವಿಚಾರ. ಬರೆಯುವವರನೇಕರು ಲೋಕೋಪಕಾರವಾಗಲೆಂದು ಬರೆದೆವೆನ್ನುತ್ತಾರೆ. ಸತಿಪತಿಗಳ ಸಂಗಮವು ನಿರ್ವಿಘ್ನವಾಗಿ ನಡೆದರೂ ಪುತ್ರೋತ್ಪತ್ತಿಯೆಂಬ ಶುಭಫಲವು ಯಾವುದೋ ಒಂದು ಅದೃಷ್ಟ ಸುಮುಹೂರ್ತದಲ್ಲಿ ಮಾತ್ರ ಆಗುವಂತೆ ಯಾವುದೋ ಒಂದು ಕಾವ್ಯದಿಂದ ಯಾರಿಗೋ ಒಬ್ಬರಿಗೆ ಪ್ರಯೋಜನವಾಗುವುದೇ ಹೊರತು ಓದಿದವರಿಗೆಲ್ಲ ಫಲವಾಗುವುದೊಂದೇ ! ವಿನೋದವಾಗಿ ಕಾಲಯಾಪನೆ ಮಾಡುವುದು. ಈಗ ನಾವು ಸಂಗೀತವನ್ನು ಯಾವ ಉದ್ದೇಶದಿಂದ ಆರಾಧಿಸುತ್ತಿದ್ದೇವೋ ಅದೇ ಉದ್ದೇಶದಿಂದಲೇ ಸಾಹಿತ್ಯವನ್ನೂ ಆರಾಧಿಸುತ್ತಿರುವುದು. ಇನ್ನೂ ಹೆಚ್ಚಿನ ಉದ್ದೇಶವುಂಟೆಂದರೆ, ನೀರಿಲ್ಲದ ಭಾವಿಯಿಂದ ನೀರು ಸೇದಿ ಹುಯ್ದೆವೆಂದಂತೆ.

ಕಾವ್ಯ ಇರುವುದು ಮುಖ್ಯವಾಗಿ ವಚೋವೈಖರಿಯಿಂದ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದಕ್ಕೆ. ಅಲ್ಲಿಂದಾಚೆಯದೆಲ್ಲ ಪ್ರಜ್ಞಾವಾದ; ಪ್ರೌಢಿವಾದ.

ಕಾಶಿಯೆಂದರೇನು?

ಕೀರ್ತನಾಚಾರ್ಯ ಶ್ರೀ. ಬೇಲೂರು ಕೇಶವದಾಸರು, ಕಲ್ಕತ್ತಾ.

ಕಾಶಿಯೆಂದಕೂಡಲೇ ಜನಸಾಮಾನ್ಯರು—ಅದೊಂದು ಹಳೆಯ ಭಾವಿಕಜನರ ಯಾತ್ರಾಸ್ಥಳ; ಗಂಗಾನದಿಯಿದೆ; ಗ್ರಾಮ ಸಾರವೆಲ್ಲಾ ನದಿಗೇ ಹರಿಯುತ್ತಿದೆ; ದಡದಲ್ಲೇ ಹೆಣಗಳನ್ನು ಸುಡುತ್ತಾರೆ; ಲೋಹಕಣಗಳು ಮಿಶ್ರವಾಗಿರುವದರಿಂದ ನೀರು ಕೆಡುವುದಿಲ್ಲ; ಇದನ್ನರಿಯದ ಜನರು ಗಂಗಾಜಲವನ್ನು ಪವಿತ್ರವೆಂದು ನಂಬಿದ್ದಾರೆ; ಊರು ಕೊಳಕು; ಬೀದಿಗಳು ಕಿರಿದು; ಗಾಳಿ ಬೆಳಕುಗಳಿಗೆ ಎಡೆಯಿಲ್ಲ; ಹಿಂದಿನ ವಿಶ್ವನಾಥ ದೇವಾಲಯವನ್ನು ಔರಂಗಜೇಬನು ನೆಲಸಮಮಾಡಿದ; ತುರುಕರ ಭಯಕ್ಕೆ ವಿಶ್ವನಾಥನನ್ನು ಜ್ಞಾನವಾಪಿಯಲ್ಲಿ ಮುಳುಗಿಸಿದ್ದರು; ಅಹಲ್ಯಾಬಾಯಿ ಮತ್ತೆ ಪ್ರತಿಷ್ಠಿಸಿ ದೇವಾಲಯ ಕಟ್ಟಿದಳು; ಯಾತ್ರಿಕರನ್ನು ಪಂಡಾಜನಗಳು ಹಿಂಸಿಸುತ್ತಾರೆ; ಎಲ್ಲ ನಿರ್ಗತಿಕರಿಗೆ, ರೀತಿಗೆಟ್ಟವರಿಗೆ, ಆಶ್ರಯಸ್ಥಳ ಕಾಶಿ; ಎಂದು ಮೊದಲಾಗಿ ಹೇಳಿ ಬಿಡುತ್ತಾರೆ.

ಈ ಸಂಗತಿಗಳು ಸ್ವಲ್ಪ ಮಟ್ಟಿಗೆ ನಿಜ. ಇದರಿಂದ ಸರಿಯಾಗಿ ಕಾಶಿಯನ್ನು ತಿಳಿದಂತಾಗುವುದಿಲ್ಲ. ಸುಂದರ ಪುರುಷನನ್ನು ನೋಡಿ ಆನಂದಿಸಬೇಕು. ಅವನ ಅಂಗಾಲನ್ನು ನೋಡಿ ಅಲ್ಲಿ ಮಣ್ಣು ಮೆತ್ತಿದೆಯೆನ್ನಬಾರದು.

ಸತ್ಯಾಂಶವನ್ನು ವಿಚಾರಿಸೋಣ! ಪ್ರಪಂಚದ ಇತಿಹಾಸದಲ್ಲಿ ಬ್ಯಾಬಿಲೋನ್ ಈಜಿಪ್ಟು ಮೊದಲಾದ ದೇಶಗಳಲ್ಲಿ ನಾಗರಿಕತೆ ಹುಟ್ಟುವದಕ್ಕೆ ಎಷ್ಟೋ ಹಿಂದಿನಕಾಲದಲ್ಲಿ ಮಹಾ ಪಟ್ಟಣವಾಗಿತ್ತು ಕಾಶಿ. ತನ್ನ ಸಂಪತ್ತಿನಿಂದ ತನ್ನ ಸಂಸ್ಕೃತಿಯಿಂದ ತನ್ನ ಸತ್ಯಧರ್ಮಗಳಿಂದ ರಾರಾಜಿಸುತ್ತಿತ್ತು ಕಾಶಿ. ಅದೇ ಬೆಡಗಿನಿಂದ ಇಂದಿಗೂ ಬೆಳಗುತ್ತಲಿದೆ ಕಾಶಿ. ಕಾಶಿಯಷ್ಟು ಪುರಾತನ ಪಟ್ಟಣ ಪ್ರಪಂಚದಲ್ಲಿ ಮತ್ತೊಂದಿಲ್ಲ. ಸಾಮ್ರಾಜ್ಯಗಳು ಹುಟ್ಟಿದವು, ಬೆಳೆದವು, ಅಳಿದವು. ಪಟ್ಟಣಗಳು ಹುಟ್ಟಿದವು, ಬೆಳೆದವು, ಅಳಿದವು. ಶೂರರು ಹುಟ್ಟಿದರು, ಸೂರೆಮಾಡಿದರು, ನಿರ್ನಾಮರಾದರು. ಪುರಾಣ ಪುರುಷ ಸತ್ಯಹರಿಶ್ಚಂದ್ರನ ಕಾಲದಲ್ಲಿದ್ದ ಕಾಶಿ ಅದೇ ಸಂಪತ್ತಿನಿಂದ ಅದೇ ಸಂಸ್ಕೃತಿಯಿಂದ ಈಗಲೂ ವಿರಾಜಿಸುತ್ತಲಿದೆ. ಹರಿಶ್ಚಂದ್ರನ ಕಾಲದ ಗಂಗಾ ಘಾಟಿದೆ. ರೋಹಿತಾಶ್ವನು ಸರ್ಪದಷ್ಟನಾದ ಸ್ಥಳವನ್ನು ತೋರಿಸುವ ಸ್ಮಾರಕ ಶಿವಾಲಯವಿದೆ. ಅದು ವಿಶ್ವವಿದ್ಯಾಲಯದ ಬಳಿಯಲ್ಲೇ ಇದೆ. ಮಹಾತ್ಮರುಗಳಾದ ಬುದ್ಧದೇವ, ಶಂಕರಾಚಾರ್ಯ, ರಾಮಾನಂದ, ತುಲಸೀದಾಸ, ಕಬೀರದಾಸ, ಗುರುನಾನಕ, ಚೈತನ್ಯ ಮಹಾಪ್ರಭುಗಳು ಜ್ಞಾನವನ್ನು ಪಡೆದು ಉಪದೇಶಿಸಿದ ಸ್ಥಳಗಳಿವೆ. ಮಧ್ವಾಚಾರ್ಯರು, ವಲ್ಲಭಾಚಾರ್ಯರು, ಸ್ವಾಮಿ ದಯಾನಂದರು ಇದೇ ಕ್ಷೇತ್ರದಲ್ಲಿ ತಮ್ಮ ಮತಗಳನ್ನು ಪ್ರಚಾರಮಾಡಿದ್ದಾರೆ. ಕಾಲಕಾಲಕ್ಕೆಲ್ಲಿ ಘಂಟಾನಾದದಿಂದ ವಿಶ್ವನಾಥನನ್ನು ಸ್ಮರಿಸಿರೆಂದು ಎಚ್ಚರಿಸುವ ಅಗಣಿತ ದೇವಾಲಯಗಳಿವೆ. ವಿದ್ಯವನ್ನು ವಿದ್ಯಕ್ಕಾಗಿ ಕಲಿತು ಶಿಷ್ಯರಿಗಾಗಿ ಉಪದೇಶಿಸುತ್ತಿರುವ ಪಂಡಿತರ ಸಂಖ್ಯೆ ಹೇರಳವಾಗಿದೆ. ಐದು ಸಹಸ್ರಕ್ಕೆ ಮೇಲ್ಪಟ್ಟ ಸಂಖ್ಯೆಯ ವಿದ್ಯಾರ್ಥಿಗಳು ವೇದಶಾಸ್ತ್ರ ವಿದ್ಯಗಳನ್ನು ಕಲಿಯುತ್ತಿದ್ದಾರೆ. ಕಾಶಿಯ ಅರ್ಧಕ್ಷೇತ್ರದ ಒಡೆತನವನ್ನು ಪಡೆದು, ಧರ್ಮ ಪೀಠಗಳಲ್ಲಿ ಅತ್ಯಂತ ಪುರಾತನವೆನಿಸಿ, ೧,೮೦೦ ವರ್ಷಗಳ ಇತಿಹಾಸವನ್ನು ತನ್ನ ಬಳಿಯಿಟ್ಟುಕೊಂಡು, ಮೊದಲಿನಿಂದ ಕನ್ನಡ ಗುರುಗಳಿಂದಲೇ ಅಧಿಷ್ಠಿತವಾಗಿರುವ ಜಂಗಮವಾಡೀ ಜಗದ್ಗುರುಗಳ ಮಠವಿದೆ. ಶ್ರೀಮಠವು

ವೀರಶೈವರು ಮಾತ್ರರಿಗಲ್ಲದೆ ಸಕಲ ವಿದ್ವಜ್ಜನರಿಗೂ ಆಶ್ರಯಸ್ಥಾನವಾಗಿದೆ.

ಪ್ರಾಚೀನ ನಾಗರಿಕತೆಗೆ ಸಂಬಂಧಪಟ್ಟ ದೃಶ್ಯ ಹೀಗಿದೆ.

ಆಧುನಿಕ ನಾಗರಿಕತೆಗೆ ಸಂಬಂಧಪಟ್ಟ ದೃಶ್ಯ ಹೇಗಿದೆ ನೋಡೋಣ!

ಕಾಶೀವಿಶ್ವವಿದ್ಯಾಲಯ

ಬನಾರಸ್ (ವಾರಾಣಸೀ) ಹಿಂದೂ ಯೂನಿವರ್ಸಿಟಿಯೆಂಬ ಹೆಸರಿನಿಂದ ಕಾಶೀ ವಿಶ್ವವಿದ್ಯಾಲಯ ಸ್ಥಾಪಿತವಾಗಿ ಇಂದಿಗೆ ಮೂವತ್ತು ವರ್ಷಗಳಾದವು. ಸ್ಥಾನಿಕ (Residential) ವಿಶ್ವವಿದ್ಯಾಲಯಗಳಲ್ಲಿ ಇದರಷ್ಟು ದೊಡ್ಡ ವಿದ್ಯಾಲಯ ಪ್ರಪಂಚದಲ್ಲಿ ಮತ್ತೊಂದಿಲ್ಲ. ೧೩೦೦ ಎಕರೆಗಳಷ್ಟು ಜಾಗದಲ್ಲಿ ಪೌಳಿಗೋಡೆ ಕಟ್ಟಿ, ಮಹಾದ್ವಾರವಿಟ್ಟು, ೨೫ ಮೈಲಿಗಳ ರಸ್ತೆಮಾಡಿ ತನ್ನದೇ ಆದ ನಲ್ಲಿ, ವಿದ್ಯುದ್ದೀಪ, ವಿವಿಧ ವ್ಯಾಯಾಮ ಸ್ಥಾನಗಳು ಛಾತ್ರಾಲಯಗಳು ಒಂದಲ್ಲ; ಹನ್ನೆರಡು ಕಾಲೇಜುಗಳು ಔಷಧೋಪಯೋಗಿಗಳಾದ ವನಸ್ಪತಿಗಳ ವನಗಳು, ಉದ್ಯಾನಗಳು, ಒಂದೊಂದನ್ನೂ ನೋಡಿದರೆ ಅಭಿನವ ನಳಂದವೋ, ತಕ್ಷಶಿಲೆಯೋ ಎಂಬಂತೆ ರಾಜಿಸುತ್ತಿದೆ ವಿಶ್ವವಿದ್ಯಾಲಯ. ವಿಶ್ವವಿದ್ಯಾಲಯದ ಆವರಣದಲ್ಲಿರುವ, ಉದ್ದಳತೆಯಲ್ಲಿ ಒಂದೊಂದೂ ಒಂದು ಬೆಂಗಳೂರಿನ ಅಠಾರಾಕಛೇರಿಯೋ ಎಂಬಂತಿರುವ ೭ ಛಾತ್ರಾಲಯಗಳಲ್ಲಿ ೨೦೦೦ಕ್ಕೆ ಮೇಲ್ಪಟ್ಟ ಸಂಖ್ಯೆಯ ವಿದ್ಯಾರ್ಥಿಗಳಿದ್ದಾರೆ. ೩೦೦೦ದಷ್ಟು ಸಂಖ್ಯೆಯ ವಿದ್ಯಾರ್ಥಿಗಳು ಪಟ್ಟಣದಿಂದ, ಬೇರೆ ಬೇರೆ ಛಾತ್ರಾಲಯಗಳಿಂದ ಬಂದು ವಿದ್ಯಾಲಯದಲ್ಲಿ ವಿದ್ಯಾವ್ಯಾಸಂಗಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಾಣಿಹಿಂಸೆಗೆ ಅವಕಾಶವಿಲ್ಲ. ಮದ್ಯಮಾಂಸಗಳ ಸೇವನೆಯಿಲ್ಲ. ಚುಟ್ಟಬೀಡಿಗಳನ್ನು ಸೇದುವ ವಿದ್ಯಾರ್ಥಿಗಳಿಲ್ಲ.

ಆಯುರ್ವೇದ ಕಾಲೇಜು

ವಿಶ್ವವಿದ್ಯಾಲಯದ ಪ್ರಥಮ ವೈಸ್ ಛಾನ್ಸಲರಾಗಿದ್ದ ಸರ್. ಸುಂದರಲಾಲರ ಹೆಸರಿನಲ್ಲಿ ಆಯುರ್ವೇದ ಕಾಲೇಜು ಶಾಸ್ತ್ರೀಯ ಶಿಕ್ಷಣಕೊಡುತ್ತಿದೆ. ಪ್ರಯೋಗ ಪರಿಶೀಲನೆಗಳು ಆಧುನಿಕ ರೀತಿಯಲ್ಲಿ ನಡೆಯುತ್ತಿವೆ. ಶಸ್ತ್ರ ಚಿಕಿತ್ಸೆ ಮೊದಲಾದವುಗಳನ್ನೆಲ್ಲಾ ಕಲಿತು ಆಧುನಿಕ ಇಂಗ್ಲೀಷ್ ವೈದ್ಯರ ಸರಿದೂಗುವ ಆಯುರ್ವೇದ ವೈದ್ಯರು ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯಲವಕಾಶವಿದೆ. ಕಣ್ಣು ಮೂಗು, ಕಿವಿ, ಗಂಟಲು, ಚಿಕಿತ್ಸೆಗಳಿಗೆಲ್ಲಾ ಶಿಕ್ಷಣ ಪಡೆಯಲು ವೈದ್ಯಾಲಯದಲ್ಲಿ ಅವಕಾಶವಿದೆ. ಈ ಒಂದು ಕಾಲೇಜಿನಲ್ಲಿ ವ್ಯಾಸಂಗಮಾಡುವರ ಸಂಖ್ಯೆ ೩೦೦ರಷ್ಟಿದೆ. ಆರುವರ್ಷ ಶಿಕ್ಷಣಪಡೆದು ತೇರ್ಗಡೆಯಾದವನು ಆಯುರ್ವೇದಾಚಾರ್ಯನಾಗುತ್ತಾನೆ.

ಸಾರಾಂಶ

ಹಿಂದೂ ವಿಶ್ವವಿದ್ಯಾಲಯದಲ್ಲಿ ಏನೇನು ಕಲಿಯಬೇಕೋ ಎಲ್ಲಕ್ಕೂ ಕಾಲೇಜುಗಳಿವೆ. ಪ್ರಾಚೀನಪದ್ಧತಿಯಂತೆ ವೇದಶಾಸ್ತ್ರಾಭ್ಯಾಸಮಾಡುವವರಿಗೆ ಪ್ರತ್ಯೇಕ ಛಾತ್ರಾಲಯವೇ ಇದೆ. ಶಾಸ್ತ್ರಾಭ್ಯಾಸಿಗಳಿಗೆ ಬಾಡಿಗೆಯಿಲ್ಲದೆ ವಾಸಮಾಡುವ ವಿಶೇಷ ಅವಕಾಶವಿದೆ. ಅನೇಕರಿಗೆ ಮಾಸವೇತನಗಳೂ ದೊರೆಯುತ್ತವೆ.

ಸರಸ್ವತೀಭಂಡಾರ ನೋಡಿದರೆ ಅದೂ ಪ್ರಶಂಸನೀಯವಾಗಿದೆ. ಮೂರು ಲಕ್ಷಕ್ಕೆ ಮಿಾರಿದ ಪುಸ್ತಕಗಳ ಸಂಗ್ರಹವಿದೆ. ಮೊಗಲಾಯರ ಕಾಲದ ರಾಜಪುತ್ರರಕಾಲದ ಅಪೂರ್ವ ಚಿತ್ರಪಟಗಳಿವೆ.

ಸ್ತ್ರೀಯರಿಗಾಗಿ

ಸ್ತ್ರೀಯರಿಗಾಗಿ ಪ್ರತ್ಯೇಕ ಛಾತ್ರಾಲಯ ಕಾಲೇಜುಗಳು ಎತ್ತರವಾದ ಪೌಳಿಯೊಳಗೆ ನಿರ್ಮಿತವಾಗಿ ಉಚ್ಚಶಿಕ್ಷಣವೆಲ್ಲಾ ದೊರೆಯುತ್ತಿದೆ.

ಒಂದೇ ಮಾತಿನಿಂದ ಹೇಳುವದಾದರೆ "ಹಿಂದೂ ವಿಶ್ವವಿದ್ಯಾಲಯ" ಕಲ್ಪತರುವಿನಂತಿದೆ. ಇದರ ನಿರ್ಮಾತರು ಮಹಾಮನ ಪಂಡಿತ ಮದನಮೋಹನ ಮಾಲವೀಯರು ದೇವೇಂದ್ರನಂತಿದ್ದಾರೆ. ವೃದ್ಧಪಿತಾಮಹ ಕರ್ಮಯೋಗಿ ಮಾಲವೀಯರ ದರ್ಶನ ಭಾಷಣಗಳು ಮಾನವನ ಜನ್ಮದಲ್ಲಿ ದೊರೆಯಬಹುದಾದ ಭಾಗ್ಯಗಳಲ್ಲೊಂದಾಗಿದೆ. ಕಾಶೀಯಾತ್ರೆ ಮಾಡುವವರಿಗೆ ವಿಶ್ವವಿದ್ಯಾಲಯವೇ ಕ್ಷೇತ್ರ; ಮಾಲವೀಯರೇ ಮಾತನಾಡುವ ವಿಶ್ವನಾಥ, ಅವರ ವಾಣಿಯೇ ಗಂಗಾ, ಎನ್ನುವಂತಿದೆ.

ಇದು ಕಾಶೀ

ಹಿಂದೂ ಕಾಯಿದೆ ಸುಧಾರಣೆ

ಮತ್ತು

ಮಹಿಳೆಯರ ಹಕ್ಕುಗಳು

ಶ್ರೀ. ಕೌಲಗಿ ಶೇಷಾಚಾರ್ಯ ಎಂ.ಎ., ಮೈಸೂರು.

ಈಗ ವ್ಯವಹಾರದಲ್ಲಿರುವ ಹಿಂದೂ ಕಾಯಿದೆಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದು ಹಿಂದೂ ಕಾಯದೆಯನ್ನು ಪರಿಷ್ಕರಣ ಮಾಡುವ ಉದ್ದೇಶದಿಂದ ಇಂಡಿಯಾ ಸರ್ಕಾರದವರು ಸರ್ ಬಿ. ಎನ್. ರಾವ್ ಅವರ ಅಧ್ಯಕ್ಷತೆಯಲ್ಲಿ ಹಿಂದೂ ಕಾಯದೆ ಸಮಿತಿಯನ್ನು ನೇಮಿಸಿದರು. ಈ ಸಮಿತಿಯವರು ಸುಮಾರು ಒಂದು ವರ್ಷದ ಹಿಂದೆ ತಾವು ಕಲ್ಪಿಸಿರುವ ಹಿಂದೂ ಕಾಯದೆ ಸುಧಾರಣೆಗಳ ಕ್ರೋಢ ಪತ್ರವನ್ನು ಇಂಗ್ಲೀಷಿನಲ್ಲಿ ಪ್ರಕಾಶ ಪಡಿಸಿದರು. ಇದು 'Draft Hindu Code' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ರಾವ್ ಸಮಿತಿಯವರ 'Draft Hindu Code'ನಲ್ಲಿ ಸೂಚಿಸಿರುವ ಸುಧಾರಣೆಗಳು ಮಹಿಳೆಯರ ಸಾಂಸ್ಕೃತಿಕ ಮತ್ತು ಆರ್ಥಿಕ ದೃಷ್ಟಿಗಳಿಂದ ಎಷ್ಟರಮಟ್ಟಿಗೆ ಸಾಧಕ ಬಾಧಕಗಳೆಂಬುದನ್ನು ವಿವೇಚನೆ ಮಾಡುವುದೇ ಈ ಭಾಷಣದ ಉದ್ದೇಶ.

ಈಗ ಇರುವ ಹಿಂದೂ ಕಾಯದೆ ಪ್ರಕಾರ ಸಾಮಾನ್ಯವಾಗಿ ಗಂಡಸರಂತೆ ಹೆಂಗಸರು ಆಸ್ತಿಗೆ ವಾರಸದಾರರಾಗಲು ಸಾಧ್ಯವಿಲ್ಲ. ಉದಾಹರಣೆಗೆ ಬಂಗಾಳಾ ಪ್ರಾಂತದಲ್ಲಿ ಸಹೋದರಿಯಾವಾಗಲೂ ಆಸ್ತಿಗೆ ಹಕ್ಕುದಾರಳಾಗುವುದಿಲ್ಲ. ಮೃತನ ಆಸ್ತಿ ಒಂದು ವೇಳೆ ಸರ್ಕಾರಕ್ಕೆ ಸೇರುವುದೇ ಹೊರತು ಆತನ ಸಹೋದರಿಗೆ ಸೇರುವುದೇ ಇಲ್ಲ. ಮಹಿಳೆಯರ ಈ ಅನ್ಯಾಯ ಪರಿಸ್ಥಿತಿಯನ್ನು ಹೋಗಲಾಡಿಸಿ ರಾವ್ ಸಮಿತಿಯ ಸುಧಾರಣೆಯಲ್ಲಿ ಸ್ತ್ರೀಯರೂ ಗಂಡಸರಂತೆ ಆಸ್ತಿಗೆ ಹಕ್ಕುದಾರರೆಂಬುದನ್ನು ವ್ಯವಸ್ಥೆ ಮಾಡಲಾಗಿದೆ.

ಹಿಂದೂ ಕಾಯದೆಯಲ್ಲಿ ಸ್ತ್ರೀಧನ ಎಂಬ ಶಬ್ದಕ್ಕೆ ಎರಡು ಅರ್ಥಗಳಿವೆ. ಸ್ತ್ರೀಧನವೆಂದರೆ ಸ್ತ್ರೀಗೆ ಸಂಬಂಧಪಟ್ಟ ಹಣ, ಅಥವಾ ಆಸ್ತಿ ಎಂದು ಸಾಮಾನ್ಯ ಅರ್ಥವಿದೆ. ಆದರೆ ಹಿಂದೂ ಕಾಯದೆಯಲ್ಲಿ ಸ್ತ್ರೀಧನ ಎಂಬ ಶಬ್ದಕ್ಕೆ ಒಂದು ವಿಶಿಷ್ಟ ಪಾರಿಭಾಷಿಕ ಅರ್ಥವನ್ನು ಕೊಡಲಾಗಿದೆ. ಇದರ ಪ್ರಕಾರ ಯಾವ ಸಂಪಾದನೆ ಮೇಲೆ ಪೂರ್ಣ ಅಧಿಕಾರವಿದ್ದು ದಾನಧರ್ಮಾದಿಗಳನ್ನು ಮಾಡುವುದಕ್ಕಾಗಲಿ ಅಥವಾ ಖರೀದಿ ಮುಂತಾದವುಗಳನ್ನು ಮಾಡುವುದಕ್ಕಾಗಲಿ ಸಂಪೂರ್ಣ ಸ್ವಾತಂತ್ರ್ಯವಿದೆಯೋ ಅಂಥಾ ಸ್ತ್ರೀ ಸಂಪಾದನೆಗೆ ಸ್ತ್ರೀಧನವೆಂದು ಹೆಸರು. ಈ ಸ್ತ್ರೀಧನವುಳ್ಳ ಮಹಿಳೆಯ ಮರಣಾನಂತರ ಈಕೆಯ ಸ್ತ್ರೀಧನವು ಈಕೆಯ ಸ್ವತಂತ್ರ ವಾರಸುದಾರರಿಗೆ ಸೇರುತ್ತದೆ.

ಸ್ತ್ರೀಯರಿಗೆ ಬೇರೆ ವಿಧದಿಂದ ಬರುವ ಆಸ್ತಿಗೂ ಸ್ತ್ರೀಧನವೆಂದು ಹೆಸರು ಇದಕ್ಕೆ ಇಂಗ್ಲೀಷಿನಲ್ಲಿ widows' estate ಅಥವಾ limited estate. ಎಂದು ವ್ಯವಹಾರವಿದೆ. ಅಂದರೆ ವಿಧವೆಯ ಆಸ್ತಿ ಅಥವಾ ಪರಿಮಿತ ಹಕ್ಕಿನ ಆಸ್ತಿ ಎಂದು ಹೇಳಬಹುದು. ಈ ಪರಿಮಿತವಾದ ಹಕ್ಕಿನ ಆಸ್ತಿಯ ಮೇಲೆ ಸ್ತ್ರೀಯರಿಗೆ ಸಂಪೂರ್ಣ ಸ್ವಾಮಿತ್ವವಿರುವುದಿಲ್ಲ. ತಮ್ಮ ಇಷ್ಟದಂತೆ ಈ ಆಸ್ತಿಯನ್ನು ವಿನಿಯೋಗಿಸಲು ಅಧಿಕಾರವಿರುವುದಿಲ್ಲ. ಈ ಆಸ್ತಿಯನ್ನು

ಗಳಿಸಿರುವ ಮಹಿಳೆ ಸತ್ತಮೇಲೆ ಆಕೆಯ ಆಸ್ತಿ, ಆಕೆಯ ವಾರಸುದಾರರಿಗೆ ಸೇರದೆ ಆಕೆಯ ಗಂಡನ ವಾರಸುದಾರರಿಗೆ ಸೇರುತ್ತದೆ. ರಾವ್ ಸಮಿತಿಯವರು limited estate ಅಥವಾ ಪರಿಮಿತವಾದ ಹಕ್ಕಿನ ಆಸ್ತಿ ಎಂಬುದನ್ನು ರದ್ದುಗೊಳಿಸಿ ಸ್ತ್ರೀಯರ ವಶದಲ್ಲಿರುವ ಸ್ತ್ರೀಧನಕ್ಕೂ ಮತ್ತು ಸ್ತ್ರೀಯರ ಸ್ವಾಧೀನಕ್ಕೆ ಬರುವ ಆಸ್ತಿಗೂ ಸ್ತ್ರೀಯರು ಸಂಪೂರ್ಣ ಮಾಲೀಕರೆಂದು ಸುಧಾರಣೆಯನ್ನು ತಂದಿದ್ದಾರೆ. ಇದಕ್ಕೆ Absolute ownership ಎಂದು ಹೆಸರು. ಈ ಸುಧಾರಣೆ ಅತ್ಯಂತ ಕ್ರಾಂತಿಕಾರಕವೆಂದೇ ಹೇಳಬೇಕು. ಪರಿಮಿತ ಹಕ್ಕಿನ ಆಸ್ತಿ ಎಂಬ ತತ್ವಕ್ಕೆ ಪ್ರಾಚೀನ ಧರ್ಮಶಾಸ್ತ್ರಗಳಲ್ಲಿ ಸ್ವಲ್ಪವೂ ಆಧಾರವಿಲ್ಲವೆಂದೂ, ಈ ತತ್ವವನ್ನು ಬ್ರಿಟಿಷ್ ನ್ಯಾಯಾಧೀಶರು ಕಲ್ಪಿಸಿದ್ದೆಂದೂ ಮದರಾಸ್ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಸರ್ ಎಂ. ವೆಂಕಟಸುಬ್ಬರಾಯರು ಅಭಿಪ್ರಾಯಪಟ್ಟಿದ್ದಾರೆ.

The doctrine of limited estate is thus a pure creation by Judicial decisions unsupported by ancient Shassras (The Madras Law Journal Golden Jubilee number (Page 42)

ಡಾ॥ ಕಾಶೀಪ್ರಸಾದ್ ಜಯಸ್ವಾಲ್‌ರವರು ತಮ್ಮ ಮನು ಮತ್ತು ಯಾಜ್ಞವಲ್ಕ್ಯ ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ. All the Commentators are equally guilty in reducing the right of the widows to a limited estate. ಅಂದರೆ ವಿಧವೆಗೆ ತನ್ನ ಆಸ್ತಿ ಮೇಲೆ ಪರಿಮಿತವಾದ ಹಕ್ಕು ಮಾತ್ರವಿದೆ ಎಂದು ಪ್ರತಿಪಾದಿಸುವ ಎಲ್ಲಾ ಧರ್ಮಶಾಸ್ತ್ರದ ಟೀಕಾಕಾರರೂ ಸಮಾನ ತಪ್ಪಿತಸ್ಥರೆಂದು ಹೇಳಿದ್ದಾರೆ. ನ್ಯಾಯಾಸ್ಥಾನಗಳಲ್ಲಿ ತೀರ್ಪಿಗೆ ಬರುವ ಸ್ತ್ರೀಯರ ಪರಿಮಿತವಾದ ಹಕ್ಕಿಗೆ ಸಂಬಂಧಪಟ್ಟ ವ್ಯವಹಾರಗಳಿಗಿಂತ ಹೆಚ್ಚಾಗಿ ಇರುತ್ತವೆಂದು ಕಲ್ಕತ್ತ ಹೈಕೋರ್ಟ್ ಮಾಜೀ ನ್ಯಾಯಾಧೀಶರಾದ ಶ್ರೀ॥ ದ್ವಾರಕಾನಾಥ ಮಿತ್ರರವರು ಬರೆದಿದ್ದಾರೆ.

The Cases relating to the extent and nature of woman's estate which come before our courts are more numerous than all other cases on Hindu law put together. ಸ್ತ್ರೀಯರ ಹಕ್ಕಿನ ದೃಷ್ಟಿಯಿಂದ ಈಗ ತಿಳಿಸಿದ ಈ ಎರಡು ಸುಧಾರಣೆಗಳೂ ಬಹಳ ಮಹತ್ವವಾದವುಗಳು.

ವಾರಸಕ್ರಮದ ಸುಧಾರಣೆಗಳು

ದೇಶಮುಖ್ ಕಾಯದೆ ರೂಢಿಗೆ ಬರುವುದಕ್ಕೆ ಮೊದಲು ಹಿಂದೂ ವಿಧವೆಯರ ಸ್ಥಿತಿ ಸಮಾಜದಲ್ಲಿ ಬಹಳ ಅನುಕಂಪನೀಯವಾಗಿತ್ತು. ದೇಶಮುಖ್‌ರವರ ಕಾಯದೆ ವಿಧವೆಯರ ಆರ್ಥಿಕ ಹಕ್ಕಿನ ವಿಷಯದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡಿತು. ಇದರಂತೆ ವಿಧವೆಗೆ ತನ್ನ ಗಂಡನ ಆಸ್ತಿಯಲ್ಲಿ ತನ್ನ ಮಗನಷ್ಟು ವಾರಸ ಹಕ್ಕು ಇದೆ.

ಅವಿಭಕ್ತ ಕುಟುಂಬದಲ್ಲಿ ಯಜಮಾನನು ಮಕ್ಕಳಿಲ್ಲದೆ ಮರಣ ಹೊಂದಿದರೆ ಆತನ ಆಸ್ತಿಗೆ ಆತನ ಹೆಂಡತಿ ಹಕ್ಕುದಾರಳಾಗುತ್ತಾಳೆ. ಯಜಮಾನನಿಗೆ ಹೆಂಡತಿ, ಮಗ, ವಿಧವೆಯಾದ ಸೊಸೆ ಈ ಸೊಸೆಯ ವಿಧವೆಯಾದ ಸೊಸೆ, ಮತ್ತು ಮಗಳು ಇವರಿಷ್ಟೂ ಇರುವುದಾದರೆ, ಮಗಳನ್ನು ಬಿಟ್ಟು ಬಾಕಿ ಎಲ್ಲರೂ ಯಜಮಾನನು ಸತ್ತಮೇಲೆ ಆತನ ಆಸ್ತಿಗೆ ಸಮಾನ ಹಕ್ಕುದಾರರಾಗುತ್ತಾರೆ. ಆದರೆ ರಾವ್ ಸಮಿತಿಯವರು ಸೂಚಿಸಿರುವ ಸುಧಾರಣೆಯಲ್ಲಿ ಮೃತನ ಹೆಂಡತಿ ಮಗ ಮತ್ತು ಮಗಳು ಈ ಮೂವರೂ ಆತನ ಆಸ್ತಿಗೆ ಒಟ್ಟಿಗೆ ಹಕ್ಕುದಾರರಾಗುತ್ತಾರೆ. ಇವರಿಗೆ Simultaneons heirs ಎಂದು ಹೆಸರು. ಮಗನಿಗೆ ಬರುವ ಆಸ್ತಿಯ ಹಿಸ್ಸೆಯಲ್ಲಿ ಅರ್ಧದಷ್ಟು ಮಗಳಿಗೆ ಸಲ್ಲುತ್ತದೆ. ದೇಶಮುಖ್ ಕಾಯದೆಯಲ್ಲಿ ಮೃತನ ವಿಧವೆಯಾದ ಸೊಸೆಗೂ ಮತ್ತು ಈ ಸೊಸೆಯ ವಿಧವೆಯಾದ ಸೊಸೆಗೂ ಕೊಟ್ಟಿದ್ದ ವಾರಸ ಹಕ್ಕನ್ನು ರದ್ದುಪಡಿಸಿ ಇವರು ಜೀವನಾಂಶಕ್ಕೆ ಮಾತ್ರ ಬಾಧ್ಯರೆಂದು ರಾವ್ ಸಮಿತಿಯ

ವರು ನಿರ್ಧರಿಸಿದ್ದಾರೆ. ಅಲ್ಲದೆ ಮೃತನ ಮಗಳಿಗೆ ವಾರಸ ಹಕ್ಕನ್ನು ಕೊಟ್ಟಿರುತ್ತಾರೆ. ಹಿಂದೆ ಹೇಳಿದಂತೆ ಮಗಳಿಗೆ ಮಗನ ಹಿಸ್ಸೆಯ ಅರ್ಧದಷ್ಟು ಮಾತ್ರ ಆಸ್ತಿ ಸಲ್ಲುತ್ತದೆ. ವಿಧವೆಯಾದ ಸೊಸೆಗೂ ಈ ಸೊಸೆಯ ವಿಧವೆಯಾದ ಸೊಸೆಗೂ ಇದ್ದ ವಾರಸ ಹಕ್ಕನ್ನು ರದ್ದುಪಡಿಸಿ ಇವರು ಜೀವನಾಂಶಕ್ಕೆ ಮಾತ್ರ ಬಾಧ್ಯರೆಂದು ರಾವ್ ಸಮಿತಿಯವರು ನಿರ್ಧರಿಸಿದ್ದಾರೆ. ಅಲ್ಲದೆ ಮೃತನ ಮಗಳಿಗೆ ವಾರಸ ಹಕ್ಕನ್ನು ಕೊಟ್ಟಿರುತ್ತಾರೆ. ಹಿಂದೆ ಹೇಳಿದಂತೆ ಮಗಳಿಗೆ ಮಗನ ಹಿಸ್ಸೆಯ ಅರ್ಧದಷ್ಟು ಮಾತ್ರ ಆಸ್ತಿ ಸಲ್ಲುತ್ತದೆ. ವಿಧವೆಯಾದ ಸೊಸೆಗೂ, ಈ ಸೊಸೆಯ ವಿಧವೆಯಾದ ಸೊಸೆಗೂ ಇದ್ದ ವಾರಸ ಹಕ್ಕನ್ನು ತೆಗೆದುಹಾಕಿ ಮಗಳಿಗೆ ವಾರಸ ಹಕ್ಕನ್ನು ಕೊಟ್ಟಿರುವುದು ಸ್ತ್ರೀಯರ ಆರ್ಥಿಕ ದೃಷ್ಟಿಯಿಂದ ಇದು ಎಷ್ಟರಮಟ್ಟಿಗೆ ಸಾಧಕವೆಂಬುದನ್ನು ವಿಚಾರಶೀಲರಾದ ಮಹಿಳೆಯರು ಯೋಚಿಸಬೇಕಾದ ವಿಷಯ. ವಾರಸ ಹಕ್ಕನ್ನು ಪಡೆಯುವ ಮಗಳು ವಿವಾಹಿತಳಾಗಿರಬಹುದು ಅಥವಾ ಇಲ್ಲದಿರಬಹುದು. ವಿಧವೆಯಾಗಿರಬಹುದು. ಶ್ರೀಮಂತಳಾಗಿರಬಹುದು; ಬಡವಳಾಗಿರಬಹುದು, ಮಕ್ಕಳನ್ನು ಪಡೆದಿರಬಹುದು, ಮಕ್ಕಳಿಲ್ಲದೆ ಇರಬಹುದು ಅಥವಾ ಮಕ್ಕಳನ್ನು ಪಡೆಯುವ ಸ್ಥಿತಿಯಲ್ಲಿರಬಹುದು. ಇಂಥಾ ಯಾವ ಪರಿಸ್ಥಿತಿಯಲ್ಲೂ ಮಗಳು ತನ್ನ ತಂದೆ ಆಸ್ತಿಗೆ ಹಕ್ಕುದಾರಳಾಗುತ್ತಾಳೆ.

ವಾರಸುದಾರರ ಪಟ್ಟಿಯಲ್ಲಿ ಮಗನ ಮಗಳಿಗೂ ಮತ್ತು ಮಗಳ ಮಗಳಿಗೂ ಉಚ್ಚಸ್ಥಾನಗಳನ್ನು ಕೊಡಲಾಗಿದೆ. ಸ್ವಾಭಾವಿಕ ಪ್ರೇಮಾಕರ್ಷಣೆ ಯಾವ ಮಕ್ಕಳಲ್ಲಿ ಹೆಚ್ಚಾಗಿದೆಯೋ ಆ ಮಕ್ಕಳನ್ನು ಸಮೀಪದ ವಾರಸುದಾರರೆಂದು ಪರಿಗಣಿಸಲಾಗಿದೆ. ಉದಾಹರಣೆಗೆ ತಮ್ಮನ ಮಗನ ಮಗನಿಗಿಂತ ಮಗಳ ಮಗಳು ಸಮೀಪದ ವಾರಸದಾರಳಾಗುತ್ತಾಳೆ.

ಸ್ತ್ರೀಧನ

ಸ್ತ್ರೀಧನದ ಸಂಬಂಧವಾಗಿ ಈಗಿರುವ ಕಾಯದೆ ಅಷ್ಟು ವ್ಯವಸ್ಥಿತವಾಗಿಲ್ಲ. ಸ್ತ್ರೀಯಾದವಳು ತಾನು ಕುಮಾರಿಯಾಗಿದ್ದಾಗಲೋ ಸೌಭಾಗ್ಯವತಿಯಾಗಿದ್ದಾಗಲೋ ಅಥವಾ ವಿಧವೆಯಾಗಿದ್ದಾಗಲೋ-ಯಾವ ಸಂದರ್ಭದಲ್ಲಿ ಆಸ್ತಿಯನ್ನು ಗಳಿಸಿರುತ್ತಾಳೆಂಬುದನ್ನು ಮೊದಲು ನಿಶ್ಚಯಿಸಿ ಅನಂತರ ಈ ಸ್ತ್ರೀಧನ ವಾರಸ ಕ್ರಮವನ್ನು ನಿಶ್ಚಯಿಸಬೇಕು. ಆದರೆ ಈ ಬಗ್ಗೆ ರಾವ್ ಸಮಿತಿಯವರು ಸೂಚಿಸಿರುವ ಸುಧಾರಣೆ ಬಹಳ ಗಮನಾರ್ಹವಾಗಿದೆ. ಸ್ತ್ರೀಧನದ ಲಕ್ಷಣವನ್ನು ಈ ರೀತಿ ಹೇಳಿದ್ದಾರೆ.

Stridhana means property of a woman, howsoever acquired, whether by inheritence or devise or at a partition, in lieu of maintenance or arrears of maintenance, by gift from a relative or stranger, before, at, or after her marriage, by her own skill or exertions, by pur-chase, by prescription, or by any other mode.

ಸ್ತ್ರೀಯರಿಗೆ ವಾರಸ ಕ್ರಮದಿಂದ ಬಂದ ಆಸ್ತಿ ಜೀವನಾಂಶಕ್ಕಾಗಿ ಬಂದ ಆಸ್ತಿ, ಮದುವೆಗೆ ಮೊದಲು, ಮದುವೆ ಕಾಲದಲ್ಲಿ ಅಥವಾ ಮದುವೆ ಆದ ಮೇಲೆ ನೆಂಟರಿಷ್ಟರಿಂದ ಕೊಡಲ್ಪಟ್ಟ ನಗ ನಾಣ್ಯಗಳು, ಸ್ತ್ರೀ ತನ್ನ ಕೌಶಲ್ಯದಿಂದ ಮತ್ತು ಶ್ರಮದಿಂದ ಸಂಪಾದಿಸಿದ ಹಣ, ಮತ್ತು ಬೆಲೆಗೆ ಕೊಂಡ ಆಸ್ತಿ ಮತ್ತು ಇನ್ಯಾವ ವಿಧದಿಂದಲೋ ಗಳಿಸಿದ ಆಸ್ತಿ—ಇವೆಲ್ಲವೂ ಸ್ತ್ರೀ ಧನದಲ್ಲಿ ಅಂತರ್ಗತವಾಗುತ್ತವೆ.

ಸ್ತ್ರೀಧನದ ಮೇಲೆ ಸ್ತ್ರೀಯರ ಹಕ್ಕು ಪರಿಮಿತವಾಗಿರದೆ ಪೂರ್ಣವಾಗಿದೆಯೆಂದು ಹಿಂದೆ ತಿಳಿಸಿದೆ. ರಾವ್ ಸಮಿತಿಯವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

A woman shall have the same rights over Stridhana acquired by her after the commencement of this Code including the right to dispose of it by tiransfer inter vivos or by will, as a

man has over property acpuired by him in the like manner, that is to say a woman's rights over Stridhana shall not be deemed to be restricted in any respect whatsoever by reason only of her sex.

ಈಗ ಜಾರಿಯಲ್ಲಿರುವ ಕಾಯದೆ ಪ್ರಕಾರ, ಗಂಡನಿಂದ ತ್ಯಜಿಸಲ್ಪಟ್ಟ ಹೆಂಗಸು ಸ್ವತಃ ದುಡಿದು ಹಣ ಗಳಿಸಿದ್ದರೂ ಈ ಹಣದ ಮೇಲೆ ಗಂಡನ ಅಧಿಕಾರವಿರುತ್ತದೆ. ಈ ಆಪತ್ತನ್ನು ರಾವ್ ಸಮಿತಿಯವರು ನಿವಾರಣೆ ಮಾಡಿದ್ದಾರೆ.

ಜೀವನಾಂಶ ವಿಚಾರ

ಮದುವೆ ಆಗದೆ ಇರುವ ಮಗಳು ಮದುವೆ ಆಗುವ ತನಕ ಆಕೆ ಜೀವನಾಂಶಕ್ಕೆ ಹಕ್ಕುದಾರಳೆಂಬುದನ್ನು ರಾವ್ ಸಮಿತಿಯವರು ಸೂಚಿಸಿದ್ದಾರೆ. ಹಾಗೆಯೇ ವಿಧವೆಯಾದ ಮಗಳು ಮತ್ತು ವಿಧವೆಯಾದ ಸೊಸೆ ಇವರಿಬ್ಬರಿಗೂ ಜೀವನಕ್ಕೆ ಯಾವ ವಿಧವಾದ ಆಧಾರವೂ ಇಲ್ಲದಿರುವಾಗ ಮೃತನ ಆಸ್ತಿಯಿಂದ ಜೀವನಾಂಶ ಪಡೆಯತಕ್ಕ ಹಕ್ಕನ್ನು ಕೊಡಲಾಗಿದೆ ಇಷ್ಟೇ ಅಲ್ಲ. ಮೃತನ ಅನೌರಸ ಮಗಳಿಗೂ ಮತ್ತು ರಖಾವುದಾರಳಿಗೂ ಜೀವನಾಂಶ ಕೊಡಬೇಕೆಂದು ರ್‍ರಾವ್ ಸಮಿತಿಯವರು ನಿರ್ಧರಿಸಿದ್ದಾರೆ.

Any unmarried illegitimate daughter, so long as she remains unmarried. a comcubine kept continuously by the deceased up to the time of his death so long as she remains chaste and does not marry or remarry provided that this connection was not incestuous or adulterous.

ರಾವ್ ಸಮಿತಿಯವರು ಜೀವನಾಂಶ ವಿಚಾರದಲ್ಲಿ ಎಷ್ಟರಮಟ್ಟಿನ ಔದಾರ್ಯವನ್ನು ತೋರಿಸಿದ್ದಾರೆಂಬುದು ಇದರಿಂದ ಸ್ಪಷ್ಟವಾಗಿದೆ.

ವಿವಾಹಕ್ಕೆ ಸಂಬಂಧಪಟ್ಟ ಸುಧಾರಣೆಗಳು

ರಾವ್ ಸಮಿತಿಯವರು ಎರಡು ವಿಧವಾದ ವಿವಾಹಗಳನ್ನು ಅಂಗೀಕರಿಸಿದ್ದಾರೆ. ಒಂದು ಸಂಸ್ಕಾರ ರೂಪವಾದ ವಿವಾಹ ಮತ್ತೊಂದು ಕರಾರು ರೂಪವಾದ ವಿವಾಹ ಇವುಗಳಿಗೆ ಕ್ರಮವಾಗಿ ಇಂಗ್ಲಿಷಿನಲ್ಲಿ Sacremental marriage and civil marriage ಎಂದು ಹೇಳುತ್ತಾರೆ. ಸ್ತ್ರೀಯರ ಹಿತದೃಷ್ಟಿಯಿಂದ ಗಂಡಸರು ಕಡ್ಡಾಯವಾಗಿ ಏಕಪತ್ನಿವ್ರತವನ್ನು ಪಾಲಿಸಬೇಕೆಂಬ ಸದುದ್ದೇಶದಿಂದ ರಾವ್ ಸಮಿತಿಯವರು ಸುಧಾರಣೆಯೊಂದನ್ನು ಸೂಚಿಸಿದ್ದಾರೆ. Neither party must have a spouse living at the time of the marriage, ಅಂದರೆ ಸಂಸ್ಕಾರರೂಪವಾದ ವಿವಾಹವನ್ನು ಮಾಡಿಕೊಳ್ಳುವ ಸ್ತ್ರೀಪುರುಷರಿಗೆ ವಿವಾಹ ಕಾಲದಲ್ಲಿ ಸ್ತ್ರೀಗೆ ಪತಿಯಾಗಲಿ ಪುರುಷನಿಗೆ ಪತ್ನಿಯಾಗಲಿ ಜೀವಂತರಾಗಿರಬಾರದು. ಏಕಪತ್ನಿ ವ್ರತವನ್ನು ಸರಿಯಾದ ಕಾರಣಗಳಿಲ್ಲದೆ ಭಂಗ ಮಾಡಿ ಮತ್ತೆ ಮದುವೆ ಮಾಡಿಕೊಳ್ಳುವವರಿಗೆ ಕಾನೂನಿನ ಮೂಲಕ ಶಿಕ್ಷೆ ವಿಧಿಸುವುದು ಉಚಿತವೇ ಅಥವಾ ಏಕಪತ್ನಿ ವ್ರತವನ್ನು ಕಾನೂನಿನ ಮೂಲಕ ಒತ್ತಾಯಪಡಿಸುವುದು ಸರಿಯೇ ಎಂಬುದು ವಿಚಾರಾರ್ಹವಾದ ವಿಷಯ. ಮೇಲೆ ಹೇಳಿದ ನಿಯಮಕ್ಕೆ ಅಪವಾದ ಸಂದರ್ಭಗಳಾವುವನ್ನೂ ಸೂಚಿಸದೆ ಇರುವುದರಿಂದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಗಳಿಂದ ಅನೇಕ ತೊಂದರೆಗಳು ಉದ್ಭವಿಸಲು ಅವಕಾಶವಿದೆ. ಉದಾಹರಣೆಗೆ. ಮೊದಲನೆ ಹೆಂಡತಿಯಿಂದ ಮಕ್ಕಳಾಗದೇ ಇದ್ದರೆ ಈಕೆ ಬದುಕಿರುವ ತನಕ ಗಂಡನು ಬೇರೆ ಮದುವೆ ಮಾಡಿಕೊಳ್ಳುವಂತಿಲ್ಲ.

ಮದುವೆಯಾಗತಕ್ಕ ಸ್ತ್ರೀಪುರುಷರು ಭಿನ್ನ ಜಾತೀಯರೂ, ಸಗೋತ್ರರೂ ಅಥವ ಸಪ್ರವರರೂ ಎಂಬ ಕಾರಣಗಳಿಂದ ಆದ ಮದುವೆ ರದ್ದಾಗಲು ಅವಕಾಶವಿಲ್ಲವೆಂದು ರಾವ್ ಸಮಿತಿಯವರು ಸಲಹೆಮಾಡಿದ್ದಾರೆ.

ಸ್ತ್ರೀಯರ ಹಿತದೃಷ್ಟಿಯಿಂದ ಮಾಡಿರುವ ಮತ್ತೊಂದು ಸುಧಾರಣೆ ಎಂದರೆ ಸ್ತ್ರೀಗೆ ತನ್ನ ಗಂಡ

ನಿಂದ ಪ್ರತ್ಯೇಕವಾಗಿ ಇದ್ದು ವಾಸಮಾಡಲು ಕೊಟ್ಟಿರುವ ಹಕ್ಕು. ಯಾವ ಕಾಲದವರೆಗೆ ಹೆಂಡತಿ ತನ್ನ ಗಂಡನೊಡನೆ ವಾಸಿಸುತ್ತಾಳೆಯೋ ಆ ಕಾಲದವರೆಗೆ ಗಂಡನಾದವನು ತನ್ನ ಹೆಂಡತಿಯ ಪಾಲನೆ ಮತ್ತು ಪೋಷಣೆಗಳನ್ನು ಮಾಡಲೇಬೇಕು. ಆದರೆ ಈ ಮುಂದೆ ಹೇಳುವ ಕಾರಣಗಳಿಂದ ತನ್ನ ಜೀವನಾಂಶಕ್ಕೆ ಬಾಧಕ ಬರದಂತೆ ತನ ಗಂಡನಿಂದ ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ ವಾಸಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಗಂಡನಾದವನು ಬೀಭತ್ಸರೋಗಗ್ರಸ್ತನಾಗಿದ್ದರೆ, ತನ್ನ ಮನೆಯಲ್ಲಿ ವೇಶ್ಯೆಯನ್ನು ಇಟ್ಟುಕೊಂಡಿದ್ದರೆ, ಹೆಂಡತಿಯನ್ನು ಹಿಂಸೆಮಾಡಿ ಆಕೆಗೆ ತನ್ನ ಗಂಡನೊಡನೆ ವಾಸಮಾಡುವುದು ಕನಿಷ್ಟ ಮತ್ತು ಅಪಾಯಕರವೆಂಬ ಭಾವನೆಗಳಿಗೆ ಎಡೆಕೊಡುವಷ್ಟು ಕ್ರೂರನಾಗಿದ್ದರೆ, ಹೆಂಡತಿಯ ಇಚ್ಛೆಗೆ ವಿರುದ್ಧವಾಗಿ ಆಕೆಯನ್ನು ತ್ಯಾಗಮಾಡಿದ್ದರೆ, ಗಂಡನಾದವನು ಹಿಂದೂ ಧರ್ಮವನ್ನು ಬಿಟ್ಟು ಬೇರೆ ಮತಕ್ಕೆ ಸೇರಿದ್ದೇ ಆದರೆ, ಈ ಪೈಕಿ ಯಾವಕಾರಣಕ್ಕಾದರೂ ಹೆಂಡತಿ ತನ್ನ ಗಂಡನಿಂದ ಪ್ರತ್ಯೇಕವಾಗಿ ವಾಸಮಾಡಲು ಅವಕಾಶವಿದೆ.

ಆದ ವಿವಾಹವನ್ನು ರದ್ದುಪಡಿಸುವ ವಿಚಾರ

ಪತಿಪತ್ನಿಯರಲ್ಲಿ ಯಾರಾದರೂ ಡಿಸ್ಟ್ರಿಕ್ಟ್ ಕೋರ್ಟಿಗೆ ಅರ್ಜಿಹಾಕಿ ಮುಂದೆ ಹೇಳುವ ಕಾರಣಗಳ ಪೈಕಿ ಯಾವ ಕಾರಣಕ್ಕಾದರೂ ಆದ ವಿವಾಹವನ್ನು ರದ್ದುಪಡಿಸಿಕೊಳ್ಳಬಹುದು.

ಮದುವೆಯ ಸಮಯದಲ್ಲೂ ಕೋರ್ಟಿಗೆ ಅರ್ಜಿ ಸಲ್ಲಿಸುವ ಸಮಯದಲ್ಲೂ ಪತಿ ಪತ್ನಿಯರ ಪೈಕಿ ಯಾರಾದರೂ ನಪುಂಸಕರಾಗಿದ್ದರೆ, ಪತಿ ಪತ್ನಿಯರು ಸಪಿಂಡರಾಗಿದ್ದರೆ ಅಥವಾ ಮದುವೆಗೆ ನಿಷಿದ್ಧವಾದ ಬಾಂಧವ್ಯವುಳ್ಳವರಾಗಿದ್ದರೆ ಮದುವೆ ಕಾಲದಲ್ಲಿ ಮೊದಲನೆ ಹೆಂಡತಿ ಅಥವಾ ಗಂಡ ಬದುಕಿದ್ದರೆ ಇಬ್ಬರ ಪೈಕಿ ಯಾರಾದರೂ ಪೂರ್ತ ಹುಚ್ಚರಾಗಿದ್ದರೆ, ಇಂಥಾ ಸಂದರ್ಭಗಳಲ್ಲಿ ಆದ ವಿವಾಹವು ರದ್ದಾಗಲು ಅವಕಾಶವಿದೆ.

ದಾಂಪತ್ಯ ವಿಚ್ಛೇದ

ದಾಂಪತ್ಯ ವಿಚ್ಛೇದ, ವಿವಾಹ ವಿಚ್ಛೇದ, ಘಟಸ್ಫೋಟ ಇವು ಪರ್ಯಾಯ ಪದಗಳು. ದಾಂಪತ್ಯ ವಿಚ್ಛೇದಕ್ಕೆ ಇಂಗ್ಲೀಷಿನಲ್ಲಿ Divorce ಎಂದು ಹೇಳುತ್ತಾರೆ. ಈಗ ಜಾರಿಯಲ್ಲಿರುವ ಹಿಂದೂ ಕಾಯದೆಯಲ್ಲಿ ದಾಂಪತ್ಯ ವಿಚ್ಛೇದಕ್ಕೆ ಅವಕಾಶವಿಲ್ಲ. ಬರೋಡಾ ಸಂಸ್ಥಾನದಲ್ಲಿ ಮಾತ್ರ ದಾಂಪತ್ಯ ವಿಚ್ಛೇದದ ಕಾನೂನು ಜಾರಿಯಲ್ಲಿದೆ. ಬ್ರಿಟಿಷ್ ಇಂಡಿಯಾದಲ್ಲಿ ದಾಂಪತ್ಯ ವಿಚ್ಛೇದದ ಕಾನೂನು Native Christian Marriage Act. ಮತ್ತು Special Marriage Act ಪ್ರಕಾರ ವಿವಾಹಮಾಡಿಕೊಳ್ಳುವವರಿಗೆ ಮಾತ್ರ ಅನ್ವಯಿಸುತ್ತದೆ. ಹಿಂದೂ ವಿವಾಹ ಪದ್ಧತಿಯಲ್ಲಿ ಏಕಪತ್ನಿವ್ರತದ ನಿಯಮವು ಅವಶ್ಯಕವಾದ್ದರಿಂದ ಘಟಸ್ಫೋಟಕ್ಕೂ ಅವಕಾಶವಿರಬೇಕೆಂದು ರಾವ್ ಸಮಿತಿಯವರು ಸಲಹೆ ಮಾಡಿದ್ದಾರೆ. ಗಂಡನಾದವನು ಹೆಂಡತಿಯನ್ನು ತ್ಯಜಿಸಲು ಶಾಸ್ತ್ರಸಮ್ಮತವಾದ! ಯಾವ ಹಕ್ಕನ್ನು ಪಡೆದಿರುತ್ತಾನೋ ಅದೇ ಹಕ್ಕನ್ನು ಹೆಂಡತಿಯೂ ಸಮವಾಗಿ ಪಡೆಯಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಹಕ್ಕು ಸ್ತ್ರೀಯರಿಗೆ ಬಹಳ ಕಠಿಣ ಪರಿಸ್ಥಿತಿಯಲ್ಲಿ ಉಪಯೋಗವಾಗಬೇಕೇ ಹೊರತು ವಿವಾಹದ ಪಾವಿತ್ರ್ಯ ಮತ್ತು ನೀತಿ ಮತಗಳಿಗೆ ಧಕ್ಕೆ ತಗಲುವಷ್ಟು ಈ ಹಕ್ಕು ದುರುಪಯೋಗವಾಗಬಾರದೆಂದೂ ಎಚ್ಚರಿಕೆ ಕೊಟ್ಟಿದ್ದಾರೆ.

ವಿವಾಹ ವಿಚ್ಛೇದಕ್ಕೆ ಕಾರಣಗಳು.

ವಿವಾಹ ವಿಚ್ಛೇದಕ್ಕಾಗಿ ಪತಿ ಪತ್ನಿಯರ ಪೈಕಿ ಯಾರಾದರೂ ಡಿಸ್ಟ್ರಿಕ್ಟ್ ಕೋರ್ಟ್ ಅಥವಾ ಹೈಕೋರ್ಟಿಗೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿದಾರನು ಗಂಡನಾಗಿದ್ದರೆ ಹೆಂಡತಿ—ಅರ್ಜಿದಾರಳು ಹೆಂಡತಿಯಾಗಿದ್ದರೆ, ಗಂಡ—ಅರ್ಜಿ ಹಾಕುವುದಕ್ಕೆ ಪೂರ್ವದಲ್ಲಿ ೭ ವರ್ಷಗಳ ತನಕ ಚಿಕಿತ್ಸೆಯಾಗಲಾರದ ರೋಗದಿಂದ ನರಳುತ್ತಿದ್ದರೆ, ೭ ವರ್ಷಗಳ ಕಾಲ ಕಾರಣವಿಲ್ಲದೆ ತ್ಯಾಗಮಾಡಿದ್ದರೆ. ಹಿಂದೂ ಧರ್ಮವನ್ನು ಬಿಟ್ಟು ಮತಾಂತರವನ್ನು ಸ್ವೀಕರಿಸಿ

ದ್ದರೆ, ಗಂಡನಾದವನು ಪರಸ್ತ್ರೀಯನ್ನು ವೇಶ್ಯೆಯನ್ನಾಗಿ ಇಟ್ಟುಕೊಂಡಿದ್ದರೆ, ಹೆಂಡತಿಯಾದವಳು ಪರಪುರುಷನ ಸಹವಾಸಮಾಡಿ ವ್ಯಭಿಚಾರ ವೃತ್ತಿಯಲ್ಲಿದ್ದರೆ - ಈಕಾರಣಗಳ ಪೈಕಿ ಯಾವ ಕಾರಣಕ್ಕಾದರೂ • ದಾಂಪತ್ಯ ವಿಚ್ಛೇದವನ್ನು ಪಡೆಯಬಹುದು• ದಾಂಪತ್ಯ ವಿಚ್ಛೇದವಾದನಂತರ ಇಬ್ಬರೂ ಬೇರೆ ಮದುವೆಗಳನ್ನೂ ಮಾಡಿಕೊಳ್ಳಬಹುದು.

ದತ್ತಕ ವಿಚಾರ

ಗಂಡು ಮಕ್ಕಳನ್ನೇ, ದತ್ತು ತೆಗೆದುಕೊಳ್ಳಬೇಕೇ ಹೊರತು ಹೆಣ್ಣುಮಕ್ಕಳನ್ನು ಯಾವಾಗಲೂ ದತ್ತು ತೆಗೆದುಕೊಳ್ಳುವುದಕ್ಕಾಗುವುದಿಲ್ಲ• ಹಿಂದೂ ವಿಧವೆಗೆ ೧೫ ವರ್ಷ ಪೂರ್ತಿಯಾಗಿದ್ದರೆ ತನ್ನ ಗಂಡನಿಗಾಗಿ ದತ್ತು ತೆಗೆದುಕೊಳ್ಳುವ ಹಕ್ಕನ್ನು ಕೊಡಲಾಗಿದೆ. ಆದರೆ ದತ್ತು ತೆಗೆದುಕೊಳ್ಳುವ ವಿಚಾರದಲ್ಲಿ ಆಕೆ ಗಂಡನಿಂದ ಪ್ರತ್ಯಕ್ಷ ನಿಷೇಧವಿದ್ದರೆ ದತ್ತು ತೆಗೆದುಕೊಳ್ಳಲು ಸಾಧ್ಯವಿಲ್ಲ. ವಿಧವೆಯು ಮತ್ತೆ ಮದುವೆ ಮಾಡಿಕೊಂಡರಾಗಲಿ ಅಥವಾ ಆಕೆ ಗಂಡನ ಮಗ ಅಥವಾ ಮಗನ ವಿಧವೆ ಜೀವಂತರಾಗಿದ್ದರಾಗಲಿ ವಿಧವೆಗೆ ದತ್ತು ತೆಗೆದುಕೊಳ್ಳುವ ಅಧಿಕಾರವಿರುವುದಿಲ್ಲ. ವಿಧವೆಗೆ ಒಂದುಸಲ ನಷ್ಟವಾದ ಹಕ್ಕು ಮತ್ತೆ ಊರ್ಜಿತವಾಗುವುದಿಲ್ಲ• ಗಂಡನಾದವನು ಹೆಂಡತಿಯನ್ನು ಕೇಳದೆ ಅಥವಾ ಅವಳ ಸಮ್ಮತಿ ಇಲ್ಲದಿದ್ದರೂ ದತ್ತು ತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತಾನೆ. ದತ್ತು ಕೊಡುವ ವಿಚಾರದಲ್ಲಿ ತಾಯಿತಂದೆಗಳಿಗೆ ಮಾತ್ರ ಅಧಿಕಾರವಿದ್ದರೂ ಅದರಲ್ಲೂ ಮುಖ್ಯ ಅಧಿಕಾರ ತಂದೆಗೆ ಸೇರಿದ್ದು. ಹೆಂಡತಿಯ ವಿರೋಧವಿದ್ದರೂ ಗಂಡನು ತನ್ನ ಮಗನನ್ನು ದತ್ತು ಕೊಡಬಹುದು. ಆದರೆ ಹುಡುಗನ ತಂದೆ ಸಮ್ಮತಿಯನ್ನು ಕೊಡಲು ಅಸಮರ್ಥನಾಗಿದ್ದರೆ, ಸಂನ್ಯಾಸಿ ಆಗಿದ್ದರೆ ಅಥವಾ ಮೃತನಾಗಿದ್ದರೆ ಇಂತಹ ಸಂದರ್ಭಗಳಲ್ಲಿ ತಾಯಿಗೆ ತನ್ನ ಮಗನನ್ನು ದತ್ತುಕೊಡುವ ಅಧಿಕಾರವಿರುತ್ತದೆ. ಇದರಿಂದ ದತ್ತುಕೊಡುವ ವಿಚಾರದಲ್ಲೂ ಮತ್ತು ತೆಗೆದುಕೊಳ್ಳುವ ವಿಚಾರದಲ್ಲೂ ಮಹಿಳೆಯರಿಗೆ ಯಾವ ಮಹತ್ವವನ್ನೂ ಕೊಟ್ಟಿಲ್ಲವೆಂಬುದು ಸ್ಪಷ್ಟವಾಗಿದೆ. ದತ್ತಕ ವಿಚಾರದಲ್ಲಿ ರಾವ್ ಸಮಿತಿಯವರ ಈ ಸುಧಾರಣೆಗಳು ಮಹಿಳೆಯರಿಗೆ ಪ್ರೋತ್ಸಾಹಕರವೆಂದು ಹೇಳುವಂತಿಲ್ಲ. ಅವಿಹಿತವಾ ಪುರುಷನಿಗೆ ದತ್ತು ತೆಗೆದುಕೊಳ್ಳುವ ಹಕ್ಕನ್ನು ಕೊಟ್ಟು ಅವಿವಾಹಿತ ಸ್ತ್ರೀಗೆ ಈ ಹಕ್ಕನ್ನು ಕೊಡದೇ ಇರುವುದು ಪುರುಷರಂತೆ ಸ್ತ್ರೀಯರಿಗೆ ಸಮಾನ ಹಕ್ಕನ್ನು ಕೊಡಬೇಕೆಂಬ ಧ್ಯೇಯಕ್ಕೆ ವಿರೋಧ ಬರುವುದಿಲ್ಲವೇ ? ಎಂಬ ಪ್ರಶ್ನೆಯನ್ನು ಗಮನಿಸಬೇಕಾದುದು ಅಗತ್ಯ.

ಒಟ್ಟಿನಲ್ಲಿ ರಾವ್ ಸಮಿತಿಯವರ ಸುಧಾರಣೆಗಳು ಜಾರಿಗೆ ಬರುವುದಾದರೆ ಮಹಿಳೆಯರಿಗೆ ಸಾಂಸ್ಕೃತಿಕ ಮತ್ತು ಆರ್ಥಿಕ ದೃಷ್ಟಿಗಳಿಂದ ಬಹು ಮಟ್ಟಿನ ಪ್ರಗತಿ ಆಗುವುದರಲ್ಲಿ ಸಂಶಯವಿಲ್ಲ.

ಕಾಯೆ ತಾಯೆ !

ಕೆರಳಿ ನೊರೆವ ಕಡಲಿನಲ್ಲಿ
ಬಿರುಕು ಪಡೆದ ಕಿರಿಯ ನಾವೆ
ಬಿರಿಯುತಿಹುದು ಬಿರುಸಿನೆದೆಯ
ಕಾಯೆ ತಾಯೆ ಅಭಯದಾಯಿನಿ ! ಪಲ್ಲವಿ

ಬಂದರಗಳ ಬಂಧಮೀರಿ
ಬಂಪು ನೀರ ಹರಹಿನಲ್ಲಿ
ಮಿಂದು ತೇಲಿ ಸ್ವಚ್ಛಂದದಿ
ಮುಂದೆ ಹುಟ್ಟು ಹಾಕುತಿರುವೆನು ೧

ಕಂಗಾಣದ ಗಾಳಿ ಸೆಳೆಗೆ
ತುಂಗಗಿರಿಯ ತೆರದ ತೆರೆಯು
ನುಂಗುವಂತೆ ಏರಿ ಏರಿ
ಬಂದು ಸುತ್ತುವರಿದು ಮುತ್ತಿವೆ ೨

ಒಲಿದು ಹತ್ತಿಕೊಂಡ ಜೀವ
ಒಲೆವ ನಾವೆಯಲ್ಲಿ ಸಾವು
ಬಲೆಗೆ ಸಿಲುಕಿ ಹೇಗೊ ಮರಳಿ
ಬದುಕಿ ಬೆದರಿದೆರಳೆಯಾಗಿವೆ ೩

ದೋಣಿಯೊಳದ ತುಂತುರು ಸಹ
ಮೀನು ಮೊಸಳೆಯಂತೆ ತೋರೆ
ಕಣ್ಣನೀರಧಾರೆ ಹರಿಸಿ
ಎಂಥ ಭಯವ ದುಗುಡವೆಸಗಿವೆ ೪

ಗುರಿಯ ತೋರ್ಪ ಧ್ರುವದ ತಾರೆ
ಪರೆಯು ಕವಿದ ಕಣ್ಗೆ ಮುಸುಕೆ
ಮರೆಯಲಿದ್ದು ಪೊರೆವೆಯೆಂಬ
ಅರಿವು-ನೆಚ್ಚು ಕೈಯ ಬಿಡುತಿವೆ ೫

ಭಯನಾಶಿನಿ ಶುಭಕಾರಿಣಿ
ದಯೆಯ ಜೇನ ತುಂಬುಗೊಡವೆ
ತಾಯಿತನದ ಹುಟ್ಟು ಬೇರೆ !
ದುಃಖದಲ್ಲಿ ಧೈರ್ಯವೂರಿಸೆ ೬

ಬಿರಿದ ಬಿರುಕು ನನ್ನ ತುಳಿತ
ಕೊರೆತದಿಂದ ಲಾಡುದಾಗೆ
ಅರಿತು ಬೇಗ ಸರಿಗೊಳಿಸಲು
ಸ್ಫುರಿಸುವಂತೆ ಮನವ ಪ್ರೇರಿಸೆ ೭

ಕೊನೆಗಾಣದ ಕಡಲಿನಲ್ಲಿ
ಅನವರತದ ಯಾತ್ರೆಯಲ್ಲಿ
ಕ್ಷಣದ ಶೋಕ ಬರುವ ಶೋಕ
ಪದಕೆಹರಕೆಯೆಂದು ಕಾಣಿಸೆ ೮

—ರಸಿಕ ರಂಗ

ಬ್ರಹ್ಮಚರ್ಯದ ಪಂಚಪ್ರತಿಜ್ಞೆ

ಶ್ರೀ. ಮಂ. ಆ. ದೊರೆಸ್ವಾಮಿ ಅಯ್ಯಂಗಾರ್, ಎಂ.ಎ., ಬಿ. ಎಲ್.
ಅಡ್ವೊಕೇಟ್, ಮೈಸೂರು.

ಅನ್ಯ ದೇಶೀಯರೂ ಅನ್ಯ ಧರ್ಮೀಯರೂ ಹಿಂದೂ ಧರ್ಮದಿಂದ ಕಲಿಯಬಹುದಾದ ಏರ್ಪಾಡುಗಳಲ್ಲಿ ಬ್ರಹ್ಮಚರ್ಯ ಎಂಬುದಕ್ಕಿಂತಲೂ ಉತ್ತಮವಾದುದು ಯಾವುದೂ ಇಲ್ಲವೆಂದು ಒಂದು ಅಭಿಪ್ರಾಯವುಂಟು. ಹಿಂದೂ ಧರ್ಮದ ಇತರ ಸಂಸ್ಥೆಗಳಿಗೂ ಅಭಿಪ್ರಾಯಗಳಿಗೂ ಆಚಾರಗಳಿಗೂ ನಂಬಿಕೆಗಳಿಗೂ ಸಮಾನವೂ ಸದೃಶವೂ ಆದ ಕ್ರಮಗಳು ಇತರ ಕಡೆ ದೊರೆತರೂ ಬ್ರಹ್ಮಚರ್ಯ ಎಂಬ ಸಂಸ್ಥೆಯಂಥಾದ್ದು ಮತ್ತೆಲ್ಲೂ ಗೋಚರಿಸುವುದಿಲ್ಲ. ಜೂದರ ಮತ್ತು ಮುಸಲ್ಮಾನರ ಸುನ್ನತವೂ ಕ್ರಿಸ್ತರ ಜಲದೀಕ್ಷೆಯೂ ವೀರಶೈವರ ಲಿಂಗದೀಕ್ಷೆಯೂ ಉಪನಯನ ಸದೃಶವಾದ ಒಂದು ಸಂಸ್ಕಾರವೆಂದು ಹೇಳಬಹುದಾದರೂ ಉಪನಯನವು ಬ್ರಹ್ಮಚರ್ಯವೆಂಬ ಜೀವನ ಸಂಸ್ಥೆಯನ್ನು ಹೊಗತಕ್ಕ ಬಾಗಿಲಾಗಿರುವಂತೆ ಇವುಗಳು ಕೊಂಡೊಯ್ಯುತ್ತಿಲ್ಲ. ಉಪನಯನದ ಧ್ಯೇಯ, ಉದ್ದೇಶ, ಲಕ್ಷಣ, ವಿಧಾನಗಳಾವುವೂ ಈ ಸಂಸ್ಕಾರಗಳಿಗೆ ಸರಿಹೋಗುವುದಿಲ್ಲ. ಈ ಸಂಸ್ಕಾರಗಳು ಆಯಾ ಧರ್ಮೀಯರಲ್ಲಿ ಅಶೇಷರಿಗೂ ಕಡ್ಡಾಯವಾಗಿ ವಿಧಿಸಲ್ಪಟ್ಟವೆ; ಉಪನಯನವು ಹಿಂದೂ ಧರ್ಮಾವಲಂಬಿಗಳಲ್ಲಿ ವರ್ಣತ್ರಯಕ್ಕೆ ಮಾತ್ರ ವಿಧಿಸಲ್ಪಟ್ಟಿದೆ; ಈಚೆಗೆ ಸ್ತ್ರೀ ಜಾತಿಗೆ ಇದು ನಿಷೇಧಿಸಲ್ಪಟ್ಟಿದೆ. ಅನ್ಯ ಧರ್ಮದ ಸಂಸ್ಕಾರಗಳನ್ನು ಯಾವ ವಯಸ್ಸಿನಲ್ಲಿ ಬೇಕಾದರೂ ಮಾಡಬಹುದು; ಉಪನಯನವನ್ನು ಬ್ರಾಹ್ಮಣನು ಗರ್ಭಕಾಲದಿಂದ ಎಂಟು ಎಂದರೆ ಜನ್ಮಕಾಲದಿಂದ ಏಳನೆಯ ವಯಸ್ಸಿನಿಂದ ಹಿಡಿದು ಹದಿನೈದನೆಯ ವಯಸ್ಸಿನೊಳಗಾಗಿಯೂ ಕ್ಷತ್ರಿಯನು ಹತ್ತರಿಂದ ಇಪ್ಪತ್ತೊಂದರೊಳಗಾಗಿಯೂ ವೈಶ್ಯನು ಹನ್ನೊಂದರಿಂದ ಇಪ್ಪತ್ತಮೂರರೊಳಗಾಗಿಯೂ ಮಾಡದಿದ್ದರೆ ಪತಿತನಾಗಿ ವ್ರಾತ್ಯನಾಗಿ ಅನಾರ್ಯನಾಗಿ ಬಿಡುವನೆಂದೂ, ಶ್ರೇಯಸ್ಸು ಯಸತಕ್ಕವರು ಕ್ರಮವಾಗಿ ಐದು, ಆರು, ಎಂಟನೆಯ ವಯಸ್ಸಿನಲ್ಲೇ ಮಾಡಬೇಕೆಂದೂ ಮನುವು ವಿಧಿಸಿರುವನು (ಅ. ೨, ಶ್ಲೋ. ೩೬—೩೮). ಇತರ ಧರ್ಮಗಳ ಈ ಸಂಸ್ಕಾರಗಳಲ್ಲಿ ದ್ವಿಜತ್ವ ಭಾವನೆ ಯಾವುದೂ ಇಲ್ಲ. ಇನ್ನು ನಾಗರಿಕ ಜನರ ಮಾತನ್ನು ಬಿಟ್ಟು ಆಸ್ಟ್ರೇಲಿಯಾ ಆಫ್ರಿಕಾ ಸಾಗರಖಂಡ ಮೊದಲಾದ ಪ್ರದೇಶಗಳ ಕಾಡು ಜನರ ವೃತ್ತಾಂತವನ್ನವಲೋಕಿಸಿದರೆ ಅವರಲ್ಲಿ ಅನೇಕ ಕಡೆ ಹುಡುಗರಿಗೆ ಪ್ರಾಯ ಬರುವ ಸಂಧಿಯಲ್ಲಿ ಒಂದು ಸಂಸ್ಕಾರವನ್ನು ಆಚರಿಸುತ್ತಿರುವುದು ಕಂಡುಬರುತ್ತದೆ. ಇವನ್ನು ಉಪನಯನಕ್ಕೆ ಹೋಲಿಸಲಾಗುವುದಿಲ್ಲ. ಹಿಂದೂ ಉಪನಯನವು ಬಾಲ್ಯದಿಂದ ಕೌಮಾರಾವಸ್ಥೆಗೆ ಏರತಕ್ಕ ಸಂಧಿಯಲ್ಲಿ ನಡೆಯುವುದು; ಕಾಡು ಜನರ ಸಂಸ್ಕಾರವು ಕೌಮಾರಾವಸ್ಥೆಯಿಂದ ಯೌವನವನ್ನೇರತಕ್ಕ ಸಂಧಿಯಲ್ಲಿ ನಡೆಯುವುದು. ಕಾಡುಜನರಲ್ಲಿ ಬ್ರಹ್ಮಚರ್ಯಾಶ್ರಮ ವ್ಯವಸ್ಥೆ ರೂಢಮೂಲವಾಗಿಲ್ಲ. ಸಕಲ ಧರ್ಮಗಳಲ್ಲೂ ಗೃಹಸ್ಥರೂ ಸನ್ಯಾಸಿಗಳೂ ಗೋಚರಿಸಿದರೂ ವಿವಾಹಾತ್ಪೂರ್ವಭಾವಿಯಾದ ಜೀವನವನ್ನು ಬ್ರಹ್ಮಚರ್ಯ ಎಂಬ ಆಶ್ರಮ ವ್ಯವಸ್ಥೆಗೆ ಒಳಪಡಿಸಿರುವುದು ಹಿಂದೂಧರ್ಮದಲ್ಲಿ ಮಾತ್ರವೇ ಕಂಡುಬರುವುದು.

ಈ ಬ್ರಹ್ಮಚರ್ಯದ ಅರ್ಥವೇನು? ಧ್ಯೇಯವೇನು? ಬ್ರಹ್ಮಚರ್ಯ ಎಂದರೆ ಇಂದ್ರಿಯ ನಿಗ್ರಹ. ಅದರಲ್ಲೂ ಮುಖ್ಯವಾಗಿ ಸ್ತ್ರೀಕಾಮನೆಯ ನಿಗ್ರಹ ಎಂದು ಬಹು ಮಂದಿ ಭಾವಿಸಿರುವರು. ಬ್ರಹ್ಮಚರ್ಯಕ್ಕೆ ಇದು ಒಂದು ಅಂಗವಾದರೂ ಅದರ ಅನನ್ಯ ಲಕ್ಷಣವಾಗಿಲ್ಲ. ಬ್ರಹ್ಮಚರ್ಯಾಶ್ರಮವು ಸಾಮಾನ್ಯವಾಗಿ ಯೌವನಾವಸ್ಥೆಗೆ ಬರುವುದರೊಳಗಾಗಿ ಮುಕ್ತಾಯವಾಗತಕ್ಕದ್ದಾದ್ದರಿಂದ ಕೌಮಾರ ಜೀವನದಲ್ಲಿ ಸ್ತ್ರೀ ಕಾಮನಿಗ್ರಹಕ್ಕೆ ಆಸ್ಪದವೇನಿದ್ದೀತು? ಅವಿವಾಹಿತ ಸ್ಥಿತಿಯೆಲ್ಲವೂ ಬ್ರಹ್ಮಚರ್ಯೆಯಾಗುವುದಿಲ್ಲ. ಬ್ರಹ್ಮಚರ್ಯಾಶ್ರಮದ ಮುಖ್ಯ ಉದ್ದೇಶಗಳು ಪೂರ್ತಿಯಾದೊಡನೆ ವ್ರತಸಮಾವರ್ತನವನ್ನು ಮಾಡಿ ಸ್ನಾತಕನಾಗಬಹುದು; ಸ್ನಾತಕರು ಬ್ರಹ್ಮಚರ್ಯಾಶ್ರಮಿಗಳೆಂದೇ ವ್ಯವಹರಿಸಲ್ಪಟ್ಟರೂ ಗಂಧಮಾಲ್ಯಾದಿಗಳನ್ನು ಪರಿಗ್ರಹಿಸಲು ಅಡ್ಡಿಯಿಲ್ಲವೆಂದು ಶ್ರೀಕೃಷ್ಣನು ಜರಾಸಂಧನಿಗೆ ಮಾರುತ್ತರ ಕೊಟ್ಟಿರುವ ಅಂಶವು ಎಲ್ಲರಿಗೂ ಗೊತ್ತಿರಬಹುದು. ಹಿಂದೂ ಧರ್ಮವು ಗುರುತಿಸತಕ್ಕ ಮೂವತ್ತು ಮೂರು ಕೋಟಿ ದೇವರುಗಳಲ್ಲೂ ಎಂಭತ್ತೆಂಟು ಕೋಟಿ ಋಷಿಗಳಲ್ಲೂ ಅಸಂಖ್ಯಾಕ ಮಹಾ ಪುರುಷರಲ್ಲೂ ಏಕಮಾತ್ರ ಏಕಪತ್ನೀವ್ರತಸ್ಥನಾದ ಶ್ರೀರಾಮಚಂದ್ರನು ಕೈಹಿಡಿದ ಹೆಂಡತಿಯೊಡನೆ ಸಹ ಸರಿಯಾಗಿ ಸಂಸಾರ ಸುಖವನ್ನು ಅನುಭವಿಸದೆ ಸ್ತ್ರೀಕಾಮವನ್ನು ಬಹುವಾಗಿ ನಿಗ್ರಹಿಸಿದ್ದರೂ ಯಾರೂ ಆತನನ್ನು ಆದರ್ಶ ಬ್ರಹ್ಮಚಾರಿ ಎಂದು ಭಾವಿಸಿಲ್ಲ. ಅವನು ಆದರ್ಶ ಗೃಹಸ್ಥನೆಂದು ಪ್ರಸಿದ್ಧಿಯುಂಟಾಗಿದೆ. ಆದರೆ ಬಾಲ್ಯ ಪ್ರಭೃತಿ ಸ್ತ್ರೀವಸ್ತ್ರಾಪಹಾರಕನೂ ಗೋಪೀಜಾರನೂ (ವಿವಿಧ ಪುರಾಣಗಳಲ್ಲಿ ಹೇಳಿರುವ ಹೆಸರುಗಳ ಸಂಖ್ಯೆಯನ್ನು ಗಮನಿಸಿದ್ದಾದರೆ) ಇಪ್ಪತ್ತೆರಡು ಪತ್ನಿಯರಲ್ಲಿ ಅಸಂಖ್ಯಾಕ ಸಂತತಿಯನ್ನು ಪಡೆದವನೂ ಹದಿನಾರು ಸಾವಿರದ ನೂರು ಮಂದಿ ಸ್ತ್ರೀಯರ ವಲ್ಲಭನೂ ಎನಿಸಿರುವ ಶ್ರೀಕೃಷ್ಣನು ಕೆಲವೇಳೆ ನಿತ್ಯಬ್ರಹ್ಮಚಾರಿ ಎಂದೂ ಯೋಗೇಶ್ವರನೆಂದೂ ಹೆಸರು ಪಡೆದಿರುವನು. ಇದಕ್ಕೆ ಕಾರಣವೇನು?

ಬ್ರಹ್ಮಚರ್ಯ ಎಂದರೆ ಬ್ರಹ್ಮಸಾಧಕವಾದ ಅನುಷ್ಠಾನ ಎಂದು ಸಹ ಅರ್ಥವಾಗುತ್ತದೆ. ಇಲ್ಲಿ ಬ್ರಹ್ಮ ಎಂದರೆ ವೇದ ಎಂದು ಅರ್ಥ ಮಾಡುವುದು ಒಂದು ಸಂಪ್ರದಾಯ; ಬ್ರಹ್ಮಚಾರಿಯು ವೇದ ಎಂದರೆ ಹಿಂದೂ ವಿದ್ಯಾಸಂಸ್ಕೃತಿಯನ್ನು ಅಧ್ಯಯನ ಮಾಡಿ ಋಷಿಋಣವನ್ನು ತೀರಿಸಬೇಕು. ರಾಷ್ಟ್ರದ ವಿದ್ಯಾ ಸಂಸ್ಕೃತಿಯನ್ನು ಈಗಿನಂತೆ ಅಚ್ಚಾದ ಗ್ರಂಥಭಾಂಡಾರದಲ್ಲಿ ಸಂರಕ್ಷಣೆ ಮಾಡಲು ಆಗದೆ ಇದ್ದ ಕಾಲದಲ್ಲಿ, - ಲಿಪಿಯೇ ಹುಟ್ಟುವುದಕ್ಕೆ ಪೂರ್ವಕಾಲದಿಂದಲೂ, ಕೆಲ ಕ್ಲುಪ್ತ ಮಂದಿಯ ಸ್ಮೃತಿಯೆಂಬ ಕಣಜದಲ್ಲಿ ತುಂಬಿಟ್ಟು ಸಂರಕ್ಷಿಸಬೇಕಾಗಿತ್ತು. ಹಿಂದೂ ಧರ್ಮದಲ್ಲಿ ಬ್ರಹ್ಮಚಾರಿಗಳು ಇದನ್ನು ನಿರ್ವಾಹ ಮಾಡಲು ನಿಯೋಜಿತರಾಗಿದ್ದರು. ವಿದ್ಯಾಭ್ಯಾಸವು ಬ್ರಹ್ಮಚರ್ಯದ ತಿರುಳು. ಉಪನಯನ ಎಂದರೆ ಉಪ = ಗುರುವಿನ ಬಳಿಗೆ, ನಯ = ಸೇರುವುದು ಎಂದರ್ಥ. ಉಪನಯನವಾದೊಡನೆ ಬ್ರಹ್ಮಚಾರಿಯು ಗುರುವಿನ ಮನೆಯಲ್ಲಿ ವಾಸ ಮಾಡಿಕೊಂಡು ಗುರುವು ಹೇಳಿದ ಕೆಲಸ ಮಾಡಿಕೊಂಡಿರಬೇಕು. ಗುರುಕುಲವಾಸವು ಬ್ರಹ್ಮಚರ್ಯಕ್ಕೆ ಒಂದು ಪ್ರಧಾನ ಲಕ್ಷಣವು.

ಆದರೆ ಬ್ರಹ್ಮಚಾರಿ ಎಂದರೆ ಬರಿಯ ವಿದ್ಯಾರ್ಥಿ ಮಾತ್ರ ಎಂದು ಅರ್ಥ ಮಾಡಿ ಬಿಡಲಾಗುವುದಿಲ್ಲ. ಮತ್ತಾವ ದೇಶದಲ್ಲೂ ವಿದ್ಯಾರ್ಥಿಗೆ ಇಂದ್ರಿಯ ನಿಗ್ರಹವು ಒಂದು ಕಡ್ಡಾಯವಾದ ವಿಧಿಯಾಗಿರುವುದಿಲ್ಲ. ಬ್ರಹ್ಮ ಶಬ್ದವು ವೇದ ಅಥವಾ ವಿದ್ಯೆ ಎಂಬ ಅರ್ಥದಲ್ಲಿ ಮಾತ್ರ ಮುಕ್ತಾಯವಾಗುವುದಿಲ್ಲ. ಬ್ರಹ್ಮ ಎಂದರೆ ಪರಮಾತ್ಮ ಎಂಬರ್ಥವು ಬಹು ದೂರ ತಲೆಯೆತ್ತಿಕೊಂಡಿರುವುದರಿಂದ ಬ್ರಹ್ಮಚರ್ಯವು ಪರಮಾತ್ಮ ಸಾಧನೆಯ ಅನುಷ್ಠಾನ ಎಂದು ಸಹ ಅರ್ಥ ಕೊಡುತ್ತದೆ. ಬ್ರಹ್ಮವು ಜೀವನದ ಗುರಿ ಎಂದು ಬಾಲ್ಯದಿಂದಲೂ ಗೊತ್ತುಮಾಡಿಕೊಂಡು ಅದರ ಸಾಧನೆಗಾಗಿ ವಿದ್ಯೆಯನ್ನೂ ಸಾಮರ್ಥ್ಯವನ್ನೂ ಸಂಪಾದಿಸಿ ಮುಂದೆ ಸಂಸಾರವನ್ನು ಹೊಕ್ಕು ಸಮಾಜವನ್ನು ಪುಷ್ಟೀಕರಿಸಿ

ಧರ್ಮವನ್ನು ಆಚರಿಸಿ ಕೃತಕೃತ್ಯನಾಗಲು ಪ್ರಯತ್ನಿಸುವುದೇ ಬ್ರಹ್ಮಚರ್ಯವು. ಹೀಗೆ ಬ್ರಹ್ಮ ಎಂದರೆ ಧ್ಯೇಯ ಎಂದು ಸ್ಥೂಲವಾಗಿ ಅರ್ಥವಾಗುತ್ತದೆ.

ಬ್ರಹ್ಮಚರ್ಯದ ಕಟ್ಟುಪಾಡು ಇಷ್ಟಕ್ಕೇ ಮುಗಿದಿಲ್ಲ. ಬ್ರಹ್ಮಚಾರಿಯಾಗಿ ಗುರುಕುಲ ಮಾಡತಕ್ಕ ವಿದ್ಯಾರ್ಥಿಯು ಚಕ್ರವರ್ತಿಯ ಮಗನೇ ಆಗಿರಲಿ ಕೋಟೀಶ್ವರನ ಮಗನೇ ಆಗಿರಲಿ ಮಹಾ ಪಂಡಿತನ ಕುಮಾರನೇ ಆಗಿರಲಿ ತನ್ನ ಮನೆಯಿಂದ ಅನ್ನವನ್ನೊದಗಿಸಿಕೊಳ್ಳಕೂಡದೆಂದೂ ಗುರುವಿನ ಮನೆಯ ಅನ್ನವನ್ನು ಸಹ ತಿಂದು ಕರಗಿಸಕೂಡದೆಂದೂ ಹೊರಗಿನಿಂದ ಭಿಕ್ಷೆ ಎತ್ತಿ ತಂದು ಗುರುವಿನ ಅನುಮತಿಯಂತೆ ಜೀವನ ಮಾಡಬೇಕೆಂದೂ ಮತ್ತೊಂದು ಕಡ್ಡಾಯ ವಿಧಿ ಕಲ್ಪಿತವಾಗಿದೆ. ಇದಕ್ಕೆ ಅರ್ಥವೇನು? ದರಿದ್ರ ಜನತೆಯ ಸ್ಥಿತಿಗತಿ ಏನೆಂದು ಅರಿತು ಪ್ರತ್ಯಕ್ಷಾನುಭವವನ್ನು ಪಡೆಯಲು ಇದಕ್ಕಿಂತಲೂ ಉತ್ಕೃಷ್ಟವಾದ ಉಪಾಯವು ಮತ್ತೊಂದಿಲ್ಲ. ಸ್ವಾವಲಂಬನೆಯಿಂದ ಸ್ವತಂತ್ರವಾಗಿ ಉದರಪೋಷಣೆ ಮಾಡತಕ್ಕ ಸ್ವಭಾವವನ್ನು ರೂಢಮೂಲವಾಗಿ ಮಾಡಲು ಈ ಮಾರ್ಗವಲ್ಲದೆ ಮತ್ತಾವುದೂ ಇಲ್ಲ. ಅರ್ಥ ಸಂಪತ್ತಿನ ಮೋಹಕ್ಕೆ ಸಿಕ್ಕಿದ ಮನುಷ್ಯನ ಬಾಳು ನಾಯಿಗಿಂತಲೂ ಕೀಳಾಗುವುದು; ಅವನಿಗೆ ಯಾವುದಿದ್ದರೂ ತೃಪ್ತಿಯೇ ಹುಟ್ಟುವುದಿಲ್ಲ; ಭೋಗೇಚ್ಛೆಯು ಅನುಭವಿಸಿದಷ್ಟೂ ಹೆಚ್ಚುತ್ತಾ ಹೋಗುವುದು; ಸಂಪತ್ತು ಕೊಡತಕ್ಕ ಸೌಕರ್ಯಗಳಿಗೆ ದಾಸನಾದ ಮನುಷ್ಯನು ಇವು ಈಷದಪಿ ಕಡಮೆಯಾದರೂ ಮಹಾ ದುಃಖಾನುಭವ ಮಾಡುವನು; ಒಂದು ದಿವಸ ಹೊಗೆ ಬತ್ತಿ ದೊರೆಯದೆ ಹೋದರೆ, ತಂದೆಯ ಶ್ರಾದ್ಧದ ದಿವಸ ಕಾಫಿ ಕುಡಿಯುವುದು ತಡವಾದರೆ, ಜಲಾಶ್ರಯ ತಪ್ಪಿದ ಮೀನಿನಂತೆ ಪರಿತಪಿಸತಕ್ಕವರುಂಟು. ಬೀದಿಗೆ ಹೊರಡುವುದಕ್ಕೆ ಮುಂಚೆ ತಲೆ ಬಾಚಿಕೊಳ್ಳಬೇಕಾದರೆ ಹತ್ತಾರು ವಸ್ತುಗಳು ಬೇಕಾಗುವ ಅಭ್ಯಾಸವು ಈಗ ಸರ್ವಸಾಮಾನ್ಯವಾಗಿದೆ; ಯಾವ ಸೌಕರ್ಯವು ಬೇಕಾದರೂ ಪರಂಪರೆಯಾಗಿ ಸಾಮಗ್ರಿಗಳು ಒದಗದಿದ್ದರೆ ಜೀವನವು ದುಸ್ಸಾಧ್ಯವಾಗಿಬಿಡುವುದು; 'ಕೌಪೀನ ಸಂರಕ್ಷಣಾರ್ಥಂ ಮಾರ್ಜಾಲಃ, ಮಾರ್ಜಾಲ ಸಂರಕ್ಷಣಾರ್ಥಂ ಗೌಃ, ಗೋಃ ಸಂರಕ್ಷಣಾರ್ಥಂ ಗೃಹಃ, ಗೃಹಸಂರಕ್ಷಣಾರ್ಥಂ ಗೃಹಿಣೀ' ಎಂಬ ನಾಣ್ಣುಡಿಯು ಇದನ್ನು ಸ್ಪಷ್ಟಪಡಿಸುತ್ತದೆ. ಮನುಷ್ಯನು ಭೋಗ ಮತ್ತು ಸೌಕರ್ಯಗಳಿಗೆ ಈ ರೀತಿ ದಾಸನಾಗಿಬಿಡದೆ ಸ್ವಾತಂತ್ರ್ಯದಿಂದ ಇರತಕ್ಕ ಅಭ್ಯಾಸವು ಕೌಮಾರ ದೆಸೆಯಲ್ಲಿ ಹುಟ್ಟಿದರೆ ರೂಢಮೂಲವಾಗಿ ಜೀವಾವಧಿ ನಡೆದುಬರುವುದು. ಬ್ರಹ್ಮಚರ್ಯಕ್ಕೆ ಅಂಗವಾದ ಭಿಕ್ಷಾನಿಯಮವು ಇಂಥಾ ಅಭ್ಯಾಸವನ್ನು ಕಲಿಸಲು ಅತ್ಯುತ್ತಮ ಸಾಧನವಾಗಿದೆ. ಈಚೆಗೆ ಬೋಲ್‌ಷೆವಿಕರು ಧನಿಕ ಕುಲದವರನ್ನು ನಿರ್ಗತಿಕರೊಡನೆ ಒಂದುಗೂಡಿಸಲು ವಿವಿಧ ಪ್ರಯತ್ನಗಳನ್ನು ನಡೆಸಿರುವರು; ಧನಿಕರ ಧನವನ್ನು ಕಿತ್ತುಕೊಂಡ ಮಾತ್ರಕ್ಕೆ ಅವರ ಮನೋಭಾವವು ಮಾರ್ಪಡುವುದಿಲ್ಲ; ಅವರು ಆಗಲೂ ನಿಮ್ನ ಶ್ರೇಣಿಯವರನ್ನು ಕಂಡರೆ ನಿಕೃಷ್ಟರಾಗಿಯೇ ತಿಳಿಯುವರು. ಇದನ್ನು ತಪ್ಪಿಸಲು ಶ್ರೀಮಂತ ಕುಲದವರನ್ನು ಕೂಲಿ ಕೆಲಸಕ್ಕೆ ಹಾಕಿ ವರ್ಷಾಂತರ ಬಲಾತ್ಕಾರದಿಂದ ಅವರನ್ನು ದುಡಿಸುವಂತೆಯೂ ಅವರ ಮಕ್ಕಳು ಕೆಲವರ್ಷಕಾಲ ಕೂಲಿ ಕೆಲಸ ಮಾಡಿದಲ್ಲದೆ ಯಾವ ಶಾಲೆಗೂ ಅವರನ್ನು ಸೇರಿಸದಂತೆಯೂ ಬೋಲ್‌ಷೆವಿಕರು ಏರ್ಪಾಡು ಮಾಡಿರುವರು. ದೀನದರಿದ್ರ ಜನತೆಯಂತೆಯೇ ಧನಿಕರೂ ಯಾವುದಾದರೂ ಒಂದು ಕೈಕೆಲಸವನ್ನು ಮಾಡುತ್ತಾ ಬರಬೇಕೆಂದು ಮಹಾತ್ಮಾ ಗಾಂಧಿಯವರು ಸದಾ ಉಪದೇಶಿಸುತ್ತಿರುವರು. ನಮ್ಮ ಬ್ರಹ್ಮಚರ್ಯದ ಭಿಕ್ಷಾನಿಯಮವು ಈ ನಿರ್ಗತಿಕ ಸ್ವಭಾವ (Beletarian mentality) ವನ್ನು ಸುಲಭವಾಗಿ ಕಲಿಸಬಲ್ಲದು. ಬಾಲಕರೂ ವಿದ್ಯಾರ್ಥಿಗಳೂ ಸಮಾಜದ ಬಾಗಿಲಲ್ಲಿ ಭಿಕ್ಷುಕರು ಎಂಬ ಭಾವನೆಯು ಸಹ ಈ ನಿಯಮದಿಂದ ಮನದಟ್ಟಾಗುತ್ತದೆ; ವಿದ್ಯಾರ್ಥಿ ಜನತೆಯೂ ಸಮಾಜವು ಕೊಟ್ಟಷ್ಟನ್ನೇ ಉಣಬೇಕು; ಸಮಾಜದ ಆಹಾರ ಸಂಪತ್ತಿಯನ್ನೂ ಸೌಕರ್ಯ ಸಾಮಗ್ರಿ ಸಂಪತ್ತಿಯನ್ನೂ ತಾನು ಮನಸ್ವೀ ಕಿತ್ತು ತಿಂದು

ಬಿಡವೆ ಸಮಾಜದಲ್ಲಿ ಸಂಸಾರಿಗಳಿಗೂ ಹಿರಿಯರಿಗೂ ಮುಡಿಯುತಕ್ಕವರಿಗೂ ಅದಷ್ಟು ಹೆಚ್ಚಾಗಿ ಉಳಿಸಿಡಬೇಕು.

ಈ ಸಂಗ್ರಹ ವಿವರಣೆಯ ಸಹಾಯದಿಂದ ಬ್ರಹ್ಮಚರ್ಯದ ಸ್ವರೂಪವನ್ನು ಸಾರಾಂಶರೂಪವಾಗಿ ನಿರೂಪಿಸಬಹುದು: ಮನುಷ್ಯನು ಪ್ರಕೃತಿ ಬಲದಿಂದ ಹುಟ್ಟಿ ಶರೀರಧಾರಣೆ ಮಾಡುತ್ತಾನೆ. ಅನಂತರ ಸಂಸ್ಕಾರಬಲದಿಂದ ಅವನು ಬ್ರಹ್ಮಚಾರಿಯಾಗಿ ಪುನಃ ಹುಟ್ಟುತ್ತಾನೆ. ಈ ಹೊಸ ಜನ್ಮವು ಐದುವಿಧವಾದ ಪ್ರತಿಜ್ಞೆಗಳನ್ನು ಸಂಕಲ್ಪಿಸಿ ಸಾಧಿಸುವುದರಿಂದ ವೃದ್ಧಿಯನ್ನು ಪಡೆಯುತ್ತದೆ. ಈ ಪ್ರತಿಜ್ಞೆಗಳೇ ಬ್ರಹ್ಮಚರ್ಯದ ಒಡಲಾಗಿವೆ. ಅವಾವುವೆಂದರೆ:—

೧ **ವಿದ್ಯಾ ಪ್ರತಿಜ್ಞೆ.**
(ಅ) ಋಷಿಋಣ ಪರಿಹಾರ
(ಆ) ರಾಷ್ಟ್ರದ ವಿದ್ಯಾಸಂಸ್ಕೃತಿಯ ನಿರ್ವಾಹ
(ಇ) ಸಂಸ್ಕೃತಿ ಸೇವೆ
(ಈ) ವಿದ್ಯಾರ್ಜನೆ

೨ **ಸೇವಾ ಪ್ರತಿಜ್ಞೆ.**
(ಅ) ಗುರುಸೇವೆ
(ಆ) ಗುರುಕುಲ ಸೇವೆ
(ಇ) ಸಮಾಜ ಸೇವೆ
(ಈ) ಸಂಸ್ಕೃತಿಸೇವೆ


೩ **ದಾರಿದ್ರ್ಯ ಪ್ರತಿಜ್ಞೆ.**
(ಅ) ದರಿದ್ರನಾರಾಯಣ ಸಾಯುಜ್ಯ
(ಆ) ನಿರ್ಗತಿಕ ಸ್ವಭಾವಾರೋಪ
(ಇ) ಅರ್ಥಸ್ವಾವಲಂಬನೆ
(ಈ) ಅರ್ಥಸ್ವಾತಂತ್ರ್ಯ
(ಉ) ಸಮಾಜ ಕಲ್ಯಾಣ

೪ **ಇಂದ್ರಿಯನಿಗ್ರಹ ಪ್ರತಿಜ್ಞೆ.**
(ಅ) ಅತಿ ಸರ್ವತ್ರವರ್ಜನ
(ಆ) ದುರಭಿಮಾನ ನಿರಾಕರಣ
(ಇ) ಶೀಲ ಸಂಪಾದನೆ
(ಈ) ಕಾಮನಿಗ್ರಹ

೫ **ಧ್ಯೇಯ ಪ್ರತಿಜ್ಞೆ.**
(ಅ) ಬ್ರಹ್ಮ = ಧ್ಯೇಯ

ಶ್ರೀಕೃಷ್ಣನಲ್ಲಿ ಈ ಲಕ್ಷಣಗಳೆಲ್ಲವೂ ಬಹುದೂರ ಸಮಾವೇಶವಾಗಿರುವುದರಿಂದಲೇ ಆತನು ನಿತ್ಯ ಬ್ರಹ್ಮಚಾರಿ ಎಂದು ಪ್ರಸಿದ್ಧನಾಗಿದ್ದಾನೆ. ಇದನ್ನು ವಿವರಿಸಲು ಈ ಲೇಖನದಲ್ಲಿ ಅಸ್ಪದವಿಲ್ಲ.

ಅತಿ ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿ ಸ್ಥಾಪಿತವಾದ ಈ ಬ್ರಹ್ಮಚರ್ಯ ಸಂಸ್ಥೆಯು ವರ್ತಮಾನ ಕಾಲದಲ್ಲಿ ಸಾಧ್ಯವೇ? ಭವಿಷ್ಯಕಾಲದಲ್ಲಿರಲು ಯೋಗ್ಯವೇ? ಇಲ್ಲ ಎಂದು ಹೇಳಿಬಿಡುವುದು ಸುಲಭ. ಸಾಧ್ಯವಾದಷ್ಟು ದೂರ ಸಾಧಿಸಲು ಸಾಹಸ ಪಡಬೇಕೆಂದು ಆಶಿಸತಕ್ಕವರು ಎಷ್ಟೋ ಜನರು ಇದ್ದಾರೆ. ಅಂಥವರ ಗುಂಪಿಗೆಲ್ಲಾ ಮಹಾತ್ಮಾ ಗಾಂಧಿಯವರು ಅಗ್ರಣಿಗಳಾಗಿದ್ದಾರೆ.



ರವೀಂದ್ರನಾಥರ
ಭಾವಕತೆ.

ಋಣ

ಶ್ರೀ. ಹನುಮಂತರಾವ್
ಮಾಂಜರೇಕರ ಬಿ. ಎ.
ಸುಂಕೇರಿ, ಕಾರವಾರ.

೧

ಇರುಳು ಕಳೆಯುತಲೆ ಸುಷೇಣನು ಎದ್ದು ಸೆರೆಮನೆಯೊಳಗಿನ ಕೋಣೆಯಲ್ಲಿ ದೇವರ ನಾಮಸ್ಮರಣೆ ಮಾಡುತ ಕುಳಿತಿದ್ದನು; ಅಷ್ಟರಲ್ಲಿ ಆ ಕೊಠಡಿಯ ಬಾಗಿಲು ತೆರೆಯಿತು. ಕೈಯಲ್ಲಿ ಹಣತೆಯನು ಹಿಡಿದ ಶಾಮಲೆಯ ಮೂರ್ತಿಯು ಅವನ ಮುಂದೆ ನಿಂತಿತು.

ಅವಳ ಅಪ್ಪಣೆಯಂತೆ ಅವನ ಕೈಕಾಲುಗಳೊಳಗಿನ ಸಂಕೋಲೆಗಳು ಬಿಡಿಸಲ್ಪಟ್ಟುವು. ಆಗ ಅವನು ಅವಳಿಗೆಂದನು. 'ನಿರಾಶೆಯ ಘೋರಾಂಧಕಾರದಲಿ ದಯಾಸ್ವರೂಪಿಣಿಯಾದ ಚಂದ್ರಿಕೆಯಂತೆಯೇ ನೀನು ನನಗೆ ಕಾಣುವೆ!'

'ಏನು?, ನಾನು ದಯಾರೂಪಿಣಿಯಾದ ಚಂದ್ರಿಕೆಯೇ?' ಎಂದವಳು ಮೆಲುನುಡಿದು ಘೊಳ್ಳನೆ ನಕ್ಕುಬಿಟ್ಟಳು. ಅವಳ ಹಾಸ್ಯದ ತರಂಗಗಳು ಶಾಂತವಾದ ಆ ಸೆರೆಮನೆಯ ಗೋಡೆಗಳ ಮೇಲೆ ಅಪ್ಪಳಿಸಿದುವು. ಮಂತ್ರೋಚ್ಚಾರಣೆಯಿಂದ ಪಿಶಾಚಿಗಣವು ಜಾಗೃತವಾಗುವಂತೆ ಭಿತ್ತಿಗಳೊಳಗಿಂದ ಪ್ರತಿಧ್ವನಿಗಳೇಳಹತ್ತಿದುವು!

೨

ಬೆಳಕು ಹರಿಯಿತು. ವಾರುಣಾನದಿಯ ದಂಡೆಯ ಮೇಲಿನ ತಾಳವೃಕ್ಷಗಳೊಳಗಿಂದ ಬಿಂಗದಿರುಗಳು ನಲಿಯತೊಡಗಿದುವು. ಶಾಮಲೆಯು ದೋಣಿಯಲಿ ಕಾಲಿಟ್ಟು ನುಡಿದಳು. 'ಪ್ರಿಯರೇ, ಬನ್ನಿ! ನಾವು ಭೂತಕಾಲದ ಕಟಕಟೆಯಿಂದ ಮುಕ್ತರಾಗಿ ಅಜ್ಞಾತ ಭವಿಷ್ಯದ ಕಡೆಗೆ ಆಡುತ ನಲಿಯುತ ಹೋಗುವ.'

ನಾವೆಯು ಹೊಳೆಯ ಹೊನಲಿನಲಿ ಮುಂದೆ ಸಾಗಿತು. ಸುಷೇಣನು ಶ್ಯಾಮಲೆಯನ್ನು ಹತ್ತೋತ್ತಿ ಹೇಳಿದನು: 'ನೀನು ನನಗೆ ಸ್ವಾತಂತ್ರ್ಯವನ್ನು ಕೊಟ್ಟಿರುವುದೇನೋ ನಿಜ; ಆದರೆ ನಿರಂತರವಾಗಿ ನನ್ನನ್ನು ನಿನ್ನ ದಾಸನನ್ನಾಗಿ ಮಾಡಿಬಿಟ್ಟೆಯಲ್ಲ! ಇರಲಿ, ನೀನು ನನ್ನ ಬಿಡುಗಡೆಯನ್ನು ಹೇಗೆ ಮಾಡಿದೆ ಹೇಳುವೆಯಾ?'

"ಹೇಳುವೆ; ಆದರೆ ಈಗಲೇ ಅಲ್ಲ!" ಎಂದಳು ಶಾಮಲೆ.

೩

ಮಧ್ಯಾಹ್ನವಾಯಿತು; ಬಿಸಿಲೇರಿತು. ನದಿಯ ಕಡೆಗೆ ನೀರೊಯ್ಯಲಿಕ್ಕೂ ಒಗೆಯಲಿಕ್ಕೂ ಬಂದ ಊರೊಳಗಿನ ಹೆಂಗಳೆಯರು ನಡುನೆತ್ತಿಗಳ ಮೇಲೆ ನೀರ್ತುಂಬಿದ ಕೊಡಗಳನ್ನಿಟ್ಟು ಮನೆಗಳಿಗೆ ಹಿಂದೆರಳಿದ್ದರು; ಕಾಯಿಪಲ್ಲೆಗಳ ಸಂತೆಯೂ ಕೊನೆಗಂಡಿತ್ತು; ಎದಿರಿನ ತೋಪಿನೊಳಗಿನ ಕಾಲುದಾರಿ ಹಿಡಿದುಹೋಗುವ ಯಾವ ಮನುಷ್ಯನೂ ಕಾಣುತ್ತಿರಲಿಲ್ಲ.

ನಡು ಹಗಲಿನ ಬೆಂಗಾಳಿಯು ಬೀಸತೊಡಗಿತ್ತು. ನದಿಯ ದಂಡೆಯ ಮೇಲಿನ ಹೊಲಗಳೊಳಗಿನ ಸಾಸಿವೆ ಸಸಿಗಳು ಹೂ ಬಿಟ್ಟಿದ್ದುವು. ಆ ನೋಟವು ತುಂಬ ರಮಣೀಯವಾಗಿತ್ತು. ಆದರೆ ಅತ್ತ ಸುಷೇಣನ ಲಕ್ಷ್ಯವಿರಲಿಲ್ಲ. ಅವನು ಪುನಃ ಶಾಮಲೆಯ ಕಿವಿಯಲಿ ಪಿಸುಗುಟ್ಟಿದನು: 'ನಿನ್ನ ಉಪಕಾರ ಋಣವನ್ನು ನನ್ನಿಂದ ತೀರಿಸುವುದು ಸಾಧ್ಯವೇ ಇಲ್ಲವೆನ್ನು; ಆದರೆ ಆ ಋಣವಾದರೂ ಎಷ್ಟಿದೆಯೆಂಬುದು ತಿಳಿದರೆ ಮನದಲ್ಲಿಯೇ ಅದರ ಪಾರಾಯಣ ಮಾಡಲಿಕ್ಕಾದರೂ ಅನುಕೂಲವಾದೀತಲ್ಲವೇ?'

'ಹೇಳುವೆನು; ಆದರೆ ಈಗಲೇ ಅಲ್ಲ'ವೆಂದು ಶಾಮಲೆಯು ಮೊದಲಿನಂತೆಯೇ ಮಾರ್ನುಡಿದಳು.

೪

ಸಂಜೆಯಾಯಿತು. ಕತ್ತಲೆಯು ಬೆಳಗಿನ ಸ್ಥಾನವನ್ನಾಕ್ರಮಿಸಿ ಸವರೆ ಮಾಡಹತ್ತಿತು. ಶಾಮಲೆಯ ನಾವೆಯು ದಡ ತಾಕಿತು. ಅವಳು ಅದನ್ನು ಹಾಳುಬಿದ್ದ ದೇವಳದ ನೆರೆಯಲ್ಲಿದ್ದ ಆಲದ ಮರಕ್ಕೆ ಕಟ್ಟಿಟ್ಟಳು. ತಾಳರಾಜಿಯೊಳಗಿಂದ ಭಿನ್ನಭಿನ್ನವಾಗಿ ಬರುತ್ತಿದ್ದ ಬೆಳದಿಂಗಳು ನೀರಿನ ಮೇಲೆ ಬೀಳುತ್ತಿದ್ದುದರಿಂದಲೂ, ಹೊನಲಿನಲಿ ಅಲೆಗಳೇಳುತ್ತಿದ್ದುದರಿಂದಲೂ, ಆ ಪ್ರಕಾಶದ ಪ್ರತಿಬಿಂಬಗಳು ಮಕ್ಕಳು ನೀರಿನಲ್ಲಿ ತೇಲಿರಿಸಲು ಮಾಡುವ ಕಾಗದದ ನಾವೆಗಳಂತೆ ಕಾಣುತ್ತಿದ್ದುವು.

ಸುಷೇಣನು ಎರಡಾವರ್ತಿ ಕೇಳಿದ ಪ್ರಶ್ನೆಯು ಶಾಮಲೆಯ ಹೃದಯವನ್ನು ಇಡೀ ದಿನ ಕಲುಕುತ್ತಲೇ ಇತ್ತು! ಆದರೆ ನಿಶೆಯ ನೀರವತೆಯಲಿ ಅದಕ್ಕೊಂದು ಭೀಕರ ಸ್ವರೂಪವು ಪ್ರಾಪ್ತವಾಗಿತ್ತು. ಅವಳು ನಿಟ್ಟುಸುರು ಬಿಟ್ಟು ಅರಿಕೆ ಮಾಡಿಕೊಂಡಳು:

“ನಾನು ತಮಗಾಗಿ ನಷ್ಟಪಟ್ಟಿರುವುದು ನಿಜ; ಆದರೆ ಮಾಡಿದುದನ್ನು ಆಡಿ ತೋರಿಸುವುದು ಅದಕ್ಕಿಂತಲೂ ಕಷ್ಟತರವಾದುದು. ಕಾರಣ, ನಾನದನ್ನು ಸ್ವಲ್ಪದರಲ್ಲಿರುಹುವೆ. ತಾವೂ ಅದನ್ನು ಅಲ್ಪ ಕಾಲದಲ್ಲಿಯೇ ಮರೆತುಬಿಡಬೇಕು: ತಾರುಣ್ಯೋನ್ಮಾದದಲ್ಲಿದ್ದ ಆ ಉತ್ತಿಥನು ನನ್ನ ಮುಂದೆ ತನಗೆ ಪ್ರಾಣವೂ ಕಃಪದಾರ್ಥವಾದುದೆಂದು ತೋರಿಸಲು ತನ್ನ ಅಪರಾಧದ ಹೊಣೆಯನ್ನು ತಾನು ಸ್ವತಃ ಹೊತ್ತನು. ಪ್ರಿಯಾ, ಇಡಿಯ ಜನ್ಮದಲ್ಲಿ ನಾನು ಮಾಡಿದ ಅತಿ ದೊಡ್ಡ ಪಾಪಕೃತ್ಯವೆಂದರೆ ಇದೇ; ಮತ್ತಿದನ್ನು ನಾನು ತಮಗಾಗಿ ಮಾಡಿದೆ.”

೫

ತಣ್ಣದಿರನು ಅಸ್ತಮಿಸಿದನು. ಆ ಅಡವಿಯಲ್ಲಿ ಎಲ್ಲೆಲ್ಲಿಯೂ ಕಗ್ಗತ್ತಲೆಯೂ ನೀರವತೆಯೂ ರಾಜ್ಯವಾಳುತ್ತಿದ್ದುವು! ಶ್ಯಾಮಲೆಯ ನಡುವನ್ನಾವರಿಸಿದ ಸುಷೇಣನ ಕೈಯ ಬಿಗಿ ತಪ್ಪಿತು; ಅವನು ಕೆಳಗೆ ಬಿದ್ದನು. ಅವರಿಬ್ಬರಲ್ಲಿ ಅಂತರಾಯವನ್ನುಂಟುಮಾಡಿದ ಎಲ್ಲ ಸಂಗತಿಗಳಿಗೂ—ಸ್ತಬ್ಧತೆ, ಸ್ಥಳಾವಕಾಶಗಳಿಗೂ—ಪಾಷಾಣದಂತೆ ದೃಢತೆಯುಂಟಾಗಿತ್ತು!

ಶಾಮಲೆಯು ಹಠಾತ್ತಾಗಿ ನೆಲದಮೇಲೆ ಬಿದ್ದಳು; ಕಣ್ಣೀರು ಬತ್ತಿಹೋಯಿತು! ಅವನ ಕಾಲುಗಳನ್ನು ಬಿಗಿಯಾಗಿ ಹಿಡಿದು ಒಣಗಿದ ದನಿಯಲ್ಲಿ ಅವಳೆಂದಳು—ಪರಮೇಶ್ವರನು ನನಗೆ ದಂಡನೆಯನ್ನು ವಿಧಿಸುವದಿದ್ದರೆ ವಿಧಿಸಲಿ; ತಾವು ಮಾತ್ರ ದಯವಿಟ್ಟು ವಿಧಿಸಬೇಡಿ.”

ಸುಷೇಣನು ಎದ್ದು ನಿಂತನು. ತನ್ನ ದೇಹವನ್ನು ಅವಳ ಅಪ್ಪುಗೆಯಿಂದ ಬಿಡಿಸಿ, ಅವನು ಮರಗಳ ನೆಳಲಿನತ್ತ ಧಾವಿಸಿದನು.

೬

ಅವನ ನಡೆಯಿಂದ ಗಿಡಗಳ ಬುಡದಲಿ ಬಿದ್ದ ತರಗೆಲೆಗಳ ಸಳಸಳ ಸಪ್ಪಳವು ಕೇಳಬರುತ್ತಿತ್ತು. ಮರಗಳ ದಟ್ಟಣೆಯಿಂದ ಗಾಳಿಯೂ ಅಪ್ರತಿಹತವಾಗಿ ಬೀಸುತ್ತಿರಲಿಲ್ಲ. ಮೇಲಾಗಿ ಕೊಳೆತ ಕೊಂಬೆಲೆಗಳ ದುರ್ಗಂಧವೆಸಗಿತ್ತು. ಕ್ಷಣಕಾಲ ನಿಂತರೂ ಮನುಷ್ಯನು ಮೂರ್ಛಿತನಾಗುವಂತಹದಿತ್ತು ಆ ಸ್ಥಳ.

ಕೊನೆಗೊಮ್ಮೆ ಅವನು ದಣಿದು ಕುಳಿತುಕೊಂಡನು. ದಾವಾನಲದ ಹಿಂದೆ ಕಪ್ಪು ಹೊಗೆಯು ಹೋಗುವಂತೆ ಶಾಮಲೆಯು ಸುಷೇಣನನ್ನು ಹಿಂಬಾಲಿಸಿದ್ದಳು! ಆದರೂ ಅವರ ಸಾಮೀಪ್ಯದ ಅರಿವು ಅವನಿಗಾದುದು ಈಗಲೇ.

“ನನ್ನನ್ನು ಹಿಂಬಾಲಿಸದಿರು,” ಎಂದು ಅವನು ತಾರಸ್ವರದಲ್ಲಿ ನುಡಿದನು. ಅವಳು ಅವನಲ್ಲಿ ಕರುಣೆಯನ್ನು ಹುಟ್ಟಿಸಲು ಅನೇಕ ಪ್ರಕಾರಗಳನ್ನು ಮಾಡಿದಳು: ಕೇಶರಾಶಿಯನ್ನು ಬಿಟ್ಟಳು; ಅಪ್ಪಿಕೊಂಡಳು; ಚುಂಬಿಸಿದಳು; ನೀಳವಾಗಿ ಉಸುರ್ಗರೆದಳು.

ಅವಳೆಂದಳು: “ಇಲ್ಲ! ನಾನು ತಮ್ಮನ್ನು ಎಂದೂ ಹಿಂಬಾಲಿಸದಿರಲಾರೆ! ತಾವು ತಮ್ಮ ಕೈಯಿಂದಲೇ ನನ್ನನ್ನು ಕೊಂದುಬಿಡಿ; ಅಂದರೆ ತಮ್ಮ ಮತ್ತು ನನ್ನ ಅಪರಾಧಗಳು ಸರಿಯಾಗುವುವು”

ಇದನ್ನು ಕೇಳಿ ಅಡವಿಯೊಳಗಿನ ಗಿಡಗಳಿಗೂ ಜುಮ್ಮೆನಿಸಿತು! ಅವು ಭೀತಿಯಿಂದ ಕಂಪಿಸತೊಡಗಿದುವು. ಅಸ್ಫುಟವಾದ ಅಳುವೊಂದು ಮೊದಲು ಕೇಳಬಂದಿತು! ಆಮೇಲೆ ಧೊಪ್ಪೆಂಬ ಸಪ್ಪಳವೂ ಅಕಸ್ಮಾತ್ತಾಗಿ ಕೇಳಿಸಿತು!!

೭

ಬೆಳಗಿನಲಿ ಸುಷೇಣನು ಗಿಡಗಂಟೆಗಳೊಳಗಿಂದ ಹೊರಗೆ ಬಂದಾಗ ದೇಗುಲದ ಕಲಶವು ಪರಾವರ್ತಿತವಾದ ಪ್ರಕಾಶದಿಂದ ಕ್ರುದ್ಧ ಈಶ್ವರನ ಕುಡಿನೋಟದಂತೆ ಬೆಳಗುತ್ತಿತ್ತು. ಸುಷೇಣನು ಬಿಸಿಲೇರುವವರೆಗೆ ಮಳಲಲಿ ಮಟಮಟ ತಿರುಗಾಡಿದನು. ಮಧ್ಯಾಹ್ನವಾಗಲು ಬಿಸಿಲಿನ ಝಳದಿಂದ ಅವನ ನೆತ್ತರವು ಕಾಯ್ದೇರಿತು.

ಸಂಜೆಯಾಗಲು ಉನ್ಮಾದಾವಸ್ಥೆಯಲ್ಲಿದ್ದ ಪುರುಷನಂತೆ ಅವನು ದೋಣಿಯ ಕಡೆಗೆ ಸಾಗಿದನು. ಮುಳುಗುತ್ತಿರುವ ಬೆಂಗದಿರನ ಹೊಂಗದಿರುಗಳಂತೆ ಹೊಳೆಯುವುದೊಂದು ಬಳೆಯು ನಾವೆಯೊಳಗಿನ ಹಾಸುಗೆಯ ಮೇಲೆ ಬಿದ್ದಿರುವುದನ್ನು ಅವನು ನೋಡಿದನು. ಅವನದನ್ನು ಅತಿ ತ್ವರೆಯಿಂದೆತ್ತಿ ಎದೆಗೆ ಅವಚಿಕೊಂಡನು; ಮೂಲೆಯಲ್ಲಿ ಬಿದ್ದಿರುವ ಮಿದುವಾದ ಶಲ್ಲೆಯಲಿ ಮುಖವನೊತ್ತಿ ಅದರ ಮಾರ್ದವವನ್ನೂ ಸುಗಂಧವನ್ನೂ ಅನುಭವಿಸಲು ಯತ್ನಿಸಿದನು.

೮

ಇರುಳೇರಿತು. ಮೋಡದಿಂದ ಮುಸುಕಿದ ಚಂದ್ರಕಳೆಯು ಕ್ಷೀಣವಾಗಿತ್ತು. ಸುಷೇಣನು ದೋಣಿಯ ಅಂಚಿನಮೇಲೆ ನಿಂತು, ಮರಗಳ ಭೀಕರವಾದ ಸ್ತಬ್ಧತೆಯ ಕಡೆಗೆ ತನ್ನ ಕೈಚಾಚಿ—"ಪ್ರಿಯೆ, ಎಚ್ಚರಾಗಿ ನನ್ನೆಡೆಗೆ ಬಾ" ಎಂದು ಹೇಳಿದನು.

ಇದೇ ಹೊತ್ತಿಗೆ ಕಪ್ಪಿನೊಳಗಿಂದ ಒಂದು ಮೂರ್ತಿಯು ಹೊರಗೆ ಮಳಲಲ್ಲಿ ಬರುವಂತೆ ಕಂಡಿತು. ಅದೇನು ಪಿಶಾಚಮೂರ್ತಿಯೋ? ಕೇವಲ ಆಭಾಸವೋ?

"ಇದೇ ಬಂದೆ! ಎಂಬ ಮೆಲುನುಡಿಯು ಅವಳ ಬಾಯಿಯಿಂದ ಹೊರಟಿತು. ದೋಣಿಯನ್ನೇರಿ ಅವಳು ಮತ್ತೆ ನುಡಿದಳು: "ತಮ್ಮ ಅಂತಃಕರಣವು ನಿಜವಾಗಿಯೂ ದಯಾಪೂರಿತವಾಗಿರುವುದರಿಂದಲೇ ನನ್ನನ್ನು ಕೊಂದುಬಿಡಲು ತಾವು ಅಷ್ಟೊತ್ತಿಗೆ ಹಿಂಜರಿದಿರಿ!"

ಅವನು ತನ್ನ ದೃಷ್ಟಿಯನ್ನು ಅವಳಲ್ಲಿ ನೆಟ್ಟನು; ಆದರೆ ಎಷ್ಟು ನೋಡಿದರೂ ಅವನಿಗೆ ತೃಪ್ತಿಯಾಗಲೊಲ್ಲದು. ಅವಳನ್ನು ಅಪ್ಪಿಕೊಳ್ಳಬೇಕೆಂದು ಅವನು ಕೈಚಾಚಿದನು; ಆದರೆ ಒಮ್ಮಿಂದೊಮ್ಮೆ ಮೈಯಲಿ ಏನೋ ಸಂಚಾರವಾದಂತಾಗಿ ಹಿಮ್ಮೆಟ್ಟಿ "ನೀನು ಪುನಃ ಯಾಕೆ ಬಂದೆ?" ಎಂದು ಕೇಳಿದನು.

೯

ಆ ಹೆಂಗಸು ಕ್ಷಣ ಹೊತ್ತು ಚಿತ್ರದಂತೆ ನಿಶ್ಚಲಳಾಗಿ ನಿಂತಳು. ಕಡೆಗವಳು ಅವನ ಕಾಲಿಗೆರಗಿ ಎದ್ದು ನಿಂತು ಜಾಗೃತಿಯೊಡನೆ ಅದೃಶ್ಯವಾಗುವ ಸುಪ್ತಾವಸ್ಥೆಯೊಳಗಿನ ಸ್ವಪ್ನದಂತೆ ಕತ್ತಲೆಯಲಿ ಮೆಲ್ಲಗೆ ಮಾಯವಾದಳು!

ಒಂದು ಹರಟೆ

ಲಿಂಪೀ

ವಿದ್ವಾನ್ ಎಂ. ಜಿ. ವೆಂಕಟೇಶಯ್ಯ, ಎಂ.ಎ., ಬಿ.ಟಿ.

ಲಿಂಪೀ ಗಂಡಸೋ ಹೆಂಗಸೋ ಎಂತ ನೀವು ಕೇಳಬಹುದು. ಹೆಸರುಗಳಲ್ಲಿ ಕೂಡ ಗಂಡಸು ಹೆಂಗಸು ಎಂತ ಭೇದವಿರುವುದು ನಮಗೇನೂ ಹೊಸದಲ್ಲ; ಅಲ್ಲದೆ ಪಾಶ್ಚಿಮಾತ್ಯರಲ್ಲಿಲ್ಲದಿರುವ 'ನಪುಂಸಕತ್ವ'ವು ಕೂಡ ನಮ್ಮಲ್ಲಿರುವುದು ಅನೇಕ ವೇಳೆ ನಮಗೆ ಗೋಚರವಾಗದಿರದು. ಲಿಂಪೀ ಎಂಬೋದು ಗಂಡಸೇ ಅನ್ನಿ; ಅದರೊಳಗೂ ಈಗ್ಗೆ ಸುಮಾರು ೨೫ ವರ್ಷಗಳ ಹಿಂದೆಯೇ ಅವನು ಐದು ಅಡಿ ಎರಡು ಅಂಗುಲ ಉದ್ದವಾಗಿದ್ದ. ಉದ್ದಕ್ಕೆ ತಕ್ಕ ದಪ್ಪ, ಅದಕ್ಕೆ ತಕ್ಕ ಊಟ, ಇವೆಲ್ಲಾ ಇದ್ದವು. ತಂದೆಗೆ ಓದೋದಕ್ಕೆ ಬರುತ್ತಿತ್ತು, ಬರೆಯೋದಕ್ಕೆ ಬರುತ್ತಿರಲಿಲ್ಲ; ತಾಯಿಗೆ ಓದೋದಕ್ಕೂ ಬರುತ್ತಿರಲಿಲ್ಲ, ಮಾತನಾಡುವುದಕ್ಕೆ ಬರುತ್ತಿತ್ತು. ಲಿಂಪೀಗೆ ಮಾತನಾಡುವುದಕ್ಕೆ ಕೂಡ ಸರಾಗವಾಗಿ ಬರುತ್ತಿರಲಿಲ್ಲ.

ಮಾತನಾಡಲು ಬರದೇ ಇದ್ದವರು ಸುಮ್ಮನಿರುತ್ತಾರೆಂಬುದು ತಪ್ಪು. ಮಾತನಾಡುವುದಕ್ಕಾಗದೆ ಎಷ್ಟೋ ಜನ ಕೆಲಸ ಮಾಡಿ ಅನುಕೂಲವಾಗಿದ್ದಾರೆ. ಹಾಗೇ ಲಿಂಪೀ ಯಾರ ಸಂಗಡಲೋ ಒಂದು ಪೋಸ್ಟ್ ಕಾರ್ಡ್ ಬರೆಸಿ, ಏನೋ ಮಾಡಿ, ಇಂಗ್ಲೆಂಡಿನಿಂದ ಒಂದು ಸಣ್ಣ ಪುಸ್ತಕ (ಸುಮಾರು ೧೨೦ ಪೇಜಿನಷ್ಟು) ತರಿಸಿಕೊಂಡ. ಅದಕ್ಕೆ ಅವನೇನೂ ಕೊಡಲಿಲ್ಲ. ಟಪ್ಪಾಲು ಖರ್ಚು ಕೂಡ ಅವರೇ ಕೊಟ್ಟು ಕಳಿಸಿದ್ದರು. ಆ ಪುಸ್ತಕದಲ್ಲಿ ಅನೇಕ ಬೊಂಬೆಗಳಿದ್ದವು; ನಾಲ್ಕಾರು ಚಿತ್ರ ಪಠಗಳು, ಹತ್ತು ಹನ್ನೆರಡು ಮುಖ ಚಹರೆಗಳು ಇದ್ದವು. ಅದನ್ನು ತೆಗೆದುಕೊಂಡು ಲಿಂಪೀ ತನ್ನ ಸ್ನೇಹಿತರಿಗೆ ತೋರಿಸಲು ಮೊದಲು ಮಾಡಿದ. ನೋಡೋರೆಲ್ಲಾ ನೋಡಿದರು. ಕೊನೆಗೆ ಅವರ ವಿಚಾರ ಚರ್ಚೆಗೆ ಕೂತೆವು.

ಆಗಿನ ಕಾಲದಲ್ಲಿ ಕಾಲಾಣೆಗೆ ಒಂದು ಪೋಸ್ಟು ಕಾರ್ಡು ಬರುತ್ತಿತ್ತು. ಅಲ್ಲದೆ ಟಪ್ಪಾಲು ಹಾಸಲು ಕಡಿಮೆಯಿದ್ದರೂ ಕಾಗದವನ್ನು ಕಳಿಸಿ ಹೆಚ್ಚಿನ ಖರ್ಚನ್ನು ತಲುಪುವ ಕಡೆಯಲ್ಲಿಯೇ ವಸೂಲಿ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಕಾಗದವನ್ನು ಕಳಿಸಲು ಬೇಕಾದ ಬಡ್ಜೆಟ್ ವಿಚಾರದಲ್ಲಿ ನಮಗೆ ಎಂದರೆ ಲಿಂಪೀಗೆ, ತೊಂದರೆಯಿರಲಿಲ್ಲ; ಮೆಣಸಿನ ಪುಡಿ ಡಬ್ಬದಲ್ಲಿ ಯಾವಾಗಲೂ ಒಂದೆರಡು ಕಾಲಾಣೆಗಳು ಸಿಗುತ್ತಲೇ ಇದ್ದವು. ತುಂಟ ಹುಡುಗರ ಕಾಮಧೇನುವೇ ಅದಾಗಿತ್ತು. ಪುಸ್ತಕದಲ್ಲಿದ್ದ ವಿಚಾರವು ನಮಗೆ ಎಟುಕುವದಾಗಿರಲಿಲ್ಲ. ಪುಸ್ತಕವನ್ನು ಅಚ್ಚು ಮಾಡುವವರಿಗೆ ಎರಡು ಪೌಂಡು ಕೇವಲ ಸ್ವಲ್ಪವಿರಬಹುದು; ಅದು ನಮಗೆ ದೊಡ್ಡ 'ವರದಕ್ಷಿಣೆ' ಇದ್ದ ಹಾಗೆ ಕಾಣುತ್ತಿತ್ತು. ಆದ್ದರಿಂದ ಹಣ ಕಳಿಸದೇ ನಮ್ಮ ಕೆಲಸ, ಲಿಂಪೀ ಕೆಲಸ-ನೆರವೇರಿಸಲು ಸಾಧ್ಯವೆ ಎಂಬುದನ್ನು ಯೋಚನೆ ಮಾಡಲು ಈ ಬಡ್ಜೆಟ್ ಕಮಿಟೀ ಸೇರಿತ್ತು. ಕೊನೆಗೆ ಯಾವ ಮಾರ್ಗದಿಂದಲೂ ಎರಡು ಪೌಂಡನ್ನು ಹುಟ್ಟಿಸಲು ಸಾಧ್ಯವಿಲ್ಲವೆಂದು ತೀರ್ಮಾನವಾಯಿತು. ಇದ್ದವರಲ್ಲಿ ನನಗೇ ಹೆಚ್ಚಾಗಿ ಆಂಗ್ಲ ಭಾಷೆಯ ಪರಿಚಯವಿದ್ದುದರಿಂದ, ಬಂದ ಪುಸ್ತಕದಲ್ಲಿಯೇ ಲಿಂಪಿ ಎಲ್ಲಾ ವಿಚಾರವನ್ನೂ ಕಲಿಯ

ಬೇಕೆಂತಲೂ, ನಾನು ಅವನಿಗೆ ಕಲಿಸಿಯೇ ಕೊಡ ಬೇಕೆಂತಲೂ ಸರ್ವಾನುಮತದಿಂದ ತೀರ್ಮಾನ ವಾಯಿತು.

ಕಲಿಸುವುದು ಕಷ್ಟವೋ, ಕಲಿಯುವುದು ಕಷ್ಟವೋ, ಎಂಬ ವಿಚಾರವು ಜಿಲ್ಲಾ ವಿದ್ಯಾಧಿಕಾರಿಗಳಿಗೂ ತೀರ್ಮಾನ ಮಾಡಲಾಗದ ವಿಚಾರವಿದ್ದಹಾಗೆ ಕಾಣುತ್ತೆ. ಉಪಾಧ್ಯಾಯ ವೃತ್ತಿಯಲ್ಲಿರುವವರು ಕಲಿಸುವುದು ಕಷ್ಟವೆನ್ನುತ್ತಾರೆ; ಅವರ ಮೇಲ್ವಿಚಾರಣ ಕರ್ತರು ಕಲಿಯುವುದು ಸುಲಭವೆನ್ನುತ್ತಾರೆ. ಒಟ್ಟಿನಲ್ಲಿ ಇಲಾಖೆಯಲ್ಲಿಯೇ ಈ ಕಲಿಸುವ-ಕಲಿಯುವ ಸಮಸ್ಯೆ ಇನ್ನೂ ತೊಡಕಾಗಿಯೇ ಇದ್ದಹಾಗೆ ಕಾಣುತ್ತೆ. ಈ ತೊಡಕನ್ನು ಸಂಪೂರ್ಣವಾಗಿ ಬಿಡಿಸಿದ ಹೊರತೂ ನಮ್ಮ ಬಾಲಕರ ಏಳಿಗೆಯಿಲ್ಲ: ಬಾಲಕರ ಏಳಿಗೆಯಾದ ಹೊರತೂ ದೇಶದ ಏಳಿಗೆಯಿಲ್ಲ.

ಲಿಂಪೀ ಕಲಿಯಲು ಮೊದಲು ಮಾಡಿದ ದಿನವೇ ಅವನ ಮುಂಜಿ—ಉಪನಯನ ಅಂತಾರೆ, ಗೊತ್ತಾಯಿತು. ಒಂದು ವಾರರಜ ಕೊಡಲ್ಪಟ್ಟಿತು. ಆಮೇಲೆ ಲಿಂಪೀ ಬ್ರಾಹ್ಮಣನಾದ; ಬ್ರಾಹ್ಮಣಾರ್ಥಕ್ಕೆ ಕರೆದರೆ ಇಲ್ಲವೆನ್ನಬಾರದಾದ್ದರಿಂದ ದಿನಬಿಟ್ಟು ದಿನ ಬ್ರಾಹ್ಮಣಾರ್ಥಕ್ಕೆ ಒಪ್ಪಿಕೊಳ್ಳಬೇಕಾಯಿತು. ಒಂದೆರಡು ಪೇಜು ಪಾಠವೆನ್ನುವುದರೊಳಗಾಗಿ ಅವನಿಗೆ ನಾನು ಆಂಗ್ಲೇಯ ಭಾಷೆಯ ಲಿಪಿ,—ಆಲ್‌ಫೋಬೆಟ್ಸ್—ಕಲಿಸಿಬಿಡುತ್ತಿದ್ದೆ. ಆದರೆ ಕಾಲು ಪೇಜು ಕೂಡ ಆಗಲಿಲ್ಲ. ಇಬ್ಬರಿಗೂ ಬೇಜಾರು ಬಂತು. ಈ ಬೇಜಾರು ತೀರುವುದಕ್ಕೋಸ್ಕರ ದೊಡ್ಡಣ್ಣನವರ ಹಾಲಿನಲ್ಲಿದ್ದ ಒಂದು ಸಿನೀಮಾಗೆ ಹೋಗಬೇಕೆಂದು ತೀರ್ಮಾನವಾಯಿತು.

ವಿದ್ಯುಚ್ಛಕ್ತಿಯ ದೀಪಗಳ ಹಾವಳಿ ಆಗ ಅಲ್ಲಿ ಅಷ್ಟಿರಲಿಲ್ಲ. ಒಂದು ವಾಷಿಂಗ್ಟನ್ ಲೈಟು ಇಡುತ್ತಿದ್ದರು. ಅದನ್ನು ಕೆಳಕ್ಕೆ ಇಳಿಸಿಟ್ಟರೆ ಕತ್ತಲೆಯಾಗುತ್ತಿತ್ತು. ಪರದೆಯ ಮೇಲೆ ಬೊಂಬೆ ಬಿಡುತ್ತಿದ್ದರು. ನಾವು ಹೋಗಿ ಕೂತೆವು. ಹದಿನೈದು ನಿಮಿಷಗಳ ಮೇಲೆ, ದೀಪ ಇಳಿಸಿದರು. ಲಿಂಪೀ ಘಾಬರಿಯಾದ. ಅವನ ಜೋಬಿನಲ್ಲಿ ಇನ್ನೂ ಎರಡಾಣೆ ಮಿಕ್ಕಿತ್ತು. ನಾನು ಮನೆಯಲ್ಲಿ ಎರಡಾಣೆ ಮುಟ್ಟಿಗೆ ತಂದಿದ್ದೆ. ಬಹಳ ಹುಡುಗರು ಬಂದಿರಲಿಲ್ಲ. ಸುಮಾರು ಇಪ್ಪತ್ತು ಮಂದಿ ಇರಬಹುದು ಆ ದಿನ ಅಲ್ಲಿ ಕೂತಿದ್ದವರು. 'ಏನೋ ದೀಪ ಹೋಯಿತು' ಎಂದ.

"ಪರವಾಯಿಲ್ಲ. ದೀಪ ಇಳಿಸಿದರೇನೇ, ಅಲ್ಲಿ ಲೇಡಿ ಬರೋದು" ಎಂದೆ. ಎನ್ನುತ್ತಿರುವ ಹಾಗೆ ಬೊಂಬೆ ಬಂತು. 'ಹೌದಲ್ಲೋ, ಲೇಡಿ ಇದ್ದ ಹಾಗೇ ಇದ್ದಾಳೆ' ಎಂದ. ಆ ಕಾಲದಲ್ಲಿ ಪ್ಯಾರಿಸ್ ಫ್ಯಾಷನ್ಸ್ (Paris Fashions) ಎಂದು ಕೆಲವನ್ನು ತೋರಿಸುತ್ತಿದ್ದರು. ಅಷ್ಟು ಫ್ಯಾಷನ್ ಮಾಡಿ, ಜೋನ್ ಆಫ್ ಆರ್ಕ್ ಮುಂತಾದವರನ್ನು ಕೊಂದದ್ದಕ್ಕೆ ಈಗ ಆದ ಗತಿ ನೋಡಿ. ಯಾವ ದೇಶದಲ್ಲಿ ಸತ್ಯಕ್ಕೆ ಸ್ವಲ್ಪವಾದರೂ ಸ್ಥಳವಿಲ್ಲವೋ ಆ ದೇಶ ಎಂದಿದ್ದರೂ ನಾಶವೇ. ಯಾವ ವಿದ್ಯಾಭ್ಯಾಸದಲ್ಲಿ ಸತ್ಯವನ್ನು ನುಂಗಿ ಸುಳ್ಳನ್ನು ಹರಡುತ್ತಾರೆಯೋ, ಆ ವಿದ್ಯಾಭ್ಯಾಸವು ಮಾಡಿಸುವವರಿಗೂ ಮಾಡುವವರಿಗೂ ಎಂದಾದರೊಂದು ದಿನ ನಾಶವನ್ನೇ ತರಬೇಕು. ಅಲ್ಲಿಂದಾಚೆ ಲಿಂಪೀ ಆ **ಲೇಡಿ** ಎಲ್ಲಿಂದ ಹೇಗೆ ಬರುತಾಳೆ-ಎಂಬೋ ವಿಚಾರವನ್ನು ಹುಡುಕಲಾರಂಭಿಸಿದ. ಎಷ್ಟು 'ರಿ ಸ ರ್ಚ್' ಮಾಡಿದರೂ (ಈಗ ಬಹಳ ಸಂದರ್ಭಗಳಲ್ಲಿ 'ಸರ್ಚ್'ಗೂ ರಿಸರ್ಚ್‌ಗೂ ವ್ಯತ್ಯಾಸವಿಲ್ಲ), ಅವನಿಗೆ ಅದರ ಗುಟ್ಟು ಗೊತ್ತಾಗಲಿಲ್ಲ. ಕೊನೆಗೆ ಅದನ್ನು ಕಂಡುಹಿಡಿಯಲು ನಾಲ್ಕಾರು ಸಲ ಸಿನೀಮಾಗೆ ಹೋಗಿ ಕೊನೆಗೆ ನನ್ನನ್ನು ಕೇಳಿದ. ನಾನು ಆಗ ತೋಚಿದ್ದು ಹೇಳಿದೆ. ಸುಳ್ಳೆಂದ. ಕೊನೆಗೆ ನನ್ನ ಮಾತಿನ ನಿಜತ್ವವನ್ನು ತೋರಿಸಲು ಅವನು ಆ ದಿನ ಸಾಯಂಕಾಲ ನನ್ನನ್ನೂ ಸಿನೀಮಾಗೆ ಕರೆದುಕೊಂಡು ಹೋಗಬೇಕೆಂದು ನಿರ್ಧರವಾಯಿತು. ಈ ಮಧ್ಯದಲ್ಲಿ ಸಿನೀಮಾ ನೋಟೀಸ್ ಗಾಡಿಯೊಂದು ಬಂತು. ಅದರೊಳಗೆ ಹಂಚುತ್ತಿದ್ದವನ ಬೆತ್ತ ಕೆಳಗೆ ಬಿತ್ತು. ಅದನ್ನು ಒಂದು ಸಣ್ಣ ಹುಡುಗ ಎತ್ತಿಕೊಂಡು ಓಡುವ ಪ್ರಯತ್ನದಲ್ಲಿದ್ದ. ನಾನು ಅವನ ಮೇಲೆ ಬಿದ್ದು ಆ ಬೆತ್ತವನ್ನು ಕಸುಕೊಂಡು ಗಾಡಿ

ಯುವನ ಕೈಗೆ ಕೊಟ್ಟೆ. ಒಳಗಿದ್ದವನು ಮಾತನಾಡಿದ. ಧನ್ಯವಾದಗಳನ್ನು ಸಮರ್ಪಿಸಿದ. ಅವನ ಧ್ವನಿ ಗುರ್ತು ಹಿಡಿದು 'ಲ್ಯಾನೀ' ಎಂದೆ. ಅವನು ಗಾಡಿಯನ್ನು ನಿಲ್ಲಿಸಿ ಇಳಿದ.

ಲಂಡರ್ಮಿರ್ಸ ಹೈಸ್ಕೂಲಿನಲ್ಲಿ ಲ್ಯಾನೀ ನನ್ನ ಜೊತೆಗೆ ಓದುತ್ತಿದ್ದ. ಡಿಸೆಂಬರ್ ಪರೀಕ್ಷೆಯಲ್ಲಿ ಲೆಕ್ಕದಲ್ಲಿ ಅವನಿಗೆ ಒಂದು ದೊಡ್ಡ ಕೋಳೀಮೊಟ್ಟೆ ಬಂತು. ಬೋರ್ಡಿಂಗ್‌ನಿಂದ ಅರ್ಧಚಂದ್ರ ಪ್ರಯೋಗವಾಯಿತು. ಆಮೇಲೆ ಸರ್ಕಸ್ಸಿನಲ್ಲಿ ಸೇರಿದ. ಅವನನ್ನು ಆನೆಯನ್ನು ಮೇಯಿಸಲು ಹಾಕಿದರು. ಆನೆ ಲದ್ದಿ ಹೊತ್ತು ಹೊತ್ತು ಸಾಕಾಗಿ, ಅವನು ಕೊನೆಗೆ ಈ ಸಿನೀಮಾಕ್ಕೆ ಬಂದು ಬಿದ್ದ. ಇವೆಲ್ಲಾ ಸಮಾಚಾರ ಬೀದಿಯಲ್ಲೇ ಜರಗಿತು. ನಾನು ಲಿಂಪೀ ವಿಚಾರ ಹೇಳಿದೆ. 'ಆಗಲಿ, ಎಲ್ಲಾ ತೋರಿಸುತ್ತೇನೆ. ನಾನೇ ಡ್ರೈವರ್ ಕೂಡ' ಎಂದ. ತುಪ್ಪ ಜಾರಿ ಬಂದು ರೊಟ್ಟಿಯ ಮೇಲೆ ಬಿದ್ದ ಹಾಗಾಯಿತು.

ಸಿನೀಮಾಕ್ಕೆ ಹೋದದ್ದಾಯಿತು. ತೋರಿಸಿದ್ದಾಯಿತು. ಅಲ್ಲಿಂದಾಚೆಗೆ ಲಿಂಪೀ, ಅವರಪ್ಪ ಕೂಡ, ನಾನೇ ಬೃಹಸ್ಪತಿಯ ಅವತಾರ ಅಂತ ಒಪ್ಪಿಕೊಂಡುಬಿಟ್ಟರು. ಅಲ್ಲಿಂದಾಚೆಗೆ ಅವರ ಮನೆಯಲ್ಲಿ ಎಲ್ಲರಿಗೂ ನಾನೇ ಉಪಾಧ್ಯಾಯನಾಗಿಬಿಟ್ಟೆ. ಅವರ ತಾಯಿ ಅರಿಸಿನ ಕುಂಕುಮಕ್ಕೆ ಹೋಗಿ ಬಂದರೆ ಏನಾದರೂ ಪದಾರ್ಥ, ತಿನ್ನೋದು, ತಂದರೆ ಮೊದಲು ನನಗೆ ಕೊಡುತ್ತಾ ಇದ್ದರು. ತಂದೆ ನನಗೆ ಸರ್ತಿಸರ್ತಿಗೂ 'ಏನು ಪ್ಯಾಸು ಮಾಡಿದೆ ಈಗ?' ಎಂತ ಕೇಳೋದಕ್ಕೆ ಮೊದಲು ಮಾಡಿದರು.

ಹೀಗಿರುವಾಗ ಮೂರನೆಯ ಫಟದಲ್ಲಿ ನನಗೂ ಲಿಂಪೀಗೂ ರಾಮರಾವಣ ಯುದ್ಧ ಪ್ರಾರಂಭವಾಯಿತು. ಲಾಭ ನಷ್ಟಗಳು ಕೇವಲ ಪ್ರಪಂಚದಲ್ಲೇ ಅಲ್ಲ, ಲೆಕ್ಕ (Mathematics) ದಲ್ಲಿಯೂ ಕಷ್ಟವಾದ ಅಂಶ. ಇಂಗ್ಲೆಂಡಿನಿಂದ ಬಂದ ಪುಸ್ತಕದಲ್ಲಿ ಈ ಅಂಶವನ್ನು ತಾವು ಹೇಗೆ ಹೇಳಿಕೊಡುತ್ತಾರೆಂಬುದಕ್ಕೆ ನಿದರ್ಶನವಾಗಿ ಒಂದು ಪುಟದಷ್ಟು ಕೊಟ್ಟಿದ್ದರು. ಅದನ್ನು ನಮ್ಮ ಲಿಂಪೀಗೆ ಕಲಿಸುವುದಕ್ಕೆ ಮೊದಲಿಟ್ಟೆ.

"ನೀನು ನೂರಕ್ಕೆ ತಂದು ನೂರೈದಕ್ಕೆ ಮಾರಿದರೆ" ಎಂದು ಮೊದಲು ಮಾಡಿದೆ.

'ಏನು?' ಅಂದ ಲಿಂಪೀ.

'ನೂರು ರೂಪಾಯಿಗೆ ಕೊಂಡುಕೊಂಡು ಬಂದು'

'ನೂರು ರೂಪಾಯಿಯೆ?'

'ಹೌದು'

'ರೂಪಾಯಿ ಎಲ್ಲಿದೆ?'

'ರೂಪಾಯಿ ಒಂದು ವೇಳೆ ನಿನ್ನ ಹತ್ತಿರ ಇದ್ದು, ನೀನು ಕೊಂಡುಕೊಂಡು ಬಂದಿಯಾದರೆ?'

'ಇಲ್ಲ, ರೂಪಾಯಿಯೂ ಇಲ್ಲ; ಇದ್ದರೂ ಕೊಂಡುಕೊಂಡು ಬರೋದಿಲ್ಲ'

'ಹೋಗಲಿ ನಿನ್ನ ಹತ್ತಿರ ಎಷ್ಟಿದೆ?'

'ಎಷ್ಟೋ ಇದೆ, ನಿನಗೇಕೆ? ಹೇಳೋದಿಲ್ಲ.'

'ಹಾಗಾದರೆ, ನಿನಗೆ ನಾನು ಹೇಗಪ್ಪ ಹೇಳಿಕೊಡೋದು!'

'ಹೇಳಿಕೊಡೋ' ಎಂದ. "ಅಮ್ಮಾ, ನೋಡೆ, ಇವನು ನನಗೆ ಪಾಠ ಹೇಳಿಕೊಡೋದಿಲ್ಲವಂತೆ' ಎಂತ ಒದರಿದ.

'ಅಮ್ಮ' ಒಳಗಿನಿಂದ ಬಂದು "ಯಾಕಪ್ಪ?" ಎಂದಳು. ನಾನು "ಏನ್ರೀ, ಇವನು ನನ್ನ ಮಾತೇ ಕೇಳೋದಿಲ್ಲ" ಎಂದೆ. ನಾನ್ನೋಡ್ತೇನೆ ಎಂತ ಆಕೆ ಅಲ್ಲೇ ಕುಳಿತಳು. ನಾನು ಮತ್ತೆ ಮೊದಲು ಮಾಡಿದೆ.

"ನೂರು ರೂಪಾಯಿಗಳಿಗೆ ಒಂದು ಸಾಮಾನು ತೆಗೆದುಕೊಂಡೆ, ಅಂತ ಇಟ್ಕೊಳಪ್ಪ!"

"ಅಮ್ಮ, ನೋಡೆ, ನೋಡೆ. ನೂರು ರೂಪಾಯಂತೆ—ಎಲ್ಲಿಂದ ಬರುತ್ತೆಯೆ ನಮಗೆ"

ಆಕೆ ಕೇಳಿ ಕಣ್ಣುಗಳನ್ನು ಅಗಲವಾಗಿ ಬಿಟ್ಟು 'ಉಂಟೇನಪ್ಪ? ನಾವು ಅಂದರೇನು! ನೂರು ರೂಪಾಯಿ ಅಂದರೇನು? ನೂರು ರೂಪಾಯಿ ಗೀಪಾಯಿ ಬೇಡಪ್ಪ.—ಹಾಗೇ ರೂಪಾಯಿಲ್ಲದೆ ಹೇಳಿಕೊಡಪ್ಪ" ಅಂದಳು.

ನನಗೆ ಏನೂ ತೋಚಲಿಲ್ಲ. ನಮ್ಮ ಸ್ಕೂಲಿನ

ಲ್ಲೇನೋ ಹೇಳೋರ ಹತ್ತಿರ ಕೇಳೋರ ಹತ್ತಿರ ನೂರು ರೂಪಾಯಿಗಳಿಲ್ಲದಿದ್ದರೂ ನಾವೇನೋ ನೂರು ರೂಪಾಯಿ ಅಂತಲೇ ಲೆಕ್ಕ ಪ್ರಾರಂಭ ಮಾಡುತ್ತಿದ್ದೆವು. ಕೊನೆಗೆ ಮನಸ್ಸಿಗೆ ಹೊಳೆಯಿತು. ಗೋಲೀಲೆಕ್ಕ ಇಟ್ಟರೆ ಪರವಾಯಿಲ್ಲ, ಅಂತ. ಇದಕ್ಕೆ 'ಅಮ್ಮ' ಒಪ್ಪಲಿಲ್ಲ. 'ಏನು ಮಾತಪ್ಪ, ಓದೋವಾಗ ಕೂಡ ಗೋಲೀ ಗೋಲೀ ಅಂತೀರಲ್ಲೋ!' ಅಂದುಬಿಟ್ಟಳು. ನನಗೆ ಬಹಳ ಸಾಕಾಗಿಬಿಟ್ಟಿತು. ನಾನು ಲಿಂಪೀ ಹತ್ತಿರ ಅಂದೆ 'ಲೇ, ನಿಮ್ಮಮ್ಮ ಇದ್ದರೆ, ನಿನಗೆ ಅರ್ಥವಾಗೋಲ್ಲ!' ಕೂಡಲೆ ಅವನು ಅವಳನ್ನು ಬೈದು ಒಳಕ್ಕೆ ಕಳಿಸಿದ. ನಾನು ಗಟ್ಟಿಯಾಗಿ 'ಲೇ ಲಿಂಪೀ, ಹಾಗೆಲ್ಲಾ ಬೈಬಾರದೋ! ತಾಯಿ ಅಂದರೆ ದೇವರೋ' ಎಂದೆ. ಆಮೇಲೆ ಗೋಲಿಗಳಿಂದ ಲಾಭ-ನಷ್ಟ ತೋರಿಸಿದರೆ ಅರ್ಥವಾಯಿತು ಎಂದ ಲಿಂಪೀ. ಆದರೆ ಲೆಕ್ಕ ಮಾಡೋದಕ್ಕೆ ಬರಲಿಲ್ಲ. ನಾಲ್ಕಾರು ದಿನಗಳಲ್ಲಿ ಲೆಕ್ಕ ಬಿಟ್ಟುಕೊಂಡುಬಿಟ್ಟ. ಊಟದಲ್ಲಿ ಸ್ಪೆಷಲೈಸ್ ಮಾಡಿಬಿಟ್ಟ. ಇದೇನು ಸಾಮಾನ್ಯ ಕೆಲಸವಲ್ಲ. ಎಷ್ಟು ವಯಸ್ಸಾದರೂ ಚೆನ್ನಾಗಿ ಊಟ ಮಾಡೋದು; ತಿಂದಿದ್ದನ್ನು ಅರಗಿಸಿಕೊಳ್ಳೋದು; ಇವು ಎಲ್ಲರಲ್ಲೂ ಇರೋ ಗುಣಗಳಲ್ಲ. ಏಕೋದರರಾಗಬಹುದು; ವೃಕೋದರರಾಗುವುದು ಸಾಮಾನ್ಯವಲ್ಲ.

ಸಭ್ಯತೆಯ ಅಡಿಗಲ್ಲು

ಪೌಷ್ಟಿಕ ಆಹಾರದಲ್ಲೆಲ್ಲಾ ಶ್ರೇಷ್ಠವಾದುದು ಹಸುವಿನಿಂದ ದೊರೆಯುತ್ತದೆ. ಕಸ ಕಡ್ಡಿಗಳನ್ನು ತಿಂದು ಅಮೃತವನ್ನು ಕರೆಯುವ ಶಕ್ತಿ ಅದರದು. ತನ್ನ ಯಜಮಾನ ಮತ್ತು ಅವನ ಮಕ್ಕಳಿಗೆ ಬೇಕಾಗುವಷ್ಟು ಹಾಲನ್ನು ಕರೆಯುವ ತಾಯಿ ಹಸು. ಹಸುವಿಲ್ಲದೆ ಬೇಸಾಯವಿಲ್ಲ. ಜನರ ಸುಖ ಮತ್ತು ಆರೋಗ್ಯ ಅದನ್ನು ಅವಲಂಬಿಸಿದೆ. ಯಾವದೇಶ ಅಥವಾ ಜನಾಂಗದಲ್ಲಿ ಹಸುವು ನೆಮ್ಮದಿಯಾಗಿದೆಯೋ, ಸಮೃದ್ಧಿಯಾಗಿದೆಯೇ ಅಲ್ಲಿ ಸಭ್ಯತೆಯು ವಿಕಸಿತವಾಗುತ್ತದೆ. ಪೈರು ಹೆಚ್ಚುತ್ತದೆ. ಸಮೃದ್ಧಿಯು ತಾಂಡವವಾಡುತ್ತದೆ. ಜನರು ಋಣಮುಕ್ತರಾಗುತ್ತಾರೆ. ಅಂದರೆ ಹಸುವೇ ಸಭ್ಯತೆಯ ಅಡಿಗಲ್ಲು.

—ಶ್ರೀ· ರಾಲ್ಫ್, ಎ· ಹೇ ಇನ್

ಹಳೇಬೀಡು

ಡಾಕ್ಟರ್ ಎಂ. ಹೆಚ್. ಕೃಷ್ಣ, ಎಂ. ಎ., ಡಿ. ಲಿಟ್.
ಡೈರೆಕ್ಟರ್ ಆಫ್ ಆರ್ಕಿಯಾಲಜಿ, ಮೈಸೂರು.

ಸ್ಥಳ ಮತ್ತು ಮಾರ್ಗಗಳು :

ಹಳೇಬೀಡು ಈಗ ಬೇಲೂರು ತಾಲ್ಲೂಕಿನಲ್ಲಿರುವ ಒಂದು ಸಣ್ಣ ಗ್ರಾಮವಾಗಿದೆ. ರೈಲಿನಲ್ಲಿ ಹೋಗುವವರು ಬೆಂಗಳೂರು ಪೂನಾ ಲೈನಿನಲ್ಲಿ ಅರಸೀಕೆರೆಯಿಂದಾಚೆ ಇರುವ ಬಾಣಾವರದ ಸ್ಟೇಷನ್ನಲ್ಲಿ ಇಳಿಯಬೇಕು. ಬಾಣಾವರದಿಂದ ಹಳೇಬೀಡಿಗೆ ೧೮ ಮೈಲಿ. ಬೇಲೂರಿನಿಂದ ಪೂರ್ವಕ್ಕೆ ೧೦ ಮೈಲಿ. ಬಾಣಾವರದಿಂದಾಗಲೀ ಅಥವಾ ಅರಿಸೀಕೆರೆಯಿಂದಾಗಲೀ ನೇರವಾಗಿ ಅದನ್ನು ಸೇರಬಹುದು. ಈ ಸ್ಥಳಗಳಿಂದ ಹಳೇಬೀಡು ಮತ್ತು ಬೇಲೂರಿಗೆ ಬಸ್ಸುಗಳು ಸಂಚರಿಸುತ್ತವೆ. ಇಲ್ಲದಿದ್ದರೆ ಸಾಲಿಗಾಮೆಯ ಹೊಸ ರಸ್ತೆಯ ಮೂಲಕ ಅದನ್ನು ತಲುಪಬಹುದು. ಇಲ್ಲವೆ ಹಾಸನದಿಂದ ಬೇಲೂರಿನ ಮಾರ್ಗವಾಗಿಯಾದರೂ ಹೋಗಬಹುದು. ಹೊಯ್ಸಳೇಶ್ವರ ದೇವಾಲಯದ ಬಳಿ ಎರಡನೇ ತರಗತಿಯ ಪ್ರಯಾಣಿಕರು ತಂಗಲು ಒಂದು ಬಂಗ್ಲೆಯಿದೆ. ಅಲ್ಲಿ ಪ್ರವಾಸಿಕರಿಗೆ ಭೋಜನ ಮತ್ತು ವಸತಿಯ ಸೌಕರ್ಯಗಳನ್ನೇರ್ಪಡಿಸಿದೆ.

ಹಳೇಬೀಡಿನ ಸಂಕ್ಷಿಪ್ತ ಚರಿತ್ರೆ :

ಕ್ರಿ. ಶ. ೧೩ನೆಯ ಶತಮಾನದಲ್ಲಿ ವಿಜಯ ನಗರದ ನಿವಾಸಿಗಳು ಬೇಲೂರಿನಲ್ಲಿ ಒಂದು ಹೊಸ ಪಟ್ಟಣವನ್ನು ಕಟ್ಟಿ, ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ, ಇದನ್ನು "ಹಳೇಬೀಡು" ಅಥವಾ 'ಹಳೆಯ ಪಟ್ಟಣ'ವೆಂದು ಕರೆದರು. ಇದು ನಾಲ್ಕು ಕಡೆಗಳಲ್ಲಿಯೂ ಇಳಿಜಾರಾದ ಒಂದು ಕಣಿವೆಯಲ್ಲಿದೆ; ಸುತ್ತಲೂ ಹಬ್ಬಿ ನಿಂದಿರುವ ಬೆಟ್ಟದ ಸಾಲು ಕುರುಚಲು ಗಿಡಗಳಿಂದ ಆವೃತವಾಗಿ ಹುಲಿ ಮತ್ತು ಕಾಡು ಹಂದಿಗಳ ವಿಹಾರ ಸ್ಥಾನವಾಗಿದೆ. ಪ್ರಾಯಶಃ ೯ನೆಯ ಶತಮಾನದಲ್ಲಿ ರಾಷ್ಟ್ರಕೂಟರು ಇಲ್ಲಿ 'ದ್ವಾರಸಮುದ್ರ'ವೆಂಬ ಒಂದು ದೊಡ್ಡ ಸರೋವರವನ್ನು ನಿರ್ಮಿಸಿದರು. ಆದರೆ ಆಗ ಇದಕ್ಕೆ ಅಷ್ಟು ಪ್ರಾಮುಖ್ಯತೆ ಇರಲಿಲ್ಲ. ಕ್ರಿ. ಶ. ೧೨ನೆಯ ಶತಮಾನದಲ್ಲಿ ಹೊಯ್ಸಳರು ಇಲ್ಲಿ ನೂತನ ನಗರ ನಿರ್ಮಾಣ ಮಾಡಿ, ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ ಇದು ವೈಭವದ ಉಚ್ಚ ಶಿಖರವನ್ನೇರಿ ರಾರಾಜಿಸಿತು. ಇದರ ಅನುಪಮ ಸೌಂದರ್ಯವೂ, ಅಪರಿಮಿತವಾದ ಸಂಪತ್ತೂ, ಆಳರಸರ ನೆಗಳ್ತೆಯೂ ಇದರ ಕೀರ್ತಿಯನ್ನು ದಿಗಂತ ವಿಶ್ರಾಂತವಾಗಿ ಮಾಡಿದುವು. ಹೊಯ್ಸಳರು ಒಂದೂವರೆ ಶತಮಾನಗಳ ಕಾಲ ಕೃಷ್ಣೆಯ ದಕ್ಷಿಣ ಭಾಗವನ್ನು ಬಲದರ್ಪಗಳಿಂದ ಆಳಿದರು. ಇಷ್ಟರಲ್ಲಿ ಉತ್ತರದ ಸುಲ್ತಾನರು ಇದರ ವಿಪುಲೈಶ್ವರ್ಯವನ್ನು ತೃಷಿತ ನಯನಗಳಿಂದ ನೋಡಹತ್ತಿದರು. ಕ್ರಿ. ಶ. ೧೩೧೧ರಲ್ಲಿ ಮಲ್ಲಿಕ್‌ಕಾಫರನು ಇದನ್ನು ಮುತ್ತಿ, ಸ್ಥಳವನ್ನು ಲೂಟಿ ಮಾಡಿ, ಕೈಗೆ ಸಿಕ್ಕಿದ ಚಿನ್ನ, ಬೆಳ್ಳಿ, ರತ್ನಗಳನ್ನು ಒಂಟೆಗಳಮೇಲೆ ಹೇರಿಸಿಕೊಂಡು ದಿಲ್ಲಿಗೆ ಹಿಂದಿರುಗಿದನು. ಕ್ರಿ. ಶ. ೧೩೨೬ರಲ್ಲಿ ಇದು ಪುನಃ ಮಹಮದ್-ಬಿನ್-ತೊಗಲಕನ ಸೈನ್ಯದ ಧಾಳಿಗೆ ತುತ್ತಾಯಿತು. ಕ್ರಿ. ಶ. ೧೩೪೨ರಲ್ಲಿ ನಡೆದ ತಿರುಚನಾಪಳ್ಳಿಯ ಕದನದಲ್ಲಿ ವೀರಶಿರೋಮಣಿ ಮುಮ್ಮಡಿ ವೀರಬಲ್ಲಾಳನು ಮಧುರೆಯ ಸುಲ್ತಾನನಿಂದ ಹತನಾಗಲು ಹಳೇಬೀಡಿನ ಭಾಗ್ಯಲಕ್ಷ್ಮಿಯು ಅದೃಶ್ಯಳಾದಳು. ಪಟ್ಟಣವು ಹಾಳುಬಿತ್ತು.

ಹಳೇಬೀಡಿನ ಸಾಮಾನ್ಯ ವರ್ಣನೆ :

ದ್ವಾರಸಮುದ್ರವು ಉನ್ನತ ಸ್ಥಿತಿಯಲ್ಲಿದ್ದಾಗ, ಅದು ಈಗಿನ ಹಳೇಬೀಡು ಗ್ರಾಮದ ದಕ್ಷಿಣಕ್ಕೂ

ಪಶ್ಚಿಮಕ್ಕೂ ಹಬ್ಬಿತ್ತು. ಸಣ್ಣ ದೊಡ್ಡ ಬಂಡೆಗಳಿಂದ ರೂಪಿತವಾದ ಕೋಟೆ ಗೋಡೆಯಿಂದ ಸುತ್ತಲ್ಪಟ್ಟು, ಅದರ ತಪ್ಪಲನ್ನು 'ದ್ವಾರಸಮುದ್ರ' ಸರೋವರಕ್ಕೆ ಸೇರಿದಂತಿದ್ದ ಆಳವಾದ ಕಂದಕವು ತೊಳೆಯುತ್ತಿತ್ತು. ಈ ಕೋಟೆ ಗೋಡೆಗೆ ಸೇರಿದಂತೆ ಹನ್ನೆರಡು ದ್ವಾರಗಳಿದ್ದುವು. ಅವುಗಳಲ್ಲಿ ಬೇಲೂರಿಗೆ ಹೋಗುವ ನೈಋತ್ಯದ ದ್ವಾರವೂ, ಕೆರೆಯ ಏರಿಗೆ ಒಯ್ಯುವ ಪೂರ್ವ ದ್ವಾರವೂ ಬಹು ಮುಖ್ಯವಾಗಿದ್ದುವು. ಇವೆರಡರ ಮಧ್ಯೆ ನಗರದ ಮುಖ್ಯ ಬೀದಿಯಿತ್ತು. ಈ ಬೀದಿಯ ದಕ್ಷಿಣಕ್ಕೆ ಎದ್ದಿರುವ ಬೆಣ್ಣೆ ಗುಡ್ಡದ ಮೇಲೆ ನಿಂತು ನೋಡಿದರೆ ಸುತ್ತಲಿನ ದೃಶ್ಯವು ಕಣ್ಣಿಗೆ ಕಟ್ಟುವುದು. ಬೆಣ್ಣೆ ಗುಡ್ಡದ ಉತ್ತರಕ್ಕೆ ಇರುವ ದಿಬ್ಬಗಳಮೇಲೆ ನಗರೇಶ್ವರ ಮತ್ತು ಇತರ ಪಾಳು ದೇವಸ್ಥಾನಗಳ ಸುಂದರ ವಿಗ್ರಹಗಳು ರಾಶಿಯಾಗಿ ಬಿದ್ದಿವೆ. ಉತ್ತರ ದ್ವಾರದ ಬಳಿ ಸುಸ್ಥಿತಿಯಲ್ಲಿರುವ ಇನ್ನೂ ಕೆಲವು ಗುಡಿಗಳಿವೆ. ಆದರೆ ಬೆಣ್ಣೆ ಗುಡ್ಡದ ಪೂರ್ವಭಾಗವು ನಗರದ ಬಹು ಮುಖ್ಯವಾದ ಭಾಗ. ಇಲ್ಲಿದ್ದ ಒಂದು ಸಣ್ಣ ದುರ್ಗದಲ್ಲಿ ಹೊಯ್ಸಳ ರಾಜರ ಅರಮನೆಯಿತ್ತು. ಇದು ಈಗ ವ್ಯವಸಾಯ ಕ್ಷೇತ್ರವಾಗಿ ಪರಿಣಮಿಸಿ ಉತ್ತ ಭೂಮಿಯು ಮೆಟ್ಟಲು ಮೆಟ್ಟಲಾಗಿ ಏರುತ್ತಾ ಹೋಗುವಂತೆ ಭಾಸವಾಗುತ್ತದೆ; ಒಟ್ಟಿನಲ್ಲಿ ಭೂಸಂಶೋಧಕನ ಕೈವಾಡಕ್ಕೆ ಯೋಗ್ಯಸ್ಥಾನವಾಗಿದೆ. ಅರಮನೆಯ ಪೂರ್ವ ಮತ್ತು ಈಶಾನ್ಯ ಭಾಗಗಳಲ್ಲಿ ಮೂರು ಗುಂಪು ದೇವಸ್ಥಾನಗಳಿವೆ. ಇವು ವಾಸ್ತು ಶಾಸ್ತ್ರಾಭ್ಯಾಸಕರ ಮತ್ತು ಕಲೋಪಾಸಕರ ಅವಗಾಹನೆಗೆ ಅರ್ಹವಾಗಿವೆ. ಅವು ಸುರಕ್ಷಿತ ಸ್ಥಿತಿಯಲ್ಲಿದ್ದು ಹೊಯ್ಸಳರ ಕಾಲದ ಕಲಾ ಮಹತ್ವವನ್ನು ಎತ್ತಿ ತೋರುತ್ತಿವೆ.

ಹೊಯ್ಸಳೇಶ್ವರ ದೇವಾಲಯ

ಚರಿತ್ರೆ ಮತ್ತು ಸಾಮಾನ್ಯ ವರ್ಣನೆ:

ಈ ಸ್ಥಳದಲ್ಲಿ ಅತಿ ಮುಖ್ಯವಾದ ಹೊಯ್ಸಳೇಶ್ವರ ದೇವಾಲಯವು ವಿಷ್ಣುವರ್ಧನನ ಕೈಕೆಳಗಿನ ಕೇತಮಲ್ಲನೆಂಬ ಅಧಿಕಾರಿಯಿಂದ ಸುಮಾರು ಕ್ರಿ. ಶ. ೧೧೨೧ರಲ್ಲಿ ಕಟ್ಟಲ್ಪಟ್ಟಿತು. ಆದರೆ ವಿಗ್ರಹ ನಿರ್ಮಾಣ ಕಾರ್ಯವು ಅಲ್ಲಿಗೇ ನಿಂತುಬಿಡದೆ, ಇನ್ನೂ ಕೆಲವು ಕಾಲ ಮುಂದುವರಿದಿರಬೇಕು. ಏಕೆಂದರೆ ಈ ದೇವಸ್ಥಾನದ ನವರಂಗಗಳು ಮೊದಲು ಗೋಡೆಗಳಿಲ್ಲದೆ ಬಯಲಾಗಿತ್ತೆಂದೂ, ಸುಮಾರು ೧೧೪೧ರಲ್ಲಿ ವಿಷ್ಣುವರ್ಧನನ ಮಗನಾದ ಒಂದನೆಯ ನರಸಿಂಹನು ಜಾಲಂಧ್ರಗಳನ್ನೂ ಬಾಗಿಲುವಾಡಗಳನ್ನೂ ಇಡಿಸಿದನೆಂದೂ ಅಲ್ಲಿರುವ ಒಂದು ಶಾಸನವು ತಿಳಿಸುತ್ತದೆ. ಭಾರತೀಯ ವಾಸ್ತುಶಿಲ್ಪ ಸಂಶೋಧಕರಲ್ಲಿ ಅಗ್ರಗಣ್ಯರಾದ ಜೇಮ್ಸ್ ಫೆರ್ಗ್ಯುಸನ್ ಸಾಹೇಬರು ಹೇಳುವಂತೆ "ಹಿಂದೂ ಶಿಲ್ಪಕಲೆಯ ಪುರಸ್ಕೃತರು ಆಧಾರಭೂತವಾಗಿ ತೆಗೆದುಕೊಳ್ಳುವ ಕಟ್ಟಡಗಳಲ್ಲಿ ಇದೊಂದಾಗಿದೆ."

ಇದು ಒಂದರ ಮಗ್ಗುಲಲ್ಲಿ ಒಂದರಂತೆ ಕಟ್ಟಿದ ಎರಡು ಗರ್ಭಗೃಹಗಳುಳ್ಳ ಜೋಡಿ ಕಟ್ಟಡ. ಅಂತೆಯೇ ಇದರಲ್ಲಿ ಎರಡು ಶುಕನಾಸಿಗಳೂ, ಎರಡು ನವರಂಗಗಳೂ ಈ ನವರಂಗಗಳ ಒಂದೊಂದರ ಮುಂದೂ ಒಂದೊಂದರಂತೆ ಎರಡು ನಂದಿ ಮಂಟಪಗಳೂ ಇವೆ. ಈ ನವರಂಗಗಳನ್ನು ಸೇರಿಸುವಂತೆ ಒಂದು ಸಣ್ಣ ಹಜಾರವಿದೆ. ಅಲ್ಲದೆ ಉತ್ತರ ದ್ವಾರದ ಮುಂದೆ ಒಂದು ಜೊತೆ, ದಕ್ಷಿಣ ದ್ವಾರದ ಮುಂದೆ ಒಂದು ಜೊತೆ, ನಂದಿಮಂಟಪಗಳಿಗೆ ಅಭಿಮುಖವಾಗಿ ಒಂದು ಜೊತೆ—ಹೀಗೆ ಮೂರು ಜೊತೆ ದ್ವಾರಮಂಟಪಗಳಿವೆ. ಗರ್ಭಗುಡಿಗಳು ನಕ್ಷತ್ರಾಕಾರವಾಗಿಯೂ, ನವರಂಗಗಳು ಬಹು ಮೂಲೆಗಳುಳ್ಳ ಸಮಚತುರಸ್ರಾಕಾರವಾಗಿಯೂ ಇವೆ; ಪ್ರತಿಯೊಂದು ಅರ್ಧವೂ ತಲವಿನ್ಯಾಸದಲ್ಲಿ ಬೇಲೂರು ದೇವಾಲಯವನ್ನು ಹೋಲುತ್ತದೆ. ಉತ್ತರ ಗೃಹದಲ್ಲಿ ಹೊಯ್ಸಳೇಶ್ವರ ಲಿಂಗವೂ ದಕ್ಷಿಣ ಗೃಹದಲ್ಲಿ ಶಾಂತಲೇಶ್ವರ ಲಿಂಗವೂ ಇವೆ. ದಕ್ಷಿಣ ಗೃಹದಲ್ಲಿರುವ ಲಿಂಗಕ್ಕೆ ವಿಷ್ಣುವರ್ಧನನ ಪಟ್ಟಮಹಿಷಿಯಾದ ಶಾಂತಲಾ ದೇವಿಯ ಹೆಸರನ್ನು ಕೊಟ್ಟಿದೆ. ಇದರ ಮುಂದಿರುವ ನಂದಿ ಮಂಟಪಕ್ಕೆ ಸೇರಿದ ಹಾಗೆ ಸೂರ್ಯನಾರಾಯಣನ ಗುಡಿ ಇದೆ.

ಮೇಲೆ ಹೇಳಿದ ಹಾಗೆ ಈ ದೇವಾಲಯದ ನವ

ರಂಗಗಳು ಮೊದಲು ಬಯಲಾಗಿದ್ದು ಬೆಳಕು ಬೀಳುವಂತಿತ್ತು. ಜಾಲಂಧ್ರಗಳನ್ನೂ ಬಾಗಿಲುವಾಡಗಳನ್ನು ಸೇರಿಸಿದ ಮೇಲೆ ಇವುಗಳಲ್ಲಿ ಕತ್ತಲೆ ಕವಿದುಕೊಂಡಿತು. ಪೂರ್ವ ದಿಕ್ಕಿನ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ದಿಮ್ಮಿಯ ಕೆಲವು ಭಾಗಗಳು ಸುಮಾರು ಹದಿಮೂರನೆಯ ಶತಮಾನದಲ್ಲಿ ಸೇರಿಸಲ್ಪಟ್ಟ ಹಾಗೆ ತೋರುತ್ತದೆ. ಈ ಶತಮಾನದ ಕೊನೆಯಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದವರು ಸುತ್ತುಮುತ್ತಲಿನ ಗುಡಿಗಳ ಅವಶೇಷಗಳನ್ನು ತಂದು ನಂದಿ ಮಂಟಪಗಳನ್ನು ವಿಶಾಲಗೊಳಿಸಿರಬೇಕು. ಈ ಕಾಲದಲ್ಲಿ ದೇವಸ್ಥಾನಕ್ಕೆ ಅನೇಕ ದತ್ತಿಗಳು ಕೊಡಲ್ಪಟ್ಟಿರುವ ಶಾಸನಗಳು ತಿಳಿಸುತ್ತವೆ. ಕ್ರಿ. ಶ. ೧೩೧೦ ರಲ್ಲಿ ಮಲ್ಲಿಕ್‌ಕಾಫರನು ದ್ವಾರಸಮುದ್ರವನ್ನು ಮುತ್ತಿ ಅದನ್ನು ಕೊಳ್ಳೆ ಹೊಡೆದನು. ಆ ತರುವಾಯ ಇದು ಇಳಿ ಮುಖವಾಯಿತು. ಇತ್ತೀಚೆಗೆ ಮೈಸೂರು ಸರ್ಕಾರದವರು ಈ ದೇವಾಲಯದಲ್ಲಿ ಪೂಜೆಯು ನಡೆಯುವಂತೆ ಏರ್ಪಡಿಸಿ, ಇದನ್ನು ವಿಶೇಷ ಧನವ್ಯಯದಿಂದ ಸುರಕ್ಷಿತವಾದ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರುತ್ತಿದ್ದಾರೆ.

ಚಿತ್ರ ಪಟ್ಟಿಕೆಗಳು

ಚಾಲುಕ್ಯ ರೀತಿಯಲ್ಲಿ ಕಟ್ಟಿದ ಕಟ್ಟಡಗಳಲ್ಲಾಗಲೀ, ಹೊಯ್ಸಳರಿಂದ ನಿರ್ಮಿತವಾದುವುಗಳಲ್ಲಾಗಲೀ, ಸೂತ್ರಪಾತ. ಅವಯವ ಸನ್ನಿವೇಶ, ವಿನ್ಯಾಸ ವೈಚಿತ್ರ್ಯ, ಅಲಂಕಾರ ವೈಖರಿ, ವಿಗ್ರಹ ನಿರ್ಮಾಣ ಚಾತುರ್ಯ ಇವುಗಳಲ್ಲಿ ಹೊಯ್ಸಳೇಶ್ವರ ದೇವಾಲಯವನ್ನು ಸರಿದೂಗುವ ಮತ್ತೊಂದು ಕಟ್ಟಡವಿಲ್ಲ. ಅನನ್ಯ ಸಾಮಾನ್ಯ ರೀತಿಯಲ್ಲಿ ನಿರ್ಮಿತವಾದ ಈ ದೇಗುಲವು ಮನೆಯವರ ಮುದ್ದಾಗಿ, ನೆರೆಯವರ ಕಣ್ಣಾಗಿ, ಗುಡಿಗಳ ಮಾಣಿಕವಾಗಿ ಶೋಭಿಸುತ್ತಲಿದೆ.

ದೇವಾಲಯವು ಕಟ್ಟಡದ ತಲವಿನ್ಯಾಸವನ್ನೇ ಎಡೆಬಿಡದೆ ಅನುಸರಿಸಿಕೊಂಡು ಬರುವ ಜಗತಿಯ ಮೇಲೆ ಪ್ರಾರಂಭವಾಗುತ್ತದೆ. ಗೋಡೆಗಳ ಹೊರ ಮುಖದಲ್ಲಿ ಸುತ್ತಲೂ ಒಂದರ ಮೇಲೆ ಒಂದರಂತೆ ಎಂಟು ಸಾಲುಳ್ಳ ಚಿತ್ರಪಟ್ಟಿಕೆಯಿದೆ. ಅವು ಬುಡದಿಂದ ಕ್ರಮವಾಗಿ—೧. ಸಜ್ಜಾಗಿ ಹೋಗುತ್ತಿರುವ ಯುದ್ಧದ ಆನೆಗಳು. ೨. ಸಿಂಹಗಳು ೩. ಬಳ್ಳಿಯ ಬೇಲು. ೪. ರಾವುತರು. ೫. ಬಳ್ಳಿಯ ಬೇಲು. ೬. ಪುರಾಣೇತಿಹಾಸಗಳನ್ನು ತೋರಿಸುವ ದೃಶ್ಯಗಳು. ೭. ಮಕರಗಳು—ಇವುಗಳ ಪುಚ್ಛಗಳು, ಪುಷ್ಪದ ಆಕಾರದಲ್ಲಿಯೂ, ಬೀಸಣಿಗೆಯ ಆಕಾರದಲ್ಲಿಯೂ ಇರುತ್ತವೆ. ಅಲ್ಲದೆ ಇವು ನೀಳವಾದ ದೇಹದಿಂದಲೂ, ಕೋರೆದಾಡೆಗಳಿಂದಲೂ ಕೂಡಿರುತ್ತವೆ. ೮. ಹಂಸಗಳು.

ದೊಡ್ಡ ವಿಗ್ರಹಗಳು

ಇವುಗಳ ಮೇಲೆ ಪೂರ್ವದ ಕಡೆ ಜಾಲಂಧ್ರಗಳೂ, ಪಶ್ಚಿಮದ ಗೋಡೆಯ ಮೇಲೂ ಪೂರ್ವದ ಗೋಡೆಯಿಂದ ಚಾಚಿಕೊಂಡಿರುವ ದಿಮ್ಮಿಯ ಮೇಲೂ ದೊಡ್ಡ ದೊಡ್ಡ ದೇವತಾ ವಿಗ್ರಹಗಳಿವೆ. ಇವು ಮೂರು ಅಡಿ ಎತ್ತರವಾಗಿ ಪೀಠಗಳಿಂದಲೂ ಅಲಂಕಾರ ಯುಕ್ತವಾದ ತೋರಣಗಳಿಂದಲೂ ಕೂಡಿರುತ್ತವೆ. ನಾನಾ ಭಾವ ಭಂಗಿಗಳಲ್ಲಿ ನಿಂತಿರುವ ಈ ವಿಗ್ರಹಗಳು ಕಲಾದೃಷ್ಟಿಯಲ್ಲಿ ಅಗ್ರಸ್ಥಾನವನ್ನು ವಹಿಸಲು ಯೋಗ್ಯವಾಗಿವೆ; ಮಾತ್ರವಲ್ಲದೆ ಪ್ರತಿಮಾಶಾಸ್ತ್ರವನ್ನು ಕಲಿಯುವವರಿಗೆ ಅತ್ಯಮೂಲ್ಯವಾದ ಸಂಗತಿಗಳನ್ನು ಒದಗಿಸಿ ಕೊಡುತ್ತವೆ. ಶಿವಮೂರ್ತಿಗಳನ್ನು ಪ್ರಾಮುಖ್ಯವಾಗಿ ತೋರಿಸಿದ್ದರೂ, ವಿಷ್ಣು ಮತ್ತು ಶಕ್ತಿಯರು ಕೈವಾಡಕ್ಕೆ ಪಾತ್ರರಾಗಿದ್ದಾರೆ. ಒಟ್ಟಿನಲ್ಲಿ ಈ ದೇವಾಲಯದ ಗೋಡೆಗಳು ಪ್ರಾಚೀನ ಹಿಂದೂ ಶಿಲ್ಪದ ಮಹಾ ಪ್ರದರ್ಶನ ಶಾಲೆಯೆಂದು ಹೇಳಬಹುದು. ಇವುಗಳಲ್ಲಿ ಕೆಲವನ್ನು ಮುಂದೆ ವರ್ಣಿಸಿದೆ.

ಗೋಪುರಗಳು ಮತ್ತು ಛಾವಣಿಗಳು

ಪೂರ್ವದ ಕಡೆ ಜಾಲಂಧ್ರದಳ ಮಧ್ಯೆ ಇರುವ ಕಂಬಗಳ ಮೇಲೆಲ್ಲಾ ಮದನಕೈ ವಿಗ್ರಹಗಳಿದ್ದುವು. ಆದರೆ ಈಗ ಅವುಗಳಲ್ಲಿ ಉಳಿದಿರುವುದು ಕೆಲವು ಮಾತ್ರ. ಇದರಿಂದ ದೇವಾಲಯಕ್ಕೆ ಎಂತಹ ದೊಡ್ಡ ನಷ್ಟ ಉಂಟಾಗಿದೆ, ಅದರ ಸೌಂದ



ರ್ಯಕ್ಕೆ ಎಂತಹ ಅಪಘಾತ ಒದಗಿದೆ ಎಂಬುದು ಸುಲಭವಾಗಿ ತಿಳಿಯುವಂತಿದೆ. ಈ ದೇವಾಲಯಕ್ಕೆ ಗೋಪುರಗಳಿತ್ತೇ ಇಲ್ಲವೇ ಎಂಬ ವಿಷಯದಲ್ಲಿ ಫೆರ್ಗ್ಯುರ್ಸನ್ ಮತ್ತು ಇತರ ಲೇಖಕರಲ್ಲಿ ಪ್ರಬಲ ಸಂಶಯವು ತಲೆದೋರಿದೆ. ಫೆರ್ಗ್ಯುರ್ಸನ್ ಸಾಹೇಬರು "ಗರ್ಭಗೃಹಗಳ ಮೇಲೆ ಎರಡು ದೊಡ್ಡ ಗೋಪುರಗಳನ್ನೂ, ಅವುಗಳ ಮುಂದೆ ನಾಲ್ಕು ಗೋಪುರಗಳನ್ನೂ, ಸುಕನಾಸಿಗಳ ಮೇಲೆ ಲೋವೆಯಂತೆ ಒಂದೊಂದನ್ನೂ ಕಟ್ಟಬೇಕೆಂದು ಶಿಲ್ಪಿಯು ಯೋಚಿಸಿದ್ದಿರಬೇಕು" ಎಂದು ಹೇಳುತ್ತಾರೆ. ಇದು ಸರಿಯಲ್ಲ. ಗರ್ಭಗೃಹಗಳ ಮೇಲೆ ಇತ್ತೀಚಿನವರೆಗೆ ಬೇಲೂರಿನಲ್ಲಿದ್ದಂತೆ ಇಟ್ಟಿಗೆ ಗಾರೆಗಳಿಂದ ಕಟ್ಟಿದ ನಕ್ಷತ್ರಾಕಾರದ ಗೋಪುರಗಳಿದ್ದುವೆಂದು ಹೇಳುವುದು ಸೂಕ್ತವಾಗಿದೆ.

ನಂದಿ ಮಂಟಪಗಳು :

ಹಿಂದೆ ಹೇಳಿದಂತೆ ದೇವಾಲಯದ ಪೂರ್ವಕ್ಕೆ ಪ್ರತಿಯೊಂದು ಲಿಂಗದ ಎದುರಿಗೂ ಒಂದೊಂದು ನಂದಿ ಮಂಟಪವಿದೆ. ಪ್ರತಿಯೊಂದರಲ್ಲೂ ಬಳಪದ ಕಲ್ಲಿನಿಂದ ಕಡೆದ ಒಂದೊಂದು ನಂದಿಯ ವಿಗ್ರಹವಿದೆ. ಇವುಗಳಲ್ಲಿ ದಕ್ಷಿಣ ಗೃಹದ ಮುಂಭಾಗದಲ್ಲಿರುವ ಮಂಟಪವು ದೊಡ್ಡದಾಗಿದ್ದು ಅದರ ಹಿಂದುಗಡೆ ರಮ್ಯವಾಗಿ ಕೆತ್ತಲ್ಪಟ್ಟ ಪುಟ್ಟ ಗುಡಿಯೊಂದರಲ್ಲಿ ಸುಂದರವಾದ ಸೂರ್ಯನ ಮೂರ್ತಿಯಿದೆ. ಇದರ ಪೀಠದಲ್ಲಿ ಏಳು ಕುದುರೆಗಳನ್ನು ಕೆತ್ತಿದೆ. ಮೂರ್ತಿಯ ಅಕ್ಕಪಕ್ಕಗಳಲ್ಲಿ ದೇವಿಯರು ನಿಂತು ಬಾಣಪ್ರಯೋಗ ಮಾಡುತ್ತಿದ್ದಾರೆ.

ಕೆಲವು ಮುಖ್ಯವಾದ ಮೂರ್ತಿಗಳು
ಮತ್ತು ಬಾಗಿಲುವಾಡಗಳು :

ಗುಡಿಗಳ ಮೂರ್ತಿಗಳನ್ನು ನೋಡಿ ಮೆಚ್ಚಲು, ಜಗತಿಯ ಮೇಲೆ, ಆಗ್ನೇಯದಿಂದ ಪ್ರಾರಂಭ ಮಾಡಿ ಪ್ರದಕ್ಷಿಣೆಯ ರೂಪದಲ್ಲಿ ಹೋಗಬೇಕು. ಹಾಗೆ ಹೋಗುವಾಗ ನಾವು ಗಮನಿಸಬೇಕಾದ ಮುಖ್ಯ ಮೂರ್ತಿಗಳಾವುವೆಂದರೆ:—

ಈಶಾನ್ಯ

೧ ಈ ದೇವಾಲಯವನ್ನು ಕಟ್ಟಿಸಿದ ಕೇತಮಲ್ಲನ ಸಭೆ. ಮಧ್ಯೆ ಕೇತಮಲ್ಲ; ಪಾರ್ಶ್ವದಲ್ಲಿ ಅಧಿಕಾರಿಗಳು ಕೈಜೋಡಿಸಿಕೊಂಡು ಕುಳಿತಿರುವಂತೆಯೂ, ಸೇವಕರು ನಿಂತಿರುವಂತೆಯೂ ಕೆತ್ತಲ್ಪಟ್ಟಿದೆ.

೨ ದೇವದಾನವರು ಸೇರಿ ಅಮೃತಕ್ಕಾಗಿ ವಾಸುಕಿಯನ್ನೇ ಹಗ್ಗವನ್ನಾಗಿಯೂ, ಮಂದರ ಪರ್ವತವನ್ನೇ ಕಡೆಗೋಲನ್ನಾಗಿಯೂ ಮಾಡಿಕೊಂಡು ಕ್ಷೀರಸಾಗರವನ್ನು ಮಥಿಸುತ್ತಿದ್ದಾರೆ. ವಿಷ್ಣುವು ಕೂರ್ಮನಾಗಿ ಮಂದರ ಪರ್ವತವನ್ನು ಬೆನ್ನಿನ ಮೇಲೆ ಹೊತ್ತುಕೊಂಡಿದ್ದಾನೆ. ಆದರೆ ಇಲ್ಲಿನ ಅನೇಕ ವಿಗ್ರಹಗಳು ಭಿನ್ನವಾಗಿರುವುದು ತುಂಬ ಶೋಚನೀಯವಾಗಿದೆ.

೧೩—೧೮ ಶ್ರೀಕೃಷ್ಣನ ಬಾಲಲೀಲೆಗಳು

ಆಗ್ನೇಯದಲ್ಲಿರುವ ದ್ವಾರಮುಖದಲ್ಲಿ ತಾಂಡವ ಮೂರ್ತಿಯು ಕೆತ್ತಲ್ಪಟ್ಟಿದೆ. ಇದರಲ್ಲಿ ಬಿಡಿಸಿರುವ ತೋರಣಗಳ ಸೊಗಸನ್ನು ಮನಗಂಡರೆ ಶಿಲ್ಪಿಯು ಲೋಹದಲ್ಲಿ ಮಾಡಬಹುದಾದ ಕೆಲಸವನ್ನೆಲ್ಲಾ ಕಲ್ಲಿನಲ್ಲಿ ಮಾಡಿರುವನೆಂದು ಧಾರಾಳವಾಗಿ ಹೇಳಬಹುದು. ಶಿಲ್ಪಿ: ದೇವೋಜ.

೨೦—೨೫ ಮಹಾಭಾರತ ಯುದ್ಧ

ಯುದ್ಧವು ಬಲು ಚೆನ್ನಾಗಿ ಚಿತ್ರಿಸಲ್ಪಟ್ಟು, ಹದಿನೆಂಟು ದಿನಗಳಲ್ಲಿ ನಡೆದ ಅನೇಕ ಘಟನೆಗಳನ್ನು ಸುಲಭವಾಗಿ ಗುರುತಿಸಬಹುದು. ಆಗ್ನೇಯದಲ್ಲಿರುವ ಶಿಲಾಫಲಕಗಳ ಪೈಕಿ ವೃದ್ಧರಾದ ಭೀಷ್ಮರು ಕೌರವ ಸೈನ್ಯಾಧಿಪತ್ಯವನ್ನು ವಹಿಸುವುದು, ಅರ್ಜುನನು ದ್ರೋಣರೊಡನೆ ಯುದ್ಧ ಮಾಡುವುದು, ಅರ್ಜುನ ವಿಜಯ, ನರ್ತಕರು ಜಯೋತ್ಸಾಹದಿಂದ ಕುಣಿಯುತ್ತಿರುವುದು ಇವು ಮುಖ್ಯವಾದುವು.

ದಕ್ಷಿಣ ದ್ವಾರವು ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದೆ. ಅದರ ಎರಡು ಪಕ್ಕಗಳಲ್ಲಿ ಎರಡು ದ್ವಾರಪಾಲಕ ವಿಗ್ರಹಗಳಿವೆ. ಅವು ಆರು ಅಡಿ ಎತ್ತರವಾಗಿ ಜಟಾಮುಕುಟಗಳನ್ನು ಧರಿಸಿಕೊಂಡು ತ್ರಿಭಂಗ ಭಂಗಿಯಲ್ಲಿ ನಿಂತಿವೆ. ಬಲಭಾಗದಲ್ಲಿರುವುದು ಹಿಂದಿನ ಎರಡು ಕೈಗಳಲ್ಲಿ ಸರ್ಪ ಡಮರುಗಗಳನ್ನೂ ಮುಂದಿನ ಎರಡು ಕೈಗಳಲ್ಲಿ ಗದೆ ತ್ರಿಶೂಲಗಳನ್ನೂ ಧರಿಸಿಕೊಂಡಿದೆ. ಎಡಭಾಗದಲ್ಲಿರುವುದು ಡಮರುಗ

ವನ್ನೂ ಜ್ವಲಿಸುತ್ತಿರುವ ಅಗ್ನಿಯನ್ನೂ ಹಿಡಿದು ಕೊಂಡಿದೆ. ಮುಂದಿನ ಕೈಗಳು ಮುರಿದುಹೋ ಗಿವೆ. ದ್ವಾರಮುಖದಲ್ಲಿ ಅಂಧಕಾಸುರವಧ ಮೂರ್ತಿಯು ಕೆತ್ತಲ್ಪಟ್ಟಿದೆ. ಶಿವನು ಎಂಟು ಕೈಗಳಿಂದ ಕೂಡಿ ಅಂಧಕಾಸುರನ ದೇಹದ ಮೇಲೆ ತಾಂಡವ ಮಾಡುತ್ತಿದ್ದಾನೆ. ಜಟಾಜೂಟಧಾರಿಯೂ ಫಾಲಾಕ್ಷನೂ ಆದ ಆತನು ಪ್ರಸನ್ನ ಮುಖಮುದ್ರೆಯಿಂದ ಕೂಡಿ ಮಂದಹಾಸವನ್ನು ಸೂಸುತ್ತಾ ತನ್ನ ಕರಾಳ ನೃತ್ಯದಲ್ಲಿ ತಲ್ಲೀನನಾಗಿದ್ದಾನೆ. ದೈತ್ಯನ ನೋಟವು ಶಿವನ ಮೇಲಿದೆ. ನಂದಿಯು ಈಶ್ವರನನ್ನೇ ನಿಟ್ಟಿಸುತ್ತಿದ್ದಾನೆ. ಶಿವನ ತಲೆಯ ಮೇಲೆ ಐದು ಹೆಡೆಯ ಸರ್ಪವೂ ಅದರ ಮೇಲೆ ಒಂದು ಸಣ್ಣ ಗೋಪುರವೂ ಕೆತ್ತಲ್ಪಟ್ಟಿದೆ. ಇದರ ಪಕ್ಕಗಳಲ್ಲಿ ಅರೆಗಂಬಗಳಿಂದ ವಿಭಾಗಿಸಲ್ಪಟ್ಟ ಶಿಲಾಫಲಕಗಳಿವೆ. ಇವುಗಳ ಮಧ್ಯೆ ಬಲ ಪಾರ್ಶ್ವದಲ್ಲಿ ಬ್ರಹ್ಮನೂ ಎಡ ಪಾರ್ಶ್ವದಲ್ಲಿ ವಿಷ್ಣುವೂ ನಿಂತಿದ್ದಾರೆ. ಶಿವನ ಮಸ್ತಕದ ಮೇಲೆ ಒಂದು ಲತಾತೋರಣವೂ ಅದನ್ನು ಸುತ್ತುಗಟ್ಟಿ ಒಂದು ಸುಂದರವಾದ ಮಕರ ತೋರಣವೂ, ಆ ತೋರಣಗಳ ಸುಳಿಗಳಲ್ಲಿ ಹಂಸಗಳೂ, ಗಾಯಕರೂ, ಹೂವುಗಳೂ ಕೆತ್ತಲ್ಪಟ್ಟಿವೆ. ಇದಕ್ಕೆ ಸೇರಿದಂತೆ ಬಲಪಕ್ಕದಲ್ಲಿ ಒಂದು, ಎಡಪಕ್ಕದಲ್ಲಿ ಒಂದು, ಹೀಗೆ ಎರಡು ಮಕರಗಳಿವೆ. ಅವು ವೀರನೊಬ್ಬನನ್ನು ಬಾಯಲ್ಲಿ ಇಟ್ಟುಕೊಂಡಿರುವಂತೆಯೂ, ಬೆನ್ನಿನ ಮೇಲೆ ವರುಣನೂ ಅವನ ಪತ್ನಿಯೂ ಕುಳಿತಿರುವಂತೆಯೂ, ಪಾದದ ಬಳಿ ರಾವುತರು ವೀರಾಸನದಲ್ಲಿರುವಂತೆಯೂ ತೋರಿಸಲ್ಪಟ್ಟಿವೆ. ಇದೇ ರೀತಿಯಲ್ಲಿ ಒಂದು ಸಿಂಹವು ಒಂದು ಹಾವನ್ನು ಹಿಡಿದುಕೊಂಡಿದೆ; ಅದರ ಬಲಗಡೆ ಇನ್ನೊಂದು ಸಿಂಹವು ಒಂದು ಆನೆಯೊಡನೆ ಹೋರುತ್ತಿದೆ; ಎಡಗಡೆ ಮತ್ತೊಂದು ಸಿಂಹವು ಸಳನನ್ನು ಎದುರಿಸುತ್ತಿದೆ. ಮಕರ ತೋರಣದ ಮೇಲೆ ಕುಳಿತಿರುವ ಸಪ್ತ ಮಾತೃಕೆಯರು, ಗಂಧರ್ವರು, ಅಷ್ಟದಿಕ್ಪಾಲಕರು ಇವರ ವಿಗ್ರಹಗಳಿವೆ.

ಇದು ನರಸಿಂಹರಾಜನ ಆಸ್ಥಾನ ಶಿಲ್ಪಿಯಾದ ಕೇದಾರೋಜನಿಗಾಗಿ ಕಾಳಿದಾಸಿಯಿಂದ ಕೆತ್ತಲ್ಪಟ್ಟಿತೆಂದು ಅಲ್ಲಿರುವ ಕನ್ನಡ ಶಾಸನವೊಂದು ತಿಳಿಸುತ್ತದೆ. ಹೊಯ್ಸಳ ರಾಜರು ಪ್ರತಿದಿನವೂ ಪ್ರಾತಃಕಾಲದಲ್ಲಿ ದೇವರನ್ನು ಪೂಜಿಸಲು ಈ ದ್ವಾರದಿಂದಲೇ ದೇವಾಲಯವನ್ನು ಪ್ರವೇಶಿಸುತ್ತಿದ್ದರು.

ಪ್ರಾಕಾರದಲ್ಲಿರುವ ಇತರ ವಸ್ತುಗಳು :

ದೇವಾಲಯದಿಂದ ದಕ್ಷಿಣಕ್ಕೆ ಪ್ರಾಕಾರದಲ್ಲಿ ಅಂದವಾಗಿ ಬಿಡಿಸಲ್ಪಟ್ಟ ಗಣಪತಿಯ ದೊಡ್ಡ ವಿಗ್ರಹವಿದೆ. ಪ್ರಾಕಾರದ ನಾನಾ ಭಾಗಗಳಿಂದ ಶೇಖರಿಸಿದ ಮೂರ್ತಿಗಳನ್ನು ಇದರ ಸುತ್ತಲೂ ಇಟ್ಟಿದ್ದಾರೆ. ಇವುಗಳಲ್ಲಿ ಸಳ ವಿಗ್ರಹಗಳು ಬಹು ಮುಖ್ಯವಾದುವು. ವಾಯುವ್ಯ ಮೂಲೆಯಲ್ಲಿ ಒಂದು ಲಿಂಗವಿದೆ. ಅದನ್ನು ಒಳಗೊಂಡು ಇದ್ದಿರಬಹುದಾದ ಗುಡಿಯು ಈಗ ಅದೃಶ್ಯವಾಗಿದೆ. ಮೂಲ ದೇವಾಲಯಕ್ಕೂ ಲಿಂಗಕ್ಕೂ ಮಧ್ಯೆ ಒಂದು ದುಂಡು ಗಂಬವಿದೆ. ಚೌಕವಾದ ಅದರ ಪಾದದ ಮೇಲೆ ಹೊಯ್ಸಳ ವೀರರ ಅಸಮ ಸಾಹಸವನ್ನು ಎತ್ತಿ ತೋರುವ ದುರಂತ ಕಥೆಯೊಂದು ಚಿತ್ರಿಸಲ್ಪಟ್ಟಿದೆ. ಹಿಂದಿನಕಾಲದಲ್ಲಿ ಹಿಂದೂ ರಾಜನೊಬ್ಬನು ಪಟ್ಟಾಭಿಷಿಕ್ತನಾದರೆ 'ಗರುಡ' ರೆಂದು ಕರೆಯಲ್ಪಡುತ್ತಿದ್ದ ಅವನ ಮೈಗಾವಲಿನ ಭಟರು, ರಾಜನು ಗತಿಸಿದ ಮೇಲೆ ತಾವು ಜೀವಿಸುವುದಿಲ್ಲವೆಂದು ಘೋರವಾದ ಪ್ರತಿಜ್ಞೆಯನ್ನು ಮಾಡುತ್ತಿದ್ದರು. ಇದೇ ರೀತಿಯಲ್ಲಿ, ಇಮ್ಮಡಿ ವೀರಬಲ್ಲಾಳನು ಮೃತನಾದಾಗ, ಅವನ ಅಂಗರಕ್ಷಕರು ತಮ್ಮ ಪ್ರತಿಜ್ಞೆಯಂತೆ ಕುಮಾರ ಲಕ್ಷ್ಮನ ನಾಯಕತ್ವದಲ್ಲಿ ಆತ್ಮಹತ್ಯವನ್ನು ಮಾಡಿಕೊಂಡರು. ಈ ಪದ್ಧತಿಯು ಇಂದಿನ ಜಪಾನೀಯರಲ್ಲಿ 'ಹರಿ-ಕರಿ' ಎಂಬ ಹೆಸರಿನಿಂದ ಅಚರಣೆಯಲ್ಲಿದೆ. ಕಂಬದ ಮೇಲಿರುವ ಚಿತ್ರದಲ್ಲಿ ಕುಮಾರ ಲಕ್ಷ್ಮನು ಯೋಗಾಸನದಲ್ಲಿ ಕುಳಿತು ಶಿರಚ್ಛೇದನೆಗೆ ಸಿದ್ಧನಾಗಿರುವಂತೆಯೂ, ಅವನ ಅನುಚರರು ಕತ್ತಿಯಿಂದ ಇರಿದುಕೊಳ್ಳುತ್ತಿರುವಂತೆಯೂ ತೋರಿಸಲ್ಪಟ್ಟಿದೆ.

ನೈಋತ್ಯ

ಮೇಲ್ಗೋಡೆ

೨೩ ತಾಂಡವ ಗಣಪತಿ



ಕೆಳಗೋಡೆ

೨೭ ಪಕ್ಷಿಧ್ವಜ ಯುಕ್ತನಾದ ಕರ್ಣನು ಕಪಿಧ್ವಜಯುಕ್ತನಾದ ಅರ್ಜುನನೊಡನೆ ಹೋರುತ್ತಿದ್ದಾನೆ. ಅರ್ಜುನನ ರಥದ ಚಕ್ರಗಳಿಗೆ ಸ್ಪ್ರಿಂಗ್ ಹಾಕಿದೆ.

ಶಿವನ ಆಸ್ಥಾನ

೨೮ ಭೈರವ-ನಗ್ನ ಭಯಂಕರ ಮೂರ್ತಿ. ಮೋಹಿನಿಯ ನರ್ತನ-ಭಸ್ಮಾಸುರನು ಅವಳನ್ನು ನೋಡಿ ಮೋಹಿತನಾಗಿದ್ದಾನೆ.

ಪಶ್ಚಿಮ

೪೧ ಪ್ರಹ್ಲಾದನು ತನ್ನ ತಂದೆಯಾದ ಹಿರಣ್ಯಕಶಿಪುವು ಕೊಟ್ಟ ಹಿಂಸೆಗಳನ್ನು ಕೈಮುಗಿದುಕೊಂಡು ಅನುಭವಿಸುತ್ತಿದ್ದಾನೆ. ವಿಷ್ಣುವು ನರಸಿಂಹನ ರೂಪದಲ್ಲಿ ತನ್ನ ಭಕ್ತನನ್ನು ರಕ್ಷಿಸುತ್ತಿದ್ದಾನೆ.

ರಾಮರಾವಣರ ಯುದ್ಧ. ರಾವಣನ ರಥಕ್ಕೆ ಗಾರ್ದಭಗಳನ್ನು ಹೂಡಿದೆ.

ಶಿಲ್ಪಿ: ತಾಲಗುಂದೂರ ದಗಿ.

೪೫ ದ್ರೌಪದಿಯ ಸೇಡು. ಭೀಮನು ದುಶ್ಶಾಸನನನ್ನು ಕೊಲ್ಲುತ್ತಿದ್ದಾನೆ. ದ್ರೌಪದಿಯು, ತನ್ನ ಶತ್ರುವಿನ ಕರಳುಗಳನ್ನು ಮುಡಿಯಲ್ಲಿ ಸೇರಿಸುತ್ತಿದ್ದಾಳೆ.

ತ್ರಿವಿಕ್ರಮನು ತನ್ನ ಪಾದಗಳಿಂದ ಮೂರು ಲೋಕಗಳನ್ನು ಅಳೆಯುತ್ತಿದ್ದಾನೆ. ಒಂದು ಬ್ರಹ್ಮ ಲೋಕವನ್ನು ಮುಟ್ಟಿದೆ.

೪೯ ಗಜೇಂದ್ರ ಮೋಕ್ಷ: ವಿಷ್ಣುವು ತನ್ನ ಗಜರೂಪದ ಭಕ್ತನಾದ ಕುವಲಯಾಪೀಡನನ್ನು ಮೊಸಳೆಯ ಬಾಯಿಂದ ರಕ್ಷಿಸುತ್ತಿದ್ದಾನೆ.

೫೩ ರಾಮನು ವಾನರ ಸೈನ್ಯವನ್ನು ಎದುರುಗೊಳ್ಳುತ್ತಾನೆ; ಏಕಕಾಲದಲ್ಲಿ ಏಳು ಕದಂಬ ವೃಕ್ಷಗಳ ಮೂಲಕ ಹೊಕ್ಕು ಮೂಡುವಂತೆ ಬಾಣ ಪ್ರಯೋಗ ಮಾಡಿ ತನ್ನ ಧನುರ್ವಿದ್ಯಾ ಪ್ರೌಢಿಮೆಯನ್ನು ತೋರಿಸುತ್ತಾನೆ. ಸುಗ್ರೀವ ಸಖ; ವಾಲಿ ವಧೆ; ಸುಗ್ರೀವ ರಾಜ್ಯಾಭಿಷೇಕ. ಹನುಮಂತನು ರಾಮನಿಂದ ಮುದ್ರೆಯುಂಗುರವನ್ನು ಪಡೆದು ಸೀತಾನ್ವೇಷಣಕ್ಕಾಗಿ ಹೊರಡುವನು.

ವಾಯುವ್ಯ

೬೧ ಮೋಹಿನಿ. ಅವಳ ಕೈಮೇಲೆ ಒಂದು ಗಿಳಿಯು ಕೂತುಕೊಂಡಿದೆ. ಅದು ಅವಳ ಕತ್ತಿನ ಮುತ್ತಿನ ಸರವನ್ನು ಮೂಗಿನಲ್ಲಿ ಹಿಡಿದುಕೊಂಡಿದೆ.

೬೬ ಅರ್ಜುನನ ಪುತ್ರನಾದ ವೀರ ಅಭಿಮನ್ಯುವು ಏಕಾಂಗಿಯಾಗಿ ಚಕ್ರವ್ಯೂಹವನ್ನು ಭೇದಿಸಿ ಕೌರವ ಯೋಧರಿಂದ ಹತನಾಗಿದ್ದಾನೆ.

೭೧ ಶಿವನಿಂದ ವರವನ್ನು ಯಾಚಿಸಲು ರಾವಣನು ಕೈಲಾಸಪರ್ವತವನ್ನು ಎತ್ತುತ್ತಿದ್ದಾನೆ. ಪರ್ವತವು ಅಂದವಾಗಿ ಕೆತ್ತಲ್ಪಟ್ಟು, ಹಿನ್ನೆಲೆಯಲ್ಲಿ ಒಂದು ಅರಣ್ಯವು ತೋರಿಸಲ್ಪಟ್ಟದೆ. ಅದರಲ್ಲಿ ಆನೆಗಳೂ ಹುಲಿಗಳೂ ಕಂಡುಬರುತ್ತವೆ. ಮೇಲ್ಭಾಗದಲ್ಲಿ ಶಿವ ಉಮೆಯರು ಒಡ್ಡೋಲಗದಲ್ಲಿ ಕುಳಿತಿದ್ದಾರೆ.

೭೬ ತಾಂಡವ ಗಣಪತಿ.

ಕೊನೆಯ ವಿಗ್ರಹ-ಭೂದೇವಿ

ನವರಂಗಗಳು :

ಈ ದೇವಾಲಯದ ನವರಂಗಗಳು ಬಹು ಮೂಲೆಗಳುಳ್ಳವಾಗಿ ಸಮಚತುರಸ್ರಾಕಾರದಲ್ಲಿವೆ. ಇವುಗಳನ್ನು ಸೇರಿಸುವಂತೆ ಒಂದು ಸಣ್ಣ ಹಜಾರವಿದೆ. ಇವುಗಳಲ್ಲಿ ದಕ್ಷಿಣ ಗೃಹದ ಮುಂದಿರುವುದು ಸೊಗಸಾಗಿ ಕೆತ್ತಲ್ಪಟ್ಟ ಕಂಬಗಳಿಂದಲೂ, ಬಹು ಸೂಕ್ಷ್ಮವಾಗಿ ಬಿಡಿಸಲ್ಪಟ್ಟ ಭುವನೇಶ್ವರಿಗಳಿಂದಲೂ ಕೂಡಿ ವಿನ್ಯಾಸ ದೃಷ್ಟಿಯಿಂದ ಹೆಚ್ಚು ಉತ್ತಮವಾಗಿದೆ. ಇದನ್ನು ಬಿಟ್ಟರೆ ಇವುಗಳ ರಚನೆಯಲ್ಲಿ ಯಾವ ಭೇದವೂ ಕಂಡುಬರುವುದಿಲ್ಲ. ಚಕ್ರಕ್ಕೆ ಕೊಟ್ಟು ಕಡೆದಿರುವ ಇಲ್ಲಿನ ಕಂಬಗಳ ಮೇಲೆ ಹಿಂದೆ ಅನೇಕ ಮದನಕೈ ಬೊಂಬೆಗಳಿದ್ದುವು. ಈಗ ಎಲ್ಲೋ ಕೆಲವು ಮಾತ್ರ ಉಳಿದಿವೆ. ಭುವನೇಶ್ವರಿಗಳು ಅಂದವಾಗಿ ಕೆತ್ತಲ್ಪಟ್ಟಿದ್ದರೂ ಎಲ್ಲವೂ ತಟ್ಟೆಯಾಗಿವೆ. ಮಂಟಪದ ಪಶ್ಚಿಮ ಗೋಡೆಗಳಿಗೆ ಸೇರಿದಂತೆ ಕಲ್ಲು ಗೋಪುರಗಳುಳ್ಳ ಹದಿಮೂರು ಗೂಡುಗಳಿವೆ. ಇವುಗಳಲ್ಲಿ ಹಿಂದೆ ಕ್ರಮವಾಗಿ ವಿಷ್ಣು, ಗಣೇಶ, ಶಾರದ, ಷಣ್ಮುಖ ಈ ವಿಗ್ರಹಗಳಿದ್ದು, ಇವು ಮಧ್ಯದ ಲಿಂಗದೊಡಗೂಡಿ 'ಶಿವ ಪಂಚಾಯತನ'ವೆಂದು ಕರೆಯಲ್ಪಡುತ್ತಿದ್ದುವು. ಹಜಾರದಲ್ಲಿರುವ ಗೂಡಿನ ಗೋಪುರವು ಸೊಗಸಾಗಿ ಕೆತ್ತಲ್ಪಟ್ಟ ಶಿಖರದಿಂದೊಡಗೂಡಿದೆ. ಹಿಂದೆ ಇದಕ್ಕೆ ಅಭಿಮುಖವಾಗಿ ತೆರವ ದ್ವಾರವಿದ್ದಿರಬೇಕು. ಈಚಿಗೆ ಅದಕ್ಕೆ ಸೇರಿದಂತೆ ಹೊರಗೋಡೆಯೊಂದನ್ನು ಕಟ್ಟಿ ಅದನ್ನು ಗುಡಿಯಾಗಿ ಮಾರ್ಪಡಿಸಿದೆ.

ಗರ್ಭ ಗೃಹಗಳು ಮತ್ತು ಲಿಂಗಗಳು :

ಶುಕನಾಸಿಗಳ ಹಾಗೂ ಗರ್ಭಗೃಹಗಳ ಬಾಗಿಲುವಾಡಗಳು ರಚನೆಯಲ್ಲಿ ವೈವಿಧ್ಯವನ್ನು ತೋರಿದರೂ, ತಮ್ಮದೇ ಆದ ಒಂದು ಸೌಂದರ್ಯದಿಂದ ಕೂಡಿ ಶೋಭಿಸುತ್ತಿವೆ. ದ್ವಾರಪಾಲಕರ ಮತ್ತು ಪರಿವಾರ ದೇವತೆಗಳ ಮೂರ್ತಿಗಳು ಅಂದವಾಗಿ ಕೆತ್ತಲ್ಪಟ್ಟಿವೆ. ಗರ್ಭಗುಡಿಗಳಲ್ಲಿ ವಿಷ್ಣುವರ್ಧನನ ಮತ್ತು ಅವನ ಪಟ್ಟದ ರಾಣಿಯ ಶ್ರೇಯಸ್ಸಿಗಾಗಿ ಪ್ರತಿಷ್ಠಿಸಲ್ಪಟ್ಟ ಬೃಹಲ್ಲಿಂಗಗಳಿವೆ. ಇವುಗಳ 'ಶಿರ'ಗಳು ತಟ್ಟೆಯಾಗಿಯೂ, ಯೋನಿಗಳು ವಿಶಾಲವಾಗಿಯೂ ಇವೆ. ವಿಷ್ಣುವರ್ಧನನು ಶ್ರೀ ರಾಮಾನುಜಾಚಾರ್ಯರ ಅಂತರಂಗ ಶಿಷ್ಯನಾದರೂ, ಈ ಶಿವಾಲಯವನ್ನು ಕಟ್ಟಿಸಿರುವುದು ಸ್ತೋತ್ರಾರ್ಹವಾದ ಸಂಗತಿಯಾಗಿದೆ.

ಜೈನ ಬಸ್ತಿಗಳು

ಹೊಯ್ಸಳೇಶ್ವರ ದೇವಾಲಯದಿಂದ ದಕ್ಷಿಣಕ್ಕೆ, ಎರಡು ಫರ್ಲಾಂಗುಗಳ ದೂರದಲ್ಲಿ, ರಸ್ತೆಯ ಪಕ್ಕದಲ್ಲಿ ಬಸ್ತಿಹಳ್ಳಿ ಎಂಬ ಸಣ್ಣ ಗ್ರಾಮವಿದೆ. ಅದರ ದಕ್ಷಿಣಕ್ಕೆ ಒಂದು ಪ್ರಾಕಾರದ ಮಧ್ಯದಲ್ಲಿ ಜೈನ ಮತೀಯರಿಗೆ ಸೇರಿದ ಮೂರು ಗುಡಿಗಳಿವೆ. ಅವುಗಳಲ್ಲಿ ಪಶ್ಚಿಮ ದಿಕ್ಕಿನಲ್ಲಿರುವುದು ಪಾರ್ಶ್ವನಾಥ ಬಸ್ತಿ. ಇದರ ಮುಂಭಾಗದಲ್ಲಿರುವ ಮುಖಮಂಟಪವು ಸೊಗಸಾಗಿ ಕೆತ್ತಲ್ಪಟ್ಟ ಮೂವತ್ತೆರಡು ಕಂಬಗಳಿಂದ ಕೂಡಿದೆ. ಬಸ್ತಿಯ ಹೊರಗೋಡೆ ಮತ್ತು ಕೈಪಿಡಿ ಗೋಡೆಗಳು ಚೆಲುವಾದ ವಿಗ್ರಹಗಳಿಂದ ಅಲಂಕೃತವಾಗಿವೆ. ನವರಂಗದಲ್ಲಿ ತೇರಿನ ಆಕಾರದ ಅನೇಕ ಗೂಡುಗಳಿವೆ. ಇವುಗಳಲ್ಲಿ ಹಿಂದೆ ತೀರ್ಥಂಕರರ ಚತುರ್ವಿಂಶತಿ ಮೂರ್ತಿಗಳಿದ್ದುವು. ಮಧ್ಯದ ಭುವನೇಶ್ವರಿಯು ನಯವಾಗಿ ಕಡೆಯಲ್ಪಟ್ಟ ಹನ್ನೆರಡು ಕಂಬಗಳ ಮೇಲೆ ನಿಂತಿದೆ. ಹಳೇಬೀಡಿನ ಕಟ್ಟಡಗಳಲ್ಲಿರುವ ಭುವನೇಶ್ವರಿಗಳ ಪೈಕಿ ಇದೇ ಅತ್ಯುತ್ತಮವಾದುದೆಂದು ಹೇಳ



ಬಹುದು. ಕನ್ನಡಿಯಿಂತೆ ನುಣುಪಾಗಿ ಹೊಳೆಯುತ್ತಿರುವ ಈ ಕಂಬಗಳಲ್ಲಿ ಪ್ರೇಕ್ಷಕರು ತಮ್ಮ ಮುಖಗಳನ್ನು ನೋಡಿಕೊಳ್ಳಬಹುದು. ಇವುಗಳ ನಕಾಸೆಯಲ್ಲಿ ವೈವಿಧ್ಯವಿರುವುದರಿಂದ ಪ್ರತಿಬಿಂಬಗಳು ಅನೇಕ ವಿಚಿತ್ರ ರೂಪಗಳನ್ನು ತಾಳುತ್ತವೆ. ಗರ್ಭಗುಡಿಯಲ್ಲಿ ಹದಿನಾಲ್ಕು ಅಡಿ ಎತ್ತರವಾದ ಪಾರ್ಶ್ವನಾಥ ತೀರ್ಥಂಕರನ ಬೃಹನ್ಮೂರ್ತಿಯಿದೆ. ಇದು ಕರಿಯ ಕಲ್ಲಿನಿಂದ ಮಾಡಲ್ಪಟ್ಟು, ಸಮಭಂಗ ಭಂಗಿಯಲ್ಲಿ ನಿಂತಿದೆ. ಇದರ ತಲೆಯ ಮೇಲೆ ಸರ್ಪವೊಂದು ತನ್ನ ಏಳು ಹೆಡೆಗಳನ್ನು ಬಿಚ್ಚಿ ಹಿಡಿದಿದೆ. ಮೂರ್ತಿಯು ನಗ್ನವಾಗಿದ್ದು, ದೇಹವು ಆದರ್ಶಯೋಗಿಗೆ ತಕ್ಕುದಾಗಿದೆ. ವದನದಲ್ಲಿ ನೆಲಸಿರುವ ಚಾರುಹಾಸವು ಕರುಣೆಯ ಕಾರಂಜಿಯನ್ನು ಉಕ್ಕಿಸುತ್ತಿದೆ.

ಮಧ್ಯದಲ್ಲಿರುವುದು ಆದಿನಾಥ ಬಸ್ತಿ. ಈ ತೀರ್ಥಂಕರನ ಭಿನ್ನ ವಿಗ್ರಹವನ್ನು ಈಗ ಶಾಂತಿನಾಥ ಬಸ್ತಿಯಲ್ಲಿಟ್ಟದ್ದಾರೆ. ವಿಷ್ಣುವರ್ಧನನು ವೈಷ್ಣವ ಗುರುಗಳಾದ ರಾಮಾನುಜಾಚಾರ್ಯರ ಶಿಷ್ಯನಾದರೂ, ಪಾರ್ಶ್ವನಾಥ ಬಸ್ತಿಯನ್ನು ಸ್ಥಾಪಿಸಲು ಸಹಾಯಮಾಡಿದುದಲ್ಲದೆ, ಈ ದೇವರಿಗೆ 'ವಿಜಯ ಪಾರ್ಶ್ವನಾಥ'ನೆಂಬ ಹೆಸರಿಟ್ಟನೆಂದು ಶಾಸನಗಳು ತಿಳಿಸುತ್ತವೆ.

ಕೇದಾರೇಶ್ವರ ದೇವಾಲಯ

ಚರಿತ್ರೆ

ದ್ವಾರಸಮುದ್ರವು ಕ್ರಿ. ಶ. ೧೨ ಮತ್ತು ೧೩ನೇಯ ಶತಮಾನಗಳಲ್ಲಿ ಹೊಯ್ಸಳ ಚಕ್ರಾಧಿಪತ್ಯದ ರಾಜಧಾನಿಯಾಗಿ ಮೆರೆಯಿತು. ಇದು, ಕೃಷ್ಣಾನದಿಯಿಂದ ಕಾವೇರಿಯವರೆಗೆ, ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ಚಕ್ರಾಧಿಪತ್ಯವನ್ನು ವಿಸ್ತರಿಸಿದ, ವಿಷ್ಣುವರ್ಧನನ ಮೊಮ್ಮಗನಾದ ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಉಚ್ಚಾಯಸ್ಥಿತಿಯನ್ನೈದಿತು. ಇವನು ತನ್ನ ಕಿರಿಯರಸಿ ಅಭಿನವ ಕೇತಲ ದೇವಿಗಾಗಿ ಕೇದಾರೇಶ್ವರ ದೇವಾಲಯವನ್ನು ಕ್ರಿ. ಶ. ೧೨೧೯ ರಲ್ಲಿ ಕಟ್ಟಿಸಿದನು. ಎರಡು ತಲೆಮಾರಿನ ಹಿಂದೆ ಫೆರ್ಗ್ಯುಸನ್ ಸಾಹೇಬರು ಇದನ್ನು "ಭಾರತೀಯ ಶಿಲ್ಪರತ್ನ"ವೆಂದು ಬಣ್ಣಿಸಿದರು. ಫೆರ್ಗ್ಯುಸನ್ ಸಾಹೇಬರು ಹೇಳುವಂತೆ ಈ ಚಿಕ್ಕ ಗುಡಿಯು ಪೂರ್ತಿಯಾಗಿ ಕಟ

ಲ್ಪಟ್ಟಿದ್ದರೆ, ಅಪರ ಶಿಲ್ಪಿಗಳ ನೈಪುಣ್ಯವನ್ನು ಎತ್ತಿ ತೋರಲು ಇಡೀ ಭರತಖಂಡದಲ್ಲಿ ಇದಕ್ಕಿಂತ ಉತ್ತಮವಾದ ನಿದರ್ಶನವು ಸಿಗುತ್ತಿರಲಿಲ್ಲ." ಆದರೆ ದುರದೃಷ್ಟವಶಾತ್ ಸುಮಾರು ಮೂವತ್ತು ವರ್ಷಗಳ ಹಿಂದೆ ಈ ದೇವಾಲಯದ ಕೆಲವು ಭಾಗಗಳು ಕುಸಿದುಬಿದ್ದಾಗ, ಅದನ್ನು ಜೀರ್ಣೋದ್ಧಾರ ಮಾಡಿದವರಿಗೆ, ಗುಡಿಯನ್ನು ಮೂಲರೂಪಕ್ಕೆ ತರಲು ಸಾಧ್ಯವಿಲ್ಲದೆ ಹೋಯಿತು.

ಸಾಮಾನ್ಯ ವರ್ಣನೆ

ಹಿಂದೆ ನವರಂಗದ ಎರಡು ಸಣ್ಣ ಗುಡಿಗಳಿದ್ದು, ಗರ್ಭಗೃಹದ ಮೇಲೆ ಬಳಪದ ಕಲ್ಲಿನ ಸುಂದರವಾದ ನಕ್ಷತ್ರಾಕಾರದ ಗೋಪುರವಿದ್ದಿತು. ಹೊರಗೋಡೆಗಳು, ಗೋಪುರ, ಬಾಗಿಲುವಾಡಗಳು ಮತ್ತು ಭುವನೇಶ್ವರಿಗಳು ಬಹು ಸೂಕ್ಷ್ಮವಾಗಿ ಕೆತ್ತಲ್ಪಟ್ಟು, ದೇವಾಲಯವು ಕೇವಲ ಮಾನವ ಕೃತವಾದ ಕಟ್ಟಡವೆನ್ನದೆ ದೈವ ನಿರ್ಮಿತವಾದ ದಿವ್ಯರತ್ನದಂತೆ ಶೋಭಿಸುತ್ತಿತ್ತು.

ಚಿತ್ರಪಟ್ಟಿಕೆಗಳು :

ಕಟ್ಟಡದ ವಿನ್ಯಾಸವನ್ನೇ ಹೋಲುವ ಎತ್ತರವಾದ ಪೀಠದಮೇಲೆ ದೇವಾಲಯವು ನಿಂತಿದೆ. ಗುಡಿಯ ಸುತ್ತಲೂ ಚಿತ್ರಪಟ್ಟಿಕೆಯಿದೆ. ಅವು ಬುಡದಿಂದ ಕ್ರಮವಾಗಿ ಯಾವುವೆಂದರೆ ೧. ಸಜ್ಜಾಗಿ ಹೊಗುತ್ತಿರುವ ಆನೆಗಳು. ೨. ಎದುರಿಸುತ್ತಿರುವ ರಾವುತರು. ೩. ಗರ್ಜಿಸುತ್ತಿರುವ ಸಿಂಹಗಳು. ೪. ಮಕರಗಳು. ೫. ಕ್ರೀಡಿಸುತ್ತಿರುವ ಹಂಸಗಳು. ೬. ಬಳ್ಳಿಯ ಬೇಲು. ಆದರೆ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣೇತಿಹಾಸಗಳ ಕಥೆಗಳನ್ನು ಕೆತ್ತಿರುವ ಚಿತ್ರಪಟ್ಟಿಕೆಯು ಇವುಗಳಲ್ಲಿ ಬಹು ಸ್ವಾರಸ್ಯವಾದ ಭಾಗ.

ಗೋಡೆಗಳ ಮೇಲ್ಭಾಗದಲ್ಲಿ ವಿವಿಧ ದೇವತೆಗಳ ಸುಮಾರು ನೂರೆಂಟು ದೊಡ್ಡ ವಿಗ್ರಹಗಳಿವೆ. ಅಂದವಾಗಿ ಬಿಡಿಸಿದ ಪುಷ್ಪ ತೋರಣಗಳ ಕೆಳಗೆ ನಿಂತಿರುವ ಈ ಮೂರ್ತಿಗಳು ಕಲಾದೃಷ್ಟಿಯಿಂದ ಅತ್ಯುತ್ಕೃಷ್ಟವಾಗಿವೆ.

ಕೆಲವು ವಿಗ್ರಹಗಳು

ಪುರಾಣೇತಿಹಾಸಗಳನ್ನು ಕೆತ್ತಿರುವ ಚಿತ್ರಪಟ್ಟಿಕೆ

ಆಗ್ನೇಯದ ಗೋಡೆ

ರಾಮ ಮತ್ತು ಅವನ ವಾನರ ಸೈನ್ಯ, ಕ್ಷೀರಸಾಗರ ಮಥನ, ಪ್ರಹ್ಲಾದ ಚರಿತ

ದೊಡ್ಡ ವಿಗ್ರಹಗಳು

ನಿಂತಿರುವ ರಾಮಲಕ್ಷ್ಮಣರು, ತಾಂಡವೇಶ್ವರ

ದಕ್ಷಿಣದ ಗೋಡೆ

ರಾಮಾಯಣ (ಕಲ್ಲುಗಳ ಜೋಡಣೆಯ ವ್ಯತಿಕ್ರಮದಿಂದ ಕಥೆಯು ಅಲ್ಲಲ್ಲಿ ಕಡಿದು ಹೋಗಿದೆ).

ನೈಋತ್ಯ

ಪಕ್ಷಿಯಾದ ಸಂಪಾತಿಯು ಕಪಿಗಳಿಂದ ಎತ್ತಿ ಹಿಡಿಯಲ್ಪಟ್ಟ ದೂರದರ್ಶಕ ಯಂತ್ರದಲ್ಲಿ ನೋಡಿ ಸೀತೆಯನ್ನು ಗುರುತಿಸುತ್ತದೆ. ಹದಿಮೂರನೆಯ ಶತಮಾನದಲ್ಲಿ ಕನ್ನಡಿಗರಿಗೆ ದೂರದರ್ಶಕ ಯಂತ್ರವು ಗೊತ್ತಿತ್ತೆಂಬುದು ಬಹು ಮುಖ್ಯವಾದ ವಿಷಯ. ಗ್ಯಾಲಿಲೆಸ್ಸನು ನಾಲ್ಕು ಶತಮಾನಗಳ ಮೇಲೆ ಇದನ್ನು ಯೂರೋಪಿನಲ್ಲಿ ಉಪಯೋಗಿಸಿದನು.

ಲಂಕಾ ಯುದ್ಧ

ದೊಡ್ಡ ವಿಗ್ರಹಗಳು

ಅರ್ಜುನನು ಮೀನಿನ ಕಣ್ಣಿಗೆ ಗುರಿಯಿಟ್ಟು ಹೊಡೆಯುತ್ತಿದ್ದಾನೆ. ದ್ರೌಪದಿಯು ಅವನ ಕೊರಳಿಗೆ ಹಾಕಲು ಪುಷ್ಪಮಾಲಿಕೆಯನ್ನು ಹಿಡಿದು ನಿಂತಿದ್ದಾಳೆ.

ಎರಡು ಕಪಿಗಳು ಒಂದು ಹಣ್ಣಿಗಾಗಿ ಗುದ್ದಾಡುತ್ತಿವೆ.

ವೇಣುಗೋಪಾಲ, ಶಿವಗಣಗಳಲ್ಲೊಬ್ಬನು ತುತೂರಿಯನ್ನೂದುತ್ತಿದ್ದಾನೆ.

ನರ್ತಿಸುತ್ತಿರುವ ದುರ್ಗೆ, ನರ್ತಿಸುತ್ತಿರುವ ಭೈರವ ಮೋಹಿನಿಯ ನರ್ತನ.

ವಾಯುವ್ಯ

ಮಹಾಭಾರತ ಕಥೆ

ಅರ್ಜುನನು ಶಿವನೊಡನೆ ಹೋರುತ್ತಿದ್ದಾನೆ.

ಅರ್ಜುನನು ವಿರಾಟನ ಗೋವುಗಳನ್ನು ರಕ್ಷಿಸುತ್ತಿದ್ದಾನೆ.

ಕುರುಕ್ಷೇತ್ರ ಕದನ

ಅರ್ಜುನನು ಸಂಶಪ್ತಕರ ಕೈಗಳನ್ನು ಅವರ ಮುಖಕ್ಕೆ ಕೀಲಿಸುತ್ತಿದ್ದಾನೆ. ಭೀಮನು ದುರ್ಯೋಧನನನ್ನು ಕೊಲ್ಲುತ್ತಿದ್ದಾನೆ.

ದೊಡ್ಡ ವಿಗ್ರಹಗಳು

ಕಾಳಿಯ ನರ್ತನ,
ಮುರಲೀಧರ-ದಿವ್ಯ ಸುಂದರ ವಿಗ್ರಹ,
ಮಹಿಷಾಸುರ ಮರ್ದಿನಿ,
ಬಲಿ ಮತ್ತು ವಾಮನ

ಉತ್ತರ

ರಾಮಾಯಣ

ದೊಡ್ಡ ವಿಗ್ರಹಗಳು

ಬಲಿ ಮತ್ತು ವಾಮನ,
ತ್ರಿವಿಕ್ರಮ

ಈಶಾನ್ಯ

ಕೃಷ್ಣಚರಿತ

ದೊಡ್ಡ ವಿಗ್ರಹಗಳು

ತಲೆ ಬಾಚಿಕೊಳ್ಳುತ್ತಿರುವ ಸ್ತ್ರೀ, ರತಿ ಮತ್ತು ಮನ್ಮಥ.

ದೇವಾಲಯದ ಒಳಗಡೆ ನಯವಾಗಿ ಕಡೆದ ನಕ್ಷತ್ರಾಕಾರದ ಕಂಬಗಳಿವೆ; ಆದರೆ ಭುವನೇಶ್ವರಿಗಳು ಹೆಚ್ಚು ರಮಣೀಯವಾಗಿವೆ. ಅವು ಆಳವಾಗಿ ಕೊರೆಯಲ್ಪಟ್ಟು ಅಲಂಕಾರಪೂರ್ಣವಾಗಿವೆ. ಬಾಗಿಲುವಾಡಗಳು ಬಲು ಸುಂದರವಾಗಿವೆ. ಶಿಲ್ಪಿಯು ತನ್ನ ಕೌಶಲ ಸಾಮರ್ಥ್ಯಗಳನ್ನೆಲ್ಲಾ ಇವುಗಳ ಮೇಲೆ ವೆಚ್ಚ ಮಾಡಿದ್ದಾನೆ. ಮೂರು ಬಾಗಿಲುವಾಡಗಳ ಪೈಕಿ ಒಂದೂ, ಗೂಡಿನಲ್ಲಿದ್ದ ವಿಗ್ರಹಗಳೂ ಹೋಗಿಬಿಟ್ಟವೆ.


ಕೆಲವು ಅಮುಖ್ಯವಾದ ದೇವಾಲಯಗಳು


ಮೇಲೆ ಹೇಳಿದ ಐದದೇವಾಲಯಗಳಲ್ಲದೆ ಹಳೇಬೀಡಿನಲ್ಲಿ ಅಮುಖ್ಯವಾದ ಇನ್ನೂ ಕೆಲವು ದೇವಾಲಯಗಳಿವೆ. ಪ್ರವಾಸಿಕರ ಬಂಗ್ಲೆಗೆ ಪಶ್ಚಿಮದಲ್ಲಿ ಬೆಣ್ಣೆ ಗುಡ್ಡಕ್ಕೆ ಒಯ್ಯುವ ಒಂದು ಕಾಲುಹಾದಿಯಿದೆ. ಆ ಗುಡ್ಡದ ಮೇಲೆ ಕರಿಕಾಲನ ಗುಡಿಯಿದೆ. ಗ್ರಾಮದಉತ್ತರಕ್ಕೆ ಇನ್ನೂ ಕೆಲವು ಗುಡಿಗಳಿವೆ. ಅವುಗಳಲ್ಲಿ ಎರಡು ಮುಖ್ಯವಾದುವು. ವೀರಭದ್ರ ದೇವಾಲಯದ ಹೊರಗೋಡೆಯ ಸುತ್ತಲೂ ಮೂರ್ತಿಗಳಿವೆ; ಅವರ ಕಲ್ಲು ಗೋಪುರದ ಮುಂದೆ ಸಳವಿಗ್ರಹವಿದೆ. ಇದರ ಮತ್ತು ರಂಗನಾಥ ದೇವಾಲಯದ ಗೋಪುರಗಳು ಮೆಟ್ಟಲು ಮೆಟ್ಟಲಾಗಿವೆ. ಎಂದರೆ 'ನೆಲೆ'ಗಳಿಂದ ಕೂಡಿವೆ. ರಂಗನಾಥದೇವಾಲಯವು ಹಿಂದೆ ಬೂಚೇಶ್ವರನೆಂಬ ಹೆಸರಿನಿಂದ ಶಿವಾಲಯವಾಗಿದ್ದಿತು. ಈಗ ಅಲ್ಲಿ ರಂಗನಾಥನ ದೊಡ್ಡ ವಿಗ್ರಹವಿದೆ.

ನೆರೆಹೊರೆಯ ಕಟ್ಟಡಗಳು

ಹಳೇಬೀಡಿನ ಸುತ್ತಲೂ, ಕೆಲವು ಮೈಲಿಗಳ ಅಂತರದಲ್ಲಿ, ಹೊಯ್ಸಳ ರೀತಿಯಲ್ಲಿ ಕಟ್ಟಲ್ಪಟ್ಟು ಕೆಲವು ಕಟ್ಟಡಗಳಿವೆ. ವಾಯುವ್ಯಕ್ಕೆ ಸುಮಾರು ಎರಡು ಮೈಲಿ ದೂರದಲ್ಲಿ ದಿಣ್ಣೆಯೊಂದರ ಮೇಲೆ ನರಸಿಂಹನ ಗುಡಿಯಿದೆ. ಈಶಾನ್ಯಕ್ಕೆ ಕುಗ್ರಾಮವೊಂದರಲ್ಲಿ ಪಾಳುಬಿದ್ದ ಚಟ್ಟೇಶ್ವರ ದೇವಾಲಯವಿದೆ. ಹಳೇಬೀಡಿನ ದಕ್ಷಿಣಕ್ಕೆ ನೇರವಾಗಿ ಪುಷ್ಪಗಿರಿಯ ಮೇಲೆ ಹಳೆಯ ವಿಷ್ಣು ಗುಡಿಯೊಂದಿದೆ. ಅದು ಈಗ ಶಿವಾಲಯವಾಗಿ ಉಪಯೋಗಿಸಲುಡುತ್ತಿದೆ. ಪುಷ್ಪಗಿರಿಯ ಪೂರ್ವಕ್ಕೆ 'ನೆಲೆ' ಗೋಪುರವನ್ನುಳ್ಳ ಭೈರವನ ಗುಡಿಯಿದೆ.

ಇವೆಲ್ಲಕ್ಕಿಂತಲೂ ಬಹು ಸ್ವಾರಸ್ಯವಾದ ವಸ್ತುವೆಂದರೆ, ಹುಲಿಕೆರೆ ಗ್ರಾಮದಲ್ಲಿರುವ ಕಲ್ಲಿನ ಕೆರೆ. ಇದರ ಮೆಟ್ಟಿಲುಗಳ ಮೇಲೆ ೨೭ ಗುಡಿಗಳಿವೆ; ಆದರೆ ಇವು ವಿಗ್ರಹಗಳಿಲ್ಲದೆ ಬರಿದಾಗಿವೆ. ಇವುಗಳ ಅಡಿಗಟ್ಟಿನ ಮೇಲೆ ಆನೆಗಳು, ಕುದುರೆಗಳು, ಸಿಂಹಗಳು, ಹಂಸಗಳು ಇವುಗಳನ್ನು ಕೆತ್ತಿದ ಚಿತ್ರಪಟ್ಟಿಕೆಯಿದೆ. ಇವು ನೀರಿನಲ್ಲಿ ಮುಳುಗಿ ಅದೃಶ್ಯವಾಗಿವೆ.





ಅವನು ಲೈಫ್‌ಬಾಯ್
ಅಭ್ಯಾಸವನ್ನು ಕೂಡ
ಕಲಿತಿದ್ದಾನೆ!
ಅವನು ಈಗ ಅನೇಕ ವಿಷಯಗಳನ್ನು ಕಲಿಯುತ್ತಿದ್ದಾನೆ; ಆದರೆ ಅವನಿಗೆ ತನ್ನ ಮುಂದಿನ ಜೀವನದಲ್ಲಿ ಲೈಫ್ ಬಾಯ್ ಸಾಬೂನನ್ನು ಪ್ರತಿ ನಿತ್ಯ ಉಪಯೋಗಿಸುವ ಅಭ್ಯಾಸಕ್ಕಿಂತ ಇನ್ನಾವುದೂ ಹೆಚ್ಚಿನ ಉಪಕಾರಿಯಾಗಲಾರದು. ಎಲ್ಲಾ ಕಡೆಗಳಲ್ಲಿಯೂ ಎಚ್ಚರಿಕೆ ಇಲ್ಲದೆ ಉಂಟಾಗಬಹುದಾದ "ಕೊಳೆಯ ಅಪಾಯ"ದಿಂದ ರಕ್ಷಿಸಿಕೊಳ್ಳಲು ಕಲಿಸಿಕೊಟ್ಟ ಪಾಠಗಳಿಗಾಗಿ ಅವನ ತಾಯಿಯು ಹೆಮ್ಮೆ ಮತ್ತು ಸಂತೋಷ ಪಡಬಹುದು.
ಲೈಫ್‌ಬಾಯ್ ಒಳ್ಳೆಯ
ಸೋಪಿಗಿಂತ ಹೆಚ್ಚು
– ಅದೊಂದು ಒಳ್ಳೆಯ ಅಭ್ಯಾಸ
LIFEBUOY
SOAP
L. 77-50 KN
LEVER BROTHERS (INDIA) LIMITED

ಈ ಅತ್ಯಾಶ್ಚರ್ಯಕರವಾದ ಶಾಯಿಯು ವಿಜ್ಞಾನ ಶಾಸ್ತ್ರ ರೀತ್ಯಾ ಪರಿಶೋಧಿಸಲ್ಪಟ್ಟು ಶಿಫಾರಸು ಮಾಡಲ್ಪಟ್ಟಿದೆ.



ಪೆನ್ನುಗಳನ್ನು ನಾಲ್ಕು ವಿಧದಲ್ಲಿ ರಕ್ಷಿಸುತ್ತದೆ.

- ಸರಾಗವಾಗಿ ಬರೆಯುತ್ತದೆ. ಬರೆಯುವಾಗಲೇ ಒಣಗುತ್ತದೆ.
- ಪೆನ್ನುಗಳ ನಾಳ, ನಿಬ್ ಅಥವಾ ರಬ್ಬರನ್ನು ಕೆಡಿಸುವುದಿಲ್ಲ.
- ಪೆನ್ನು ಒಳಗೆ ಗಟ್ಟಿಯಾಗುವುದಿಲ್ಲ.
- ಪೆನ್ನುಗಳಿಗೆ ಪದೇಪದೇ ರಿಪೇರಿಯ ಅವಶ್ಯಕತೆಯನ್ನು ತಪ್ಪಿಸುತ್ತದೆ.

ಜಮ್ ಕೋ ಐಡಿಯಲ್ ಫೌಂಟಿಂಕ್

(ಮೈಸೂರು ದಸರಾ ಎಕ್ಸಿಬಿಷನ್ನಲ್ಲಿ ಬೆಳ್ಳಿಯ ಪದಕವು ಬಹುಮಾನಿಸಲ್ಪಟ್ಟಿದೆ.)

ಜಮ್‌ಕೋರವರ ಬ್ರಿಲಿಯಂಟೈನ್, ಸ್ನೋ ಪೊಮೇಡ್, ಪರಿಮಳ ಕೊಬ್ಬರಿ ಎಣ್ಣೆ, ಔಷಧಿಯ ಹರಳೆಣ್ಣೆ ಅಷ್ಟೇ ಉತ್ತಮವಾದುವು.

ವಿವರಗಳಿಗೆ ಬರೆಯಿರಿ :

ಅರಗಂ ಅಂಡ್ ಕೋ.

೫೩, ನರಸಿಂಹರಾಜಾರಸ್ತೆ, ಬೆಂಗಳೂರು ನಗರ.



ಜಮ್ಮಿಯವರ

ಲಿವರ್ ಕ್ಯೂರ್

ಮಕ್ಕಳ ಕಲಿಜ ಮತ್ತು ಗುಲ್ಮ ರೋಗಗಳ ನಿವಾರಣೆಗೆ ಒಂದೇ ಔಷದವೆಂದು ಪ್ರಮುಖ್ಯ ವೈದ್ಯರುಗಳಿಂದ ಪರಿಗಣಿಸಲ್ಪಟ್ಟಿದೆ. ಕಳೆದ 35 ವರ್ಷಗಳಲ್ಲಿ ಈ ಔಷದಿಯು ಸಾವಿರಾರು ಮಕ್ಕಳನ್ನು ಭಯಂಕರ ರೋಗಗಳಿಂದ ಉಳಿಸಿರುತ್ತದೆ. ನಕಲಿ ಔಷದಗಳಿಗೆ ಮೋಸ ಹೋಗ ಬೇಡಿ. ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್ 1/1 ಬ್ರಾಡೀಸ್ ರೋಡ್, ಮೈಲಾಪುರ ಮದ್ರಾಸು. ಅಲ್ಲದೆ ಮುಂಬಯಿ, ಕಲ್ಕತ್ತಾ, ಲಕ್ನೋ, ಬೆಂಗಳೂರು, ಮತ್ತು ತಿರುಚಿನಾಪಳ್ಳಿ.

ಐತಿಹಾಸಿಕ ಸಣ್ಣಕಥೆ.

ಕೃತಜ್ಞತೆ

ಶ್ರೀ ಜಿ. ಎಸ್. ಕೃಷ್ಣರಾವ್.

—ಕುರುವಂಶವನ್ನು ಸಮೂಲ ನಿರ್ನಾಮ ಗೊಳಿಸಿದ ಮಹಾಭಾರತ ಯುದ್ಧವೇ ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಹಲವರ ಅಭಿಪ್ರಾಯ. ಪುರಾಣಯುಗದ ಮಾತು ನಮಗೆ ಬೇಡವೆಂದುಕೊಂಡರೂ ೧೮೫೭ರಲ್ಲಿ ನಡೆದ—ಆಂಗ್ಲ ಇತಿಹಾಸಕಾರರಿಂದ 'ಸಿಪಾಯಿದಂಗೆ' ಎಂಬ ಅಸಭ್ಯ ಹೆಸರಿನಿಂದ ಉಲ್ಲೇಖಿತವಾಗಿರುವ—ಚಳುವಳಿಯೇ ಭಾರತ ಸ್ವಾತಂತ್ರ್ಯಕ್ಕಾಗಿ ಹೂಡಿದ ಮೊಟ್ಟಮೊದಲನೆಯ ಹೋರಾಟವೆಂದು ಪರಿಗಣಿಸಲ್ಪಟ್ಟಿದೆ. ಹೀಗೆಂದು ರಾಷ್ಟ್ರಧುರೀಣರುಗಳು ಹಲವಾರು ಬಾರಿ ಉಪನ್ಯಾಸವೇದಿಕೆಗಳಿಂದ ಸಾರಿದ್ದಾರೆ, ಸಮರ್ಥಿಸಿದ್ದಾರೆ. ಸಿದ್ಧಮಾಡಿಕೊಟ್ಟಿದ್ದಾರೆ.

ಇತಿಹಾಸವು ಪುನರಾವೃತ್ತಿಗೊಳ್ಳುವುದೆಂಬ ಮಾತು ಸರ್ವವಿದಿತ. ಕಾಲಚಕ್ರ ಪರಿಭ್ರಮಣೆಯಲ್ಲಿ ಮಾನವ ಗಣನೆಗೆ ಸಿಲುಕದೆಯೇ ಒಂದು ಶತಮಾನ ಗತಿಸಿ ಹೋದ—ಇಂದಿನ, ಈ ಸಂಧಿಕಾಲದಲ್ಲಿ ಮಾತೃಭೂಮಿಯ ಇತಿಹಾಸದ ಹೊಸ ಅಧ್ಯಾಯವು ಬರೆಯಲ್ಪಡುತ್ತಿದೆ. ಸುವರ್ಣಾಕ್ಷರಗಳಿಂದ ಬರೆದಿಡಲರ್ಹವಾದಂಥ ಇತಿಹಾಸವು ನಮ್ಮ ಕಣ್ಣೆದುರಿಗೇ ಸೃಷ್ಟಿಯಾಗುತ್ತಿದೆ, ಚಿತ್ರಿತವಾಗುತ್ತಿದೆ. ಇಂಥ ಈ ಸುಸನ್ನಿವೇಶದಲ್ಲಿ ಜೀವಿಸಿರುವ ನಾವೇ ಧನ್ಯರು. ಪ್ರಪಂಚದ ಇತಿಹಾಸದಲ್ಲೇ ಕಂಡು, ಕೇಳಿ, ಅರಿಯದಂತಹ ಮೇಧಾವಿಗಳಿಗೂ, ದೇಶ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣಗಳನ್ನು ಹುಲ್ಲುಕಡ್ಡಿಗೂ ಕಡೆಯೆಂದೆಣಿಸಿ ಸಂತೋಷದಿಂದ ರಣರಂಗದಲ್ಲಿ ಬಲಿಗಳನ್ನರ್ಪಿಸಿದ ವೀರ ಯೋಧರಿಗೂ, ಸತ್ಕಾರ್ಯಗಳಿಗಾಗಿ ಸರ್ವಸ್ವವನ್ನೂ ದಾನಮಾಡಿದ ತ್ಯಾಗವೀರರಿಗೂ ನಮ್ಮ ದೇಶದಲ್ಲಿ ಎಂದೂ ಕ್ಷಾಮವಿಲ್ಲ. ಅಂಥ ಪುಣ್ಯಪುರುಷರಿಂದ, ಪೂಜ್ಯಮಾತೆಯರಿಂದ ರಚಿತವಾಗುತ್ತಿರುವ ಇತಿಹಾಸವನ್ನು ಕಂಡು ಇಡೀ ಜಗತ್ತೇ ಪರಮಾಶ್ಚರ್ಯಪಡುತ್ತಿದೆ; ತಲೆದೂಗುತ್ತಿದೆ. ಆದರೆ ಹಾಗೆಂದು ತೋರಿಸಿಕೊಳ್ಳಲುಮಾತ್ರ ಹಿಂಜರಿಯುತ್ತಿದೆ. ಇಂಥ ಧನ್ಯಾತ್ಮರು ಸರ್ವಕಾಲ, ಸರ್ವದೇಶ, ಸರ್ವಾವಸ್ಥೆಗಳಲ್ಲೂ ಮಾನ್ಯರು, ವಂದನಾರ್ಹರು.



ಕಟ್ಟಕಡೆಯ ಮೊಗಲ್ ಸಮ್ರಾಟ್ ಬಹದ್ದೂರ್ ಷಾ.

ದೆಹಲಿಯ ಸಿಂಹಪೀಠವು ಎಂದೂ ಯಾರಿಗೂ ಶಾಶ್ವತವಾದುದಲ್ಲ. ಚಂದ್ರವಂಶ ಶ್ರೇಷ್ಠರು ಪರಂಧಾಮವನ್ನೈದಿದ ತರುವಾಯ ಅದೆಷ್ಟೋ ರಾಜವಂಶಜರು—ಅಲ್ಲದವರು, 'ರಾಜಾಧಿರಾಜ—ರಾಜಸಾರ್ವಭೌಮ.......'ಎಂದು ಮುಂತಾಗಿ ಹೊಗಳಿಸಿಕೊಂಡು ದೆಹಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಿಂಹಾಸನವೇರಿ, ಇಳಿದಾಯಿತು. ಆ ಧರ್ಮ ಪೀಠದ ಸತ್ವವಂಥದು. ಆ ಸತ್ವವನ್ನು ಪ್ರಶ್ನಿಸುವ ಸತ್ವ ಯಾರಿಗೂ ಉಳಿದಿಲ್ಲ.

ಸ್ವಾಮಿನಿಷ್ಠೆಯು ಭಾರತದ—ಭಾರತೀಯರ ವೈಶಿಷ್ಟ್ಯ; ಹುಟ್ಟುಗುಣ. ಭಾರತೀಯರಲ್ಲಿ ರಕ್ತಗತವಾಗಿರುವ ಸುಗುಣಗಳೇ ಅವರ ಇಂದಿನ ಸರ್ವಕಾರ್ಯಗಳಿಗೂ ಬೆಂಬಲ; ಮುಂದಿನ ಸಾಹಸಕ್ಕೆ ಸ್ಫೂರ್ತಿ. ಕಳೆದ ಶತಮಾನದ ಮಧ್ಯ ಕಾಲಾವಧಿಯಲ್ಲಿ, ಮೊಗಲ್ ಸಾಮ್ರಾಜ್ಯ ಭಾಸ್ಕರನು ಪಶ್ಚಿಮಾಂಬುಧಿಯಕಡೆಗೆ ನಾಗಾಲೋಟದಿಂದ ಸಾಗುತ್ತಿರುವ ಸಮಯದಲ್ಲಿ, ವ್ಯಾಪಾರಕ್ಕಾಗಿ ಕೈಲಿ ತಕ್ಕಡಿ ಹಿಡಿದು ಆರುಸಾವಿರ ಮೈಲಿಗಳ ಆಚೆಯಿಂದ ಬಂದ ಆಂಗ್ಲೇಯರು ಸ್ವಾರ್ಥಪರ ದೇಶೀಯ ರಾಜರುಗಳಿಂದ ಎಲ್ಲೆಕಟ್ಟುಗಳಲ್ಲಿ ಠಾಣ್ಯಗಳನ್ನು ಯಾಚಿಸಿ ಪಡೆದುಕೊಂಡು, ಕ್ರಮೇಣ ಒಡೆತನವನ್ನು ಬಲಪಡಿಸಿಕೊಂಡು ಕೊನೆಯದಾಗಿ ಸಾಮ್ರಾಜ್ಯ ಪ್ರಭುತ್ವವನ್ನು ಭಾರತೀಯರ ತಲೆಯಮೇಲೆ ಗೊತ್ತಿಲ್ಲದಂತೆಯೇ ಹೊರಿಸಲನುಗೊಳಿಸಿಕೊಂಡ ಸಂದರ್ಭಕ್ಕೆ ಅನತಿದೂರದ ಅವಧಿಯಲ್ಲಿ, ಭಾರತೀಯ ನಾರೀಮಣಿಯೊಬ್ಬಳು ಮೊಗಲ್ ಸಮ್ರಾಟರಲ್ಲಿ ಪ್ರದರ್ಶಿಸಿದ ಕೃತಜ್ಞತೆಯ ಪರಮಾವಧಿಯನ್ನು ಈ ಪುಟಗಳಲ್ಲಿ ಚಿತ್ರಿಸಲಾಗಿದೆ. ವಿಷಯವು ಅಲ್ಪವಾದುದಿರಬಹುದು. ಆದರೆ ಅದರ ಹಿನ್ನೆಲೆಯಲ್ಲಿ ಅಡಗಿರುವ ನೈತಿಕ ಮಹತ್ವದ ಪ್ರಬಲತೆಯನ್ನು ಮನಮುಟ್ಟಿ ಅರಿತು ನಿತ್ಯಜೀವಿತದಲ್ಲಿ ಅದರ ಛಾಯೆಯನ್ನಾದರೂ ಅಳವಡಿಸಿಕೊಳ್ಳುವುದು ಲೇಸು.

ಮೊಗಲ್ ಸಮ್ರಾಟ್ ಷಾಜಹಾನನು ದೆಹಲಿಯ ರಕ್ತಕೋಟೆಯನ್ನು ಕಟ್ಟಿಸಿದನೆಂದು ಇತಿಹಾಸಕಾರರು ಹೇಳುತ್ತಾರೆ. ಅದನ್ನು ಕಟ್ಟಿ ನೂರಾರು ಶತಮಾನಗಳಾದುವಂತೆ! ಆದರೆ ರಕ್ತಕೋಟೆ (Red Fort) ಎಂಬುದೊಂದು ದೆಹಲಿಯಲ್ಲಿದೆಯೆಂದು ಅರಿತವರು ಬಹು ಸ್ವಲ್ಪಮಂದಿ. ಸಾರ್ವಜನಿಕರಿಗೆ ಅದರ ಅರಿವಾದುದು ಭಾರತೀಯ ರಾಷ್ಟ್ರೀಯದಳ (I. N. A.) ದವರ ವಿಚಾರಣೆಯು ಆ ಇತಿಹಾಸ ಪ್ರಸಿದ್ಧ ಕೋಟೆಯೊಳಗಡೆ ಪ್ರಾರಂಭವಾಗುವುದೆಂದು ಪ್ರಕಟವಾದಂದಿನಿಂದೀಚೆಗೆ ಮಾತ್ರ. ನಮ್ಮ ನೆರೆಯಲ್ಲಿ, ನಮ್ಮ ಊರಲ್ಲಿ, ನಮ್ಮ ಪ್ರಾಂತದಲ್ಲಿ ಕೊನೆಯದಾಗಿ ನಮ್ಮದೇಶದಲ್ಲಿ ಇರುವ ಮಹತ್ವಪೂರ್ಣ ವಿಷಯ ವಿವರಣೆಗಳನ್ನರಿಯದ ನಾವು ಪಾಶ್ಚಾತ್ಯ ನಡೆ—ನುಡಿಗಳನ್ನು ಅಭ್ಯಸಿಸಿ ಅಗಾಧ ಪಾಂಡಿತ್ಯವನ್ನು ಗಳಿಸಿಕೊಂಡಿರುವೆವೆಂದು ಬೀಗುತ್ತ ಸಾಧಿಸಿರುವ ಸಾಮ್ರಾಜ್ಯವಾವುದು?

ನೇತಾಜೀ ಸುಭಾಷ್‌ಚಂದ್ರಬೋಸರ ನೇತೃತ್ವದಲ್ಲಿ, ಪರದಾಸ್ಯಶೃಂಖಲೆಯನ್ನು ಕಿತ್ತೊಗೆಯಲು ಶೇಖರಿಸಲ್ಪಟ್ಟ ದೇಶಾಭಿಮಾನಿ ಯೋಧರ ದಂಡು, ದೇಶದ್ರೋಹಿಗಳ ತಂಡವೆಂದು ಪರಿಗಣಿಸಲ್ಪಟ್ಟು ಆಳರಸರಿಂದ ಬಂಧಿತವಾಗಿ ರಕ್ತಕೋಟೆಯಲ್ಲಿ ವಿಚಾರಣೆಗೊಳಗಾಗಿ ಬಂಧಮುಕ್ತವಾದುದು ಸರ್ವರಿಗೂ ತಿಳಿದ ವಿಚಾರ. ಹಿಂದೆ—ತೊಂಭತ್ತು ವರ್ಷಗಳ ಹಿಂದೆ—ಇದೇ ಕೋಟೆಯಲ್ಲೇ, ಅಂದು ದ್ರೋಹಿಯೆಂದು ಇದೇ ಆಂಗ್ಲರಿಂದ ಕರೆಯಿಸಿಕೊಂಡ ಮೊಗಲರ ಕಟ್ಟಕಡೆಯ ಚಕ್ರವರ್ತಿ ಬಹದ್ದೂರ್‌ಷಾನ ವಿಚಾರಣೆ ನಡೆದು, ಅವನಮೇಲೆ ತಪ್ಪು ಹೊರಿಸಿ ಅವನನ್ನು ಕೊನೆಗಾಣಿಸಿದರು. ಆದರೆ ಇಂದು.... ಕಾಲವು ವ್ಯತ್ಯಾಸವಾಗಿದೆ........ಅಭಿಪ್ರಾಯಬದಲಾಗಿದೆ. ರಕ್ತಕೋಟೆಯು ಕಲ್ಲುಗಾರೆಗಳ ರಾಶಿಯೇ ಆದರೂ ಅದು ಅಂದಿನ—ಇಂದಿನ ವಿಚಾರಣೆಗಳೆರಡನ್ನೂ ತುಲನೆ ಮಾಡಿನೋಡಿಯಾಗಿದೆ. ಉದಯಭಾಸ್ಕರನ ನಾಡೆಡೆಯಿಂದಹೊರಟ 'ಜೈ ಹಿಂದ್' ನಿನಾದವು ರಕ್ತಕೋಟೆಯನ್ನು ಪ್ರವೇಶಿಸಿ ಇಂದು ದೇಶವಾದ್ಯಂತಕ್ಕೂ ಆವರಿಸಿ ಪ್ರಜ್ವಲಿಸುತ್ತಿದೆ. ಆ ಇತಿಹಾಸ ಪ್ರಸಿದ್ಧ ಕೋಟೆಗೆ ಸಂಬಂಧಿಸಿದುದೇ ಈ ಚಿತ್ರ. ಚಿತ್ರವು ದುರಂತವಾದುದೇ ಆದರೂ ಉಲ್ಲೇಖನಾರ್ಹವಾಗಿದೆ.

* * * *

ಆ ಕಥೆ ಇದು--

ಪ್ರಕೃತ ಕಥಾ ಸಂದರ್ಭದ ದೆಹಲಿಯು ಇಂದಿನ ದೆಹಲಿಯಲ್ಲ. ಚಾಂದ್ನಿಚೌಕದಲ್ಲಿ ಟ್ರಾಂ ಗಾಡಿಗಳ ಗಲಭೆಯಿಲ್ಲ, ರಿಕ್ಷಾಗಳ ಹಾವಳಿಯಿಲ್ಲ. ಬಸ್-ಕಾರ್‌ಗಳ ರಭಸದ ತಿರುಗಾಟವಿಲ್ಲ. ಕಾಲಾನುಸಾರ ಬಳಕೆಯಲ್ಲಿದ್ದ ಪಾಲಕಿಗಳು, ಎತ್ತಿನಗಾಡಿಗಳು, ಕುದುರೆಗಳು ಇವೇ ಅಂದಿನ ಸೌಮ್ಯವಾಹನಸೌಕರ್ಯ. ಪೌರ್ವಾತ್ಯ ದೇಶಗಳಲ್ಲೇ ಅತ್ಯಂತ ದೊಡ್ಡದಾದ, ಸುಂದರವಾದ, ವ್ಯಾಪಾರ ಸ್ಥಳವಾದ ಈ ದೆಹಲಿ ನಗರಕ್ಕೆ ವಿವಿಧ ಭೂಭಾಗಗಳಿಂದ ವರ್ತಕರೂ, ಪ್ರೇಕ್ಷಕರೂ ತಂಡ ತಂಡವಾಗಿ ಬಂದು ಹೋಗುತ್ತಿದ್ದಾರೆ.—ರಕ್ತಕೋಟೆಯಲ್ಲಿ—ಇನ್ನೇನು ಸಾಮ್ರಾಜ್ಯದ ಅವಸಾನವು ಸಮಿಾಪಿಸಿದೆಯೆಂದು ಅರಿತಿದ್ದರೂ ಹಿಂದೂಸ್ಥಾನದ ಸಮ್ರಾಟ್ ಎನಿಸಿಕೊಳ್ಳುತ ಬಹದ್ದೂರ್‌ಷಾನು ರಾಜ್ಯಭಾರ ನಡೆಸುತ್ತಿದ್ದಾನೆ. ಮೊಗಲರ ಹೆಗ್ಗಳಿಕೆಯ ಕುರುಹಾದ ಜನಾನಾದಲ್ಲಿ ದೇಶವಿದೇಶಗಳ ಸ್ತ್ರೀಯರು ತುಂಬಿದ್ದಾರೆ. ರಾಜಧಾನಿಯೂ, ರಾಜಮನೆತನವೂ, ರಾಜ್ಯವೂ ಧನಕನಕ ವಸ್ತುವಾಹನಾದಿ ಭೋಗ್ಯವಸ್ತುಗಳಿಂದ ನಿಬಿಡವಾಗಿ ಜೀವಕಳೆಯಿಂದ ಕಳಕಳಿಸುತ್ತಿದೆ.

ಒಂದಾನೊಂದು ಹಿತಕರ ವಾತಾವರಣದ ಮುಸ್ಸಂಜೆಯ ಸಮಯ. ಹಿಂದುಸ್ಥಾನ ಸಾಮ್ರಾಜ್ಯದ ಉತ್ತರಾಧಿಕಾರಿ--ಯುವರಾಜ ಕುಮಾರ ಷಾಜಾದಾ ಜರ್ವಾಬಕ್ಥಾನು ಅರಮನೆಯ ಮುಂಭಾಗದ ವಿಶಾಲವಾದ ಹೂದೋಟದಲ್ಲಿ ವಾಯುಸೇವನೆಗಾಗಿ ಸುಳಿದಾಡುತ್ತಿದ್ದಾನೆ. ತೋಟದ ಚಾಕರರಾಗಲೀ ಅರಮನೆಯ ಆಳು—ಕಾಳುಗಳ ಸುಳಿವಾಗಲೀ ಇಲ್ಲದೆ ವಿಶಾಲ ರಾಜಭವನದ ಹೊರವಲಯವೆಲ್ಲ ಪ್ರಶಾಂತವಾಗಿದೆ. ತಂಗಾಳಿಯು ಹಿತಕರವಾಗಿ ಬೀಸುತ್ತ ವಿವಿಧ ಪುಷ್ಪ ರಾಶಿಗಳ ದಿವ್ಯ ಪರಿಮಳವನ್ನು ದಶದಿಕ್ಕುಗಳಲ್ಲೂ ಪಸರಿಸುತ್ತಿದೆ. ರಾಜಕುಮಾರನೂ ಯೋಚನಾ ಮಗ್ನನಾಗಿ ಮಂದ ಗಮನದಿಂದ ಮುಂದಡಿ ಇಡುತ್ತಿದ್ದಾನೆ. ಆತ ಯೋಚನಾ ಮಗ್ನನಾಗಿದ್ದುದು ಮತ್ತಾವ ಮಹತ್ಕಾರ್ಯ ಸಾಧನಾ ವಿಚಾರಕ್ಕಾಗಿಯೂ ಅಲ್ಲ; ಆದರೆ ರಾಜಮಾತೆಯು ಆದಿನ ಬೆಳಗ್ಗೆ ಸೂಚಿಸಿದ್ದ ತನ್ನ ಮದುವೆಯ ವಿಚಾರಕ್ಕಾಗಿ!

ಸುಮಾರು ಅರ್ಧಗಂಟೆಗೆ ಮೇಲ್ಪಟ್ಟು, ತಗ್ಗಿಸಿದ ತಲೆ ಮೇಲೆತ್ತದೆ ತಿರುಗಾಡುತ್ತಿದ್ದವನು ಮರುನಿಮಿಷದಲ್ಲಿ ಹಟಾತ್ತಾಗಿ ಹಿಂದಿರುಗಿ ತಲೆ ಎತ್ತಿ ನೋಡುತ್ತಾನೆಯೇ ಮುಸುಕಿನಿಂದ ಆವೃತಳಾದ ಸ್ತ್ರೀಯೊಬ್ಬಳು ದೈನ್ಯ ಮುದ್ರೆಯಿಂದ ನಿಂತಿದ್ದಾಳೆ. ರಾಜಕುಮಾರನಿಗೆ ಇದೊಂದು ಆಶ್ಚರ್ಯವೆನಿಸಲಿಲ್ಲ. ಏಕೆಂದರೆ ಬಡವ-ಬಲ್ಲಿದ, ಹುಡುಗ-ಮುದುಕ, ಸ್ತ್ರೀ-ಪುರುಷ, ಜಾತಿ-ಮತ ಭೇದವಿಲ್ಲದೆ ಯಾರು ಬೇಕಾದರೂ ರಾಜನನ್ನು ನೇರವಾಗಿ ಭೇಟಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಂಡು ಪ್ರಯೋಜನ ಹೊಂದಬಹುದಾಗಿದ್ದಿತು. ಯುವರಾಜನನ್ನು ಕಾಣಿಸಿಕೊಂಡ ಆ ಸಾಧ್ವಿಯು ಸ್ವಲ್ಪ ಸ್ವಲ್ಪವಾಗಿ ಮುಂದಡಿ ಇಡತೊಡಗಿದಳು. ಆಕೆಯ ಇಂಗಿತವನ್ನರಿತ ರಾಜಕುಮಾರನೂ ಮುಂದೆ ಬಂದು, ಬಂದ ಕಾರಣವೇನೆಂದು ಪ್ರಶ್ನಿಸಿದನು.

ಅದಕ್ಕೆ ಆ ಅಪರಿಚಿತ ವ್ಯಕ್ತಿಯು—ಕೊತ್ವಾಲನು ತನ್ನ ತಂದೆಯನ್ನು ದಸ್ತಗಿರಿಮಾಡಿ ಬಂಧನದಲ್ಲಿಟ್ಟಿರುವುದಾಗಿಯೂ ಆತನ ಬಿಡುಗಡೆಗಾಗಿ ತಮ್ಮಲ್ಲಿ ಪ್ರಾರ್ಥಿಸುವ ಸಲುವಾಗಿ ಬಂದಿರುವುದಾಗಿಯೂ ತಿಳಿಸಿದಳು. ಸುಮಧುರ ಕಂಠ ಧ್ವನಿಯಿಂದ ಕೂಡಿದ ಮುಖಮುದ್ರೆಯಲ್ಲಿ ದೈನ್ಯತೆಯು ಒಡೆದು ಕಾಣುತ್ತಿತ್ತು. ಅರೆಮುಸುಕಿದ ತೆರೆಯ ಮರೆಯಲ್ಲಿ ಮಿಣುಕು ಹುಳದಂತೆ ಪ್ರಕಾಶಮಾನವಾದ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಸುತ್ತ ಬಿಕ್ಕಿಬಿಕ್ಕಿ ಅಳುತ್ತಿರುವ ಆ ಸಾಧ್ವಿಯನ್ನು ಕಂಡ ರಾಜಕುಮಾರನ ಅಂತಃಕರಣವು ಕರಗಿ ನೀರಾಗಿರಬೇಕು! ಆಕೆಯು ಕೇಳಿಕೊಳ್ಳುತ್ತಿರುವ ಧಾಟಿಯಲ್ಲೇ—ಪ್ರಾರ್ಥನೆಯು ನ್ಯಾಯಬದ್ಧವಾದುದಾಗಿರಬೇಕೆಂದು ಊಹಿಸಿದನು. ಆದರೂ ಸಂಗತಿ ಏನೆಂಬುದನ್ನು ತಿಳಿಯಲಾಶಿಸಿ—'ದಸ್ತಗಿರಿಗೆ ಕಾರಣವೇನು' ಎಂದು ಕೇಳಿದನು.

ಕಾರಣವನ್ನು ಹೇಳಿಕೊಳ್ಳಲು ಆ ಸಾಧ್ವಿಗೆ ಶಂಕೆಯಾಯಿತಾದರೂ ನ್ಯಾಯ ದೊರೆಯಬೇಕಾದಲ್ಲಿ

ಹೇಳಿ ತೀರಬೇಕಷ್ಟೆ! 'ಹುಜೂರ್, ಏನು ಹೇಳಲಿ ನಮ್ಮ ತಂದೆಯ ಬಂಧನಕ್ಕೆ ನನ್ನ ರೂಪರಾಶಿಯೇ ಕಾರಣ' ಎಂದಳು. ಷಾಜಾದಾನು ತಲೆ ಎತ್ತಿ ನೋಡುತ್ತಾನೆಯೇ—ಅವಳು ನಿಜವಾಗಿಯೂ ಅಂಥ ಸುಂದರವಿಗ್ರಹವೇ ಆಗಿದ್ದಳು. 'ತಂದೆಯ ಬಂಧನಕ್ಕೆ ತನ್ನ ರೂಪರಾಶಿಯೇ ಕಾರಣ' ಎಂಬಮಾತುಗಳು ಕಿವಿಗೆ ಬಿದ್ದೊಡನೆಯೇ ದೇಹ ಕಂಪಿತವಾಗಿ, ಕೋಪೋದ್ರೇಕದಿಂದ ಅವನ ರಕ್ತ ಕುದಿಯ ತೊಡಗಿತು. ಹುಬ್ಬು ಗಂಟಿಕ್ಕಿದ ಮುಖ ಮುದ್ರೆಯು—ತಪ್ಪಿತಸ್ಥರು ಯಾರೇ ಆಗಿರಲಿ ನಿರ್ದಾಕ್ಷಿಣ್ಯವಾಗಿ ಶಿಕ್ಷೆಗೊಳಪಡಬೇಕೆಂಬ ಖಚಿತ ಅಭಿಪ್ರಾಯವನ್ನು ಹೊರಸೂಸುತ್ತಿತ್ತು.

ಒಡನೇ ವಜೀರನನ್ನು ಬರಮಾಡಲು ಚಾಕರನೊಬ್ಬನಿಗೆ ಆಜ್ಞೆಯಾಯಿತು. ಅಲ್ಲೇ ತಲೆಬಾಗಿ ನಿಂತಿದ್ದ ಆ ಸಾಧ್ವಿಯ ಕಡೆಗೆ ತಿರುಗಿ—'ತಾಯೇ ಹೆಸರು, ಪರಿಚಯಗಳನ್ನು ತಿಳಿಸಿ ನೀನಿನ್ನು ಹೊರಡಬಹುದು. ಆಪಾದನೆಯನ್ನು ವಿಮರ್ಶಿಸಿ ನ್ಯಾಯ ದೊರಕಿಸಲಾಗುವುದು'. ಎಂದು ರಾಜಕುಮಾರನು ಆಕೆಗೆ ಹಿಂದಿರುಗಲು ಅನುಜ್ಞೆಯಿತ್ತನು.

ಅಹಪಾಲುದಾರಳು ಇನ್ನೂ ಅರಮನೆಯ ಒಳ ಆವರಣವನ್ನೂ ದಾಟಿರಲಿಲ್ಲ. ಅಷ್ಟರಲ್ಲೇ ಮೊಗಲ್ ಸಮ್ರಾಟರ ನ್ಯಾಯ ವಿಮರ್ಶಾ ಚಕ್ರವು ಚಲನೆಗೊಂಡಿತು. ಮುಂದೆ ನಾಲ್ಕಾರು ಗಂಟೆಗಳ ಅವಧಿಯಲ್ಲೇ ಆಕೆಯ ತಂದೆ ಬಿಡುಗಡೆ ಹೊಂದಿ ಮನೆ ಸೇರಿದನು. ಅವನ ಕೈ ಕೋಳ ಕೊತ್ವಾಲನ ಕೈಗಳನ್ನು ಅಲಂಕರಿಸಿತು. ಹಿಂದಿನ ರಾಜ್ಯಭಾರಕ್ರಮವನ್ನು ಮನಬಂದಂತೆ ದೂಷಿಸುವವರು ಈ ಒಂದು ಸಂದರ್ಭವನ್ನು ಯೋಚಿಸಿ ನೋಡಲಿ. ಯಾವುದೊಂದು ರಾಜ್ಯಭಾರ ಕ್ರಮವೇ ಆಗಲಿ–ಸರ್ವಗುಣ ಸಂಪೂರ್ಣವಾಗಿದ್ದಿತೆಂದು ಹೇಳಲು ಸಾಧ್ಯವಿಲ್ಲ. ಇರಬೇಕೆಂದು ನಿರೀಕ್ಷಿಸಲು ಅವಕಾಶವಿಲ್ಲ. ಆದರೂ ಸಾರ್ವಜನಿಕರು ಬಹುಮತ ಮಾನದಂಡದಿಂದ ಅಳೆದಲ್ಲಿ ಒಮ್ಮತದ ಅಭಿಪ್ರಾಯ ಬರುವಂತಿರಬೇಕೆಂದು ಅಪೇಕ್ಷಿಸುವುದು ತಪ್ಪಲ್ಲ. ಅಂಥ ಒಂದು ಸದಭಿಪ್ರಾಯವನ್ನು ಮೊಗಲ್ ರಾಜ್ಯಭಾರವು ಗಳಿಸಿಕೊಂಡಿತ್ತೆಂಬುದು ಅಸಂಭವವಲ್ಲ.

* * * *

ದಿನಗಳು, ತಿಂಗಳುಗಳು ಗತಿಸಿದುವು. ರಾಜಕುಮಾರನು ಅಂದಿನ ಆ ಸಾಯಂಕಾಲದ ದೃಶ್ಯವನ್ನು ಮರೆಯದಾದನು. ಆಬಲೆಯ ಕೃತಜ್ಞತೆಯು ಪ್ರತ್ಯುಪಕಾರ ರೂಪದಲ್ಲಿ ತನಗೆ ಹಿಂದಿರುಗಬಹುದೆಂದೂ ಅತನು ನಿರೀಕ್ಷಿಸಿರಲಿಲ್ಲ. ಆದರೂ ಅಂಥ ಕಾಲ ಪ್ರಾಪ್ತವಾಯಿತು.

ಕಾಲಚಕ್ರವು ವಿದ್ಯುದ್ವೇಗದಿಂದ ಮುಂಮುರುಳುತ್ತಿದೆ. ದೇಶದ ಹಲವೆಡೆಗಳಲ್ಲಿ ಬಂಡಾಯವೆದ್ದಿತು. ಮೊಗಲ್ ಚಕ್ರವರ್ತಿಯೂ ಮಾರ್ಗಾಂತರ ಕಾಣದೆ ಬಂಡುಗಾರರೊಂದಿಗೆ ಸೇರಿ ಚಳುವಳಿ ನಡೆಸಬೇಕಾಯಿತು. ಸಾಮ್ರಾಜ್ಯ ರಕ್ಷಣೆಗಾಗಿ, ಸ್ವರಕ್ಷಣೆಗಾಗಿ ಸೆಣಸಬೇಕಾಯಿತು. ಕುಂಪಣಿಯವರು ದೆಹಲಿಗೆ ಮುತ್ತಿಗೆ ಹಾಕಿದರು. ಬಂಡುಗಾರರಿಗೆ ದೈವ ಸಹಾಯವು ಕ್ರಮ ಕ್ರಮವಾಗಿ ಕಡಿಮೆಯಾಗುತ್ತ ಬಂದು ಅವರು ಹಿಮ್ಮೆಟ್ಟಬೇಕಾಯಿತು. ಮೊಗಲ್ ಸಾಮ್ರಾಜ್ಯ ಪರಿಸಮಾಪ್ತಿಯ ಕಾಲ ಸನ್ನಿಹಿತವಾಯಿತು.

ಎಂದಿನಂತೆ ಅಂದೂ ಸಹ ರಾಜಕುಮಾರನು ಉದ್ಯಾನವನದಲ್ಲಿ ಯೋಚನಾಮಗ್ನನಾಗಿ ಅಲೆದಾಡುತ್ತಿದ್ದಾನೆ. ಇಂದು ಅವನು ಯೋಚನೆಗೀಡಾಗಿದ್ದುದು ಪ್ರಣಯ ಸಂಬಂಧ ವಿಚಾರವಲ್ಲ; ಪ್ರಮಾದ ವಿಚಾರವದು. ಕುಲಕ್ರಮಾನುಗತವಾಗಿ ಬಂದ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ತ್ಯಜಿಸಿ ಪರದೇಶಿಗಳಂತೆ ಪಲಾಯನ ಮಾಡಬೇಕಾಗಿ ಬಂದ ದುರ್ವಿಧಿಯನ್ನು ಕುರಿತು, ದೀರ್ಘವಾಗಿ ಯೋಚಿಸ ತೊಡಗಿದ್ದಾನೆ. ಅರಮನೆಯು, ರಕ್ತಕೋಟೆಯು, ಏಕೆ ದೆಹಲಿಯ ವಾತಾವರಣವೇ ಮಂಜುಕವಿದಂತೆ ಕಳಾವಿಹೀನವಾಗಿ—ಭೀಕರವಾಗಿ ತೋರುತ್ತಿದೆ. ದಿಕ್ಕುತೋರದಂತಾಗಿ ರಾಜಕುಮಾರನು ಇನ್ನೇನು ಹೊರಡಲುದ್ಯುಕ್ತನಾಗಿದ್ದಾನೆ. ಮತ್ತೊಮ್ಮೆ ಅದೇ ಸ್ತ್ರೀವ್ಯಕ್ತಿ—ಕೆಲವು ತಿಂಗಳುಗಳ ಹಿಂದೆ ಕಾಣಿಸಿಕೊಂಡಿದ್ದ ಯುವತಿಯು ಎದುರಿಗೆ ನಿಂತಿದ್ದಾಳೆ. ಅತನಿಗೆ ಈಗಲೂ ಆಶ್ಚರ್ಯವೆನಿಸಲಿಲ್ಲ.

ಏಕೆಂದರೆ, ತನ್ನ—ಸಾಮ್ರಾಜ್ಯದ ಇಂದಿನ ಪರಿಸ್ಥಿತಿಯಲ್ಲೂ ಪ್ರಜೆಗಳಿಗೆ ತನ್ನಿಂದ ಸಾಧ್ಯವಿರುವ ಸಹಾಯ ನೀಡಲು ಆತನ ಮನವು ಕಳವಳಿಸುತ್ತಿತ್ತು.

'ತಾಯೇ, ನೀನು ಈಗ ಬಂದಕಾರಣವೇನು?' ಎಂದು ಷಾಜಾದಾನು ಕೇಳಿದನು.

ಕೋಟೆಯ ಹೊರವಲಯದಲ್ಲಿ ಮುತ್ತಿಗೆಯವರು ಕೋಟೆಯ ಆಕ್ರಮಣಕ್ಕೆ ನಡೆಸುತ್ತಿರುವ ಸನ್ನಾಹಗಳನ್ನೂ ಆ ಆಕ್ರಮಣದಿಂದ ನಾಗರಿಕರಿಗೆ ಒದಗಬಹುದಾದ ಕಷ್ಟ—ನಷ್ಟ ಪರಂಪರೆಗಳನ್ನೂ ರಾಜಮನೆತನಕ್ಕೆ ಸಂಭವಿಸುವ—ತಿದ್ದಲಸಾಧ್ಯವಾದಂಥ ಅನ್ಯಾಯವನ್ನೂ ಮನಸ್ಸಿನಲ್ಲೇ ಎಣಿಸಿ, ಗುಣಿಸಿ, ಲೆಕ್ಕಹಾಕಿ, ಚಿಂತೆಗೀಡಾಗಿ ಆ ಚಿಂತೆಯಲ್ಲೇ ಬುದ್ಧಿ ಭ್ರಮಿಸಿದಂತಾಗಿದ್ದ ಆ ಸಾಧ್ವಿಯು, ಧರಿಸಿದ್ದ ಮುಸುಕನ್ನು ಕಿತ್ತೊಗೆದು—'ಪ್ರಭೋ, ನನಗೆ ಆಗಬೇಕಾದುದೇನೂ ಇಲ್ಲ. ತಾವು ಮಾತ್ರ ಈ ನಗರಿಯನ್ನು ತ್ಯಜಿಸಬೇಕೆಂದು ಹೇಳಲುಬಂದೆ' ಎಂದಳು.

ರಾಜಕುಮಾರನು ಆಶ್ಚರ್ಯದ ನಗುವೊಂದನ್ನು ನಕ್ಕು 'ನಾನೇಕೆ ನಗರಿಯನ್ನು ತ್ಯಜಿಸಬೇಕು? ಈ ಕಷ್ಟತರ ಪ್ರಸಂಗದಲ್ಲಿ ಪ್ರಜೆಗಳನ್ನೂ ನಗರಿಯನ್ನೂ ಸಂರಕ್ಷಿಸಲು ಪ್ರಯತ್ನಿಸದೆ ಕೈಬಿಡುವುದುಂಟೆ! ಅದು ಹೇಗೆ ಸಾಧ್ಯ!' ಎಂದನು.

'ಬಿಚ್ಚು ಮಾತುಗಳಿಗಾಗಿ ಪ್ರಭುಗಳು ನನ್ನನ್ನು ದಯವಿಟ್ಟು ಕ್ಷಮಿಸಬೇಕು. ಪರಿಸ್ಥಿತಿ ಕಠಿಣವಾಗಿದೆ. ತಾವು ಇಲ್ಲಿಂದ ಹೊರಬಿದ್ದು ಪ್ರಜೆಗಳಿಗೆ ಮಹತ್ಪ್ರಯೋಜನ ಮಾಡಿಕೊಡಬಹುದು. ಹಾಗಲ್ಲದೆ ಬಂಧಿತರಾದಿರೆಂದರೆ ಆ ಫರಂಗಿಯವರು ತಮ್ಮನ್ನು ಏನುಬೇಕಾದರೂ ಮಾಡಿಬಿಡಬಹುದು.' ಎಂದಳು ಆ ಯುವತಿ.

'ಅವರಿಗೆ ನಾವೇನೂ ದ್ರೋಹ ಮಾಡಿಲ್ಲ; ಹೀಗಿರುವಲ್ಲಿ ಅವರಾರೂ ನಮಗೇಕೆ ತೊಂದರೆ ಕೊಡಬೇಕು? ಏನಾದರಾಗಲಿ, ನಾನಂತೂ ಇಲ್ಲಿಂದ ಹೊರಡುವಂತಿಲ್ಲ. ಕೋಟೆಯು ಸುತ್ತುಗಟ್ಟಲ್ಪಟ್ಟಿದೆಯಲ್ಲವೆ?' ಎಂದ ರಾಜಕುಮಾರ.

'ನಾನು ತಮ್ಮನ್ನು ಹೊರಕ್ಕೆ ದಾಟಿಸಬಲ್ಲೆ' ಎಂದಳು ಯುವತಿ.

ಈಗಲೀಗ ರಾಜಕುಮಾರನಿಗೆ ಅತ್ಯಾಶ್ಚರ್ಯವೆನಿಸಿತು. 'ನೀನು ನನ್ನನ್ನು ಹೊರಕ್ಕೆ ಕೊಂಡಯ್ಯಬಲ್ಲೆಯಾ! ಅದು ಹೇಗೆ?' ಎಂದ ರಾಜಕುಮಾರ.

'ಪಶ್ಚಿಮ ದಿಡ್ಡಿಬಾಗಿಲಿನಲ್ಲಿರುವ ಕಮ್ಯಾಂಡರನು ತಮ್ಮನ್ನು ಹೊರಕ್ಕೆ ಬಿಡಲು ಒಪ್ಪಿಕೊಂಡಿದ್ದಾನೆ' ಎಂದಳು ಸಾಧ್ವಿ.

'ಏಕೆ!—ಅವನೇಕೆ ತನ್ನ ಧಣಿಗಳಿಗೆ ದ್ರೋಹವೆಸಗಬೇಕು. ಅವನ ಸ್ವಾಮಿದ್ರೋಹ ಕಾರ್ಯಾಚರಣೆಯನ್ನು ನಾನು ಮೆಚ್ಚಲಾರೆ' ಎಂದು ನುಡಿದ ರಾಜಕುಮಾರನ ಮಾತುಗಳನ್ನು ಕೇಳಿ ಆ ಸ್ತ್ರೀಯು ವ್ಯಸನಾಧಿಕ್ಯದಿಂದ ತಲೆತಗ್ಗಿಸಿದಳು. ಏನು ಉತ್ತರ ಕೊಡಬೇಕೆಂದು ಆಕೆಗೂ ತೋರಲಿಲ್ಲ.

ಕೆಲಕಾಲ ಒಬ್ಬರನ್ನೊಬ್ಬರು ಎವೆಯಿಕ್ಕದೆ ನೋಡಿದರು. ತರುವಾಯ ರಾಜಕುಮಾರನು ಆ ಸಾಧ್ವಿಯನ್ನು ಕುರಿತು 'ತಾಯಿ ನೀನು ನಾಳೆ ಬಾ, ಇಂದು ನಾನೊಬ್ಬನೇ ಏಕೆ, ನಾಳೆ ನಾವೆಲ್ಲರೂ ಇಲ್ಲಿಂದ ಹೊರಟುಹೋಗೋಣ! ಈಗ ನೀನಿನ್ನು ಹೊರಡು' ಎಂದನು.

ಅಲ್ಪ ತೃಪ್ತಿಯ ಅರೆಮನಸ್ಸಿನಿಂದ ಆಕೆಯು ಅಲ್ಲಿಂದ ಹೊರಹೊರಟಳು.

* * * *

ಆದರೆ ಅವರ 'ನಾಳೆ' ಮರಳಿ ಬರಲಿಲ್ಲ. ಮರುದಿನ ದೆಹಲಿಯು ಶತ್ರುವಶವಾಯಿತು. ರಾಜಕುಮಾರರನೇಕರೂ ಚಕ್ರವರ್ತಿಯೂ ಶತ್ರುಗಳ ಸೆರೆಯಲ್ಲಿ ಮೃತ್ಯುವನ್ನಪ್ಪಿದರು.


ರಾಜಕುಮಾರ ಷಾಜಾದಾನ ಕಳೇಬರವು ದೆಹಲಿಯ ಧೂಳಿನಲ್ಲಿ ಬಿದ್ದುರುಳಿಮಣ್ಣುಗೂಡಿದ ಸ್ಥಳವನ್ನು ದೆಹಲಿಯ ಜನರು ಮುಂದೆ ಬಹುದಿನಗಳು ಗಮನದಲ್ಲಿಟ್ಟಿದ್ದರು. ಜೀರ್ಣ ವಸ್ತ್ರಧಾರಿಯಾದ ಬಡಕಲು ಹೆಣ್ಣುಮಗಳೊಬ್ಬಳು ಪ್ರತಿನಿತ್ಯವೂ

ಅಲ್ಲಿಗೆ ಬಂದು ಹೋಗುತ್ತಿದ್ದಳು. ಅಲ್ಲಿನಿಂತು ಕೆಲಹೊತ್ತು ಕಣ್ಣೀರಿಡುವಳು. ಉಸಿರ್ಗರೆವಳು.

ಹಲವಾರು ವರ್ಷಗಳು ಗತಿಸಿದ ತರುವಾಯ ಮುಂದೊಂದುದಿನ ರಾಜಕುಮಾರನ ಶುಭ್ರ ಬಿಳೀ ವರ್ಣದ ಗೋರಿಯ ಬಳಿಯಲ್ಲಿ ಯುವತಿಯೊಬ್ಬಳ ಶವಬಿದ್ದಿದೆ. ಇದು ಆಕೆಯ—ಆ ಯುವತೀ **ಮಣಿಯ ಕೃತಜ್ಞತಾ ಸಮರ್ಪಣೆ.**

ಭಾರತೀಯ ಇತಿಹಾಸದಲ್ಲಿ ಈ ಬಗೆಯ ನಿದರ್ಶನಗಳು ಗಣನೆಗೆ ಸಿಕ್ಕದಷ್ಟಿವೆ. ಅದನ್ನು ಆರಿಸಿ ತೆಗೆದು ಜನತೆಯ ಮುಂದಿಡುವುದು ಸಾಹಿತಿಗಳ ಕೆಲಸವಾಗಿದೆ; ಕರ್ತವ್ಯವಾಗಿದೆ.

ಅಂದು (೧೪.೯.೧೮೫೭) ಆಕ್ರಮಿಸಲ್ಪಟ್ಟ ರಕ್ತ ಕೋಟೆಯು ಇಂದಿಗೂ ಬ್ರಿಟಿಷರ ವಶದಲ್ಲಿದೆ—ಅಂದುಬಂಧಿತನಾಗಿ ರಕ್ತಕೋಟೆಯಲ್ಲಿ ವಿಚಾರಣೆಗೆ ಗುರಿಯಾದ ಆ ಅದೃಷ್ಟಹೀನ ಮೊಗಲ್ ಚಕ್ರವರ್ತಿ ಬಹದ್ದೂರ್‌ಷಾನು ಬಂಧಮುಕ್ತನಾಗಿ ಹೊರಕ್ಕೆ ಬರಲಿಲ್ಲ. ಆದರೆ ಇಂದು 'ಜೈ ಹಿಂದ್' ಫೌಜಿನ ವೀರರು ಅಪಾದಿತರಾಗಿ ರಕ್ತಕೋಟೆಯನ್ನು ಪ್ರವೇಶಿಸಿ ನಿರ್ದೋಷಿಗಳೆಂದು ಬಂಧಮುಕ್ತರಾಗಿ ಹೊರಕ್ಕೆಬಂದಿದ್ದಾರೆ. ಈ ಸ್ವಾತಂತ್ರ್ಯವೀರರ ಬಂಧಮುಕ್ತತೆಯು ಭಾರತದ ಸ್ವಾತಂತ್ರ್ಯತೆಗೆ ಪೂರ್ವಪೀಠಿಕೆಯಾಗಲೆಂದು ಹಾರೈಸೋಣ.



ಶಾಂತಿ ಸ್ಥಾಪಕನ . . . .

. . . . . ಕೊಲೆಯ ಕಾರ್ಖಾನೆ.

★ ★ ★ ★

ಜಗತ್ತಿನ ಶಾಂತಿಸ್ಥಾಪನೆಗಾಗಿ ದುಡಿದ ಮಹನೀಯರಿಗೂ, ಲೋಕಕ್ಕೆ ಹಿತಬೋಧಕವಾದ ಸಾಹಿತ್ಯ ರಚನೆಮಾಡಿದ ವಿಶ್ವಸಾಹಿತಿಗಳಿಗೂ, ಶ್ರೇಷ್ಠ ವಿಜ್ಞಾನಿಗಳೆಂದು ಜಗತ್ಪ್ರಸಿದ್ಧರಾದ ಮಹಾವ್ಯಕ್ತಿಗಳಿಗೂ ವರ್ಷವರ್ಷವೂ ಕೊಡಲ್ಪಡುವ ಮಹತ್ವದ ಬಹುಮಾನವೊಂದುಂಟು. ಅದಕ್ಕೆ ಧರ್ಮದರ್ಶಿ ಸ್ವೀಡನ್ ದೇಶದ ಧೊರೆ. ಅದಕ್ಕೆ ದ್ರವ್ಯನಿಧಿಯನ್ನು ಇಟ್ಟು ಈ ಯೋಜನೆಯನ್ನು ರೂಪಿಸಿದವನು ಆಲ್ಫ್ರೆಡ್ ನೊಬೆಲ್ ಎಂಬ ಮಹನೀಯ. ಆತನು ಏರ್ಪಡಿಸಿದ ದ್ರವ್ಯನಿಧಿಯ ಬಡ್ಡಿಯಿಂದ ವರ್ಷ ವರ್ಷವೂ ಮೇಲ್ಕಂಡಂತೆ ದ್ರವ್ಯ ಬಹುಮಾನಗಳು ಕೊಡಲ್ಪಡುತ್ತವೆ.

ಈ ಮಹನೀಯನು ತಾನಿಟ್ಟ ದ್ರವ್ಯನಿಧಿಯನ್ನು ಗಳಿಸಿದ ಸಾಧನ, ಭಯಂಕರ ಸ್ಫೋಟಕಾರಕ ಸಿಡಿಮದ್ದು ಎಂದು ಕೇಳಿದರೆ ಅನೇಕರು ಆಶ್ಚರ್ಯಚಕಿತರಾಗದಿರಲಾರರು. ಇವನು ಚಿಕ್ಕಂದಿನಲ್ಲಿ ಹೆಚ್ಚು ವಿದ್ಯಾವಂತನಾಗದಿದ್ದರೂ, ರಾಸಾಯನಿಕ ಪ್ರಯೋಗ ವಿಚಾರಗಳಲ್ಲಿ—ಹೆಚ್ಚು ಅಭಿರುಚಿಯುಳ್ಳವನಾಗಿ ಆ ಸಂಬಂಧ ಪ್ರಯೋಗ ನಡೆಸುವ ಸಂಭ್ರಮದಲ್ಲಿ ಅತಿಶಯ ಕಷ್ಟನಷ್ಟಗಳಿಗೀಡಾದರೂ, ಕೊನೆಗೆ ಭಯಂಕರ ಸ್ಫೋಟಕ ಶಕ್ತಿಯುತವಾದ ಸಿಡಿಮದ್ದು ಬಾಂಬುಗಳನ್ನು ಕಂಡುಹಿಡಿದನು. ಇದಲ್ಲದೆ ಸಿಡಿಯುವಾಗ ಹೊಗೆ ಬಾರದ ಮದ್ದನ್ನೂ ತಯಾರಿಸಿದನು. ಮಾತ್ರವಲ್ಲ, ಈ ತರುಣ ರಸಾಯನ ಶಾಸ್ತ್ರ ಪ್ರವೀಣನು ತಾನು ಬೆಳೆದಂತೆಲ್ಲ ಆಗಾಗ ಕಂಡು ಹಿಡಿದು ತನ್ನವೆಂದು 'ಪೇಟೆಂಟ್' ಪಡೆದ ರಾಸಾಯನಿಕ ಶೋಧಗಳು ೩೫೫ ಎಂದು ಗೊತ್ತಾಗಿದೆ. ಇವುಗಳೆಲ್ಲ ಹಿಂದಿನ ಮತ್ತು ಈಗ ನಡೆಯುತ್ತಿರುವ ಜಗತ್ತಿನ ನೂರಾರು ಯುದ್ಧಗಳಲ್ಲಿ ಕೋಟ್ಯಾವಧಿಮಂದಿ ಮಾನವರ ಹತ್ಯಾಕಾರ್ಯಕ್ಕೆ ಉಪಯೋಗವಾಗಿವೆಯೆಂದೂ, ಈ ಯುದ್ಧಶಸ್ತ್ರ ತಯಾರಿಕೆಗಾಗಿಯೇ ಈಚೆಗೆ ಹದಿನೈದು ಕಾರ್ಖಾನೆಗಳು ಏರ್ಪಟ್ಟವೆ ಎಂದೂ ಪ್ರಕಟವಾಗಿದೆ.

ಸಿಡಿಮದ್ದು ಮತ್ತು ಯುದ್ಧ ಶಸ್ತ್ರ ಸಾಮಗ್ರಿ ಮಾತ್ರವಲ್ಲ, ನೊಬೆಲನು ಕೃತಕರೇಷ್ಮೆ, ಚರ್ಮ, ವಾರ್ನಿಷ್ ಪೇಯಿಂಟ್ ಮುಂತಾಗಿ ಅನೇಕ ಪದಾರ್ಥಗಳನ್ನೂ ತನ್ನ ಸೋದರರ ನೆರವಿನಿಂದ ಕಂಡುಹಿಡಿದನು.

ಈ ಅಪಾರ ಪರಿಶ್ರಮದಿಂದ ಆತನ ಆರೋಗ್ಯ ಕೆಟ್ಟು ಸದಾ ರೋಗಬಾಧೆಯಿಂದ ನರಳುತ್ತಾ, ತೊಂದರೆಪಡುತ್ತಿದ್ದನು. ಕೊನೆಗೆ ಆತನು ತನ್ನ ಅರವತ್ತನೆಯ ವರ್ಷ ವಯಸ್ಸಿನಲ್ಲಿ ಭಯಂಕರ ಜಾಡ್ಯವೊಂದರಿಂದ ಪೀಡಿತನಾಗಿ, ಅದಕ್ಕೆ ಚಿಕಿತ್ಸೆಯೆಂದು ತಾನು ಸಿಡಿಮದ್ದುಗಳ ತಯಾರಿಕೆಗಾಗಿ ಉಪಯೋಗಿಸುತ್ತಿದ್ದ ಸಾರಜನಕದ ಅನಿಲವನ್ನೇ ಉಪಯೋಗಿಸಬೇಕೆಂದು ವೈದ್ಯರಿಂದ ಸಲಹೆ ಪಡೆದು ಅದರಿಂದಲೇ ಜೀವಿಸಿದನು. ಎಂತೂ ಸಿಡಿಮದ್ದಿನ ಮೂಲಕ ತಾನು ಲೋಕಕ್ಕೆ ಪ್ರಸಾದಿಸಿದ ಯಾತನೆಯ ಪ್ರತಿಫಲವೋ ಎಂಬಂತೆ ಮುಂದೆ ಮೂರುವರ್ಷ


ಕಾಲ ಭಯಂಕರ ದೇಹಯಾತೆಯನ್ನನುಭವಿಸಿ ಕೊನೆಗೆ ೧೮೯೬ರಲ್ಲಿ ಮೃತನಾದನು.

ಆಲ್ಫ್ರೆಡ್ ನೊಬೆಲ್‌ನು ಆದ್ಯಂತ ಜೀವಮಾನವೂ ಬ್ರಹ್ಮಚಾರಿಯಾಗಿಯೇ ಜೀವಿಸಿದನು. ಚಿಕ್ಕಂದಿನಲ್ಲೇ ಅವನಿಂದ ಪ್ರೀತಿಸಲ್ಪಟ್ಟ ತರುಣಿಯು ಅಲ್ಪಾಯುಷಿಯಾಗಿ ತೀರಿಹೋದುದರಿಂದ ಆತನು ಅವಿವಾಹಿತನಾಗಿಯೇ ಉಳಿದು ಏಕಾಂಗಿಯಾಗಿಯೇ ಜೀವಿಸಿದ್ದನು.

ನೊಬೆಲನು ರಸಾಯನಿಕ ಜೀವಿಯಾದರೂ, ತನ್ನ ಮಾತೃಭಾಷೆಯಾದ ಸ್ವೀಡಿಷ್ ಭಾಷೆಯನ್ನಲ್ಲದೆ ಜರ್ಮನ್, ಲ್ಯಾಟಿನ್, ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಪ್ರವೀಣನಾಗಿದ್ದು ಹಲವು ಸಣ್ಣ ಕಥೆಗಳನ್ನೂ ಕವಿತೆಗಳನ್ನೂ ಬರೆದು ಸಾಹಿತ್ಯ ಸೇವೆಯನ್ನು ಮಾಡಿದ್ದಾನೆಂಬುದು ವಿಸ್ಮಯಕರವಾಗಿದೆ.

ಸಿಡಿಮದ್ದುಗಳ, ಯುದ್ಧ ಶಸ್ತ್ರಸಾಮಗ್ರಿಗಳ ತಯಾರಿಕೆಯಿಂದ ಲಭಿಸಿದ ಅಪಾರ ದ್ರವ್ಯವನ್ನು ಆತನು ತನ್ನ ಜೀವಿತದ ಕೊನೆಗಾಲದಲ್ಲಿ ಒಂದು ಧರ್ಮನಿಧಿಯನ್ನಾಗಿಟ್ಟು ಅದರಿಂದ ಉತ್ಪತ್ತಿಯಾಗುವ ದ್ರವ್ಯದಿಂದ ಪ್ರತಿವರ್ಷವೂ, ವಿಜ್ಞಾನ, ಸಾಹಿತ್ಯ ಮತ್ತು ವಿಶ್ವಶಾಂತಿಗಾಗಿ ದುಡಿದ ಮಹನೀಯರಿಗೆ ಬಹುಮಾನಗಳನ್ನು ಕೊಡಬೇಕೆಂದು ಏರ್ಪಡಿಸಿದ್ದಾನೆ. ೧೯೦೧ರಿಂದ ಈವರೆಗೆ ಈ ನಿಧಿಯಿಂದ ೧೭೧ಮಂದಿ ಮಹನೀಯರು ಬಹುಮಾನ ಪಡೆದಿದ್ದಾರೆ. ನಮ್ಮ ದೇಶದಲ್ಲಿ ರವೀಂದ್ರನಾಥ ಠಾಕೂರರಿಗೆ ೧೯೧೩ರಲ್ಲಿ 'ಗೀತಾಂಜಲಿ' ಗ್ರಂಥಕ್ಕಾಗಿಯೂ ಸರ್ ಸಿ. ವಿ. ರಾಮನ್‌ರವರಿಗೆ ವಿಜ್ಞಾನಶಾಸ್ತ್ರಶೋಧನೆಗಾಗಿಯೂ ಈ ಬಹುಮಾನ ದೊರೆತಿದೆ.—ಕಳಪೆಯಾದ ಗೊಬ್ಬರದ ಫಲವಾಗಿ ರಸಯುಕ್ತವಾದ ಮಧುರ ರಸಾಲ ಫಲವು ದೊರೆಯುವುದಿಲ್ಲವೆ?—ಹಾಗೆಯೇ—ಲೋಕದಲ್ಲಿ ಯಾವ ಕಾರ್ಯದ ಫಲವಾಗಿ ಎಂತಹ ಕಾರ್ಯವು ಪರಿಣಾಮಗೊಳ್ಳಬೇಕೆಂದು ದೇವರ ನಿಯಾಮಕವಿಧಿಯೋ ಬಲ್ಲವರಾರು?

ಈ ಸುಪ್ರಸಿದ್ಧ ಬಹುಮಾನದ ಮೊತ್ತ ೮,೦೦೦ ಪೌಂಡುಗಳು ಎಂದರೆ ಸುಮಾರು ೧,೨೦,೦೦೦ ರೂಪಾಯಿಗಳಾಗುತ್ತದೆ.



ಡಿಸ್ಟ್ರಿಬ್ಯೂಟರ್ಸ್: **ಬಾಂಬೆ ಟ್ರೇಡಿಂಗ್ ಕಂಪೆನಿ,**
೩೨೧, ಚಿಕ್ಕಪೇಟೆ, : : ಬೆಂಗಳೂರು ಸಿಟಿ.

ಶ್ರೀ ರಾಮ ಸಿಲ್ಕ್ ಮಿಲ್ಸ್, ಲಿಮಿಟೆಡ್.

ಬಸವನಗುಡಿ ಪೋಸ್ಟ್, : : ಬೆಂಗಳೂರು ಸಿಟಿ.

ನಮ್ಮಲ್ಲಿ ಫಿಲೇಚರ್ ಸೀರೆಗಳೂ, ಕ್ರೇಪ್ಸ್ ಜಾರ್ಜೆಟ್ ಸೀರೆಗಳೂ, ಖಣಗಳೂ, ಕೋಟಿಂಗ್‌ಗಳೂ, ಷರಟಿಂಗ್‌ಗಳೂ, ಎಲ್ಲಾ ವಿಧವಾದ ಬಟ್ಟೆಗಳೂ ತಯಾರಾಗುತ್ತವೆ.

ಇದಲ್ಲದೆ ಮಗ್ಗಗಳಿಗೆ ಬೇಕಾನಂಥ ರೇಷ್ಮೆ ಹುರಿಗಳೂ ಸಹ ದೊರೆಯುತ್ತದೆ.

★

ಮ್ಯಾನೇಜಿಂಗ್ ಏಜಂಟ್ಸ್:
ಎಂ. ಜಿ. ನಾಯಕ್ ಅಂಡ್ ಕೋ. ಲಿ.

ಮ್ಯಾನೇಜಿಂಗ್ ಡೈರೆಕ್ಟರ್:
ಎಂ. ಜಿ. ನಾಯಕ್.

ಬೋಧಿವೃಕ್ಷ

ಶ್ರೀ. ಎಸ್. ಪ್ರಹ್ಲಾದರಾವ್ ಎಂ. ಎ.

ಅದು—ಇದು

ನಾನು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋಗುತ್ತೇನೆ ಎಂದು ತಿಳಿದ ನನ್ನ ಸ್ನೇಹಿತರಲ್ಲಿ ಕೆಲವರು ಬಹಳ ಉತ್ಸಾಹದಿಂದ ನನ್ನನ್ನು ಪ್ರೋತ್ಸಾಹಿಸಿ 'ನಿಜ ಕಣಪ್ಪ, ಮನುಷ್ಯ ಅಂತ ಹುಟ್ಟಿದ ಮೇಲೆ ಒಂದು ಸಾರಿ ಕಾಲೇಜು ಮೆಟ್ಟಿಲು ಹತ್ತಿ ಬರಬೇಕು. ಅದು ಬಿಟ್ಟು ಇಷ್ಟಕ್ಕೇ ವಿದ್ಯಾಭ್ಯಾಸವನ್ನು ಸಾಕುಮಾಡಿದರೆ ಜೀವನ ಬಹಳ ಸಂಕುಚಿತವಾಗುತ್ತದೆ ನೋಡು. ಅವರಿವರ ಬಾಯಿಯಲ್ಲಿ ಕೇಳಿದರೇ ಸಾಕು, ಕಾಲೇಜು ಜೀವನ ಎಷ್ಟು ಉತ್ತಮವಾದುದು ಅನ್ನಿಸುತ್ತದೆ. ನಾಲ್ಕು ವರ್ಷ ಆದರೂ ನಡಿಯಬೇಕು. ಅನಂತರ ಇದ್ದೇ ಇದೆ. ಸಂಸಾರ, ನೌಕರಿ ಎಲ್ಲ, ಹೋಗಿ ಬಾರಪ್ಪ' ಎಂದರು. ನನಗಿಂತ ಹಿರಿಯರಾದ ಕೆಲವರು ಬೇರೊಂದು ಸರಣಿಯಲ್ಲಿ 'ಅವೆಲ್ಲಾ ಏನು ಮಹ; ಎಸ್. ಎಸ್. ಎಲ್. ಸಿ., ಆದರೆ ಸಾಕಪ್ಪ. ಒಂದು ನೌಕರಿ ನೋಡಿಕೊಂಡು ಮದುವೇನೋ ಮನೇನೋ ಮಠಾನೋ ಎಂದು ಹಾಯಾಗಿ ಇರುವುದು ಬಿಟ್ಟು ಮೈಸೂರಂತೆ, ಕಾಲೇಜಂತೆ; ಅದಕ್ಕೇನು ಎರಡು ಕೊಂಬಿರುವುದು ಅಷ್ಟರಲ್ಲೇ ಇದೆ. ಕಾಲೇಜು ಜ್ಞಾನ ಸಾಗರ ಎಂತಲೂ, ಅಲ್ಲಿನ ಅಧ್ಯಾಪಕರು ಸಮುದ್ರರಾಜರೆಂತಲೂ, ಅಲ್ಲಿಗೆ ಹೋದವರೆಲ್ಲಾ ಜ್ಞಾನವನ್ನು ತುಂಬಿ ತುಂಬಿ ತರಬಹುದೆಂದೂ ತಿಳಿಯುವುದು ದಡ್ಡತನ. ಸುಮ್ಮನೇ ದುಡ್ಡು ಹಾಳುಮಾಡಬೇಡಪ್ಪ' ಎಂದು ಅವರು ವಾದಿಸಿದರು. ಇಬ್ಬರ ಮಾತನ್ನೂ ಕೇಳಿ ನನಗೆ ಇತಿಮಿತಿಯಾದಂತಾಯಿತು. ರೈಲಿನಲ್ಲಿ ಕುಳಿತು ಹೊರಟಾಗಲೂ ಸಹ ನಾನು ಮಾಡುತ್ತಿರುವುದು ಸರಿಯೇ—ತಪ್ಪೇ, ಕಾಲೇಜಿಗೆ ಹೋಗಲೆ ಬೇಡವೆ, ಯಾರು ಆಡಿದ ಮಾತನ್ನು ನಂಬಲಿ ಎಂಬ ಮುಂತಾಗಿ ಪ್ರಶ್ನೆಗಳು ನನ್ನನ್ನು ಆವರಿಸಿದವು. ಆರು ವರುಷಗಳ ಕಾಲ ಆ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ನಾನು ಪ್ರಯತ್ನ ಮಾಡಿದ್ದೇನೆ.

ಬೋಧಿವೃಕ್ಷದ ಸಾಕ್ಷಿಯಾಗಿ

ಅದನ್ನು ಬೋಧಿವೃಕ್ಷ ಎಂದು ಕರೆದವನು ನಾನೆ. ಭಗವಾನ್ ಬುದ್ಧದೇವನು ಯಾವ ಮರದ ನೆರಳಿನಲ್ಲಿ ಕುಳಿತು ಜ್ಞಾನದ ಬೆಳಕನ್ನು ಕಂಡನೋ ಆ ಮರಕ್ಕೆ ಅಂದಿನಿಂದ ಬೋಧಿವೃಕ್ಷವೆಂಬ ಹೆಸರಾಯಿತು. ಇಂದು ಮಹಾರಾಜರವರ ಕಾಲೇಜಿನ ಒಳ ಅಂಗಳದಲ್ಲಿರುವ ಈ ಮರವು ನವೀನ ಶತಮಾನದ ಅಭಿನವ ಬುದ್ಧರ ಭಾಷಣಗಳನ್ನು ಕೇಳಿ ಕೇಳಿ ಅನೇಕ ವರ್ಷಗಳ ಜ್ಞಾನಾರ್ಜನೆಯಿಂದ ಬೋಧಿವೃಕ್ಷವಾಗಿ ಪರಿಣಮಿಸಿದೆ. ಒಬ್ಬ ಬುದ್ಧನಿಗಲ್ಲ ಸಾವಿರಾರು ಜನ ಜ್ಞಾನಭಿಕ್ಷುಗಳಿಗೆ ನೆರಳಾಗಿದೆ ಆ ಮರ. ಆ ಮರದ ಆಸರೆಯಲ್ಲಿ ನಡೆಯದ ಭಾಷಣವಿಲ್ಲ. ಅಲ್ಲಿ ಆಡದ ನಾಟಕವಿಲ್ಲ. ಅದು ನೋಡದ ಹಿರಿಯರಿಲ್ಲ. ಹನ್ನೆರಡು ಮಂದಿ ಒಟ್ಟಾಗಿರುವ ಮನೆಯ ಹಿರಿಯ ಅಜ್ಜನಂತೆ ಅದು ತಿಳಿದವರಿಗೂ, ತಿಳಿಯಬಯಸುವವರಿಗೂ ಆಸರೆಯಾಗಿ ತಾಳ್ಮೆಯಿಂದ ಎಲ್ಲರ ವಾದ ವಿವಾದವನ್ನೂ ಕೇಳಿದೆ. ಇಷ್ಟಾದರೂ ಸಮ್ಯಕ್ ಜ್ಞಾನವನ್ನು ಪಡೆದ ಯೋಗಿಯಂತೆ ಆ ಮರವು ಮೌನವಾಗಿರುವುದು ಅದರ ಹಿರಿತನಕ್ಕೆ ಸಾಕ್ಷಿ. ದೇಶಪ್ರೇಮಿಗಳಾದ ವಿದ್ಯಾರ್ಥಿಗಳು ನಾಡಹಬ್ಬವನ್ನಾಚರಿಸಿದಾಗ ಆ ವೃಕ್ಷವು ತನ್ನ ಅಸಂಖ್ಯಾತ ಬಾಹುಗಳಿಂದ ತೊನೆದು ತೂಗುತ್ತ ಸಕಲರಿಗೂ ಆಶ್ರಯವಾಗಿ, ಅಂಗಳಕ್ಕೆ ಒಪ್ಪಾಗಿ ನಲಿಯುತ್ತಿದ್ದು

ದನ್ನು ನಾನು ಕಂಡಿದ್ದೇನೆ. ಪ್ರತಿಭಾವಂತರಾದ ಸರ್ ಸರ್ವಪಲ್ಲಿ ರಾಧಾಕೃಷ್ಣನ್, ಸರ್ ಸಿ. ವಿ. ರಾಮನ್, ಡಾಕ್ಟರ್ ಭಾಗವ, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ, ಮೊದಲಾದವರು ಆ ಮರದಡಿಯಲ್ಲಿ ನಿಂತು ಭಾವೀ ಜನಾಂಗದ ಏಳಿಗೆಗೆ ಅನುಕೂಲವಾಗಬಲ್ಲ ಸಂದೇಶವನ್ನು ಸಾರಿದ್ದಾರೆ. ನಾಸಿಂ, ಲೀಲಾದೇಸಾಯಿ, ಶಾಂತಾ ಆಪ್ಟೆ, ಮೊದಲಾದ ತಾರೆಯರು ಅದರ ನೆರಳಿನಲ್ಲಿ ತಮ್ಮ ಪ್ರಭೆಯನ್ನು ಬೀರಿದ್ದಾರೆ. ಪ್ರತಿದಿನ ವಿದ್ಯಾನಿಲಯದ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಮುಂಚೆ 'ವಂದೇ ಮಾತರಂ' ಪ್ರಾರ್ಥನೆಯಾಗುತ್ತಿದ್ದುದು ಅದರ ನೆರಳಿನಲ್ಲಿಯೇ. ಎಷ್ಟೋ ಸಾರಿ ಆ ಮರಕ್ಕೆ ಇರುವ ಪುಣ್ಯ ನನಗಿಲ್ಲವಲ್ಲ ಎಂದು ನಾನು ಆಲೋಚನಾಪರನಾದುದೂ ಉಂಟು.

ಅಲ್ಲಿ—ಇಲ್ಲಿ—ಎಲ್ಲಿಯೂ

ನನಗೆ ಲಭಿಸಿದ ಆ ಪುಣ್ಯ ಪುಣ್ಯಾತ್ಮರಾದ ನನ್ನ ಸ್ನೇಹಿತರೊಬ್ಬರಿಗೆ ದೊರೆತಿರುವುದು ಸಂತೋಷದ ವಿಚಾರ. ಹಾಸ್ಯಕ್ಕಾಗಿ ನಾನು ಅವರನ್ನು ಬೋಧಿವೃಕ್ಷದ ಸಸಿ ಎಂದು ಕರೆಯುತ್ತಿದ್ದೆ. ಮರ ಸ್ಥಾವರವಾದರೆ ಈ ಸಸಿ ಜಂಗಮ. ಮಧ್ಯಾಹ್ನ ೧೧ ರಿಂದ ರಾತ್ರೆ ೯ರ ವರೆಗೆ ಆ ವ್ಯಕ್ತಿಗೆ ಬಿಡುವೆಂಬುದಿಲ್ಲ. ಬೆಳಗ್ಗೆ ಬಂದ ಹುಡುಗರಿಗೆಲ್ಲಾ ಸರಿಯಾದ ಉತ್ತರವನ್ನು ಹೇಳಿ ಪುಸ್ತಕಗಳನ್ನು ಕೊಡಬೇಕು, ತೆಗೆದುಕೊಳ್ಳಬೇಕು. "ಇಲ್ಲ ಸಾರ್ ಆ ಪುಸ್ತಕ ಲೆಂಟ್ ಆಗಿದೆ. ಇವತ್ತು ಶನಿವಾರ ಸಾರ್ ಬುಕ್ಸು ಇಷ್ಯು ಮಾಡೊಲ್ಲ. ಈಗ ಐದೂವರೆಗೆ ನಾಟಕ ಇದೇ ಸಾರ್ ಸೀಟ್ ಅರೇಂಜ್ ಮಾಡಿಸಬೇಕು. ನೀವು ಫೈನ್ ಒಂದಾಣೆ ಕೊಡದೇ ಹೋದರೆ ನಿಮಗೆ ಪುಸ್ತಕ ಕೊಡೋದಿಲ್ಲಾ ಸಾರ್.......ನನಗೆ ಗೊತ್ತಿಲ್ಲ ಸಾರ್ ಹೆಚ್ಚಿಗೆ ವಿಷಯ ಬೇಕಾದರೆ ಮೇಲೆ ಹೋಗಿ ಕೇಳಿ" ಹೀಗೆ ಸಂಜೆಯವರೆಗೂ ಬಂದ ಬಂದ ಹುಡುಗರಿಗೆಲ್ಲಾ ಉತ್ತರ ಹೇಳುತ್ತಿರುವುದೇ ಅವರ ಕೆಲಸ. ಅವರಿಗೆ ಈ ಕೆಲಸದಲ್ಲಿ ಎಷ್ಟು ತಾಳ್ಮೆ ಇದ್ದಿತೋ ಆ ಹರನಾತ್ಮನೇ ಬಲ್ಲ. ಯಾವ ಸಭೆ ಸೇರಲಿ, ಯಾವ ಚರ್ಚಾಕೂಟವಾಗಲಿ ಅವರ ಸಹಾಯ ಬೇಕೇ ಬೇಕು. ವಿದ್ಯಾರ್ಥಿ ಸಂಘದವರಿಗೆ ಅವರು ಬಲಗೈ ಇದ್ದಂತೆ. ಒಂದು ನಾಟಕಕ್ಕೋ, ಇಲ್ಲ ಭಾಷಣಕ್ಕೋ ಮಧ್ಯಾಹ್ನದಿಂದ ಅಣಿ ಮಾಡಿ ಕಾರ್ಯಕ್ರಮ ಪ್ರಾರಂಭವಾದ ತಕ್ಷಣ ಅವರು ನೆರೆದ ಜನಸಂದಣಿಯನ್ನೆಲ್ಲಾ ಬಿಟ್ಟು ದೂರದ ಎತ್ತರವಾದ ಮೆಟ್ಟಲಿನ ಮೇಲೆ ನಿಂತು ಒಂದು ಕೈಯಲ್ಲಿ ನಶ್ಯ ಮತ್ತೊಂದು ಕೈಯಲ್ಲಿ ಪಂಚೆಯ ತುದಿ ಹಿಡಿದುಕೊಂಡು ಆನಂದಿಸುತ್ತಿದ್ದುದನ್ನು ನಾನು ಕಂಡು, ಆತ್ಮ ತೃಪ್ತಿಯಾಗುವಂತೆ ನಿರ್ವಹಿಸುವ ತನ್ನ ಕಾರ್ಯದಲ್ಲಿ ಇಷ್ಟು ಸಂತೋಷವಿರುತ್ತದೆ ಎಂದುಕೊಂಡಿದ್ದೇನೆ. ತೃಪ್ತಿ ಅವರಿಗೆ ನಿರಂತರವಾದರೂ ನಾಲ್ಕು ನಿಮಿಷ ನಿಂತು ಹಾಯಾಗಿ ಉಸಿರಾಡುವುದು ಅವರ ಪಾಲಿಗಿಲ್ಲ. ನೂರೆಂಟು ಜನ ಬಂದು ಹತ್ತೆಂಟು ಕೆಲಸಗಳಿಗಾಗಿ ಅವರನ್ನು ಕರೆದಾಗ ಹೂಂ ಎಂದು ಹೊರಟೇಬಿಡುವುದು ಅವರ ಪದ್ಧತಿ. ಜೀವನದಲ್ಲಿ ನಿಂತರಾಗುತ್ತದೆಯೇ? ಗಡಿಬಿಡಿಯಿಂದಿರುವುದೇ ಜೀವನ. ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳಲ್ಲಿ, ಅಲ್ಲಿ, ಇಲ್ಲಿ, ಎಲ್ಲಿ ನೋಡಿದರೂ ಅವರೇ.

ಮಂದಿರದ ಭವ್ಯತೆ

ಪರ ಊರಿನಿಂದ ವ್ಯಾಸಂಗಕ್ಕಾಗಿ ಬರುವ ವಿದ್ಯಾರ್ಥಿಗಳಲ್ಲಿ ಬಹು ಮಂದಿ ಬೇಸಿಗೆಯ ರಜ ಬಂದ ಒಡನೆಯೇ ತಮ್ಮ ತಮ್ಮ ಊರುಗಳಿಗೆ ಹೊರಟು ಹೋಗುತ್ತಾರೆ. ಮೈಸೂರಿನಲ್ಲಿಯೇ ನಿಲ್ಲುವವರು ಬಹಳ ಕಡಿಮೆ. ನಿಂತವರಲ್ಲಿಯೂ ಕಾಲೇಜು ಕಡೆ ಸುಳಿದಾಡುವವರು ಅತಿ ವಿರಳ. ಆ ಮೂರು ತಿಂಗಳು ಕಾಲೇಜಿನ ವಾತಾವರಣ ಬೆಕೋ ಅನ್ನುತ್ತಿರುತ್ತದೆ. ಕಾಲೇಜಿನ ಹತ್ತಿರ ಬಂದರೆ ಹೆಲ್ತ್ ಕಿಚನ್ ಐಯರ್ ಕೆಲಸವಿಲ್ಲದೆ ಕುಳಿತಿರುವುದು, ಮತ್ತಾವನೋ ಒಬ್ಬ ಜವಾನ ತನ್ನ ಬಟ್ಟೆಬರೆಗಳನ್ನೆಲ್ಲಾ ಒಗೆದು ಕಾಲೇಜಿನ ಒಳ ಅಂಗಳದಲ್ಲಿ ಹರಡುತ್ತಿರುವುದು, ಮುಗುದೊಬ್ಬ ವಿದ್ಯಾರ್ಥಿ ತಣ್ಣಗೆ ದೂರದ ಕಲ್ಲಿನ ಮೇಲೆ ಕುಳಿತು ಧೂಮಪಾನ ಮಾಡುತ್ತಿರುವುದು ಇಷ್ಟು ಮಾತ್ರ ಕಣ್ಣಿಗೆ ಬೀಳುತ್ತದೆ. ಬಳಸಿಕೊಂಡು ಕಾಲೇಜು ಮಂದಿರದ ಎಡರಿನಲ್ಲಿ ಪೋರ್ಟಿಕೋದ ಹತ್ತಿರ ಬಂದರೆ ಮೈ

ಜುಮ್ಮೆನ್ನುವ ಒಂದು ದೃಶ್ಯ ನಮಗೆ ಗೋಚರವಾಗುತ್ತದೆ. ಮೊನ್ನೆಮೊನ್ನೆಯ ವರೆಗೂ ಬರೀ ಹಸಿರು ಹಸಿರಾಗಿ ಪೋರ್ಟಿಕೋದ ಗೋಡೆಗಳನ್ನು ಆವರಿಸಿ ನಿಂತಿದ್ದ ಬಳ್ಳಿಯೊಂದು ಇಂದು ಪುಷ್ಪಭರಿತವಾಗಿ ಮೈಯೆಲ್ಲಾ ಹಳದಿಯನ್ನುಟ್ಟು ನಿಂತಿದೆ. ಬೆಳಗಿನ ಹೊಂಬಿಸಿಲಿನೊಡನೆ ಈ ಪುಷ್ಪರಾಶಿಯ ಹೊಂಬಣ್ಣ ಬೇರೆ. ನೆಲದಲ್ಲಿ ಗೇಣೆತ್ತರ ಬಿದ್ದಿರುವ ಹೂವಿನ ಹಾಸಿಗೆ. ಗಿಡದಲ್ಲಿ ಎಲೆಗೆರಡು ಹೂವು. ಬಳ್ಳಿಯ ಯೌವನ ಮೈ ಬಿರಿದು ಹೊಮ್ಮುತ್ತಿರುವಂತೆ ಬರುವ ಸುವಾಸನೆ. ಹಿತವಾದದ್ದು, ಮಿತವಾದದ್ದು, ಮನೋಹರವಾದದ್ದು, ಅಷ್ಟು ಹೂವನ್ನು, ಹೂವನ್ನು ಮುತ್ತಿದ ಅಷ್ಟು ದುಂಬಿಗಳನ್ನು ನೋಡುವುದು ಒಂದು ಸುಯೋಗವೇ ಸರಿ. ಕಾದಿದ್ದು ಕಾದಿದ್ದು, ಹೆಣ್ಣಿನಂತೆ ನಾಚಿಗೆಪಟ್ಟು ನಿಂತಿದ್ದ ಆ ಬಳ್ಳಿ, ಹುಡುಗರೆಲ್ಲಾ ಊರಿಗೆ ಹೋದ ಮೇಲೆ ಸ್ವೇಚ್ಛೆಯಾಗಿ, ಸಹಜ ಸುಂದರವಾಗಿ ಮೈ ಮುರಿದು ನಲಿಯುತ್ತಿರುವಂತೆ ಕಾಣಬಂದಿತು. ಆ ವಸಂತ ವೈಭವವನ್ನು ನೋಡುವುದಕ್ಕಾಗಿಯೇ ಎರಡು ಬೇಸಗೆಗಳಲ್ಲಿ ನಾನು ತಡಮಾಡಿ ಊರಿಗೆ ಹೋಗಿದ್ದೇನೆ. ಕಾಲೇಜು ಮಂದಿರದ ಎತ್ತರವಾದ ಮಹಡಿಯ ಮೇಲ್ಕೆ ನಿಂತು ಸೂರ್ಯೋದಯವನ್ನು ನೋಡುವುದು ನನ್ನ ಪ್ರೀತಿಯ ಕೆಲಸ. ಸಂಜೆಯಾಯಿತು ಎಂದರೆ ಕುಕ್ಕರಹಳ್ಳಿಯ ಕೆರೆಯ ಏರಿ, ಬೆಳಗಾಯಿತೆಂದರೆ ಬೆಳಗಿನ ಸೂರ್ಯನನ್ನು ನೋಡುವುದಕ್ಕಾಗಿ ಕಾಲೇಜಿನ ಮಹಡಿ, ಹೀಗೆ ಬಹಳ ದಿನಗಳನ್ನು ನಾನು ಕಳೆದಿದ್ದೇನೆ. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ಪಕ್ಷಪಾತಿಗಳಂತೆ ಹೇಳುವುದಾದರೆ ಬೆಂಗಳೂರು ಕಾಲೇಜಿಗಿಂತ ಮೈಸೂರು ಕಾಲೇಜಿನ ಭವನವೇ ಸುಂದರವಾದುದು ಎಂದು ನನ್ನ ನಂಬಿಕೆ. ನಿಷ್ಕಾರಣ ಪಕ್ಷಪಾತವಲ್ಲ ಇದು. ನಿಜಕ್ಕೂ ನನಗೆ ಇಂದಿಗೂ ಅದೇ ಅಭಿಪ್ರಾಯವಿದೆ. ಮೊದಲು ನಾನು ಕಾಲೇಜು ಮಂದಿರವಲ್ಲಿ ಗಮನಿಸಿದ್ದು ಸೀನಿಯರ್ ಮತ್ತು ಜೂನಿಯರ್ ಬಿ. ಎ., ಮಂದಿರಗಳ ಗಾತ್ರ ಮತ್ತು ವೈಶಾಲ್ಯವನ್ನು. ಜಾಣನೆಂದುಕೊಳ್ಳುವ ಯಾವನಾದರೂ ಸರಿಯೆ ಅಲ್ಲಿಗೆ ಬಂದನೆಂದರೆ ಅವನಿಗೆ ತನ್ನ ಅಲ್ಪತೆಯ ಅರಿವು ಆಗದಿರದು. ಒಂದು ಗಂಟೆಯಾದರೂ ಸರಿ ನಿರರ್ಗಳವಾಗಿ ಗಟ್ಟಿಯಾಗಿ ಪಾಠ ಹೇಳಬಲ್ಲೆ ಎಂದು ಉತ್ಸಾಹದಿಂದ ಬಂದ ಉಪಾಧ್ಯಾಯರೂ ಸಹ ಆ ಬೃಹನ್ಮಂದಿರದಲ್ಲಿ ನಿಂತು, ಕೂಗಿ ಮಾತನಾಡಲಾರದೆ ಕುಳಿತಿದ್ದನ್ನು ನಾನು ನೋಡಿದ್ದೇನೆ. ಮನುಷ್ಯ ಸರ್ವಜ್ಞ ಎಂದು ಹೆಮ್ಮೆ ಪಡುವುದಕ್ಕೆ ಬದಲಾಗಿ ವಿವೇಕ ಮತ್ತು ವಿನಯವನ್ನು ಕಲಿಯಲಿ ಎಂದೋ ಏನೋ ಆ ಶಿಲ್ಪಿ ವಿದ್ಯಾನಿಲಯ ಮಂದಿರವನ್ನು ಅಷ್ಟು ಭವ್ಯವಾಗಿ ಕಟ್ಟಿದ್ದಾನೆ.

ಹನುಮೋತ್ಸಾಹ

ಮಹಾರಾಜರವರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀವರ್ಮಾ ಜೆ. ಸಿ. ರೋಲೋರವರು ವಿದ್ಯಾರ್ಥಿ ಜೀವನವನ್ನು ಕುರಿತು ಒಂದು ಸಾರಿ ಮಾತನಾಡುತ್ತಾ ಅವರನ್ನು ಅಗಸ್ತ್ಯಾವೇಶವುಳ್ಳವರೆಂದೂ, ಹನುಮೋತ್ಸಾಹಿಗಳೆಂದೂ ವರ್ಣಿಸಿದ್ದಾರೆ. ಅಂದಿನ ವಿದ್ಯಾರ್ಥಿಗಳಲ್ಲಿ ಆ ಕೆಚ್ಚು, ಆ ಉತ್ಸಾಹ ಇತ್ತು. ಈಗಲೂ ಅದು ಇದೆ ಎಂದು ನನ್ನ ನಂಬಿಕೆ. ವಿದ್ಯಾರ್ಥಿಗಳು ಎಂದಿಗೂ ಸೋಮಾರಿಗಳಲ್ಲ. ಕಾರಣವಿಲ್ಲದೆ ಅವರು ಎಂದಿಗೂ ಕಾಲು ಕೆರೆದು ಜಗಳವಾಡರು. ವ್ಯಾಸಂಗದಲ್ಲಿ ಅವರು ಎಂದಿಗೂ ಆಲಸ್ಯವನ್ನು ತೋರಿಸಲಾರರು. ಆದರೆ ಯಾರಲ್ಲಿಯೇ ಆಗಲಿ, ಅಸಂಬದ್ಧ ಅಶಿಷ್ಟ (ಇಷ್ಟವಲ್ಲದ್ದು!) ಅಪ್ರಕೃತ ವಿಚಾರಗಳು ಬಂದರೆ ಮಾತ್ರ ಅವರು ಸೈರಿಸರು. ಅವರ ತಾಳ್ಮೆಗೂ ಒಂದು ಮಿತಿ ಇದೆ. ಅದಕ್ಕೂ ಮೀರಿದ ಜನರನ್ನು ಅವರು ತಾಳಲಾರರು. ಗುರುಗಳೆಂದರೆ ಅವರಿಗೆ ತುಂಬಾ ಅಭಿಮಾನ. ಊಟವಿಲ್ಲದೆ, ಮನೆಮಠವಿಲ್ಲದೆ, ಚಟ್ಟಿಬರಿ ಇಲ್ಲದೆ ಕಷ್ಟಪಟ್ಟು ಓದಲು ಬಂದಿರುವ ಅವರು ಉತ್ತಮರಾದ ಉಪಾಧ್ಯಾಯರನ್ನು ದೇವರಂತೆ ಆರಾಧಿಸುತ್ತಾರೆ. ಸರಿಯಾಗಿ ಪಾಠ ಹೇಳಿ, ಉಚಿತ ಸಲಹೆಗಳನ್ನು ಕೊಟ್ಟು, ತಮ್ಮ ಹಾಸ್ಯವನ್ನು ಸಹಿಸಿಕೊಂಡು ತಮ್ಮೊಂದಿಗೂ ನಕ್ಕು ಬೆರೆಯಬಲ್ಲ ಉಪಾಧ್ಯಾಯರನ್ನು ಅವರು ಹೇಗೆ ಮರೆತಾರು? ವೇದಿಕೆಯಲ್ಲಿ ಆಕಡೆಯಿಂದ ಈ ಕಡೆಗೆ ಓಡಾಡುತ್ತಾ ಕನ್ನಡಕವನ್ನು ಕೈಲಿ ಹಿಡಿದುಕೊಂಡು ಪಾಠ ಹೇಳುತ್ತಿದ್ದ

ಶ್ರೀಮಾನ್ ರೋಲೋರವರ ನಾಟಕಬೋಧನೆ, ಗಂಟೆಗೆ ಅರವತ್ತು ನಿಮಿಷಗಳಾದರೆ ನಿಮಿಷಕ್ಕೆ ಅರವತ್ತು ಮಾತುಗಳು ಎಂಬಂತೆ ಭಾಷಣದ ಜಲಪಾತವನ್ನೇ ಬಾಲಕರ ಮೇಲೆ ಧುಮುಕಿಸುವ ಪ್ರೊ॥ ಎಚ್. ಕೃಷ್ಣರಾಯರು ಪ್ರೊ॥ ವಾಡಿಯಾರವರ ಘರ್ಜನೆ, ಪ್ರೊ॥ ತ್ಯಾಗರಾಜನ್‌ರವರ ವಿವೇಚನಾಪೂರ್ಣವಾದ ಪಾಠಕ್ರಮ, ಆಚಾರ್ಯ, ಎ. ಆರ್. ಕೃಷ್ಣಶಾಸ್ತ್ರಿಗಳ ಸಹಜ ಹಾಸ್ಯ ಮತ್ತು ಬಳಕೆಯ ದೃಷ್ಟಾಂತಗಳು, ಶ್ರೀಮಾನ್ ಟಿ. ಎಸ್. ಎಸ್. ರವರ ಗಂಭೀರವಾಣಿ, ಶ್ರೀ ಕೆ. ವೆಂಕಟರಾಮಪ್ಪನವರ ತರ್ಕ ಪ್ರತಿಭೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಪೂರ್ಣ ಪಾಂಡಿತ್ಯ, ಪ್ರೊ. ಕು. ವೆಂ. ಪು. ರವರ ಮಿತವಚನ–ಇಂತಹ ಅದೆಷ್ಟೋ ಸುಮಧುರ ಸಂಗತಿಗಳು ಶಾಶ್ವತವಾಗಿ ವಿದ್ಯಾರ್ಥಿಗಳ ಹೃದಯವನ್ನು ಸೂರೆಗೊಂಡಿವೆ. ಉಪಾಧ್ಯಾಯರು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಕೇವಲ ಉಪಾಧ್ಯಾಯರಲ್ಲ; ಅದಕ್ಕಿಂತ ಹೆಚ್ಚಿನವರು. ಶ್ರೀಯುತರುಗಳಾದ ಎಚ್. ಕೃಷ್ಣರಾವ್ ಮತ್ತು ಎ. ಆರ್. ಕೃಷ್ಣಶಾಸ್ತ್ರಿ ಇವರನ್ನು ನನ್ನ ಗೆಳೆಯರು 'ನಮ್ಮ ಅಜ್ಜ' ಎಂತಲೂ 'ನಮ್ಮ ತಾತಯ್ಯ' ಎಂತಲೂ ಕರೆಯುತ್ತಿದ್ದರು, 'ದೊಡ್ಡ ವಿದ್ವಾಂಸರು ಕಣೋ, ತೀ.ನಂ. ಶ್ರೀಯವರ ಕೈಲಿ ಬೈಯಿಸಿಕೊಳ್ಳಲೂ ಪುಣ್ಯ ಬೇಕು' ಎಂದು ನನ್ನ ಸ್ನೇಹಿತ ಒಂದು ಸಲ ಹೇಳಿದ್ದ. ಆ ಮಾತು ನಿಜ. ವಿದ್ಯಾರ್ಥಿಗಳಿಗೆ ವಿದ್ವತ್ತಿನಲ್ಲಿ ಪೂರ್ಣ ಅಭಿಮಾನ, ಮತ್ತು ಗೌರವ. ಅದಿಲ್ಲದವರನ್ನು ಅವರು ಕ್ಷಣ ಕಾಲವಾದರೂ ತಡೆದಾರೇನು? ದಿನಕ್ಕೆ ಎರಡು ಸಾರಿ ಸ್ಟ್ರೈಕ್ ಮಾಡಿಯಾರು. ತರಗತಿಯಲ್ಲಿ ಶಂಖ ಊದಿ ಕುರುಕ್ಷೇತ್ರವನ್ನು ಕಲ್ಪಿಸಿಯಾರು, ಚಿನಕುರುಳಿ, ಪಟಾಕಿಯನ್ನು ಹಚ್ಚಿಸಿ ದೀಪಾವಳಿಯನ್ನು ಬೆಳಗಿಯಾರು, ಕತ್ತೆ ಮರಿಯನ್ನು ತಂದು ಗೇಲಿ ಎಬ್ಬಿಸಿ ಕಾಮದಹನವನ್ನು ಮಾಡಿಯಾರು, ಎದ್ದು ನಿಂತು ಮುಖಪಲ್ಲಿಯೇ ಪ್ರತಿಭಟಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಯಾರೆ! ಇಷ್ಟು ತುಂಟರಾಗಿ, ಇಷ್ಟು ಸ್ವತಂತ್ರಮತಿಗಳಾಗಿ, ಜಳ್ಳನ್ನು ತೂರಿ ಕಾಳನ್ನು ಇಟ್ಟುಕೊಳ್ಳಬಲ್ಲ ವಿದ್ಯಾರ್ಥಿಗಳನ್ನು ಕಂಡು ಉಪಾಧ್ಯಾಯರು ನಿಜವಾಗಿಯೂ ಹೆಮ್ಮೆ ಪಡಬೇಕು.

ಎಲ್ಲರೊಂದಿಗೆ ಬೆರೆತು ತಾವೂ ನಕ್ಕು ಇತರರನ್ನೂ ನಗಿಸುವ ಜಾಣ್ಮೆ ಅವರಲ್ಲಿ ಇಲ್ಲದಿಲ್ಲ. ಪಾಠ ಹೇಳುತ್ತಾ ಮೂಲವನ್ನೇ ಬಿಟ್ಟು ಅತ್ತ ಇತ್ತ ಹೊರಟು ಸುಮ್ಮನೆ ಮಾತನಾಡುತ್ತಿರುವ ಉಪಾಧ್ಯಾಯರನ್ನು ಕುರಿತು 'ಪರೀಕ್ಷೆ ದೃಷ್ಟಿಯಿಂದ ಪಾಠವನ್ನು ಒಂದೇ ಗಂಟೆಯಲ್ಲಿ ಮುಗಿಸಿಬಿಡಿ ಸಾರ್' ಎನ್ನುವುದು, ಹೊಸದಾಗಿ ಬಂದ ಉಪಾಧ್ಯಾಯರೊಬ್ಬರು ಉತ್ಸಾಹದಲ್ಲಿ ಧಾರಾಕಾರವಾಗಿ ಅರ್ಧಗಂಟೆ ಮಾತನಾಡಿ, ಸುಸ್ತಾಗಿ ಇನ್ನು ಅರ್ಧ ಗಂಟೆ ಸುಧಾರಿಸಿಕೊಂಡುದನ್ನು ಕಂಡಾಗ "ಪಾಪ! ಹೊಸಬರು ಕಣೋ!!" ಎನ್ನುವದು, ಉಪಾಧ್ಯಾಯರು ತರಗತಿಗೆ ಬಂದೊಡನೆಯೇ ತಮ್ಮ ಅಭಿಮಾನವನ್ನು ವ್ಯಕ್ತಪಡಿಸುವುದಕ್ಕಾಗಿ 'ಹುಶ್‌ಶ್' ಎಂದು ಬುಸುಗುಟ್ಟುವುದು, ಇವೆಲ್ಲಾ ಅವರಿಗೆ ಹೊಸತಲ್ಲ, "ನಾನು ಬರೆಸುತ್ತಿರುವ ಪ್ರಬಂಧವನ್ನು ಬರೆದುಕೊಳ್ಳಯ್ಯ, ಸುಮ್ಮನೇ ಏತಕ್ಕೆ ಕುಳಿತಿದ್ದೀಯೊ" ಎಂದ ಉಪಾಧ್ಯಾಯರಿಗೆ ವಿದ್ಯಾರ್ಥಿಯೊಬ್ಬ ಉತ್ತರವಾಗಿ "ಕ್ಷಮಿಸಿ ಸಾರ್, ನಿಮಗಿಂತ ಚೆನ್ನಾಗಿ ಬರೆಯಲು ಪ್ರಯತ್ನ ಮಾಡುತ್ತೇನೆ" ಎಂತ ಹೇಳಿದನಂತೆ. ಅದಕ್ಕೆ ಅವರು ಸಿಟ್ಟಾಗದೆ ಸುಮ್ಮನಿದ್ದು ಪರೀಕ್ಷೆಯಲ್ಲಿ ಆ ಹುಡುಗ ತನ್ನ ಮಾತಿನಂತೆ ಚೆನ್ನಾಗಿ ಬರೆದುದನ್ನು ಕಂಡು ಅವನನ್ನು ಉತ್ಸಾಹಿಸಿದರಂತೆ. 'ಈ ರಾಜರತ್ನಂ ಎಂದರೆ ಯಾರೋ? ಗಂಡಸರೊ ಹೆಂಗಸರೊ? ಎಂದು ಒಬ್ಬ ಕೇಳಿದರೆ ಅವನ ಸ್ನೇಹಿತ ಉತ್ತರವಾಗಿ "ಅವರೊಬ್ಬ ಖಾದೀ ಪ್ರೇಮಿಗಳು ಕಣೊ" ಎಂದು ಉತ್ತರ ಕೊಟ್ಟನಂತೆ. ಇಷ್ಟಲ್ಲದೆ ಚರ್ಚಾಕೂಟದಲ್ಲಂತೂ ವಿದ್ಯಾರ್ಥಿಗಳು ಹೆಪರದೆ ಮಾತಿಗೆ ಮಾತು, ಏಟು ಎನ್ನುವಂತೆ ತಮ್ಮ ನಿರಾಭರಣ ಸುಂದರವಾದ ಶೈಲಿಯಲ್ಲಿ ಯಾರನ್ನು ಬೇಕಾದರೂ ಟೀಕಿಸಬಲ್ಲರು.

ಬಾಳಿಗಿನ್ನೆಷ್ಟು ಮುಖವೊ!

ಇಷ್ಟೆಲ್ಲಾ ಮಾಡಿ, ಸಂಜೆ ಆಟವಾಡಿ ಮನೆಯಲ್ಲಿ ಅಡಿಗೆ ಮಾಡಿಕೊಂಡು, ವಾರಕ್ಕೆ ಎರಡಾದರೂ

ಸಿನಿಮಾ ನೋಡಿ, ಎರಡು ಕಾದಂಬರಿಗಳನ್ನು ಮುಗಿಸಿ-ಇಷ್ಟೆಲ್ಲಾ ಮಾಡಿದರೂ ತರಗತಿಗಳಲ್ಲಿ ಮೊದಲನೆಯವರಾಗಿರುತ್ತಿದ್ದ ಅನೇಕ ವಿದ್ಯಾರ್ಥಿಗಳು ನನ್ನ ಸಹಪಾಠಿಗಳಾಗಿದ್ದರು. ದಿನಕ್ಕೆ ಎರಡು ಗಂಟೆಯಾದರೂ ಕಾಲೇಜಿನ ಪುಸ್ತಕಭಂಡಾರದಲ್ಲಿ ಕಾಲ ಕಳೆಯುವುದು ಅವರ ಸ್ವಭಾವವಾಗಿದ್ದಿತು. ಭಂಡಾರವೇನೊ ಜ್ಞಾನಸಾಗರದಂತೆಯೇ ಇದೆ. ತಾನಾಯ್ತು ತನ್ನ ಪಠ್ಯಪುಸ್ತಕವಾಯ್ತು ಎನ್ನುವ ಹುಡುಗ ಕೂಡ ಸುಮ್ಮನೆ ಆ ಪುಸ್ತಕಭಂಡಾರದಲ್ಲಿ ಕಾಲಿಟ್ಟರಾಯಿತು, ದೇವಮಂದಿರದಲ್ಲಿ ಹೆಜ್ಜೆ ಇಡುವ ಭಕ್ತನಂತೆ ಸಹಜ ಕುತೂಹಲದಿಂದ ಓದುವ ಚಟಕ್ಕೆ ಬೀಳುತ್ತಾನೆ. ಒಬ್ಬ ಮನುಷ್ಯ ನಿಜವಾಗಿ ಎಷ್ಟು ವಿಷಯಗಳನ್ನು ತಿಳಿದುಕೊಂಡಾನು? ಎಷ್ಟು ಸಾಧ್ಯ! "ಕಲೆ ಅನಂತವಾಗಿದೆ, ಜೀವನ ಮಾತ್ರ ಅಲ್ಪ" ಎಂದು ಒಬ್ಬ ಕವಿ ಹೇಳಿದನಂತೆ. ಆ ಮಾತಿನಂತೆ ಪ್ರತಿಯೊಂದು ಜ್ಞಾನಭಾಗವನ್ನೂ, ವಿಶೇಷ ರೀತಿಯಿಂದ ಎಲ್ಲವನ್ನೂ ಕಲಿಯಲು ಸಾಧ್ಯವಾಗದಿದ್ದರೂ ಸ್ಥೂಲವಾಗಿ ಅವೆಲ್ಲದರ ಪರಿಚಯ ಮಾಡಿಕೊಂಡಲ್ಲಿ ವಿದ್ಯಾರ್ಥಿ ಕೃತಕೃತ್ಯನಾದಂತೆಯೇ ಸರಿ. ಆ ಕೆಲಸಕ್ಕಾಗಿ ನಾನು ಪ್ರಯತ್ನ ಮಾಡಿದ್ದೇನೆ, ನನ್ನ ಸ್ನೇಹಿತರೂ ಮಾಡಿದ್ದಾರೆ. ಕಾಲೇಜು ವಿದ್ಯಾಭ್ಯಾಸಕ್ಕೂ, ಜೀವನ ಸಮಸ್ಯೆಗೂ ಏನೂ ಸಂಬಂಧವಿಲ್ಲದಿರಬಹುದು. ನಾನು ಕಲಿತ ವೇದಾಂತದಿಂದ ಜೀವನದ ರೊಟ್ಟಿ ಬೇಯದೆ ಇರಬಹುದು. ಆದರೆ ವಿದ್ಯಾನಿಲಯದ ಮೆಟ್ಟಿಲನ್ನು ಹತ್ತದಿದ್ದಲ್ಲಿ ನಾನು ಏನಾಗುತ್ತಿದ್ದೆ ಎಂದು ಯೋಚಿಸಿದರೆ ಮಾತ್ರ ಅಪರಿಮಿತ ಭಯವಾಗುತ್ತದೆ. ಹಾಗಾಗಿದ್ದರೆ ಆ ಜೀವನ ನನ್ನ ಪಾಲಿಗೆ ಸೊನ್ನೆಯಾಗುತ್ತಿತ್ತು. ಸತ್ಸಂಗ-ಅದೇ ಸಾಕು. ಅದು ನಮ್ಮನ್ನು ತಿದ್ದುತ್ತದೆ. ಹಿರಿಯ ಭಾವನೆಗಳು- ಅವೇ ಸಾಕು; ನಮ್ಮ ಮನದ ಕಲ್ಮಷವನ್ನು ದೂರ ಮಾಡುತ್ತವೆ. ಪುಸ್ತಕಗಳು - ಇನ್ನೇನು ಬೇಕು! ಜೀವನದ ವಿವಿಧ ರೂಪಕ್ಕೆ ಅವೇ ಕನ್ನಡಿಗಳು.

ನನ್ನಮಟ್ಟಿಗೆ ನಾನು ಧೈರ್ಯವಾಗಿ--ಬೋಧಿವೃಕ್ಷದ ಸಾಕ್ಷಿಯಾಗಿ ಹೇಳಬಲ್ಲೆ—ಅಷ್ಟನ್ನು ನಾನು ಪಡೆದಿದ್ದೇನೆ ಎಂದು. ಇಂದಿಗೂ ನನ್ನ ವಿದ್ಯಾನಿಲಯದ ಚಿತ್ರ ಮನಸ್ಸಿನ ರಂಗದಲ್ಲಿ ಮಾಸಿಲ್ಲ. ಮೈಸೂರನ್ನು ಬಿಟ್ಟು ಬೆಂಗಳೂರಿಗೆ ಬಂದು ಬೇರೆ ಕೆಲಸದಲ್ಲಿ ತೊಡಗಿ, ಕಾಗದಪತ್ರಗಳನ್ನು ತಿರುವಿ ಹಾಕುವ ಅವಸರದಲ್ಲಿಯೂ ಸಹ ಒಮ್ಮೊಮ್ಮೆ ನನ್ನ ಮನಸ್ಸು ಇದ್ದಕ್ಕಿದ್ದಂತೆ ವಿದ್ಯಾಲಯದ ಕಡೆಗೆ ಓಡುತ್ತದೆ. ಅದೇ ಕ್ಷಣದಲ್ಲಿ ಅಚ್ಚಳಿಯದ ಭಾವನೆಗಳ ರೂಪವಾಗಿ ಹೃದಯದಲ್ಲಿ ಚಿತ್ರವಾಗಿ ತೋರುತ್ತದೆ ನನ್ನ ಪ್ರೀತಿಯ ವಿದ್ಯಾಲಯ.



ಕಲಾಚಾರ್ಯ

ಶ್ರೀ. ಎಂ. ವಿ. ಸುಬ್ರಹ್ಮಣ್ಯಂ
ಚಾಮರಾಜಪೇಟೆ

"ಮಾತು ಆಡಿ ಕೆಟ್ಟಿತು;
ಮುತ್ತು ಒಡೆದು ಕೆಟ್ಟಿತು."

ಅನ್ನುತ್ತಿದೆ ಗಾದೆ. ಬಹಳ ಹಳೆಯದು ಈಗಾದೆ. ಅದು ಹುಟ್ಟಿದ ಕಾಲದಲ್ಲಿ ಒಮ್ಮೆ ಒಂದು ಮಾತನ್ನು ಆಡಿದರೆ—ಆಡ ಆಡುತ್ತಲೇ ಅದು ಗಾಳಿಗೆ ಸೇರಿ ಹೋದರೆ—ಅಲ್ಲಿಗೆ ಮುಗಿದೇ ಹೋಗುತ್ತಿತ್ತು. ಮತ್ತೆ ಆ ಶಬ್ದವನ್ನು, ಹಾಗೆ ಒಮ್ಮೆ ಕೇಳಿದ ವಿಧದಲ್ಲೇ—ಮತ್ತೆ ಕೇಳಬೇಕು. ಅನಿಸಿದರೆ, ಅಸಾಧ್ಯ ವಿಚಾರವಾಗಿ ಇರುತಿತ್ತು. ಮಹಾಯುಗಗಳು ಎಷ್ಟಾಗಿ ಹೋಗಿವೆಯೋ—ಅವುಗಳಲ್ಲಿ ಮನುಷ್ಯನು ಮತ್ತೆ ಮತ್ತೆ ಕೇಳಬೇಕು ಅನಿಸುವಂತಹ ಮಾತುಗಳು ಎಷ್ಟು ವಾತಾವರಣದಲ್ಲಿ ಒಂದಾಗಿ ಹೋಗಿವೆಯೋ ಯಾರಿಗೆ ಗೊತ್ತು? ಅವುಗಳನ್ನು ಇಂದು ನಾವು ಕೇಳಿದ್ದರೆ, ಅವನ್ನಾಡಿದ ಮಹಾಪುರುಷರನ್ನೂ ಆ ಮಾತುಗಳು ಬಂದ ಸನ್ನಿವೇಶವನ್ನೂ - ಅವರು ಆ ಮಾತುಗಳನಾಡುತ್ತಿರುವ ಸುಸಂಧಿಯನ್ನೂ ನಾವು ಈಗ ಕಂಡಿದ್ದರೆ—ಅದರ ಫಲವಾಗಿ ನಮ್ಮ ಜೀವಿತದಲ್ಲಿನ ಎಷ್ಟು ನೋವುಗಳು ಮರೆತುಹೋಗುತ್ತಿದ್ದವೋ? ನಮ್ಮ ಅಲ್ಪತೆಗಳನ್ನೂ ಹೀನತೆಗಳನ್ನೂ ಎಷ್ಟು ಭಾಗ ತಿದ್ದಿಕೊಂಡು ಉತ್ತಮತೆಗೆ ಬರುತ್ತಿದ್ದೆವೋ, ಭಗವಂತ ಬಲ್ಲ. ಇಂದು ಕಣ್ಮರೆಯಾಗಿರುವ ಮಹನೀಯ ಕೋಟಿಯ ರೂಪವೂ, ಅಳಿಸಿಹೋಗಿರುವ ಅವರ ಕೃತಿಗಳೂ, ಗಾಳಿಗೆ ಸೇರಿಹೋದ ಅವರ ಮಾತುಗಳೂ ಇಂದಿನ ನಮ್ಮ ವಾಗೀಚಿತ್ರ(ವಾಕ್ಚಿತ್ರ) ಗಳಲ್ಲಿ ಇರುವಂತೆ ಶಾಶ್ವತವಾಗಿದ್ದರೆ, ನಮಗೆ ಮನಬಂದಾಗಲೆಲ್ಲಾ ಒಮ್ಮೆ ಕಣ್ಣಿಂದ ಕಂಡು ಕಿವಿಯಿಂದ ಕೇಳಿ ಮನಸಾ ಅನುಭವಿಸಲು ಅವಕಾಶವಾಗುತ್ತಿತ್ತಲ್ಲಾ-ಹಿಂದಾದುದೆಲ್ಲಾ ಅನ್ಯಾಯವಾಯಿತಲ್ಲಾ ಅನ್ನಿಸುತ್ತದೆ.

ಆತ, ಲೋಕೇಶ್ವರನೇ ತಾನು—ಎಂಬ ಮಹಾ ಅಭಿಮಾನದಿಂದ ತುಂಬಿ ತುಳುಕುತ್ತ ಇದ್ದವ. ತನ್ನ ರಾಣಿ, ಹೆಮ್ಮೆಯ - ಹಿರಿಮೆಯ ಸಾಧ್ವಿ, ತನ್ನ ಕುಲಕ್ಕೆ, ಕುಲಪ್ರದೀಪನಾದ ಮಗನನ್ನು ಹೆತ್ತುಕೊಟ್ಟ ತಾಯಿ, ಸುಗುಣಿ ಮತ್ತು ಸೌಂದರ್ಯಾಭಿಮಾನಿ ದೇವಿ ಎನಿಸಿದ್ದ ತನ್ನ ಹೆಂಡತಿಯ ಅಂತಃಪುರಕ್ಕೆ ಬಂದಿದ್ದಾನೆ. ಬಂದಿರುವುದು ಒಂದು ಆಪ್ತಾಲೋಚನೆಗಾಗಿ. ತಮ್ಮ ಏಕಮಾತ್ರ ಪುತ್ರರತ್ನ—ಪ್ರಹ್ಲಾದ—ತನ್ನ ಇಷ್ಟವನ್ನು ಪ್ರತಿಭಟಿಸಿ ನಿಂತಿದ್ದಾನೆ. ತಾನು ಹೇಳಿದ ಒಳ್ಳೆಯ ಮಾತುಗಳೆಲ್ಲ ನಿಷ್ಫಲವಾಗಿ ಹೋಗಿವೆ. ಹೆದರಿಕೆಗಳು ಅವನನ್ನು ಏನೂ ಮಾಡಲಾರದಾಗಿವೆ. ಮಗನು ತನ್ನ ಭಾವನೆಗಳನ್ನು ಬದಲು ಮಾಡುವಷ್ಟು ಪ್ರಭಾವದ ಉಪದೇಶವನ್ನು ಅವನಿಗೆ ಮಾಡುವುದು ಅಥವಾ ಮಾಡಿಸುವುದು ಅಸಾಧ್ಯವೆಂದು ದೃಢಪಟ್ಟು ಹೋಗಿದೆ. ಮಾಡುವುದೇನು?—ಅನನ್ಯಗತಿಯಾಗಿ ಹಿರಣ್ಯಕಶ್ಯಪು ಪ್ರಭು ತನ್ನ ಭಾರ್ಯೆಯ ಮೂಲಕ ಮಗನನ್ನು ತಿದ್ದಲು ಉದ್ದೇಶಿಸಿ—ಕಯಾದು ದೇವಿಯ-ಹತ್ತಿರ ತನ್ನ ಸಾಚಿವ್ಯವನ್ನೇ ತನಗೆ ಆಕೆಯ ಸಾಚಿವ್ಯದ ಹಿತವನ್ನೇ ಬಯಸಿ ಬಂದಿದ್ದಾನೆ. ಸನ್ನಿವೇಶಕ್ಕೆ ತಕ್ಕ ಸಾಹಿತ್ಯ. ರಾಕ್ಷಸನಾದರೂ ಅವನ ದಕ್ಷತೆ, ಆತನ ಸ್ಥಾನಮಾನಗಳಿಗೆ ತಕ್ಕ ಉಡುಗೆ ತೊಡುಗೆ—ಅತನ ರಾಣಿಗಾದರೂ ಅಷ್ಟೆ. ಅತಿಯಾಗಿ ಬೆಳಗದ ಹಿತವಾದ ಬೆಳಕು.

ಅಂತಃಪುರದ ಅಚ್ಚುಗಟ್ಟಾದ ಆಸ್ತರಣ; ದೂರದಿಂದ ಎನ್ನುವಂತೆ ಕೇಳಬರುತ್ತಿದ್ದ ಸುಮಧುರ ಗೀತ, ಇವುಗಳ ನಡುವೆ ಹಿರಣ್ಯಕಶ್ಯಪು ಬಂದವನೇ ಇದಿರೆದ್ದು ಬಂದ ತನ್ನ ಮಹಿಷಿಯನ್ನು ಕುರಿತು "ಕಯಾದೂ—ಕಯಾದೂ—ಆಃ ಆರೋಗ್ಯತಾನೇ! ಒಬ್ಬಳೇ ಕುಳಿತೆ? ಏಕೆ, ಮಗುವೆಲ್ಲಿ?'' ಎಂದು ಸರ್ವ ಸಹಜವಾಗಿ ಕೇಳುತ್ತಾನೆ. ಕಯಾದು—"ಪ್ರಾಣೇಶ್ವರಾ, ಮಗು ಈಗತಾನೆ ಎಲ್ಲೋ ಆಡಲು ಹೋಗಿರಬೇಕು. ತಮ್ಮ ದಯೆಯಿರುವಾಗ ತಮ್ಮ ಈ ದಾಸಿಗೆ ಆರೋಗ್ಯವಲ್ಲದೆ ಏನು?" ಎಂಬೀ ಭಾವದ ಉತ್ತರಕೊಡುತ್ತಾಳೆ.

ಇದು ಸರ್ವ ಸಾಮಾನ್ಯವಾದ—ಪ್ರಹ್ಲಾದ ಚರಿತ್ರೆಯಲ್ಲಿ ಬರುವ-ಒಂದು ಸನ್ನಿವೇಶ. ಹೊಸದೇನೂ ಅಲ್ಲ. ಪ್ರಹ್ಲಾದ ಚರಿತೆಯ ಕಥೆಯು ಹುಟ್ಟಿದ ಆ ಪುಣ್ಯದಿನದಷ್ಟು ಹಳೆಯದು. ಆದರೆ—ನಾನು ಮೊದಲು ಹೇಳಿದ, ಪೇಚಾಡಿದ, ಮಹಾಪುರುಷರ ಕೃತಿಗಳು ಶಾಶ್ವತವಾಗದೆ ಮಾಯವಾದವಲ್ಲಾ ಎಂದು ದುಃಖಿಸಿದ ಸಂದರ್ಭ—ಇಂಥದಕ್ಕಾಗಿ. ಶ್ರೀಮಾನ್ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು ಆ ಸನ್ನಿವೇಶಕ್ಕಾಗಿ ಕಲ್ಪಿಸಿದ್ದು. ಆಡುತ್ತಿದ್ದ ಮಾತಿನ ಭಾವ, ತೋರುತ್ತಿದ್ದ ನಟನೆಯ ಭಂಗಿ, ಆಗ ಇರುತ್ತಿದ್ದ ಆ ದೃಶ್ಯದಲ್ಲಿನ ಹಿತವಾದ ರಮ್ಯತೆ, ಯಾವುದರಲ್ಲೂ ಯಾವುದೇ ಕಾರಣಕ್ಕಾಗಿಯೂ ಅತಿಯಾಗದ ಗಾಳಿ, ಬೆಳಕು, ಗೀತ, ಮಾತು, ನಡಿಗೆ, ನೋಟ, ವೇಷ, ಭೂಷಣ, ಪಾತ್ರ ಪರಿಮಿತಿ, ಉಪಕರಣಗಳ ಸ್ವಲ್ಪತೆ ಇವು ಅಸಮಾನವಾದವು. ಅವು "ನ ಭೂತೋ - ನ ,ಭವಿಷ್ಯತಿ" ಎಂಬ ನಾಣ್ನುಡಿಯನ್ನು ಪದೇ ಪದೇ ಜ್ಞಾಪಕಕ್ಕೆ ತರುತ್ತಿವೆ. ಒಂದೊಂದು ಸಲ ನೆನಪಿಗೆ ಬಂದಾಗಲೂ ಅನ್ಯಾಯವಾಯಿತಲ್ಲಾ! ಅವರ ನಾಟಕವು ರೂಪ ವಾಣಿ ವರ್ಣಮಯ ರಂಗದಲ್ಲಿ ಮೆರೆಯಲು ಆಗದೇ ಹೋಯಿತಲ್ಲಾ ಎಂಬ ದುಃಖ ಬೇರೆ ಆರಲೇಲಾರದು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾಟಕಶಾಲೆಗಳ, ಚಿತ್ರಶಾಲೆಗಳ ಮತ್ತು ನಟರ ಪ್ರಹ್ಲಾದ ಚರಿತೆಯ ಅಭಿನಯ ಎಷ್ಟೋ ನೋಡಿದ್ದೇನಾದರೂ ನೋಡಿದಾಗಲೆಲ್ಲಾ ನನ್ನ ಮನಸ್ಸಿಗೆ "ಎಂತಹ ಸೌಂದರ್ಯಮಯ ಸನ್ನಿವೇಶಕ್ಕೆ ಎಂತಹ ವಿಕಾರವಾದ ರೂಪವನ್ನು ಅಳವಡಿಸಿ ಹಾಳು ಮಾಡುತ್ತಾರೆ!" ಅನಿಸುತ್ತಿದೆ. ಅದಕ್ಕೆ ಕಾರಣ ಇಷ್ಟು. ಶ್ರೀಮಾನ್ ವರದಾಚಾರ್ಯರು ಅಭಿನಯಿಸಿದ ನಾಟಕಗಳನ್ನು ನೋಡಿ ಆ ಸನ್ನಿವೇಶದಲ್ಲಿ ಆ ನುಡಿಗಳಲ್ಲಿ ತುಂಬಿರುತ್ತಿದ್ದ ಸ್ವಾಭಾವಿಕ ಮಾಧುರ್ಯವೆಷ್ಟು ಎಂಬುದನ್ನು ನಾನು ಅನುಭವಿಸಿ ಅದನ್ನು ಮತ್ತೆ ಕಂಡೇನೇ ಎಂದು ಹಂಬಲಿಸುತ್ತಿರುವುದೇ ಕಾರಣ.

ಪಾತ್ರ ಒಂದಲ್ಲ, ಒಂದು ನಾಟಕವಲ್ಲ, ಒಂದು ಸನ್ನಿವೇಶವಲ್ಲ—ಆಚಾರ್ಯರ ಪಾತ್ರಗಳಲ್ಲಿ ಒಂದೇ ತೆರನಾಗಿ ಈಗ ನಾವು ಕಾಣಲಾರದಾದ ಸರ್ವಾಂಗ ಸೌಂದರ್ಯ, ಪರಿಪೂರ್ಣವಾದ ರುಚಿ, ಅಭೂತಪೂರ್ವ ಕಳೆ ಇರುತ್ತಿದ್ದವು. ಶ್ರೀ ವರದಾಚಾರ್ಯರ ಛಾಯಾ ಚಿತ್ರಗಳನ್ನು ನೋಡ ಹೊರಟರೆ ನಮಗೆ ತಟ್ಟನೆ ಕೈಗೆ ಸಿಕ್ಕುವುದು ಅವರ ದುಷ್ಯಂತ ರಾಜನ ಚಿತ್ರ. ಎಷ್ಟೋ ಜನ ನನ್ನ ಮಿತ್ರರು ಅದನ್ನು ಪುಣ್ಯಸ್ಮೃತ ಆಳಿದ ಪ್ರಭು ಶ್ರೀ ಚಾಮರಾಜೇಂದ್ರ ಒಡೆಯರ ಚಿತ್ರವೆಂದೇ ಭ್ರಮಿಸಿ ಹೇಳಿದ್ದಾರೆ. ಆ ನಿಲುವು, ಆ ಉಡುಗೆ ತೊಡುಗೆಗಳು ಹದಿನಾರಾಣೆ ನಮ್ಮನ್ನಾಳಿದ ಮಹಾರಾಜರನ್ನೇ ಹೋಲುತ್ತವೆ ಎನ್ನುವುದಕ್ಕೆ ಆ ಚಿತ್ರವನ್ನೊಮ್ಮೆ ನೋಡುವುದು ಸಾಕು. ಆ ಚಿತ್ರ ಆಚಾರ್ಯರದೆಂದು ತಿಳಿಯ ತೊಡಗಿದ ಮೇಲೆ ತಮ್ಮ ಭ್ರಮೆಗೆ ಒಂದು ಮೇಲ್ಮೆ ಕೊಟ್ಟುಕೊಳ್ಳುವುದಕ್ಕಾಗಿ ಒಂದು ದಂತಕಥೆಯನ್ನೇ ಹುಟ್ಟಿಸಿಬಿಟ್ಟಿದ್ದಾರೆ. ಅದಕ್ಕೇನಾದರೂ ಆಧಾರವಿದ್ದರೆ ನನಗಿಂತ ಹಿರಿಯರೂ ನಿಜವನ್ನರಿತವರೂ ಹೇಳಬೇಕು. ಅಂತೂ ಈ ದಂತಕಥೆ ಪ್ರಚಾರದಲ್ಲಿದೆ.

ಕರೀಕಲ್ಲು ತೊಟ್ಟಿಯ ನಾಟಕರಂಗ. ಶ್ರೀ ಚಾಮರಾಜೇಂದ್ರ ಒಡೆಯರು ಕಣ್ಮರೆಯಾದ ಹೊಸದರಲ್ಲಿ ಒಂದು ದಿನ ವರದಾಚಾರ್ಯರ ಶಕುಂತಲಾ ಅಭಿನಯವಾಗುತ್ತಿದೆ. ದುಷ್ಯಂತ ಮಹಾರಾಜ ಘನ

ಗಂಭೀರನಾಗಿ ಪರಾಕುಗಳ ನಡುವೆ ಬಿಜಯಗೈದಿದ್ದಾನೆ. ಪ್ರೇಕ್ಷಕರೆಲ್ಲ ಎದ್ದು ನಿಂತು ಮಹಾ ಪ್ರಭು ಶ್ರೀ ಚಾಮರಾಜೇಂದ್ರರೇ ಬಂದರೆಂದು ಮುಜರೈ ಸಲ್ಲಿಸಿದ್ದಾರೆ. ಮೈಸೂರು ಅರಮನೆಯ ರಂಗ, ಅರಮನೆಯ ಜನ; ಅವರ ಮುಂದೆ ಅರಮನೆಯಲ್ಲೇ ಪ್ರಭು ಸ್ವಾರಿಯೆಂದು ಅಭಿನಯಿಸಿದ ಒಂದು ದೃಶ್ಯ—ಇಂತಹ ಭ್ರಮೆ ಹಿಡಿಸಿದೆ.—ಈ ವಿಚಾರವು ಅನಂತರ ಅರಮನೆಯಲ್ಲಿ ನಡೆದ ಚಿಕ್ಕದೊಂದು ಆಭಾಸವೆಂದು ತೋರಿ ಶ್ರೀ ವರದಾಚಾರ್ಯರನ್ನು "ಇನ್ನು ಮುಂದೆ ಆ ಪಾತ್ರದ ಉಡುಗೆ ತೊಡುವಾಗ ತಲೆಮೇಲಿನ ದೊಡ್ಡ ತುರಾಯನ್ನು ಧರಿಸಕೂಡದು. ಅಂಗರೇಖೆಯ ಮೇಲೆ ಗುಂಡಿಯ ಸಾಲಿನ ನಡುವೆ ಬರುವ ರತ್ನಖಚಿತವಾದ ಗಡಿಯಾರದ ಸರಪಣಿ ಧರಿಸಕೂಡದು. ಮತ್ತು ಗೌನಿನ ವರ್ಣ ಹಸುರು ಇರಕೂಡದು" ಎಂದು ಅಜ್ಞೆಯಾಯಿತು. ಇದರ ಪರಿಣಾಮವಾಗಿಯೇ ಆಚಾರ್ಯರು ಅಷ್ಟು ವ್ಯತ್ಯಾಸ ಮಾಡಿಯೇ ಅಲಂಕಾರಪೂರ್ಣರಾಗುತ್ತಿದ್ದರು.

ಈ ಕಥೆಯ ತಿರುಳಲ್ಲಿ ನಿಜವಿದೆಯೋ ಇಲ್ಲವೋ—ಅಂತೂ ಇಂದೂ ಆಚಾರ್ಯರ ಚಿತ್ರ ನೋಡಿದವರು ಆಳಿದ ಮಹಾಪ್ರಭುಗಳ ಚಿತ್ರವಿದೆಂದು ಭ್ರಮಿಸುವುದಂತೂ ತಪ್ಪಿಲ್ಲ. ಆಚಾರ್ಯರು ಧರಿಸುತ್ತ ಇದ್ದ ಪ್ರತಿ ಪಾತ್ರದಲ್ಲೂ ಅವರ ದೃಷ್ಟಿ ಅಡಿಯಿಂದ ಮುಡಿವರೆಗೆ ನೈಜವನ್ನು ಅನುಕರಿಸುವುದರಲ್ಲಿ ಅಷ್ಟು ಕಳಾಪೂರ್ಣವಾಗಿರುತ್ತಿತ್ತು. ಅದೇ ಆಚಾರ್ಯರ ವಿಶಿಷ್ಟತೆ-ಅದೇ ಇತರರಲ್ಲಿ ಎಲ್ಲಿಯೂ ಕಾಣಲಾಗದ ದೊಡ್ಡಸ್ತಿಕೆ. ಈ ಕಥೆಯ ಜೀವಾಳ.

ಆಚಾರ್ಯರ ನಿರುಪಮ—ಅದರಲ್ಲಿನ ಕಳ್ಳ—ಇವುಗಳು 'ನಿರುಪಮ' ದೃಶ್ಯಗಳೆಂದೇ ನನ್ನ ಭಾವನೆ. ಮತ್ತೊಂದು ಛಾಯಾಚಿತ್ರ ವರದಾಚಾರ್ಯರ ನಾಟಕದ ನಡುವಿನದು. ಅದು ಮೈಸೂರು ಸ್ತ್ರೀಪರ ಮಾಸಿಕವೊಂದರ ಮುಖಪತ್ರದ ಮೇಲೆ ಬೆಳಗುತ್ತಿತ್ತು. ಪತ್ರಿಕೆ ಇಂತಹುದೇ ಎಂಬ ನೆನಪು ಈಗ ನನಗಿಲ್ಲ. ಚಿತ್ರದ ಸೊಬಗಿಷ್ಟು. ಒಂದು ದೊಡ್ಡ ಹಜಾರ. ಹಾಸಿದ ರತ್ನಗಂಬಳಿಯ ಮೇಲೆ ತೋಳಿಲ್ಲದ ಮಡಿಸುವ ಕುರ್ಚಿಯೊಂದು ಹಜಾರದ ನಡುವೆ ಇದೆ. ಅದರ ಮೇಲೊಬ್ಬ ಯುವತಿ ಪುಸ್ತಕಪಾಣಿಯಾಗಿ ಕುಳಿತಿದ್ದಾಳೆ. ಆ ಅಮರ ಪುಸ್ತಕದ ಪಙ್ತಿಗಳಲ್ಲಿ ಬೊಟ್ಟುಳಿಯುದಂತೆ ಅಮೃತರಸ ಹೀರಿ ತನ್ನ ಮುಖಕಮಲಕ್ಕೆ ದೇಹ ಕುಸುಮಕ್ಕೆ ತುಂಬಿಕೊಂಡು ಪ್ರೇಕ್ಷಕ ತುಂಬಿಗಳಿಗೆ ಸದಾಧಾರವಾಗಿ ರಂಜಿಸುತ್ತಾಳೆ. ಇದು ರತ್ನಾವಳಿಯಲ್ಲಿನ "ಗಂಡು ಹುಡುಗಿ" ಬೋಧರಾಯರ ಚಿತ್ರ.

ಈ ಚಿತ್ರದೊಡನೆ ಕಲಾಪೂರ್ಣತೆಗೆ ಹೋಲಿಸಬಹುದಾದರೆ ಸಿಕ್ಕುವುದು ಒಂದೇ ಚಿತ್ರ. ಶ್ರೀ ಸ್ಥಾನಂ ನರಸಿಂಹರಾಯರ ತುಲಾಭಾರದಲ್ಲಿನ ಸತ್ಯಭಾಮಾ ಪಾತ್ರದ ಚಿತ್ರ. ಮಿತ್ರರೊಬ್ಬರು ಒಮ್ಮೆ ನಡೆದ ಪ್ರಸಂಗದ ಒಂದು ಕಥೆ ಹೇಳಿದರು.

ಶ್ರೀ ಸ್ಥಾನಂರವರ ಅಭಿನಯ ನಡೆಯುತ್ತಿತ್ತು. ಮದ್ರಾಸಿನ ಒಂದು ರಂಗಸ್ಥಾನ. ಎಂದಿನಂತೆ ಒಂದು ಪರದೆ, ಒಂದು ಆಸನ, ಅದರ ಮುಂದೆ ನಟರು ಇಂತಹ ವಿಚಿತ್ರ ದಿವ್ಯಕೂ[illegible] ತಾನೆ ಸ್ಥಾನಂ ನಾಟಕ! ಪ್ರೇಕ್ಷ ವೃಂದದಲ್ಲಿ ಸ್ತ್ರೀಯರ ನಡುವೆ ಯಾವುದೋ ಮಗು ತನ್ನ ತಾಯಿಯನ್ನು ಕುರಿತು "ಅಮ್ಮಾ! ಭಾಮಾ ಅಷ್ಟು ಚೆನ್ನಾಗಿದ್ದಾಳೆ. ಅಷ್ಟು ಸೊಗಸಾಗಿ ಮಾತಾಡುತ್ತಾಳೆ. ಆದರೆ ಅವಳ ಕೊರಳ ಸರದಲ್ಲಿ ಮಾಂಗಲ್ಯದ ಬಟ್ಟು ಇಲ್ಲವೇಕಮ್ಮಾ?" ಎಂದಳಂತೆ, ಇದು ಸ್ಥಾನಂ ಕಿವಿಗೆ ಬಿತ್ತು. ಮಾರನೆ ದಿನದಿಂದ ಆ ಮಾಂಗಲ್ಯ ಮರೆಯಾಗದೆ ಒಲೆದಾಡುತ್ತಿದ್ದುದನ್ನು ಎಲ್ಲರೂ ಕಂಡಿದ್ದಾರೆ. ಇದು ನಟನ ವಿವೇಚನೆಯ ಒಂದು ಉದಾಹರಣೆ. ಅಲ್ಪವೂ, ಯಾವ ಕಾರಣಕ್ಕಾಗಿಯೂ, ಸ್ವಾಭಾವಿಕತೆಗೆ ಕುಂದು ಬರಲಾಗದು—ಅದು ನಿಜ ನಟನ ಮರ್ಮ. ಶ್ರೀವರ್ನಾ ನಟಕ ಶಿರೋಮಣಿಗಳು ಈ ಮರ್ಮವನ್ನು ಅರಿತು ಅದೇ ತಮ್ಮ ಜೀವಿತ ಧ್ಯೇಯ ಮಂತ್ರವೆಂದು ಜಪಿಸುತ್ತಾ ಆಚರಣೆಯಲ್ಲಿ ತಂದ ಪುಣ್ಯಾತ್ಮರು.

ಕೇವಲ ಕಾಮಿಯಾಗಿ ಭ್ರಮೆ ಹಿಡಿದವನ ಹಾಗೆ ಆಡಲು ಅವಕಾಶವಿರುವಂತಹ ರತ್ನಾವಳೀ ಸಂದ

ರ್ಶನ ಸಮಯದಲ್ಲೂ ಆಚಾರ್ಯರ ಆ ಘನತೆ, ತಮ್ಮ ನರ್ಮ ಸಚಿವವಿನೋದಿ ಮಿತ್ರನನ್ನೇ ಒಂದು ವಿಚಿತ್ರ ಶಕ್ತಿಯನ್ನಾಗಿ ಮಾಡಿಕೊಂಡು ಅವನ ಬಾಯಲ್ಲಿ ವಾಸವದತ್ತಾ ಮಂತ್ರವನ್ನು ಉಚ್ಚಾರ ಮಾಡಿಸಿ ಬೆಚ್ಚಿದಂತೆ ತೋರುತ್ತಿದ್ದ ಆ ಗೃಹಸ್ಥ ಗಾಂಭೀರ್ಯ, ಇವು ಬೇಲೂರು ಕೇಶವನ ಗುಡಿಯ ಬೊಂಬೆ ಸಾಲಿಗೆ ಸೇರಬೇಕಾಗಿದ್ದ ಭಂಗಿಗಳು. ಇನ್ನು ಯಾವ ತೆರದಲ್ಲಿ ಶಾಶ್ವತಗೊಳಿಸಲು ಯತ್ನಿಸಿದರೂ ಅದಕ್ಕೆ ಅಳಿವು ಬರಬಹುದು. ಯುಗ ಮೂರ್ತಿಗಳಾಗಿ ಕಲ್ಲು ಬೊಂಬೆಗಳಾಗಿ—ಕಲಾಗುರುಗಳಾಗಿ ಇರಬೇಕಾಗಿದ್ದ ಮೂರ್ತಿಮಂತ ಕಲಾಬಿಂಬಗಳು ಅವು.

೧೯೩೩—ಶರತ್ಕಾಲ. ಶ್ರೀ ಸ್ಥಾನಂ ನರಸಿಂಹರಾಯರು ಮೈಸೂರಿಗೆ ಬಂದರು. ಅವರ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಮೈಸೂರಿನ ಮಹಾಜನರು ಆ ಮಹಾ ಕಲೋಪಾಸಕನಿಗೆ ತಕ್ಕ ಸನ್ಮಾನವನ್ನು ತಮ್ಮ ಪ್ರೇಕ್ಷಣೆಯ ರೂಪದಲ್ಲಿ ತೋರಿಸುತ್ತಿದ್ದರು. ಒಂದೊಂದು ನಾಟಕವೂ ಒಂದು ದೊಡ್ಡ ಹಬ್ಬದ ಸಂಭ್ರಮದಲ್ಲೇ ಜರುಗಿತು. ರಾಯರು ಮೈಸೂರು ಮಹಾಜನರಿಗೆ ಇದ್ದ ವಿಮರ್ಶಾ ಚೈತನ್ಯದ ಹಿರಿಮೆಯನ್ನು ಕಂಡು ಮುಗ್ಧರಾಗಿ ಹೋದರು! ಅವರ ಅಭಿಪ್ರಾಯ ಯಾವರೀತಿ ಪಾಕವಾಗಿತ್ತೆಂಬುದನ್ನು ಅವರೇ ಆಡಿ ತೋರಿಸಬೇಕಾದ ಸಂದರ್ಭವೊಂದು ಬಂದು ಒದಗಿತು.

ಚಿಂತಾಮಣಿ ನಾಟಕ. ಅದರಲ್ಲಿ 'ಚಿಂತಾಮಣಿ' ದರ್ಶನವಿಲ್ಲದ ಒಂದು ದೃಶ್ಯ. ಆಗ ಸ್ವಲ್ಪ ನೀರಸ ಕಾಲ ಕಳೆಯುವಾಗ ಪ್ರೇಕ್ಷಕ ವೃಂದದಲ್ಲಿ ಸ್ವಲ್ಪ ಗಜಿಬಿಜಿಯಾಯಿತು. ಹಾಗೆಯೇ ಚಿಂತಾಮಣಿಯಾಗಿ ಪರದೆಹಿಂದೆ ನಿಂತಿದ್ದ ನರಸಿಂಹರಾಯರಿಗೂ ಮನದಲ್ಲಿ ಅಸಾಧ್ಯ ಗಲಿಬಿಲಿಯೇ ಆಯಿತೆನ್ನಬೇಕು. ಆತ ಕೂಡಲೆ ರಂಗದ ಮುಂದೆ ಬಂದು ಹೀಗೆಂದರು.

"ಕಲಾಚಾರ್ಯ ವರದಾಚಾರ್ಯರ ಮಾತೃಭೂಮಿ ಇದು. ನನ್ನಂತಹ ವಿದ್ಯಾರ್ಥಿಗೆ ತೀರ್ಥಯಾತ್ರಾ ಕ್ಷೇತ್ರ. ಮಹಾನುಭಾವರಾದ ಶ್ರೀ ವರದಾಚಾರ್ಯರ ಕಳಾಪೀಠವು ಮೈಸೂರು ಜನತೆಯ ದೃಷ್ಟಿಯನ್ನು ಹೇಗೆ ಸಂಸ್ಕೃತಿ ಪೂರ್ಣವಾಗಿ ಮಾಡಿದೆಯೆಂಬುದಕ್ಕೆ ನಿಮ್ಮ ರಸಜ್ಞತೆ, ಕಲಾಪ್ರೇಮ, ಯೋಗ್ಯತಾ ವಿಮರ್ಶೆಯ ದೃಷ್ಟಿ ಸಾಕ್ಷ್ಯವಾಗಿವೆ. ಇದಕ್ಕಾಗಿ ನನ್ನಂತೆ ಇಲ್ಲಿ ಪಾಠಪ್ರಾಪ್ತಿಗೆ ಹೋಗಲು ಬಂದು ತಮ್ಮ ಕೈಲಾದಷ್ಟು ಯತ್ನಿಸುತ್ತಿರುವ ವಿದ್ಯಾರ್ಥಿಗಳು ಚಿರಋಣಿಗಳಾಗಿ ಇರಬೇಕಾಗಿದೆ. ಇದೆಲ್ಲಕ್ಕೆ ಕಾರಣಭೂತರಾದ ಆಚಾರ್ಯರ ಹೆಸರು ಹೇಳಿದರೆ ನನ್ನಂತಹ ಜನರಿಗೆ ಒಂದು ಹಿರಿಯ ಚೈತನ್ಯ ಒದಗಿದ ಹಾಗೆಯೇ. ಆ ಹಿರಿಯರ ಆದರ್ಶ ಕಂಡ ನಿಮ್ಮಿಂದ ನಾನು ಅಪೇಕ್ಷಿಸುವ ಗೌರವವೆಂದರೆ ನಾವು ಒಪ್ಪಿಸುವ ಪಾಠವನ್ನು ದಯಮಾಡಿ ನೋಡಿ ಅದಕ್ಕೆ ಸಲ್ಲಬಹುದಾದಷ್ಟು ಕಾರುಣ್ಯ ಸಲ್ಲಿಸಿ. ಅದು ನನಗೆ ಮಾನ್ಯತೆ ಹಿರಿತನ, ಎಲ್ಲ. ಮೈಸೂರಲ್ಲಿ ನಾನು ಪಡೆಯುವ ಮಾನ ಕಲಾಲೋಕದಲ್ಲಿ ಪಡೆದುಕೊಳ್ಳುವ ಕೀರ್ತಿಯೆಂದೇ ನನ್ನ ನಂಬುಗೆ."

ಒಂದೇನು ಎರಡೇನು, ಆಚಾರ್ಯರ ಯಾವ ನಾಟಕ ನೋಡಿದರೂ ರಸಾಸ್ವಾದನೆಗೆ, ಕಲಾಭಿಮಾನಕ್ಕೆ, ಸೌಂದರ್ಯ ದರ್ಶನಾ ಕಾಂಕ್ಷೆಗೆ, ವೈಭವದ ನಡುವೆ ಸಹಜತೆಯ ರಮ್ಯ ದರ್ಶನಕ್ಕೆ, ನುಡಿ ನಡೆಗಳ ಸಮ ಸಮ್ಮಿಳನಕ್ಕೆ, ಹಿತ ಗಾನಕ್ಕೆ ಇಂಥದು ಇನ್ನಿಲ್ಲ. ಕಾಣಬೇಕೆಂಬ ಸಂಕಲ್ಪ ಸಾರ್ಥಕವಾಯಿತು. ಬಯಸಿದುದನ್ನು ಕಂಡು ಕೇಳಿ ಆನಂದಿಸಿ ಕೃತಾರ್ಥರಾದೆವು" ಎಂಬ ಭಾವವನ್ನು ಪ್ರೇಕ್ಷಕ ವೃಂದದಲ್ಲಿ ತುಂಬಿಬಿಡುತ್ತಿತ್ತು.

ಸಾಮಾನ್ಯವಾಗಿ ಆಚಾರ್ಯರ ನಾಟಕ ನೋಡಲು ನಾನು ನನ್ನ ಮಿತ್ರ ನರಸಿಂಹಮೂರ್ತಿ ಜೊತೆಯಾಗಿಯೇ ಹೋಗುತ್ತಿದ್ದೆವು. ಒಂಟಿಯಾಗಿ ಹೋಗುವ ಚಪಲವೇ ನಮ್ಮಲ್ಲಿ ಬರದ ಹಾಗೆ ಮಾಡಿದ್ದುದು ಒಂದು ಶಕ್ತಿ. ಅದೇ ಶ್ರೀಮಾನ್ ವರದಾಚಾರ್ಯರ ನಾಟಕದಲ್ಲಿ ತುಂಬಿರುತ್ತಿದ್ದ ಸರ್ವಾಂಗ ಸುಂದರ ಶಕ್ತಿ. ನಾಟಕ ದೃಶ್ಯ ದರ್ಶನವಾದ ಮೇಲೆ ಅದರ ಮಾಧುರ್ಯವನ್ನು ಪರಸ್ಪರ ಹೇಳಿಕೊಂಡು (ನಮನಮಗೆ ತಿಳಿದಷ್ಟಿಗೆ ಮಾಧುರ್ಯ ಆಡಿ ಮುಗಿಸಲು ಸಾಧ್ಯವೇ?) ಅನುಭವಿಸದಲ್ಲದೆ ತೃಪ್ತಿಯಾಗತಕ್ಕುದಲ್ಲ. ಅದು ಅಂತರ್ದಾಹವಾಗಿ ದರ್ಶನಾಕಾಂಕ್ಷೆಯನ್ನು ಹೆಚ್ಚಿಸುತ್ತಾ ಬರುವುದು-ಎಂಬ

ನಮ್ಮ ಅನುಭವವೇ ಈ ಶಕ್ತಿ. ಇದೇ ಅನುಭವವನ್ನು ಹಲವು ಜನರ ಬಾಯಲ್ಲಿ ಹಲವಾರು ಸಾರಿ ನಾನು ಕೇಳಿದ್ದೇನೆ.

ಆಚಾರ್ಯರು ನಿಜವಾಗಿ ಕೃತಕೃತ್ಯರು. ಮಹಾತ್ಮರುಗಳ ಕಣ್ಮರೆಯಾದ ಮಹಜ್ಜೀವನವು ಲೋಕಕಲ್ಯಾಣಕ್ಕಾಗಿ ನಮ್ಮ ನಡುವೆ ಯಾವುದಾದರೂ ರೂಪದಲ್ಲಿ ಕಾಣಲು ಇದ್ದೇ ತೀರಬೇಕು. ಇಲ್ಲದೆ ಹೋದರೆ ಒಂದು ಅಪಾರ ನಷ್ಟ. ಕಲೋಪಾಸನೆಯನ್ನೇ ತಮ್ಮ ತಪಸ್ಸಾಗಿಸಿ ತಮ್ಮ ಜನ್ಮವೆಲ್ಲಾ ದುಡಿದು ಯಾವುದೊ ಮುಟ್ಟಿ ಮುಟ್ಟಿ ಕಣ್ಮರೆಯಾದ ನಮ್ಮ ಸೋದರ ಜೀವಿಗಳು ಮತ್ತೆ ನಮ್ಮ ನಡುವೆ ಇಳಿದು, ಪೂರ್ವ ಜನ್ಮದಲ್ಲಿ ಉದ್ದಿಶ್ಯ ರೂಪದಲ್ಲಿ ಉಳಿದ ತಮ್ಮ ಸಂಕಲ್ಪಗಳನ್ನು ಪೂರೈಸಿಕೊಳ್ಳಲು ಕ್ಷೇತ್ರ ಬೇಡವೇ? ಅದನ್ನು ನಾವು ಕಾದಿಟ್ಟುಕೊಳ್ಳದೆ ಹೋದರೆ ನಾವು ನಮ್ಮ ನಾಗರಿಕ ಜೀವನಕ್ಕೇ ಅನ್ಯಾಯ ಮಾಡಿದ ಹಾಗೆ. ಅದರಿಂದ ನಮ್ಮ ನಾಗರಿಕತೆಯನ್ನು ಸಾಧುವೆನ್ನಿಸಿಕೊಳ್ಳುವುದಕ್ಕಾಗಿಯಾದರೂ ನಾವು ಶ್ರೀ ವರದಾಚಾರ್ಯರ ಕಲಾಜೀವನಕ್ಕೆ ತಕ್ಕ ಸ್ಮಾರಕ ಸೃಷ್ಟಿಸಿ ಉಳಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಅದಕ್ಕಾಗಿ ಕಂಕಣ ತೊಟ್ಟು ಹುಟ್ಟಿದ ಸಂಸ್ಥೆಯ ಕಾರ್ಯರಂಗ ಏಕೋ ಸಂಕುಚಿತವಾಗಿಯೇ ಉಳಿದಿದೆ. ಈ ಸಂದರ್ಭದಲ್ಲಿ ನನಗೆ ಮತ್ತೊಂದು ಯೋಚನೆ ತೋರುತ್ತದೆ. ಇಂದಿನ ಕಾಲೋಚಿತವಾಗಿ ತಕ್ಕ ಸ್ಮಾರಕವೆಂದರೆ ಹಗುರವಾದ ಕೆಲಸವಲ್ಲ. ಅದಕ್ಕೆ ಅಪಾರ ಧನ ಶೇಖರವಾಗಬೇಕು. ಕನ್ನಡ ನಾಟಕ ಶಾಲೆಗಳೆಲ್ಲ ಒಂದು ಮನ ಮಾಡಿದರೆ ಇದು ದೊಡ್ಡ ಕೆಲಸವಲ್ಲ. ಶ್ರೀ ಆಚಾರ್ಯರು ಇರುವವರೆಗೂ ಅವರಿಗೆ "ನಾಲ್ಕಾಣೆ ತಂದೆ" ಗಳಲ್ಲಿ ಅಪಾರ ಪ್ರೇಮ-ಕರುಣ. ಅವರು, ಕಡೇ ತರಗತಿಯವರು ಬಾಯಿ ತುತ್ತನ್ನು ಕಲಾಭಿವೃದ್ಧಿಗಾಗಿ ಕೊಡುವ ತ್ಯಾಗಜೀವಿ—ಎಂದು ಆಗಾಗ ಹೇಳುತ್ತಿದ್ದುದನ್ನು ನಾವು ಮರೆಯಲಾರೆವು. ಆವರ ಪ್ರೀತಿಪಾತ್ರರಾದ ಕಡೇ ತರಗತಿಯ ಜನರು ನಾಟಕದರ್ಶನಕ್ಕಾಗಿ ಕೊಡುವ ಹಣದಲ್ಲಿ ನಿರ್ದಿಷ್ಟ ಅರ್ಧಭಾಗವನ್ನು ಪ್ರತಿ ಕನ್ನಡ ನಾಟಕ ಶಾಲೆಯೂ 'ಗುರುದಕ್ಷಿಣೆ'ಯ ಮುಡುಪಾಗಿ ಕೊಡಲು ಮನಸು ಮಾಡಿದರೆ ನಿಜವಾಗಿ ಆ ಮಹಾ ಕಾರ್ಯ ನೆರವೇರುತ್ತದೆ. ಹಾಗಾದೀತೆ? ಅಂತಹ ಸುದಿನ ಬಂದೀತೇ?

ಶ್ರೀ ಭಗವದ್ಗೀತೆ

ಶ್ರೀ. ಎಸ್. ಕೆ. ನರಸಿಂಹಮೂರ್ತಿ, ಎಂ. ಎಸ್‌ಸಿ.,
ಮೈಸೂರು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇ ಚ್ಛತಂ ಸಮಾಃ ॥

ಹಿಂದೂದೇಶದ ಸಾಹಿತ್ಯದಲ್ಲಿ, ಸಾವಿರಾರು ವರ್ಷಗಳು ಕಳೆದ ಮೇಲೆಯೂ ಅಚ್ಚಳಿಯದ ಕಾಂತಿಯನ್ನು ಉಳಿಸಿಕೊಂಡಿರುವ ಉತ್ಕೃಷ್ಟ ರತ್ನಗಳೆಂದು ವಾಲ್ಮೀಕಿ ರಾಮಾಯಣ, ವೇದವ್ಯಾಸ ವಿರಚಿತ ಮಹಾ ಭಾರತಗಳನ್ನು ನಿರ್ವಿವಾದವಾಗಿ ಪರಿಗಣಿಸಬಹುದು. ನಮ್ಮ ದೇಶದ ನಾಗರಿಕ ಜನರ ಹೆಸರುಗಳೆಲ್ಲ ಈ ಗ್ರಂಥಗಳಲ್ಲಿ ವರ್ಣಿತರಾದ ನಾಯಕರ ಹೆಸರನ್ನೇ ಅವಲಂಬಿಸಿರುವ ಮಾತಿರಲಿ; ಇಂದಿಗೂ ಕಾವ್ಯಗಳನ್ನು ರಚಿಸುವವರಲ್ಲಿ ಅನೇಕರು ತಮಗೆ ಬೇಕಾಗಿರುವ ವಸ್ತುವನ್ನು ಅನಂತ ಕೋಶರೂಪವಾದ ಈ ಗ್ರಂಥಗಳಿಂದಲೇ ಆರಿಸುತ್ತಿರುವರು. ರಾಮಾಯಣದಲ್ಲಿ ಶ್ರೀರಾಮನ ಚರಿತ್ರೆಗೆ ಪೋಷಕವಾಗಿ ಸಾಹಿತ್ಯ ಬೆಳೆದಿರುವಂತೆ ಮಹಾಭಾರತದಲ್ಲಿ ಶ್ರೀಕೃಷ್ಣ ಚರಿತೆಯೇ ಕೇಂದ್ರವಾಗಿದ್ದು ಶ್ರೀಕೃಷ್ಣನ ಮಹಿಮೆ ವಿಶೇಷವಾಗಿ ತೋರುವಂತೆ ಇತರ ಕಥೆಗಳು ಬೆಳೆದಿವೆ. ಮಹಾಭಾರತಕ್ಕೆ ಐದನೆ ವೇದವೆಂಬ ಬಿರುದು ಸಾವಿರಾರು ವರ್ಷಗಳ ಹಿಂದೆಯೇ ಬಂದಿರುವುದರಿಂದ, ಕಾಲ ಪುರುಷನ ದುಷ್ಪರಿಣಾಮವನ್ನೂ ಧಿಕ್ಕರಿಸಿರುವ ಆ ಉತ್ತಮ ಇತಿಹಾಸದ ಬೆಲೆಯನ್ನು ನಾವು ಅರಿಯಬಹುದು. ಮಹಾಭಾರತವೇ ಶ್ರೀಕೃಷ್ಣನಿಗೆ ಸಮರ್ಪಿಸಿದ ವೈಜಯಂತೀ ಮಾಲೆಯೆಂದು ಭಾವಿಸುವುದಾದರೆ, ಭಗವದ್ಗೀತೆ ಎಂಬ ಅದರ ಭಾಗವು ಅಲ್ಲಿನ ಸರ್ವೋತ್ಕೃಷ್ಟವಾದ ನಾಯಕಮಣಿ ಎಂದು ಹೇಳಬಹುದು. ಭಗವದ್ಗೀತೆಯ ಮಹಿಮೆ ಅಪಾರವಾದುದು. ಅದರಲ್ಲಿ ವಿಷಯವನ್ನು ತಿಳಿಸಿದವನು ಕ್ಷರಾಕ್ಷರಾತೀತ ಪುರುಷೋತ್ತಮನಾದ ವಾಸುದೇವನು; ಕೇಳಿದವನು ಭಕ್ತಾಗ್ರಣಿಯೂ ವೀರಶ್ರೇಷ್ಠನೂ ಆದ ಅರ್ಜುನನು; ಸಂವಾದವನ್ನು ಭಗವತ್ಪ್ರಸಾದದಿಂದ ಇದ್ದಲ್ಲಿಂದಲೇ ಸಮಗ್ರವಾಗಿ ತಿಳಿದು ಸಂಪೂರ್ಣ ಅಂಧನಾದ ಧೃತರಾಷ್ಟ್ರನಿಗೆ ತಿಳಿಸಿದವನು ಸಂಜಯನು; ಮುಂದೆ ಹುಟ್ಟುವ ಅನಂತ ಜಗತ್ಪ್ರವಾಹಕ್ಕೆ ಅಂದಿನ ಮಹಾದ್ಭುತವಾದ ಉಪದೇಶವನ್ನು ಲೋಕೋಪಕಾರ ದೃಷ್ಟಿಯಿಂದ ಕಾವ್ಯರೂಪದಲ್ಲಿ ವಿವರಿಸಿದವನು ಪರಮಾತ್ಮನ ಅವತಾರವೇ ಆದ ವೇದವ್ಯಾಸನು. ಈ ವಸ್ತು ಸರ್ವ ಜನಾದರಣೀಯವಾದುದರಲ್ಲಿ ಆಶ್ಚರ್ಯವಿಲ್ಲ.

ಭಗವದ್ಗೀತೆಯ ಜನಪ್ರಿಯತೆಗೆ ಅದರಲ್ಲಿ ಹೇಳಲ್ಪಟ್ಟಿರುವ ವಿಷಯದ ಸ್ವಾರಸ್ಯವೇ ಮುಖ್ಯ ಕಾರಣ. ಅಲ್ಲಿನ ವಸ್ತು ಯಾರ ಮನಸ್ಸನ್ನೂ ನೋಯಿಸುವುದಿಲ್ಲ. "ಎಲ್ಲವನ್ನೂ ಸಮಬುದ್ಧಿಯಿಂದ ಕಾಣಬೇಕು. ಎಲ್ಲೆಲ್ಲಿ ಯಾವ ಯಾವ ವಿಶೇಷ ಮಹಿಮೆ ಕಂಡುಬಂದರೂ ಅಲ್ಲಿ ಪರಮಾತ್ಮನ ವಿಶೇಷ ಸಾನ್ನಿಧ್ಯವನ್ನು ಮನಗಾಣಬೇಕು. ಚೆನ್ನಾಗಿ ಆಚರಿಸಲ್ಪಡುವ ಪರ ಧರ್ಮಕ್ಕಿಂತ, ಗುಣ ಕಡಿಮೆಯಾದರೂ ಸ್ವಧರ್ಮವೇ ಮೇಲು. ಯಾರಿಗೆ ಯಾವ ದೇವತೆ ಇಷ್ಟವೋ ಅವರು ಆ ದೇವತೆಯನ್ನೇ ಶ್ರದ್ಧಾಭಕ್ತಿಗಳಿಂದ ಆರಾಧಿಸಲಿ, ಎಲ್ಲ ವಿಧ ಪೂಜೆಯೂ ಪರದೇವತೆಯನ್ನೇ ಸೇರುವುದು." ಎಂಬ ಉದಾತ್ತ ಭಾವನೆಗಳು ಯಾರ ಮನಸ್ಸನ್ನು ಹಿಗ್ಗಿಸುವುದಿಲ್ಲ? ಒಬ್ಬನ ಅನ್ನ ಮತ್ತೊಬ್ಬನಿಗೆ ವಿಷವೆಂಬಂತೆ ಕೆಲವರು 'ಇತರ ಮತದ ದೇವರು ನಮ್ಮ ಮತದ ಅಸುರರು' ಎಂದು ಸಾರಿ ಹೇಳುತ್ತಾ ಮತವಿಷಯಕವಾದ ಜಗಳವನ್ನು

ಎಬ್ಬಿಸಿ ರಕ್ತದ ಕಾಲುವೆಯನ್ನೇ ಹರಿಸಿರುವುದು ಚರಿತ್ರೆಯಲ್ಲಿ ಕಂಡುಬಂದಿದೆ. ಆದರೆ ಇದಕ್ಕೆ ವಿರುದ್ಧವಾಗಿ 'ಭಕ್ತಿಶ್ರದ್ಧೆಯಿಂದ ಇತರ ದೇವತೆಗಳನ್ನು ಪೂಜಿಸಿದರೂ ಅವರು ನನ್ನನ್ನು ಪೂಜಿಸಿದಂತೆಯೇ ಆಯಿತು' ಎನ್ನುವ ಗೀತೆಯು ಸರ್ವಮತ ಸಹಿಷ್ಣುತೆಯು ಸಜ್ಜನರ ಮನಸ್ಸನ್ನು ಕರಗಿಸಿಬಿಡುವುದು.

ಭಗವದ್ಗೀತೆಯ ಮಹಿಮೆಯನ್ನು ರಸವತ್ತಾಗಿ ವಿವರಿಸುವ

"ಸರ್ವೋಪನಿಷದೋ ಗಾವೋ
ದೋಗ್ಧಾ ಗೋಪಾಲ ನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ
ದುಗ್ಧಂ ಗೀತಾಮೃತಂ ಮಹತ್ ॥

ಎಂಬ ಶ್ಲೋಕದಲ್ಲಿ, ಸಮಸ್ತ ಉಪನಿಷತ್ತುಗಳನ್ನು ಹಸುಗಳಿಗೂ, ಗೋಪಾಲ ಕೃಷ್ಣನನ್ನು ಹಾಲು ಕರೆಯುವವನಿಗೂ, ಅರ್ಜುನನನ್ನು ಕರುವಿಗೂ, ಗೀತೆಯೆಂಬ ಅಮೃತವನ್ನು ಹಾಲಿಗೂ, ಗೀತಾ ಶ್ರವಣ ಪಠನ ಮನನಾದಿಗಳಿಂದ ಮನಃಪರಿಪಾಕವನ್ನು ಪಡೆಯುವ ಜ್ಞಾನಿಯನ್ನು ಹಾಲು ಕುಡಿದು ಸುಖಪಡುವ ಭೋಕ್ತೃ ಪುರುಷನಿಗೂ ಹೋಲಿಸಿರುವುದು ಬಹು ರಮ್ಯವಾಗಿದೆ.

ಇದರಿಂದ ಗೀತೆಯನ್ನು ಶ್ರೀಕೃಷ್ಣನು ಬೋಧಿಸಲು ಅರ್ಜುನನು ಕೇವಲ ನಿಮಿತ್ತಮಾತ್ರನಾದ ಒಬ್ಬ ಶಿಷ್ಯನೆಂದೂ, ಶ್ರೀಕೃಷ್ಣನ ಉದ್ದೇಶವು ಭೂಮಂಡಲದ ಸಕಲ ಸಜ್ಜನರಿಗೂ ಸನ್ಮಾರ್ಗವನ್ನು ತೋರಿಸುವುದೇ ಆಗಿತ್ತೆಂದೂ ಸ್ಪಷ್ಟಪಡುತ್ತದೆ. ಗೀತಾಚಾರ್ಯನು ಶಿಕ್ಷಣ ಕ್ರಮದಲ್ಲಿ ಅತಿ ಚತುರನು. ಅರ್ಜುನನು ಭಾವಮೈದುನನಾದುದರಿಂದ ಸಾಮಾನ್ಯ ರೀತಿಯಲ್ಲಿ ತಿಳುವಳಿಕೆಯನ್ನು ಕೊಡಲು ಪ್ರಯತ್ನ ಪಟ್ಟಿದ್ದರೆ ಸಲಿಗೆಯಿಂದ ಅವನು ಕುಚೋದ್ಯ ಮಾಡಿಬಿಟ್ಟು ಉಪದೇಶ ವ್ಯರ್ಥವಾಗುತ್ತಿತ್ತು. "ಯಚ್ಚಾವಹಾಸಾರ್ಥ ಮಸತ್ಕೃತೋಸಿ" ಎಂದು ಕೃಷ್ಣನನ್ನು ತಾನು ಅಗೌರವ ರೀತಿಯಲ್ಲಿ ಕಂಡಿರುವುದನ್ನು ಅರ್ಜುನನೇ ಒಪ್ಪಿಕೊಳ್ಳುತ್ತಾನೆ. ಆದುದರಿಂದ ತನ್ನ ಹಿತೋಕ್ತಿಗೆ ಶ್ರೀಕೃಷ್ಣನು ರಣರಂಗದ ಭಯಾನಕ ಸನ್ನಿವೇಶವನ್ನೇ ಉಪಯೋಗಿಸಿಕೊಳ್ಳಬೇಕಾಯಿತು.

ಹದಿನೆಂಟು ಅಕ್ಷೋಹಿಣೀ ಸೈನ್ಯದವರು ಪರಸ್ಪರ ವಿನಾಶಕ್ಕಾಗಿ ಹಾತೊರೆದು ಸಿದ್ಧರಾಗಿದ್ದಾರೆ! ಸೇನಾನಾಯಕರಾದ ವೀರರು ಶಂಖಧ್ವನಿಗಳಿಂದ ತಮ್ಮ ಅನುಯಾಯಿಗಳನ್ನು ಹುರಿದುಂಬಿಸುತ್ತಿದ್ದಾರೆ! ಮುದುಕರು, ಬಾಲಕರು, ಬ್ರಾಹ್ಮಣರು, ಕ್ಷತ್ರಿಯರು, ಆಚಾರ್ಯರು, ಶಿಷ್ಯರು ಎಂಬ ವಯಸ್ಸು, ಜಾತಿ, ಉದ್ಯೋಗಗಳ ಭೇದಗಳನ್ನು ನಿರಾಕರಿಸಿ ಯುದ್ಧವೇ ತಮ್ಮ ಗುರಿ ಎಂಬುದಾಗಿ ಮರಣವನ್ನು ಲೆಕ್ಕಿಸದೆ ಉಭಯ ಪಕ್ಷದವರೂ ನಿಂತಿದ್ದಾರೆ! ಕಪಟದ್ಯೂತದಲ್ಲಿ ಸೋತರೂ ತಮ್ಮ ಮಾತಿಗೆ ಕಟ್ಟುಬಿದ್ದು ವನವಾಸ, ಅಜ್ಞಾತವಾಸಗಳನ್ನು ಅನುಭವಿಸಿ, ಕಳೆದುಕೊಂಡ ರಾಜ್ಯವನ್ನು ಪುನಃ ಸಂಪಾದಿಸಲು ಜ್ಞಾತಿಗಳೊಡನೆ ಯುದ್ಧ ಮಾಡಬೇಕಾಗಿ ಬಂದುದರಿಂದ, ಸೈನ್ಯಬಲ ಕಡಿಮೆಯಾದರೂ ವಾಸುದೇವನ ಬಲದಿಂದ ಧೈರ್ಯಗೊಂಡು ರಣೋನ್ಮುಖರಾಗಿ ಪಾಂಡವ ಸೋದರರು ಗರ್ಜಿಸುತ್ತಿದ್ದಾರೆ! ಐದು ಗ್ರಾಮಗಳನ್ನಾದರೂ ಕೊಟ್ಟರೆ ಕೌರವೇಂದ್ರನೊಡನೆ ಕಾಳಗ ಬೇಡವೆನ್ನುತ್ತಿದ್ದ ಧರ್ಮರಾಜನಿಗೂ ಸಂಧಿಯ ಆಸೆ ದೂರೀಕೃತವಾಗಿ, ಯುಧಿಷ್ಠಿರನೆಂಬ ತನ್ನ ಹೆಸರನ್ನು ಸಾರ್ಥಕಗೊಳಿಸಲೋ ಎಂಬಂತೆ ಯುದ್ಧವನ್ನು ಬಯಸಿ ಆ ಹಿರಿಯಣ್ಣನು ಮನಸ್ಸಿನ ಮೃದುತ್ವವನ್ನು ಕಳೆದು ಬಂದಿದ್ದಾನೆ!

ಇಂತಹ ಸಂದರ್ಭದಲ್ಲಿ ಅರ್ಜುನನಿಗೆ "ಅಹಹ! ಕೇವಲ ರಾಜ್ಯಪ್ರಾಪ್ತಿಗಾಗಿ, ನಮ್ಮನ್ನು ದ್ವೇಷಿಸಿದ ಬಂಧುಗಳನ್ನು ಮಾತ್ರವಲ್ಲದೆ, ವಿದ್ಯಾಗುರುಗಳಾದ ಆಚಾರ್ಯರನ್ನೂ, ನಮ್ಮ ಹಿತೈಷಿಗಳೇ ಆದರೂ ಅರಸಿನ ಅನ್ನ ಉಂಡುದರಿಂದ ಅವನ ಕಡೆ ಸೇರಿ ಯುದ್ಧ ಮಾಡಲು ಸಿದ್ಧರಾದ ಪಿತಾಮಹಾದಿ ವೃದ್ಧರನ್ನೂ, ಬಲಾತ್ಕಾರದಿಂದಲೋ ದ್ರವ್ಯಲೋಭದಿಂದಲೋ ಆ ಸೈನ್ಯದಲ್ಲಿ ನೆರೆದಿರುವ ನಿರಪರಾಧಿಗಳನ್ನೂ ಕೊಂದು ನಾವು ಸಾಧಿಸುವುದೇನು? ಇಷ್ಟು ಜನರ ರಕ್ತಪಾತದಿಂದ ಗಳಿಸಿದ ಆಸ್ತಿಯನ್ನು ಅನು

ಭವಿಸುವುದಕ್ಕಿಂತ ಭಿಕ್ಷೆಬೇಡಿ ಬದುಕಿರುವುದೇ ಮೇಲು. ಯುದ್ಧವೆಂದಮೇಲೆ ನಮಗೆ ಜಯವೇ ಆಗುವುದೆಂದು ಮೊದಲೇ ಹೇಳುವುದು ಹೇಗೆ? ಶತ್ರುಗಳನ್ನು ಸಂಹರಿಸಿ ರಾಜ್ಯಪಡೆದರೂ ಸುಖವಾಗುವುದಿಲ್ಲವೆಂದಮೇಲೆ, ಅದೃಷ್ಟವಶಾತ್ ನಾವೇ ಪರಾಜಿತರಾಗಿ ಶತ್ರುಗಳ ಕೈಸೆರೆಯಾದರೆ ನಮಗೆ ಯಾವಜ್ಜೀವವೂ ದುಃಖವಲ್ಲವೇ?" ಎಂಬ ವಿಷಾದ ಹುಟ್ಟಿ, 'ನಾನಂತೂ ಯಾರನ್ನೂ ಕೊಲ್ಲುವುದಿಲ್ಲ. ದುರ್ಯೋಧನಾದಿಗಳೇ ಬೇಕಾದರೆ ನಿಃಶಸ್ತ್ರನಾದ ನನ್ನನ್ನು ಕೊಲ್ಲಲಿ' ಎಂದು ಅವನು ಶಸ್ತ್ರಗಳನ್ನು ಕೆಳಗಿಟ್ಟು ರಥದಲ್ಲಿ ಕುಳಿತುಕೊಂಡುದೇ ಗೀತೋಪದೇಶಕ್ಕೆ ಭೂಮಿಕೆಯಾಯಿತು.

ರಣಾಂಗಣದಲ್ಲಿ ಶತ್ರುಗಳು ಮೇಲೆ ಬೀಳಲು ಸಿದ್ಧರಾಗಿರುವಾಗ ಅರ್ಜುನನು ಕೇಳುವುದೆಂದರೇನು, ಕೃಷ್ಣನು ಹೇಳುವುದೆಂದರೇನು? ಕೃಷ್ಣನಮಾತುಗಳು ಸುಮಾರು ಏಳುನೂರು ಶ್ಲೋಕಗಳಲ್ಲಿರುವುದರಿಂದ ಅಷ್ಟುದ್ದ ಉಪದೇಶಮಾಡುತ್ತಿರುವಾಗ ಶತ್ರುಗಳೇಕೆ ಸುಮ್ಮನಿದ್ದಾರು? ಹೀಗೆ ಸಂಶಯಪಟ್ಟು ಕೆಲವರು, ಅಂತಹ ಸನ್ನಿವೇಶದಲ್ಲಿ ಕೃಷ್ಣನು ಉಪದೇಶ ಮಾಡಿದ್ದರೆ ಕೆಲವು ಮಾತುಗಳನ್ನು ಮಾತ್ರ ಹೇಳಿರಬಹುದು, ವ್ಯಾಸರು (ವ್ಯಾಸ ಎಂದರೆ ವಿಸ್ತಾರ ಎಂಬರ್ಥ) ಅದಕ್ಕೆ ರುಚಿಕಟ್ಟುವಂತೆ ಮಾತು ಬೆಳೆಸಿ ದೊಡ್ಡದುಮಾಡಿ ರಸವತ್ತಾದ ಕಾವ್ಯವನ್ನು ರಚಿಸಿದ್ದಾರೆ, ಎಂದು ಹೇಳಿರುವರು. ಮತ್ತೆ ಕೆಲವರು ಮೂಲಗೀತೆಯು ಚಿಕ್ಕದೇ ಇದ್ದಿರಬೇಕೆಂದು ಸ್ಥಿರಮಾಡಿಕೊಂಡು ಅದನ್ನು ಹುಡುಕುತ್ತಾ, ಕೊನೆಗೆ ಜಾವ ದ್ವೀಪದಲ್ಲಿ (ಬಲಿ) ಸಿಕ್ಕಿರುವ ಗ್ರಂಥವೆಂದು ಹೇಳಿ ಎಪ್ಪತ್ತು ಶ್ಲೋಕವುಳ್ಳ ಭಗವದ್ಗೀತೆಯೊಂದನ್ನು ಪ್ರಕಟಿಸಿದ್ದಾರೆ. ಆ ಬಗೆಯ ಸಂಶಯಗಳಿಗೆ ಸದ್ಯಕ್ಕೆ ಮನಕೊಡದೆ ಮಹಾಭಾರತದ ಅಂಗಭೂತವಾಗಿ, ಸರ್ವರಿಂದಲೂ ಮಾನ್ಯವಾಗಿ, ಪ್ರಸ್ಥಾನತ್ರಯಗಳಲ್ಲಿ ಒಂದೆಂದು ಪ್ರಸಿದ್ಧವಾಗಿರುವ ಭಗವದ್ಗೀತೆಯ ಮಹತ್ವವನ್ನು ಸ್ವಲ್ಪಮಟ್ಟಿಗಾದರೂ ನಾವು ತಿಳಿದುಕೊಳ್ಳೋಣ.

ಅರ್ಜುನನ ಮಾತುಗಳನ್ನು ಶ್ರೀಕೃಷ್ಣನು ಪ್ರಜ್ಞಾವಾದವೆಂದು ಕರೆದನು. ಅರ್ಜುನನಾದರೋ ಬಂಧು ಗುರುಜನ ಮೋಹದಿಂದ ಮಾತನಾಡಿದನೇ ವಿನಾ ಧರ್ಮದೃಷ್ಟಿಯಿಂದಲ್ಲ. ಆದುದರಿಂದ ಶ್ರೀಕೃಷ್ಣನ ದಿವ್ಯೋಪದೇಶದಲ್ಲಿ ಕರ್ತವ್ಯಪರಾಯಣತೆಗೆ ಮುಖ್ಯಗಮನಕೊಟ್ಟಿದೆ. "ಈ ಲೋಕದಲ್ಲಿ ಜೀವನು ಹಿಂದಿನ ಕರ್ಮಗಳಿಗೆ ಅನುಗುಣವಾದ ದೇಹವನ್ನು ಪಡೆದು ಇಲ್ಲಿನ ಪರಿಸ್ಥಿತಿ, ತನ್ನ ಸಂಸ್ಕಾರ, ನೈಜ ಸ್ವಭಾವಗಳಿಗೆ ಹೊಂದುವಂತೆ ಪುನಃ ಕರ್ಮಮಾಡುತ್ತಾ, ಇದಕ್ಕೆ ತಕ್ಕ ಫಲವನ್ನು ಮುಂದೆ ಪಡೆಯುತ್ತಾ ಜಗತ್ಪ್ರವಾಹದಲ್ಲಿ ಸಿಕ್ಕಿಬಿದ್ದಿರುವನು. ಜನರು ಜೀರ್ಣವಾದ ಹಳೇ ಬಟ್ಟೆಗಳನ್ನು ತೆಗೆದು ಹೊಸಬಟ್ಟೆಗಳನ್ನು ಧರಿಸುವಂತೆ, ನಿತ್ಯನಾದ ಜೀವನು ಅನಿತ್ಯಗಳಾದ ಶರೀರಗಳನ್ನು ಒಂದಾದ ಮೇಲೊಂದು ಪಡೆಯುತ್ತಿರಲಾಗಿ, ಅರ್ಜುನನ ಪ್ರಲಾಪ ವಿಷಾದಗಳು, ಹೇಗೂ ನಾಶಹೊಂದಬೇಕಾಗಿರುವ ದೇಹಗಳನ್ನು ಕುರಿತೋ, ಅಥವಾ ಏನುಮಾಡಿದರೂ ನಾಶರಹಿತವಾಗಿ ನಿತ್ಯವಾಗಿರುವ ಜೀವನನ್ನು ಕುರಿತೋ? ವಿಚಾರ ಮಾಡಿದರೆ ಹೇಗೂ ವಿಷಾದವು ವ್ಯರ್ಥ; ಅಪರಿಹಾರ್ಯವಾದ ವಿಷಯದಲ್ಲಿ ಶೋಕವನ್ನು ತೋರ್ಪಡಿಸಬಾರದು. ಮುಖ್ಯದೃಷ್ಟಿಯಿಂದ ಪರಮಾತ್ಮನೇ ಸರ್ವಭೂತಗಳ ಹೃದಯದಲ್ಲಿದ್ದು ತನ್ನ ಮಾಯೆಯಿಂದ ತನ್ನನ್ನು ತೋರ್ಪಡಿಸಿಕೊಳ್ಳದೆ ಎಲ್ಲರನ್ನೂ ಯಂತ್ರಗಳಂತೆ ತಿರುಗಿಸುತ್ತಾ ಕಾಲಕಾಲಗಳಲ್ಲಿ ಸೃಷ್ಟಿ ಸ್ಥಿತಿ ಲಯಗಳನ್ನು ವಿಧಿಸುತ್ತಿರುವುದರಿಂದ, ಪರತಂತ್ರನೂ ಅಲ್ಪನೂ ಆದ ಜೀವನು ತಾನೇ ಸ್ವಾತಂತ್ರ್ಯದಿಂದ ಎಲ್ಲ ಕಾರ್ಯವನ್ನೂ ಮಾಡುತ್ತಿರುವೆನೆಂಬ ಅಜ್ಞತನವನ್ನು ಬಿಟ್ಟು, ಸ್ವ (ವಿಹಿತ) ಕರ್ಮವನ್ನು ಫಲಾಪೇಕ್ಷೆಯಿಲ್ಲದೆ ಪರಮಾತ್ಮನ ಪ್ರೀತ್ಯರ್ಥವಾಗಿ ಮಾಡುತ್ತಾ ಶಾಂತಿಯನ್ನು ಪಡೆದು ಪುರುಷೋತ್ತಮನ ಸಾನ್ನಿಧ್ಯವನ್ನು ಸೇರಲು ಪ್ರಯತ್ನಿಸಬೇಕು." ಎಂಬುದೇ ಗೀತೆಯ ಪರಮಸಾರ. ಇಂತಹ ಉತ್ತಮ ಉಪದೇಶವು ಆಗಿನಕಾಲ, ಜನ, ಪರಿಸ್ಥಿತಿಗಳಿಗೆ ಮಾತ್ರವೇ ಅಲ್ಲದೆ ಯಾವಾಗಲೂ

ಎಲ್ಲರಿಗೂ ಅನ್ವಯಿಸುವುದು. ಇದೇ ಗೀತೆಯ ಮಹತ್ವ. ಯಾರಾದರೂ 'ಕ್ಷಣಕಾಲವೂ ಕರ್ಮ ಮಾಡದೆ ಸುಮ್ಮನಿರಲು ಸಾಧ್ಯವಿಲ್ಲದುದರಿಂದ, ತಾನು ಮಾಡುವ ಕೆಲಸವು ಧರ್ಮಕ್ಕೆ ಅನುಗುಣವಾಗಿದ್ದು, ಕರ್ತವ್ಯ ನಿರ್ವಾಹಕ್ಕಾಗಿಯೇ ನಡೆದು, ಫಲಾಫಲ ಮೋಹಗಳ ಸಂಪರ್ಕ ವರ್ಜಿತವಾಗಿರಬೇಕೆಂದು ಗೀತೆಯು ಸಾರಿ ಸಾರಿ ಹೇಳುವುದು.

ಅಜ್ಞಾನವನ್ನು ತೋರ್ಪಡಿಸಿದರೂ ಅರ್ಜುನನು ಉತ್ತಮಾಧಿಕಾರಿ. ವಿಷಯ ತಿಳಿದುಕೊಳ್ಳಲು ಅವನಿಗೆ ಆಸಕ್ತಿ ಬಹಳವಾಗಿತ್ತು. ಮಧ್ಯೇಮಧ್ಯೇ ಪ್ರಶ್ನೆಗಳನ್ನು ಹಾಕಿ ತನ್ನ ಸಂದೇಹಗಳನ್ನು ಅವನು ನಿವಾರಿಸಿಕೊಳ್ಳುತ್ತಿದ್ದನು. ಶ್ರೀಕೃಷ್ಣನೂ 'ಅರ್ಜುನಾ, ಏಕಾಗ್ರ ಬುದ್ಧಿಯಿಂದ ನಾನು ಹೇಳಿದುದನ್ನೆಲ್ಲ ಕೇಳಿದೆಯೇನು?' ಎಂದು ಪ್ರಶ್ನಿಸಿದನು. ಈರೀತಿ ವಿಷಯವು ಕೂಲಂಕಷವಾಗಿ ವಿಮರ್ಶಿಸಲ್ಪಟ್ಟಿತು. ಕೊನೆಗೆ ಶ್ರೀಕೃಷ್ಣನು "ನಿನ್ನ ಸಂಶಯಗಳು ದೂರವಾದುವೇ? ಇನ್ನಾದರೂ ಮೋಹವಳಿಯಿತೇ? ನಾನು ಹೇಳಿದುದನ್ನೆಲ್ಲ ವಿಮರ್ಶೆಮಾಡಿ, ಹೇಗೆ ಬೇಕೋ ಹಾಗೆ ಮಾಡು. ಇದೆಲ್ಲ ಬಹಳ ಗುಟ್ಟಾದ ವಿಷಯ; ನನ್ನ ಭಕ್ತನೂ ಪ್ರಿಯನೂ ಎಂದೇ ನಿನಗೆ ನಾನು ತಿಳಿಸಿದ್ದೇನೆ. ಶ್ರದ್ಧಾಳುವಾಗಿ ಶುಶ್ರೂಷಾ ಪರನಾಗಿ ನನ್ನಲ್ಲಿ ಅಸೂಯೆ ಇಲ್ಲದಿರುವವನಿಗೆ ಮಾತ್ರ ನೀನು ಇದನ್ನು ಬೋಧಿಸಬಹುದು." ಎಂದಿರುವನು.

ಈ ಗ್ರಂಥದಲ್ಲಿ ಉತ್ತಮಗತಿ ಸಾಧಕಗಳಾದ ಕರ್ಮ, ಜ್ಞಾನ, ಭಕ್ತಿ ಎಂಬ ಯೋಗ (ಉಪಾಯ) ಗಳನ್ನು ಚೆನ್ನಾಗಿ ವಿವರಿಸಲಾಗಿದೆ. ಸತ್ವರಜಸ್ತಮೋಗುಣಗಳ ಸ್ವರೂಪವು ವಿಶದವಾಗಿ ತಿಳಿಸಲ್ಪಟ್ಟಿದೆ. ಕಾಮ್ಯವಾದ ಕರ್ಮಗಳನ್ನು ಬಿಟ್ಟು ಸ್ವಧರ್ಮ ವಿಹಿತವಾದ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುವುದೇ ಕರ್ಮಸನ್ಯಾಸವೆಂದು ಹೇಳಲ್ಪಟ್ಟಿದೆ. 'ವಿಷ್ಣುವೇ ಸರ್ವೋತ್ತಮ, ಸರ್ವವ್ಯಾಪ್ತ, ಸ್ವತಂತ್ರ ಮತ್ತು ಆತನ ಮಹಿಮೆಯಿಂದಲೇ ಉತ್ತಮ ಪದಾರ್ಥಗಳಿಗೆಲ್ಲ ಪ್ರಾಧಾನ್ಯ ಬಂದಿರುವುದು.' ಎಂದು ಕೇಳಿದ ಅರ್ಜುನನಿಗೆ ಆ ಪುರುಷೋತ್ತಮನ ವಿಶ್ವರೂಪವನ್ನು ನೋಡುವ ಬಯಕೆಯುಂಟಾಗಲು ಭಗವತ್ಪ್ರಸಾದದಿಂದ ದಿವ್ಯ ಚಕ್ಷುಸ್ಸನ್ನು ಪಡೆದು ದೇವಾದಿಗಳೂ ನೋಡಬೇಕೆಂದು ಕಾತರಿಸುತ್ತಿದ್ದ ಆ ದಿವ್ಯ ಭಗವದ್ರೂಪವನ್ನು ಅವನು ಕಂಡನು. ಕೃಷ್ಣಾರ್ಜುನ ಸಂವಾದವನ್ನು ಕೇಳಿದ ಸಂಜಯನಿಗೇ ರೋಮಾಂಚವಾಗಬೇಕಾದರೆ ಅರ್ಜುನನ ಆಗಿನ ಸ್ಥಿತಿಯೇನು? ಅಂತಹ ಉತ್ತಮಾಧಿಕಾರಿಯೂ ಮಹಾವಿಷ್ಣುವನ್ನು ಆ ವಿಶ್ವರೂಪದಲ್ಲಿ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲದೆ ಎಂದಿನಂತೆ ಮಿತ್ರ—ನಂಟನಾದ ಶ್ರೀಕೃಷ್ಣನ ರೂಪವನ್ನೇ ಪುನಃ ನೋಡಲು ಅವನು ಬಯಸಿದನು.

ಭಗವದ್ಗೀತೆಯ ಶೈಲಿ ಬಹಳ ಸರಳ. ಸಂಸ್ಕೃತ ಭಾಷೆಯ ಅಲ್ಪಪರಿಚಯವಿದ್ದವರಿಗೂ ರಸಾನುಭವವಾಗುವಂತಿದೆ. ಆದರೆ ಪಂಡಿತೋತ್ತಮರೂ ವಿಮರ್ಶೆಮಾಡಬೇಕಾದ ಗಂಭೀರ ಅರ್ಥ, ಭಾವಗಳು ಅಲ್ಲಿವೆ. ಕೆಲವು ಅಂಶಗಳನ್ನು ತಿಳಿಸುವ ಶ್ಲೋಕಗಳನ್ನು ಮಾದರಿಗಾಗಿ ಇಲ್ಲಿ ಕೊಡಬಹುದು.

"ಬುದ್ಧಿವಂತರು ಕರ್ಮಫಲದಲ್ಲಿ ಆಸಕ್ತಿ ತೊರೆದು ಬುದ್ಧಿಯನ್ನು ಅಚಲ ಸಮಾಧಿಯೊಳಗೆ ಇಟ್ಟುಕೊಂಡು ಸ್ಥಿತಪ್ರಜ್ಞರೆನಿಸಿಕೊಳ್ಳುತ್ತಾರೆ." ಎಂದು ಶ್ರೀಕೃಷ್ಣನು ಹೇಳಲು ಅರ್ಜುನನು ಸ್ಥಿತಪ್ರಜ್ಞನಸ್ವರೂಪವೇನೆಂದು ಕೇಳಿದನು.

ದುಃಖೇಷ್ವನುದ್ವಿಗ್ನಮನಾಃ
ಸುಖೇಷು ವಿಗತಸ್ಪೃಹಃ।
ವೀತರಾಗ ಭಯಕ್ರೋಧಃ
ಸ್ಥಿತ ಧೀರ್ಮುನಿ ರುಚ್ಯತೇ ॥ ೨, 56.

ಯದಾಸಂಹರತೇ ಚಾಯಂ
ಕೂರ್ಮೋಽಂಗಾನೀವ ಸರ್ವಶಃ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ
ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೨, 58.

ಯಾ ನಿ ಶಾಸರ್ವಭೂತಾನಾಂ ।
ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ
ಸಾ ನಿಶಾ ಪಶ್ಯತೋ ಮುನೇಃ ॥ ೨, 69.

ಬ್ರಹ್ಮಭೂತಃ ಪ್ರಸನ್ನಾತ್ಮಾ
  ನ ಶೋಚತಿ ನ ಕಾಂಕ್ಷತಿ ।
ಸಮಃ ಸರ್ವೇಷು ಭೂತೇಷು
  ಮದ್ಭಕ್ತಿಂ ಲಭತೇ ಪರಾಂ ॥ ೧೮, 54.

(ಸ್ಥಿತಪ್ರಜ್ಞನಿಗೆ ದುಃಖಬಂದಾಗ ವಿಶೇಷ ಉದ್ವೇಗವಾಗುವುದಿಲ್ಲ. ಇಂದ್ರಿಯಾದಿ ಐಹಿಕ ಸುಖಗಳಲ್ಲಿ ಅವನ ಮನಸ್ಸು ಹೋಗುವುದಿಲ್ಲ. ಪ್ರೀತಿ, ಭಯ, ಕೋಪ ಮುಂತಾದುವು ಅವನಲ್ಲಿರುವುದಿಲ್ಲ. ಆಮೆ ತನ್ನ ಅವಯವಗಳನ್ನು ಚಿಪ್ಪಿನೊಳಗೆ ಸೆಳೆದಿಟ್ಟುಕೊಂಡಿರುವಂತೆ ಸ್ಥಿತಪ್ರಜ್ಞನು ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗಗೊಡದೆ ಹಿಡಿದಿಟ್ಟುಕೊಂಡಿರುವನು. ಎಲ್ಲ ಪ್ರಾಣಿಗಳೂ ನಿದ್ರಿಸುತ್ತಿದ್ದಾಗ ಮನಃಸಂಯಮವುಳ್ಳವನು ಎಚ್ಚೆತ್ತಿದ್ದು ಕಾರ್ಯಾಕಾರ್ಯ ವಿಚಾರಣೆಮಾಡಿಕೊಳ್ಳುವನು. ಎಲ್ಲರೂ ಜಾಗ್ರತಾವಸ್ಥೆಯಲ್ಲಿದ್ದು ಲೋಕವೇ ಗಡಿಬಿಡಿಯಲ್ಲಿರುವಾಗ ಇಂದ್ರಿಯ ನಿಗ್ರಹಮಾಡಿರುವ ಯೋಗಿಗೆ ಅದೇ ರಾತ್ರಿಯಂತಿರುವುದು. ಬ್ರಹ್ಮನಲ್ಲಿ ಮನಸ್ಸಿಟ್ಟು, ಬೇಕು ಬೇಡಗಳೆಂಬ ಭಾವನೆಗಳನ್ನೇ ತೊರೆದು, ಆತ್ಮ ಪ್ರಸನ್ನತೆ ಹೊಂದಿ, ಎಲ್ಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾದ ಪರಮಾತ್ಮನಿರುವನೆಂಬ ಸಮತ್ವ ಭಾವನೆಯುಳ್ಳವನು ಈಶ್ವರ ಭಕ್ತಿಯನ್ನು ಪಡೆಯುವನು — ಎಂದು ತಾತ್ಪರ್ಯ)

ಜ್ಞಾನ ಅತ್ಯುತ್ತಮವಾದುದೆಂಬುದಕ್ಕಾಗಿ ಹೇಳಿರುವುವು ಈ ಶ್ಲೋಕಗಳು—

ಶ್ರೇಯಾನ್ ದ್ರವ್ಯಮಯಾ
  ದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ
  ಜ್ಞಾನೇ ಪರಿಸಮಾಪ್ಯತೇ ॥ ೪, 33.
ಯಥೈಧಾಂಸಿ ಸಮಿದ್ಧೋಗ್ನಿ-
  ರ್ಭಸ್ಮಸಾತ್ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ
  ಭಸ್ಮಸಾತ್ಕುರುತೇ ತಥಾ ॥
ನ ಹಿ ಜ್ಞಾನೇನ ಸದೃಶಂ
  ಪವಿತ್ರಮಿಹ ವಿದ್ಯತೇ ॥ ೪, 37.

ಅಜ್ಞಶ್ಚಾಶ್ರದ್ಧಧಾನಶ್ಚ
  ಸಂಶಯಾತ್ಮಾ ವಿನಶ್ಯತಿ । ೪, 40.

(ಹಣ ವೆಚ್ಚಮಾಡಿಮಾಡುವ ಯಜ್ಞಕ್ಕಿಂತ ಜ್ಞಾನಯಜ್ಞವೇ ಶ್ರೇಷ್ಠ. ಕರ್ಮವೆಲ್ಲ ಜ್ಞಾನದಲ್ಲಿ ಪರ್ಯವಸಾನ ಹೊಂದುವುದು. ಪ್ರಜ್ವಲಿಸುವ ಬೆಂಕಿಯು ಸೌದೆಯನ್ನು ಸುಡುವಂತೆ ಜ್ಞಾನವೆಂಬ ಅಗ್ನಿಯು ಎಲ್ಲ ಕರ್ಮದಿಂದುಂಟಾದ ದುಷ್ಟ ಫಲವನ್ನೂ ಸುಟ್ಟುಬಿಡುವುದು. ಜ್ಞಾನದಂತೆ ಪವಿತ್ರವಾದುದು ಬೇರೊಂದಿಲ್ಲ. ಅಜ್ಞನೂ, ನಂಬಿಕೆಯಿಲ್ಲದವನೂ, ಸಂಶಯಪಡುತ್ತಿರುವವನೂ ಆದ ನರನು ಹಾಳಾಗುವನು.)

ಸ್ವಧರ್ಮ ವಿಹಿತವೆಂಬ ಕಾರಣದಿಂದಲೇ ಸರ್ವಕರ್ಮಗಳನ್ನು ಮಾಡಿ ಫಲವನ್ನು ಮಾತ್ರ ಪರಮಾತ್ಮನಲ್ಲಿ ತ್ಯಾಗಬುದ್ಧಿಯಿಂದ ಸಮರ್ಪಿಸಿ ಭಕ್ತನಾಗಿ ಧ್ಯಾನಾಸಕ್ತನಾದವನ ಸ್ವರೂಪವನ್ನು ಹೀಗೆ ತಿಳಿಸಿದೆ—

ಅದ್ವೇಷ್ಟಾ ಸರ್ವಭೂತಾನಾಂ
  ಮೈತ್ರಃ ಕರುಣ ಏವ ಚ ।
ನಿರ್ಮಮೋ ನಿರಹಂಕಾರಃ
  ಸಮದುಃಖಸುಖಃ ಕ್ಷಮೀ ॥ ೧೨, 13.
ಯಸ್ಮಾನ್ನೋದ್ವಿಜತೇ ಲೋಕೋ
  ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷ ಭಯೋದ್ವೇಗೈ
ರ್ಮುಕ್ತೋ ಯಃ ಸ ಚ ಮೇ ಪ್ರಿಯಃ ॥ ೧೨, 15.
ಸಮಃ ಶತ್ರೌ ಚ ಮಿತ್ರೇ ಚ
  ತಥಾ ಮಾನಾಪಮಾನಯೋಃ ।
ತುಲ್ಯ ನಿಂದಾಸ್ತುತಿ ರ್ಮೌನೀ
  ಸಂತುಷ್ಟೋ ಯೇನ ಕೇನಚಿತ್ ॥ ೧೨, 18.

(ನನಗೆ ಪ್ರಿಯನಾದ ಭಕ್ತನು ಯಾರನ್ನೂ ದ್ವೇಷಿಸುವುದಿಲ್ಲ; ಎಲ್ಲರಲ್ಲೂ ಸ್ನೇಹ, ಕರುಣೆಯನ್ನು ಮಾಡುತ್ತಾನೆ. ಮಮತೆ, ಅಹಂಕಾರಗಳು ಅವನನ್ನು ಆವರಿಸುವುದಿಲ್ಲ; ಆದುದರಿಂದ ಅವನಿಗೆ ತಾಳ್ಮೆ ಹೆಚ್ಚು; ಸುಖದಲ್ಲಿ ವಿಶೇಷವಾಗಿ ಮೈಮರೆಯುವ ಹಾಗೆ ಆನಂದಪಡುವುದಿಲ್ಲ, ದುಃಖಬಂದಾಗ ಶೋಕಾವೇಗದಿಂದ ಕುಗ್ಗಿ ಹೋಗುವುದೂ ಇಲ್ಲ.

ಲೋಕವನ್ನು ಅವನು ಬೆದರಿಸುವುದೂ ಇಲ್ಲ, ಅದರಿಂದ ತಾನು ಬೆದರುವುದೂ ಇಲ್ಲ. ಶತ್ರು-ಮಿತ್ರ, ಮಾನ-ಅಪಮಾನ, ನಿಂದೆ-ಸ್ತುತಿ ಎಂಬ ವಿರುದ್ಧ ವಿಷಯಗಳಲ್ಲಿ ಸಮಭಾವನೆಯನ್ನು ತಾಳಿ, ಮಿತಭಾಷಿಯಾಗಿ, ಏನು ದೊರೆತರೆ ಅಷ್ಟರಿಂದಲೇ ತೃಪ್ತನಾಗಿರುವನು. ಸಂತೋಷ, ಕೋಪ, ಭಯ, ಉದ್ವೇಗಗಳೆಂಬ ಭಾವೋದ್ರೇಕಗಳಿಂದ ಮುಕ್ತನಾದ ಶಾಂತನಾದ ಅಂತಹ ಭಕ್ತನು ನನಗೆ ಬಹು ಪ್ರಿಯನು.)

ಸತ್ವಗುಣ ಭೂಯಿಷ್ಠರಾದವರ ಸ್ವರೂಪವನ್ನು ತಿಳಿಸಲು ಸಾತ್ವಿಕವಾದ ಯಜ್ಞ, ಆಹಾರ, ದಾನ, ತಪಸ್ಸು, ಕರ್ಮ, ಸುಖ ಇವುಗಳ ಲಕ್ಷಣವನ್ನು ಕೆಳಗಿನ ಶ್ಲೋಕಗಳು ತಿಳಿಸುವುವು.

ಯಜಂತೇ ಸಾತ್ವಿಕಾ ದೇವಾನ್ ....॥೧೭, 4.

ಆಯುಃಸತ್ವಬಲಾರೋಗ್ಯ
ಸುಖಪ್ರೀತಿ ವಿವರ್ಧನಾಃ ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ
ಆಹಾರಾಃ ಸಾತ್ವಿಕ ಪ್ರಿಯಾಃ ॥ ೧೭, 8.

ಅಫಲಾಕಾಂಕ್ಷಿಭಿ ರ್ಯಜ್ಞೋ
ವಿಧಿದೃಷ್ಟೋ ಯ ಇಜ್ಯತೇ ।
ಯಷ್ಟವ್ಯಮೇವೇತಿ ಮನಃ
ಸಮಾಧಾಯ ಸ ಸಾತ್ವಿಕಃ ॥ ೧೭, 11.

ಅಫಲಾಕಾಂಕ್ಷಿಭಿ ರ್ಯುಕ್ತೈಃ
ಸಾತ್ವಿಕಂ ಪರಿಚಕ್ಷತೇ ॥ ೧೭, 17.

ದಾತವ್ಯಮಿತಿ ಯದ್ದಾನಂ
ದೀಯತೇಽ ನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇಚ
ತದ್ದಾನಂ ಸಾತ್ವಿಕಂ ವಿದುಃ ॥ ೧೭, 20.

ನಿಯತಂ ಸಂಗರಹಿತ
ಮರಾಗ ದ್ವೇಷತಃಕೃತಂ।
ಅಫಲಪ್ರೇಪ್ಸುನಾಕರ್ಮ
ಯತ್ತತ್ಸಾತ್ವಿಕ ಮುಚ್ಯತೇ ॥ ೧೮, 23.

ಮುಕ್ತಸಂಗೋಽನಹಂವಾದೀ .
ಧೃತ್ಯು ತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ
ಕರ್ತಾ ಸಾತ್ವಿಕ ಉಚ್ಯತೆ ॥ ೧೮, 26.

ಪ್ರವೃತ್ತಿಂ ಚ ನಿವೃತ್ತಿಂ ಚ
ಕಾರ್ಯಾಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ
ಬುದ್ಧಿಃ ಸಾ ಪಾರ್ಥ ಸಾತ್ವಿಕೀ ॥ ೧೮, 30.

ಅಭ್ಯಾಸಾದ್ರಮತೇ ಯತ್ರ
ದುಃಖಾಂತಂ ಚ ನಿಗಚ್ಛತಿ ।
ಯತ್ತದಗ್ರೇ ವಿಷಮಿವ ಪರಿಣಾಮೇಽ
ಮೃತೋಪಮಂ ।
ತತ್ಸುಖಂ ಸಾತ್ವಿಕಂ ಪ್ರೋಕ್ತ
ಮಾತ್ಮಬುದ್ಧಿ ಪ್ರಸಾದಜಂ ॥ ೧೮, 37

(ಸಾತ್ವಿಕರು ಯಕ್ಷರಾಕ್ಷಸ ಪಿಶಾಚಗಳನ್ನು ಬಿಟ್ಟು ದೇವರನ್ನೇ ಪೂಜಿಸುವರು....ಆಯುಸ್ಸು, ಶಕ್ತಿ, ಆರೋಗ್ಯ, ಸುಖ, ಪ್ರೀತಿಗಳನ್ನು ಹೆಚ್ಚಿಸುವ, ರುಚಿಕರವಾಗಿ ಹಾಲುತುಪ್ಪ ಮೊಸರುಗಳಿಂದ ಕೂಡಿ ಮನೋಹರವಾದ, ಆಹಾರವೇ ಸಾತ್ವಿಕವಾದುದು. ಯಜ್ಞವು ಕರ್ತವ್ಯವೆಂದು ಭಾವಿಸಿ ಶಾಸ್ತ್ರ ವಿಹಿತರೀತಿಯಲ್ಲಿ ಫಲಾಪೇಕ್ಷೆಯಿಲ್ಲದೆ ಮಾಡಿದ ಯಜ್ಞವು ಸಾತ್ವಿಕವು. ದಾನವು ವಿಹಿತವೆಂದು ತಿಳಿದು ದೇಶಕಾಲಪಾತ್ರಾನುಗುಣವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಕೊಡಲ್ಪಟ್ಟುದೇ ಸಾತ್ವಿಕದಾನ. ರಾಗದ್ವೇಷಾದಿ ವರ್ಜಿತವಾಗಿ ಫಲವನ್ನೇ ಗುರಿಯಾಗಿಟ್ಟುಕೊಳ್ಳದೆ ಸಂಗರಹಿತವಾಗಿ ಮಾಡಿದ ಕರ್ಮ ಸಾತ್ವಿಕ. ಸಾತ್ವಿಕ ಕರ್ತೃವು ಆಡಂಬರಕ್ಕಾಗಿ ನಾಲ್ಕುಜನರ ಸಂಗಕಟ್ಟಿಕೊಂಡು ಕೆಲಸಮಾಡುವುದಿಲ್ಲ; ಧೈರ್ಯ ಉತ್ಸಾಹಗಳಿಂದ ಕೂಡಿ ಅಹಂಕಾರ ರಹಿತನಾಗಿ ಕಾರ್ಯದ ಸಿದ್ಧಿ, ಅಸಿದ್ಧಿಗಳ ಕಡೆಗೆ ಗಮನವಿಡದೆ ಕೆಲಸಮಾಡುವನು. ಪ್ರವೃತ್ತಿ-ನಿವೃತ್ತಿ, ಕಾರ್ಯ-ಅಕಾರ್ಯ, ಭಯ—ಅಭಯ, ಬಂಧ—ಮೋಕ್ಷಗಳೆಂಬ ವಿರುದ್ಧ ವಿಷಯಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಯುವುದೇ ಸಾತ್ವಿಕ ಬುದ್ಧಿಯ ಲಕ್ಷಣ. ಅಭ್ಯಾಸ ಬಲದಿಂದ ರುಚಿಸುವುದು, ದುಃಖವನ್ನು ಕೊನೆಗಾಣಿಸುವುದು, ಮೊದಲು ವಿಷದಂತೆ ಅಗ್ರಾಹ್ಯವಾಗಿ ತೋರಿದರೂ ಕೊನೆಯಲ್ಲಿ ಅಮೃತ ಸದೃಶವಾಗುವುದು, ಇವು ಆತ್ಮಬುದ್ಧಿಯ ಪ್ರಸನ್ನತೆಯಿಂದ ಹುಟ್ಟುವ ಸಾತ್ವಿಕ ಸುಖದ ಲಕ್ಷಣಗಳು.)

ಇಂತಹ ಸರ್ವೋತ್ತಮ ಸಾಹಿತ್ಯಗ್ರಂಥವನ್ನು ಎಲ್ಲರೂ ಪಠನ, ಮನನಾದಿಗಳಿಂದ ಗ್ರಹಿಸಿ ನಮ್ಮ ಸಮಾಜವನ್ನೇ ಸರ್ವ ವಿಧದಲ್ಲಿಯೂ ಉನ್ನತಸ್ಥಿತಿಗೆ ತರುವಂತಾಗಲಿ.

ಶ್ರೀ ಕೃಷ್ಣಾರ್ಪಣಮಸ್ತು.



ಆಳುವ ಮಹಾಸ್ವಾಮಿಯವರು

ಶ್ರೀಮನ್ಮಹಾರಾಜಶ್ರೀ ಕೃಷ್ಣರಾಜೇಂದ್ರ ಒಡೆಯರವರಿಂದ ೩೭ ವರ್ಷಕಾಲ ಅಲಂಕರಿಸಲ್ಪಟ್ಟಿದ್ದ ಮೈಸೂರಿನ ಪ್ರಾಚೀನ ಸಿಂಹಾಸನವು ಇಂದು ಶ್ರೀ ಜಯಚಾಮರಾಜ ಒಡೆಯರವರಿಂದ ಅಧಿರೋಹಿಸಲ್ಪಟ್ಟಿದೆ.

ಶ್ರೀ ಜಯಚಾಮರಾಜೇಂದ್ರರು ಯದುವಂಶ ಮುಕ್ತಾಫಲದಂತೆ ಶ್ರೀ ನರಸಿಂಹರಾಜಒಡೆಯರವರ ಧರ್ಮಪತ್ನಿಯಲ್ಲಿ ಜನ್ಮಗೊಂಡು ಶೈಶವ ಬಾಲ್ಯಾವಸ್ಥೆಗಳನ್ನು ಅರಮನೆಯಲ್ಲಿ ಸಕಲರಿಗೂ ಆನಂದದಾಯಕರಾಗಿ ಆಟಪಾಟಗಳಿಂದ ಕಳೆದು, ಕೇವಲ ವಿನೋದ ರೀತಿಯಲ್ಲೇ ಬಾಲ್ಯ ವಿದ್ಯಾಭ್ಯಾಸವನು ಮುಗಿಸಿದರು. ತರುವಾಯ ಪ್ರೌಢವಿದ್ಯಾಭ್ಯಾಸಕ್ಕಾಗಿ ಸಾರ್ವಜನಿಕ ವಿದ್ಯಾರ್ಥಿಗಳೊಂದಿಗೇ ಕಾಲೇಜು ತರಗತಿಗಳಲ್ಲಿ ಓದಿ, ಅನೇಕ ಪ್ರಶಸ್ತಿಗಳೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ., ಪದವೀಧರರಾಗಿ ಸಕಲರಿಗೂ ಪರಮಾನಂದವನ್ನುಂಟುಮಾಡಿದರು.—

ಪ್ರಬುದ್ಧರಾದ ರಾಜಕುಮಾರರಿಗೆ ವಿವಾಹಮಹೋತ್ಸವವನ್ನು ನೆರವೇರಿಸಿ ಶ್ರೀಕೃಷ್ಣರಾಜೇಂದ್ರ ಪ್ರಭುಗಳು ಸಂಸ್ಥಾನದ ಆಡಳಿತದ ಅನುಭವವನ್ನು ಶಕ್ತರಾದ ಹಲವುಮಂದಿ ಅಧಿಕಾರಿಗಳಮೂಲಕ ರಾಜಕುಮಾರರಿಗೆ ಕೊಡಿಸುತ್ತಾ ಅವರಿಗೆ ಯುವರಾಜ ಪದವನ್ನು ಅನುಗ್ರಹಿಸಿದರು. ಸ್ವಭಾವಚತುರರೂ, ಸೂಕ್ಷ್ಮಗ್ರಾಹಿಗಳೂ, ಪೂರ್ಣ ವಿದ್ಯಾವಂತರೂ ಆದ ಜಯಚಾಮರಾಜ ಒಡೆಯರವರು ರಾಜ್ಯಾಡಳಿತವನ್ನು ಸ್ವೀಕರಿಸಲು ಯೋಗ್ಯತೆಯನ್ನು ಗಳಿಸಿದರೆಂಬ ವೇಳೆಗೆ ಸರಿಯಾಗಿ ದೈವಯೋಗದಿಂದಲೋ ಎಂಬಂತೆ ಶ್ರೀಮನ್ಮಹಾರಾಜಶ್ರೀ ಕೃಷ್ಣರಾಜ ಒಡೆಯರವರು ವಿಧಿವಶರಾಗಲು, ರಾಜ್ಯಾಧಿಕಾರ-ಪಾಲನೆಯ ಸಕಲ ಜವಾಬುದಾರಿಯೂ ಇವರಮೇಲೆಯೇ ಹೊತ್ತಿತು. ಬ್ರಿಟಿಷ್ ಸಾರ್ವಭೌಮ ಸರ್ಕಾರದವರ ಅಪ್ಪಣೆಯಂತೆ ಶ್ರೀ ಜಯಚಾಮರಾಜೇಂದ್ರರು ೧೯೪೦ನೇ ಸಂ|| ಸೆಪ್ಟೆಂಬರ್ ತಿಂಗಳು ೮ ನೇ ತಾರೀಖಿನ ಶುಭದಿನದಲ್ಲಿ ಪಟ್ಟಾಭಿಷಿಕ್ತರಾದರು.

ಹಲವು ಬಗೆಗಳಿಂದ ಮಿತ್ರಪಕ್ಷದ ವಿಜಯಸಂಪಾದನೆಗೆ ಬೆಂಬಲರಾಗಿದ್ದು ಅದಕ್ಕಾಗಿ ವಿಶೇಷ ರೀತಿಯಿಂದ ಬ್ರಿಟಿಷ್ ಚಕ್ರಾಧಿಪತ್ಯದಿಂದಲೂ ಮತ್ತು ಚಕ್ರವರ್ತಿ ಸಾರ್ವಭೌಮರಿಂದಲೂ ಪ್ರಶಂಸೆ ಗೌರವಗಳಿಗೆ ಪಾತ್ರರಾದರು.... ಈ ಸಂಬಂಧವಾಗಿಯೇ ಜಿ. ಸಿ. ಎಸ್. ಐ., ಮತ್ತು ಜಿ. ಸಿ. ಬಿ., ಎಂಬ ಘನತರವಾದ ಬಿರುದುಗಳು ಮಹಾಸ್ವಾಮಿಯವರಿಗೆ ಲಭ್ಯವಾದುವು.

ಅಲ್ಲದೆ ಕೇವಲ ಆಸ್ತಿಕ ಶಿರೋಮಣಿಗಳಾದ ಇವರು ಈ ಚಿಕ್ಕಪ್ರಾಯದಲ್ಲೇ ಅನೇಕಾನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ದೇವತಾರಾಧನೆ ನಡೆಸಿದ್ದಾರೆ. ಸಂಸ್ಕೃತಭಾಷೆಯಲ್ಲಿದ್ದ ಅಷ್ಟಾದಶ ಪುರಾಣಗಳನ್ನೂ ಕನ್ನಡ ತರ್ಜುಮೆಯೊಂದಿಗೆ ಪ್ರಕಟಗೊಳಿಸಲು ಏರ್ಪಡಿಸಿ ಭಾಷೋದ್ಧಾರಕ್ಕೆ ವಿಶೇಷ ಸಹಾಯ ಮಾಡಿದ್ದಾರೆ. ಅಲ್ಲದೆ ವಿಶ್ವಸಂಗ್ರಾಮದ ದುರಂತ ಪರಿಸ್ಥಿತಿಯಿಂದುಂಟಾದ ಕಷ್ಟಕಾರ್ಪಣ್ಯಗಳ ಈ ಕಾಲದಲ್ಲಿ, ತಮ್ಮ ಪ್ರಜಾವರ್ಗಕ್ಕೆ ಸಾಧ್ಯವಾದಷ್ಟೂ ಸುಲಭ ರೀತಿಯಿಂದ ಆಹಾರ ಸಾಮಗ್ರಿಗಳು ದೊರೆಯುವಂತೆ ಅನುಕೂಲಪಡಿಸಿ ರಕ್ಷಿಸಲು ಸರ್ವದಾ ಪ್ರಯತ್ನಿಸುತ್ತಿರುವರು. ಈ ವರ್ಷದ ಮಳೆಯ ಅಭಾವದಿಂದ ಸಂಸ್ಥಾನದ ಕೆಲವು ಭಾಗಗಳಲ್ಲಿ ಕ್ಷಾಮ ತಲೆದೋರುವ ಚಿಹ್ನೆ ಇದೆ ಎಂಬುದನ್ನು ಅರಿತು, ಪ್ರಜೆಗಳ ಯೋಗಕ್ಷೇಮವನ್ನು ಸ್ವಯಂ ಕಂಡು, ಕೇಳಿ, ದುಃಖನಿವಾರಣೆ ಮಾಡಲಿಕ್ಕೆಂದು ಸಂಸ್ಥಾನದ ಹಲವು ಭಾಗಗಳಲ್ಲಿ ಸಂಚರಿಸಿ ನಿಜಸ್ಥಿತಿಯನ್ನು ಅರಿತಿರುವರು.

ದಯಾಮಯರೂ ಪ್ರಜಾವತ್ಸಲರೂ ಆದ ಶ್ರೀಮನ್ಮಹಾರಾಜಾ ಜಯಚಾಮರಾಜಒಡೆಯರ್ ಬಹದ್ದೂರ್ ಅವರು ಚಿರಾಯುರಾರೋಗ್ಯ ವಿಭವಾದಿಗಳನ್ನು ಪಡೆದು ಬಹುಕಾಲ ರಾಜ್ಯಭಾರ ನಿರತರಾಗಿರುವಂತೆ ಭಗವಂತನ ಪರಮಾನುಗ್ರಹವಾಗಲಿ!



ಕರ್ಣಾಟಕ ರತ್ನ ಸಿಂಹಾಸನಾಧೀಶ್ವರರಾದ

ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ , ಜಿ.ಸಿ.ಬಿ., ಅವರು

ದಾಸಸಾಹಿತ್ಯ ಸಂಶೋಧನೆ

ಶ್ರೀ. ಜಿ. ವರದರಾಜರಾವ್ ಎಂ.ಎ., ಬೆಂಗಳೂರು.

ಈಚೀಚೆಗೆ ಹರಿದಾಸ ಸಾಹಿತ್ಯವನ್ನು ಕುರಿತು, ಲೇಖನಗಳೂ, ಪುಸ್ತಕಗಳೂ ಪ್ರಕಟವಾಗುತ್ತಿರುವುದು ಸಂತೋಷಕರವಾದ ಸಂಗತಿ. ಯಾವುದೋ ಒಂದು ಪಂಥದ, ಯಾವುದೋ ಒಂದು ಮಾರ್ಗವನ್ನು ಅನುಸರಿಸಿ ಬರೆದ ದಾಸರ ಪದಗಳೆಂಬ ಅಲಕ್ಷ್ಯಭಾವವು ಕಣ್ಮರೆಯಾಗಿ ಅವುಗಳಲ್ಲಿ ಕಂಡುಬರುವ ತತ್ವವೇನು, ಆ ಕೀರ್ತನೆಗಳ ಮಹತ್ವವೇನು, ಯಾವ ಯಾವ ಕ್ರಮವನ್ನನುಸರಿಸಿ ಅವುಗಳನ್ನು ರಚಿಸಿರುತ್ತಾರೆ ಎಂಬ ವಿಷಯಗಳನ್ನು ಕುರಿತು ವಿವೇಚನೆ ಮಾಡಲು ತೊಡಗಿರುವುದು ಶುಭಸೂಚನೆಯೇ ಸರಿ. ವಿಷಯದಲ್ಲಿ ವೈವಿಧ್ಯ ಸಾಲದೆಂದೂ, ರೀತಿಯಲ್ಲಿ ಬಹುಮಟ್ಟಿಗೆ ಎಲ್ಲವೂ ಒಂದೇ ರೀತಿಯದೆಂದೂ ಮೂಡಿದ್ದ ಭಾವನೆಯು ಹೋಗಿ, ಕರ್ಣಾಟಕದ ಆಧ್ಯಾತ್ಮಿಕ ಪ್ರಭೆಯನ್ನೂ, ಸಾರಸ್ವತ ಸ್ವತ್ತನ್ನೂ, ಸಂಗೀತದ ಭಾಂಡಾರವನ್ನೂ ಏಕಕಾಲದಲ್ಲಿಯೇ ಬೆಳಗಿಸಿ ಸುಪ್ರಸಿದ್ಧಿಯನ್ನು ಪಡೆದ ದಾಸರ ಕೀರ್ತನೆಗಳಲ್ಲಿ ವಿಶೇಷವಾದ ಶ್ರದ್ಧೆ, ಭಕ್ತಿ, ವಿಶ್ವಾಸಗಳು ತಲೆದೋರಿರುವುದು ಸ್ತೋತ್ರಾರ್ಹವಾದುದು.

ಬೆಂಗಳೂರಿನ ಸುಬೋಧ ಪ್ರಕಟನಾಲಯದವರ "ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ" ಎಂಬ ಪುಸ್ತಕಗಳೂ, ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರ ದಾಸರ ಪದಗಳ ಸಂಗ್ರಹಗಳೂ, ದಾಸಸಾಹಿತ್ಯವನ್ನು ವ್ಯಾಸಂಗ ಮಾಡುವ ಅಭ್ಯಾಸಿಗಳಿಗೆ ವಿಶೇಷವಾದ ನೆರವನ್ನು ನೀಡುತ್ತವೆ. ಅಲ್ಲದೆ ಶ್ರೀ. ಬೇಲೂರು ಕೇಶವದಾಸರ "ಕರ್ಣಾಟಕ ಭಕ್ತ ವಿಜಯ'' ಮತ್ತು 'ಹರಿದಾಸಸಾಹಿತ್ಯ' ಮೊದಲಾದ ಗ್ರಂಥಗಳೂ, ಶ್ರೀಮಾನ್ ಎಸ್. ಪಿ. ಕಲಮದಾನಿ ಮತ್ತು ಶ್ರೀಮಾನ್ ಎ. ಪಿ. ಕರಮರ್ಕರ್ ಎಂ. ಎ., ಎಲ್‌ಎಲ್. ಬಿ., ಅವರುಗಳು ಬರೆದಿರುವ Mystic Teachings of Haridasas of Karnatak ಎಂಬ ಇಂಗ್ಲಿಷ್ ಪುಸ್ತಕವೂ, ಶ್ರೀ ಕಟ್ಟೆ ಶೇಷಾಚಾರ್ಯರ 'ಕನಕದಾಸರು', ಶ್ರೀ ರಂಗನಾಥ ದಿವಾಕರರ 'ಹರಿಭಕ್ತಿ ಸುಧೆ' ಇವೇ ಮೊದಲಾದ ಪುಸ್ತಕಗಳೂ ದಾಸಸಾಹಿತ್ಯದ ಸ್ವರೂಪ ಸ್ವಭಾವಗಳನ್ನು ಕುರಿತು ತಕ್ಕಮಟ್ಟಿನ ಪರಿಚಯವನ್ನು ಉಂಟುಮಾಡಿಕೊಡಬಲ್ಲವು. ಇವುಗಳಲ್ಲದೆ ಅನೇಕ ಮಾಸಪತ್ರಿಕೆಗಳಲ್ಲಿ ಹಲವಾರು ಲೇಖನಗಳು ಅಚ್ಚಾಗಿವೆ. ದಾಸರ ಪದಗಳನ್ನು ಶೇಖರಿಸಿ ಅವುಗಳನ್ನು ಕ್ರಮಶಃ ಬೆಳಕಿಗೆ ತರಬೇಕೆಂದು ಉದ್ದೇಶಿಸಿ, ಲಿಂಗಸೂಗೂರಿನಲ್ಲಿ ಇತ್ತೀಚೆಗೆ ಏರ್ಪಟ್ಟಿರುವ 'ವರದೇಂದ್ರ ದಾಸಸಾಹಿತ್ಯ ಸಮಿತಿ'ಯವರು ಇದೇ ಕೆಲಸದಲ್ಲಿಯೇ ಉದ್ಯುಕ್ತರಾಗಿರುವುದು ಪ್ರಶಂಸಾರ್ಹವಾದುದು. ಈ ಸಮಿತಿಯವರು ಈಗ ತಾನೆ 'ಶ್ರೀ ಪುರಂದರದಾಸರು ಮತ್ತು ಕರ್ಣಾಟಕ ಶ್ರೀಹರಿದಾಸರ ಪರಂಪರೆ' ಎಂಬ ಗ್ರಂಥವನ್ನೂ ಸಹ ಪ್ರಕಟಿಸಿರುತ್ತಾರೆ.

ಇಷ್ಟುಮಟ್ಟಿನ ಕೆಲಸ ನಡೆದಿದ್ದಾಗ್ಯೂ, ದಾಸಸಾಹಿತ್ಯದ ಬಗ್ಗೆ ಇನ್ನೂ ಸಾಕಾದಷ್ಟು ಕೆಲಸವಾಗಿಲ್ಲವೆಂಬುದು ನಿಜವಾದ ಮಾತು. ಇದುವರೆಗೆ ಆಗಿರುವ ಕೆಲಸದಲ್ಲಿ ಅನೇಕ ನ್ಯೂನಾತಿರೇಕಗಳು ಕಂಡುಬರಬಹುದು. ಈಗ ಅಚ್ಚಾಗಿರುವ ಪದಸಂಗ್ರಹಗಳನ್ನು ಒಟ್ಟುಗೂಡಿಸಿ ನೋಡಿದರೆ ಅನೇಕ ಭಿನ್ನ ಪಾಠಗಳು ಕಂಡುಬರುತ್ತವೆ. ಆಯಾ ಸಂಗ್ರಹಗಳನ್ನು ಅಚ್ಚುಮಾಡಿಸುವ ಸಂಪಾದಕರುಗಳು, ತಾವು ಯಾವ ಯಾವ ಗ್ರಂಥಗಳಿಂದ, ಅಥವಾ

ಹಸ್ತ ಪ್ರತಿಗಳಿಂದ ಅವುಗಳನ್ನು ಸಂಗ್ರಹಿಸಿದರೆಂಬ ವಿಷಯವನ್ನು ಕುರಿತು ಹೆಚ್ಚಿನ ವಿಷಯಗಳನ್ನು ತಿಳಿಸಿರುವುದಿಲ್ಲ. ಆದರೆ ಜನಾನುರಾಗವು, ಅದರಲ್ಲಿಯೂ ಮುಖ್ಯವಾಗಿ ವಿದ್ಯಾಭಿಮಾನಗಳ ಪ್ರೋತ್ಸಾಹವು ಕಡಮೆಯಾಗಿ ದೊರೆಯುವ ಇಂಥ ಅಮೂಲ್ಯವಾದ ಕೆಲಸವನ್ನು, ಯಾವುದೋ ಒಂದು ಬಗೆಯಾದ ಸೇವಾಕಾಂಕ್ಷೆಯ ದೃಷ್ಟಿಯಿಂದ ಕೈಕೊಂಡು, ಇಂದು, ನೆನೆದ ಕೂಡಲೇ ನಮ್ಮ ಕೈಗೆ ದೊರೆಯುವಂತೆ ಸಿದ್ಧಪಡಿಸಿರುವ ಈ ಸಂಗ್ರಹಗಳ ಸಂಪಾದಕರುಗಳಿಗೆ ಎಲ್ಲರೂ ಚಿರಋಣಿಯಾಗಿರುತ್ತಾರೆ.

ಇದುವರೆಗೆ ದೊರೆತಿರುವ ಸಾಮಗ್ರಿಯನ್ನೂ ಮುಂದೆ ಇನ್ನೂ ದೊರೆಯಬಹುದಾದ ವಿಷಯ ಭಾಂಡಾರವನ್ನೂ ಶೇಖರಿಸಿ, ದಾಸರ ಪದಗಳನ್ನು ಯಾವ ಕ್ರಮವನ್ನನುಸರಿಸಿ ವ್ಯಾಸಂಗ ಮಾಡಿದರೆ ಅದು ಸರ್ವಜನಾದರಣೀಯವಾದೀತು, ಎಂಬ ವಿಷಯವನ್ನು ಕುರಿತು ಆಲೋಚಿಸುವುದೇ ಈ ಲೇಖನದ ಮುಖ್ಯೋದ್ದೇಶ. ದಾಸರ ಕೀರ್ತನೆಗಳು ಎಲ್ಲರಿಗೂ ಬೇಕಾದುವು. ಅವುಗಳಲ್ಲಿ ಅಡಗಿರುವ ಹಲವಾರು ತತ್ವಗಳು ಸಕಲ ಮತೀಯರಿಂದಲೂ ಮೆಚ್ಚುಗೆಯನ್ನು ಪಡೆಯತಕ್ಕುವು. ಈ ಕೀರ್ತನೆಗಳ ಮುಖ್ಯ ಲಕ್ಷಣವೇನೆಂದರೆ, ಅವು ಪಂಡಿತ ಪಾಮರರಿಬ್ಬರಿಗೂ ಸೇರಿದ ಸ್ವತ್ತು. ಕಬ್ಬಿಣದ ಕಡಲೆಯಂತೆ ಕಠಿಣವಾದ ಕೀರ್ತನೆಗಳೂ ಉಂಟು; ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾದ ಪದಗಳೂ ಉಂಟು. ಆದ್ದರಿಂದ, ದಾಸರ ಪದಗಳನ್ನು ಸಂಶೋಧನಾತ್ಮಕವಾಗಿ ವ್ಯಾಸಂಗ ಮಾಡಬೇಕೆನ್ನುವವರಿಗೆ, ಅನೇಕ ವಿಷಯಗಳು ಕಣ್ಣಿಗೆ ಬೀಳುತ್ತವೆ. ಅವುಗಳು ಯಾವುವು, ಅಲ್ಲಿ ಕಂಡುಬರುವ ಸಮಸ್ಯೆಗಳೇನು, ಈ ಸಮಸ್ಯೆಗಳನ್ನು ಪರಿಹಾರ ಮಾಡುವುದು ಹೇಗೆ ಮತ್ತು ಇಂಥ ಗುರುತರವಾದ ಕಾರ್ಯದ ಪ್ರತಿಫಲವೇನು ಎಂಬ ಅಂಶಗಳನ್ನು ಇಂದು ವಿಚಾರ ಮಾಡಬೇಕಾಗಿದೆ. ದಾಸ ಸಾಹಿತ್ಯದ ಪ್ರವರ್ತಕರ ಪೊಟ್ಟಮೊದಲನೆಯ ಪಟ್ಟವನ್ನು ಅಚಲಾನಂದರಿಗೆ ಕಟ್ಟುವುದಾದರೆ, ಅವರ ಕಾಲವನ್ನು ಕ್ರಿ. ಶ. ೯ನೆಯ ಶತಮಾನವೆಂದು ಭಾವಿಸುವುದಾದರೆ, ಕನ್ನಡ ಸಾಹಿತ್ಯದ ಪ್ರಾರಂಭ ಕಾಲದಲ್ಲಿಯೇ ದಾಸ ಸಾಹಿತ್ಯವೂ ಹುಟ್ಟಿರಬಹುದೆಂದು ಹೇಳಬೇಕಾಗಬಹುದಲ್ಲವೆ? ಅಚಲಾನಂದರ ಬಳಿಕ ನರಹರಿತೀರ್ಥರವರೆಗೆ ಈ ಕ್ಷೇತ್ರದಲ್ಲಿ ಏನು ಕೆಲಸ ನಡೆದಿರಬಹುದು. ಇಂದು ಏಕೆ, ಅದು ಬೆಳಕಿಗೆ ಬಂದಿಲ್ಲ ಎಂಬುದು ವಿಚಾರಾರ್ಹವಾದುದು. ಇವುಗಳ ಸಂಶೋಧನೆಯನ್ನು ಮಾಡಬೇಕಾಗಿದೆ.

ದಾಸರ ಕೀರ್ತನೆಗಳನ್ನು ಮುಖ್ಯವಾಗಿ ಎರಡು ದೃಷ್ಟಿಗಳಿಂದ ವಿಚಾರ ಮಾಡಬಹುದು. ಇವುಗಳು ಬಹುಮಟ್ಟಿಗೆ ಮಧ್ವಮತದ ಸಂಪ್ರದಾಯವನ್ನೂ, ತತ್ವವನ್ನೂ ಹೆಚ್ಚಾಗಿ ತಿಳಿಸುವುದರಿಂದಲೂ, ಮತ್ತು ದ್ವೈತಮತಾನುಸಾರವಾಗಿ ದೇವರಿಗೂ ಭಕ್ತನಿಗೂ ಇರುವ ಪರಸ್ಪರ ಸಂಬಂಧವನ್ನು ವ್ಯಕ್ತಪಡಿಸುವುದರಿಂದಲೂ ಇವುಗಳನ್ನು ಕೇವಲ ಆಧ್ಯಾತ್ಮಿಕ ದೃಷ್ಟಿಯಿಂದ ಪರಿಶೀಲಿಸುವುದು ಒಂದು ಮಾರ್ಗ. ಈ ಕ್ರಮದಲ್ಲಿ ವ್ಯಾಸಂಗವನ್ನು ಮಾಡುವುದರಿಂದ, ದಾಸರ ಕೀರ್ತನೆಗಳಲ್ಲಿ ಅಡಕವಾಗಿರಬಹುದಾದ ಮಧ್ವಮತದ ತತ್ವಗಳೆಲ್ಲ ವಿಶದವಾಗುವುದರಲ್ಲಿ ಸಂಶಯವಿಲ್ಲ. ಆದರೆ, ದಾಸವರ್ಯರು ರಚಿಸಿರುವ ಕೀರ್ತನೆಗಳೆಲ್ಲ ಕೇವಲ ಈ ಒಂದು ಗುಂಪಿಗೇ ಸೇರಿದುವಲ್ಲ. ಅವುಗಳಲ್ಲಿ ಎಲ್ಲ ಮತೀಯರಿಗೂ, ಎಲ್ಲಾ ಕಾಲಕ್ಕೂ ಅನ್ವಯಿಸುವ ಅನೇಕ ವಿಷಯಗಳನ್ನೊಳಗೊಂಡ ಕೀರ್ತನೆಗಳೂ ಹೇರಳವಾಗಿವೆ. ಮುಖ್ಯವಾಗಿ, ಪ್ರತಿಯೊಬ್ಬರೂ ತಮ್ಮ ಬದುಕನ್ನು ಹೇಗೆ ಬೆಳಸಿ ಬಾಳಬಹುದೆಂಬ ಒಂದು ದೊಡ್ಡ ತತ್ವವನ್ನು ಅವುಗಳು ಸಹಸ್ರಾರು ವಿಧದಲ್ಲಿ ಸಾರಿ ಹೇಳುತ್ತವೆ. ನಿತ್ಯಜೀವನದ ಸತ್ಯಾಂಶಗಳನ್ನು ಬಿಚ್ಚಿ ಹೇಳಿ, ಅವುಗಳ ಬೆಲೆಯೇನು ಎಂಬ ಅಂಶವನ್ನು ವಿಶದಮಾಡಿಕೊಡುತ್ತವೆ. ಇಲ್ಲದ ಸಲ್ಲದ ಬೂಟಾಟಿಕೆ, ಡಂಭಾಚಾರ, ಬಾಹ್ಯಾಡಂಬರ, ಒಣ ಜಂಭಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ, ಎಲ್ಲರಲ್ಲಿಯೂ ಇರಬೇಕಾದ ಸರ್ವಸಮತಾಭಾವ, ಅಂತರಂಗ ಶುದ್ಧಿ, ಸದಾಚಾರ, ಸತ್ಸಹವಾಸ, ದೈವಾನುಗ್ರಹ ಚಿಂತನೆ, ಜೀವನದ ಮೇಲ್ಮೆ ಮೊದಲಾದವುಗಳನ್ನು ಕುರಿತು ನಾಡಿನ ಮುಂದಿಗೆ ತಿಳಿವನ್ನು ನೀಡಲಿಂದ

ಮೇಲೆ ಹೇಳಿ, ಉಪದೇಶ ಮಾಡುತ್ತವೆ. ಈ ಒಂದು ಬುದ್ಧಿವಾದದಲ್ಲಿ ಕಂಡುಬರುವ ಕ್ರಮವನ್ನಾಗಲಿ, ವಿಷಯುಗಳನ್ನು ಎಲ್ಲ ಮುಟ್ಟದ ಜನರಿಗೂ ಬಿಡಿಸಿ ಹೇಳುವ ವಿಧಾನವನ್ನಾಗಲಿ, ಗಮನವಿಟ್ಟು ನೋಡಿದವರಿಗೆ ಇವು ಕನ್ನಡ ಸಾಹಿತ್ಯದಲ್ಲಿ ನೂರಾರು ಕಾಲ ಬದುಕಿ ಬಾಳಬಹುದಾದ ಉತ್ತಮೋತ್ತಮವಾದ ಭಕ್ತಿಗೀತಗಳೆಂಬ ಅಭಿಮಾನವುಂಟಾಗುವುದು ಸಹಜವೇ ಸರಿ. ಆದ್ದರಿಂದ ಈ ಕೀರ್ತನೆಗಳನ್ನು ಕನ್ನಡ ಸಾಹಿತ್ಯದ ದೃಷ್ಟಿಯಿಂದ ವಿಚಾರ ಮಾಡಿ ನೋಡುವುದೂ ಸಾಧುವಾದುದು; ಮತ್ತು ಅದೂ ಒಂದು ಮಾರ್ಗ.

ಹೀಗೆ ವಿಶಾಲವಾದ ದೃಷ್ಟಿಯಲ್ಲಿ ವಿಚಾರ ಮಾಡಿದ್ದಾದರೆ, ದಾಸಪರ್ಯರ ಕೃತಿಗಳನ್ನು ಇಂದು ಹೊಸ ರೀತಿಯಲ್ಲಿ ವಿಮರ್ಶೆ ಮಾಡಿ ನೋಡಬೇಕಾಗಿದೆ. ಎಲ್ಲ ಭಕ್ತಿ ಪಂಥದವರ ಹೃದಯಾಂತರಾಳದಿಂದಲೂ ಹೊರಹೊಮ್ಮುವ ಭಾವ ಒಂದೇ ಬಗೆಯಾದುದು ಎಂಬ ಅಂಶವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಒಬ್ಬೊಬ್ಬ ಪಂಗಡದವರ ಭಾಷೆಯೂ ಬೇರೆಬೇರೆಯಾಗಿರಬಹುದು. ಪರಮಾತ್ಮನನ್ನು ಸಂಬೋಧಿಸುವ ಕ್ರಮವೂ ಬೇರೆಬೇರೆಯಾಗಿರಬಹುದು; ಸ್ತೋತ್ರ ಮಾಡುವ ಪದ್ಧತಿಯು ಪ್ರತ್ಯೇಕವಾಗಿರಬಹುದು. ಆದರೆ ಕ್ರಿಸ್ತನ ಮೇಲಿನ ಭಕ್ತಿಯೂ, ಕೃಷ್ಣನ ಮೇಲಿನ ಭಕ್ತಿಯೂ ಒಂದೇ ಬಗೆಯಾದದ್ದು ಎಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದ್ದರಿಂದ ನಮ್ಮ ದಾಸರ ರಚನೆಗಳ ಹಿರಿಮೆಯನ್ನು ಕಾಣಬೇಕಾದರೆ, ಅವುಗಳನ್ನು ಅದೇ ರೀತಿಗೆ ಸೇರಿರಬಹುದಾದ ಇತರ ರಚನೆಗಳೊಂದಿಗೆ ಹೋಲಿಸಿ ನೋಡಬೇಕು. ಶಿವಶರಣರ ವಚನಗಳೊಂದಿಗೂ, ಭಕ್ತ ಕಬೀರರ ಕೃತಿಗಳೊಂದಿಗೂ, ಬೈಬಲ್ಲಿನ 'ಸಾಮ್' ಕೀರ್ತನೆಗಳೊಂದಿಗೂ, ಮರಾಟಿ ಸಂತರ ಅಭಂಗಗಳೊಂದಿಗೂ ಹೋಲಿಸಿ ನೋಡುವ ಧೈರ್ಯವನ್ನು ಮಾಡಬೇಕು. ಈ ವಿಶಾಲ ದೃಷ್ಟಿಯ ವಿಚಾರ ವಿಮರ್ಶೆಗಳು ಇಂದು ನಮಗೆ ಅಗತ್ಯವಾಗಿ ಬೇಕಾಗಿವೆ. ಕೇವಲ ಯಾವುದೋ ಒಂದು ಜಾತ್ಯಭಿಮಾನದಿಂದಾಗಲಿ, ಅಂಧಶ್ರದ್ಧೆ ಅಥವಾ ಮೂಢಭಕ್ತಿ ಮಾತ್ರದಿಂದಾಗಲಿ, ಅವುಗಳನ್ನು ಮೆಲುಕು ಹಾಕಿದ ಮಾತ್ರಕ್ಕೆ ಕೀರ್ತನೆಗಳ ವ್ಯಾಸಂಗ ಪೂರ್ತಿಯಾದಂತಾಗುವುದಿಲ್ಲ.

ಇಂದು, ಮೊಟ್ಟ ಮೊದಲನೆಯದಾಗಿ ಮಾಡಬೇಕಾದ ಕೆಲಸವೆಂದರೆ, ದಾಸರ ಪದಗಳ ಸಂಗ್ರಹ ಕಾರ್ಯ. ಕರ್ಣಾಟಕದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಹಲವಾರು ದಾಸರ ಆಶ್ರಯವನ್ನು ಕೋರಿ, ಅವರ ಸಹಕಾರದಿಂದ ಈ ಕೆಲಸ ಆಗಬೇಕಾಗಿದೆ. ಹೀಗೆ ಸಂಗ್ರಹಿಸುವ ಸಂದರ್ಭದಲ್ಲಿ ಯಾರ ಉಪಕಾರವನ್ನೂ ಅಲಕ್ಷಿಸುವಂತಿಲ್ಲ. ಇಂದಿಗೂ, ಈ ಕೀರ್ತನ ಪದ್ಧತಿಯನ್ನು ಅನುಷ್ಠಾನದಲ್ಲಿ ಇಟ್ಟುಕೊಂಡು ಬರುತ್ತಿರುವ ನಮ್ಮ ದಾಸರುಗಳು ಈ ಕೆಲಸವನ್ನು ನಿರ್ವಂಚನೆಯಿಂದ ಮಾಡಿಕೊಡಬೇಕಾಗಿದೆ. ಕೇವಲ ನಾಲಿಗೆಯ ಮೇಲೆ ಮಾತ್ರವೇ ಪ್ರಚಲಿತವಾಗಿರುವ ಪದಗಳೆಷ್ಟು ಇವೆಯೋ ಹೇಳಲು ಸಾಧ್ಯವಿಲ್ಲ. ದಾಸಶ್ರೇಷ್ಠರಾದ ಪುರಂದರದಾಸರೊಬ್ಬರೇ ಸುಮಾರು ಐದು ಲಕ್ಷ ಪದಗಳನ್ನು ರಚಿಸಿದರೆಂಬ ನಂಬಿಕೆಯಿರಬೇಕಾದರೆ ಆ ಮಹಾನುಭಾವರ ಉಳಿದ ಪದಗಳು ಇನ್ನೂ ಬೆಳಕಿಗೆ ಬಾರದಿರುವುದು ಆಶ್ಚರ್ಯವಲ್ಲವೆ? ಇಂದು ದೊರೆತಿರುವ ಅವರ ಕೀರ್ತನೆಗಳನ್ನು ಸವಿದ ಮೇಲಂತೂ, ಅವರ ಉಳಿದ ಕೃತಿಗಳು ಎಂದಿಗೆ ನಮ್ಮ ಹಸ್ತಗತವಾದಾವೆಂಬ ಆಕಾಂಕ್ಷೆ ಮೂಡುವುದು ಸಜವಲ್ಲವೆ? ಆದುದರಿಂದ, ಇಡೀ ಕರ್ಣಾಟಕದಲ್ಲಿ ದೊರೆಯುವ ದಾಸರ ಕೀರ್ತನೆಗಳನ್ನು ಒಂದಲ್ಲ ಒಂದು ಬಗೆಯಾಗಿ ಶೇಖರಿಸಬೇಕು. ಈ ಸಂದರ್ಭದಲ್ಲಿ ದೊರೆಯಬಹುದಾದ ಹಸ್ತಪ್ರತಿಗಳು ಓಲೆ ಪ್ರತಿಗಳು ಮೊದಲಾದವುಗಳ ಬೆಲೆ ಹೇಳತೀರದು. ಈ ಹಿಡಿದ ಕಾರ್ಯ ನಿರ್ವಿಘ್ನವಾಗಿ ನೆರವೇರಬೇಕಾದರೆ, ಮೊದಲೇ ಹೇಳಿರುವಂತೆ, ನಮ್ಮ ಹರಿದಾಸರುಗಳು ಮುಂದೆ ಬರಬೇಕು. ಒಂದಾನೊಂದು ಕಾಲದಲ್ಲಿ ಇದೇ ಕರ್ಣಾಟಕದಲ್ಲಿ ಗುಡುಗಾಡಿದ ಈ ರಸವಂತ ಕೃತಿಗಳನ್ನು ನಮ ಕೈ ಜಾರಿ ಹೋಗದಂತೆ ಕಾಪಾಡಿಕೊಂಡು ಒಂದೆಡೆ

ಯಲ್ಲಿ ಕಲೆ ಹಾಕಬೇಕು.

ಕೃತಿಗಳ ಸಂಗ್ರಹ ಕಾರ್ಯ ಮುಗಿದ ಬಳಿಕ, ಅವುಗಳನ್ನು ತಾಳೆ ನೋಡಿ, ಭಿನ್ನ ಪಾಠಗಳ ಸಮೇತ ಮೂಲ ಕೃತಿಯನ್ನು ಗುರುತಿಸಬೇಕು. ಈ ಆಧುನಿಕ ಕ್ರಮದಲ್ಲಿ ಹಲವರಿಗೆ ವಿಶ್ವಾಸವಿಲ್ಲದೆ ಇರಬಹುದು. ಹೀಗೆ ಮಾಡುವುದರಿಂದ, ನಿಜವಾಗಿಯೂ ಮೂಲಕೃತಿಯನ್ನು ನಿರ್ದೇಶಿಸುವ ಕಾರ್ಯ ಮುಗಿದಂತಾಯಿತೆ ಎನ್ನಿಸಬಹುದು. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಮಗೆ ಆಗುವ ಸಮಾಧಾನವಾದರೂ ಇಷ್ಟೆ. ಈ ಕ್ರಮವನ್ನು ಅನುಸರಿಸುವ ಮಾತ್ರದಿಂದಲೇ ಎಲ್ಲವೂ ನಿರ್ದೋಷವಾಯಿತೆಂದು ಯಾವ ಸಂಪಾದಕನೂ ಎಣಿಸುವುದಿಲ್ಲ. ಅಲ್ಲದೆ, ಸಂಶೋಧನಾತ್ಮಕವಾದ ಈ ರೀತಿಯನ್ನನುಸರಿಸಿ ಅಚ್ಚು ಮಾಡಿರುವ ಉದ್ಗ್ರಂಥಗಳ ಪರಿಯೇ ಬೇರೆ; ಸರ್ವಜನಾದರಣೀಯವಾದ, ಪಾಮರ ಪ್ರಿಯವಾದ ಸಣ್ಣ ಪುಟ್ಟ ಈ ಭಕ್ತಿಗೀತೆಗಳ ಪರಿಯೇ ಬೇರೆ. ಹೀಗೆ ಮಾಡುವುದರಿಂದ ತಕ್ಕಮಟ್ಟಿಗೆ ಶುದ್ಧ ಪಾಠವಿರಬಹುದಾದ ಒಂದು ಅಂಶವು ವ್ಯಕ್ತವಾಗುವುದಲ್ಲದೆ, ಅದು ಯಾವ ಯಾವ ರೂಪವನ್ನು ತಾಳಿರುತ್ತದೆ, ಎಂಬ ಸಂಗತಿಯೂ ವಿದಿತವಾಗುವುದು. ಅದರ ಆಧಾರದ ಮೇಲೆ, ಹಾಗೆ ಕಾಲಕಾಲಕ್ಕೆ ಮಾರ್ಪಾಡಾಗಲು ಕಾರಣವೇನೆಂಬುದನ್ನು ಭಾಷಾ ಚರಿತ್ರೆಯ ದೃಷ್ಟಿಯಿಂದ ವಿಚಾರ ಮಾಡಿದಲ್ಲಿ, ದಾಸರ ಕಾಲದಲ್ಲಿಯೂ ಮತ್ತು ಅದರ ತರುವಾಯವೂ ಬಳಕೆಯಲ್ಲಿರಬಹುದಾದ ಕನ್ನಡ ಭಾಷೆಯ ಲಕ್ಷಣಗಳೂ ಸೂಕ್ಷ್ಮವಾಗಿ ಗೋಚರವಾಗುತ್ತವೆ.

ಈ ಕೃತಿಗಳ ಭಾಂಡಾರವನ್ನು ಮುಂದಿಟ್ಟುಕೊಂಡು ಅಭ್ಯಾಸ ಮಾಡಿದಲ್ಲಿ, ದಾಸವರ್ಯರ ಕಾಲದಲ್ಲಿ ಕರ್ಣಾಟಕದ ಸಾಮಾಜಿಕ ಜೀವನವು ಹೇಗಿತ್ತು, ದಾಸವರ್ಯರು ಕೈಕೊಂಡ ಕಾರ್ಯದ ಉದ್ದೇಶವೇನು, ಅವರ ದಾರಿ ಯಾವುದು, ಅವರ ಬೋಧೆಯ ತಿರುಳೇನು, ಅವರು ಸಾಧಿಸಿರುವ ಗುರಿ ಯಾವುದು ಎಂಬ ಹಲವಾರು ಅಂಶಗಳು ವ್ಯಕ್ತವಾಗುವುವು. ಅಲ್ಲದೆ, ಇವುಗಳನ್ನು ದಾಸವರ್ಯರು ಪ್ರಚಾರಗೊಳಿಸುವ ಸಂದರ್ಭದಲ್ಲಿ, ಎಷ್ಟು ಮಟ್ಟಿಗೆ ಸಂಸ್ಕೃತದಲ್ಲಿರುವ ಮಧ್ವಮತೀಯ ಗ್ರಂಥಗಳ ತತ್ವಗಳನ್ನು ಕನ್ನಡದಲ್ಲಿ ಸಾರಿ ಹೇಳಿದ್ದಾರೆಂಬ ಅಂಶವನ್ನೂ ಆಳವಾಗಿ ಅಭ್ಯಸಿಸಬೇಕಾಗಿದೆ. ಈ ಒಂದು ಘನವಾದ ಕಾರ್ಯವನ್ನು ಉಭಯ ಭಾಷಾ ವಿದ್ವಾಂಸರಾದವರು ಎಷ್ಟು ಬೇಗ ಕೈಕೊಂಡರೆ, ಅಷ್ಟು ಸಂತೋಷ. ಏಕೆಂದರೆ, ಶ್ರೀಪಾದರಾಯರು ಹಾಕಿಹ ಮೇಲ್ಪಂಕ್ತಿಯ ಉದ್ದೇಶವೇ ಇದು. ಜನಸಾಮಾನ್ಯರಿಗೆ ನೇರವಾಗಿ ಅರ್ಥ ಮಾಡಿಕೊಳ್ಳಲು ಕಷ್ಟವೆನ್ನಿಸುವ ಸಂಸ್ಕೃತ ಭಾಷೆಯಲ್ಲಿದ್ದ ಮಧ್ವಮತೀಯ ಗ್ರಂಥಗಳ ಸಾರವನ್ನು ಪೂಜೆ ಸಮಾರಂಭಗಳಲ್ಲಿ ಒಂದು ಕಡೆ ಸೇರುತ್ತಿದ್ದ ಗಂಡಸರು ಮತ್ತು ಹೆಂಗಸರಿಗೆಲ್ಲ ಸುಲಭಸಾಧ್ಯವಾಗಿ ಅರ್ಥವಾಗಬೇಕೆಂದೂ, ಆ ನೀತಿಬೋಧೆಯು ಬಾಧೆಯಾಗದಂತೆ ಕೇಳುವುದಕ್ಕೆ ಹಿತವಾಗಿಯೂ ಇಂಪಾಗಿಯೂ ಇರಬೇಕೆಂದೂ ಆಶಿಸಿ ಕನ್ನಡದಲ್ಲಿ ಕೀರ್ತನೆಯ ಅಭಿವೃದ್ಧಿಗೆ ಪ್ರೋತ್ಸಾಹವಿತ್ತು ಆದನ್ನು ಅವರು ಪ್ರಚಾರಕ್ಕೆ ತಂದರೆಂದು ಪ್ರತೀತಿ. ಆದ್ದರಿಂದ, ಸಂಸ್ಕೃತದ ಹೊಂಬೆಳಕಿನಲ್ಲಿ ಅವುಗಳನ್ನು ವಿಚಾರ ಮಾಡಬೇಕಾದುದು ಅತ್ಯಾವಶ್ಯಕವಾಗಿದೆ. ಆ ಬಳಿಕ, ಇವುಗಳಲ್ಲಿ ಕಂಡುಬರುವ ಸ್ವಭಾವಜನ್ಯವಾದ ವೈಶಿಷ್ಟ್ಯವನ್ನು ಪರಿಶೀಲಿಸಬಹುದು. ಜನ ಸಾಮಾನ್ಯರಲ್ಲಿ ಬಳಕೆಯಲ್ಲಿದ್ದ ನಾಣ್ನುಡಿಗಳನ್ನು ಎಷ್ಟುಮಟ್ಟಿಗೆ ಬಳಸಿದ್ದಾರೆಂಬುದು ಮನನೀಯವಾದುದು. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಧಾಟಿಯಲ್ಲಿ ಹೇಳಿದರೆ ಅದು ಜನರ ಮನಸ್ಸಿಗೆ ಹಿಡಿಸುವುದು ಎಂಬ ಪರಿಣತ ಜ್ಞಾನವಂತೂ ದಾಸವರ್ಯರಿಗೆ ವಿಶೇಷವಾಗಿತ್ತು. ಕೇವಲ ಸಂಸ್ಕೃತ ಭಾಷಾ ಸಾಮಗ್ರಿಯನ್ನು ಕನ್ನಡಕ್ಕೆ ತರ್ಜುಮೆ ಮಾಡುವುದರಲ್ಲಾಗಲಿ, ಅಥವಾ ಊರಿನವರೆಲ್ಲ ಮಧ್ವಮತೀಯರಾಗಿ ಬಾಳದಿದ್ದರೆ ಗತ್ಯಂತರವಿಲ್ಲವೆಂದಾಗಲಿ, ಅವರು ಡಂಗುರ ಬಾರಿಸಲಿಲ್ಲ. ಎಂದರೆ, ಸ್ವಮತ ಪ್ರಚಾರವನ್ನು ಪರಮತ ದೂಷಣೆಯ ಸಾಧನೋಪಾಯದಿಂದ ನೆರವೇರಿಸಲು ಕೈಕೊಂಡ ಕುರುಹುಗಳಾವುವೂ ಇವುಗಳಲ್ಲಿ ಕಾಣುವುದಿಲ್ಲ. ಇವೆಲ್ಲಕ್ಕೂ ಹೆಚ್ಚಾಗಿ ದಾಸರ ದೃಷ್ಟಿ

ಕೇವಲ ಪರಲೋಕ ಪ್ರಾಪ್ತಿಯ ಸಾಧನೆಯಲ್ಲಿಯೇ ಆಗಲಿ ಪರಮಾತ್ಮನ ಅನುಗ್ರಹ ಸಂಪಾದನೆಯಲ್ಲಿಯೇ ಆಗಲಿ ಸಿಕ್ಕಿ ಬೀಳದೆ ಜೀವನದ ನಾನಾ ಮುಖಗಳ ಕಡೆಗೆ ಹರಿದಿದೆ. ಇವುಗಳಿಗೆಲ್ಲ ಅಸಂಖ್ಯಾತವಾದ ಉದಾಹರಣೆಗಳನ್ನು ಕೊಡಬಹುದು.

ಕೃತಿಗಳ ಪರಿಚಯವನ್ನು ಮಾಡಿಕೊಂಡ ಬಳಿಕ, ಈ ಕೃತಿಕರ್ತರ ಜೀವನವನ್ನು ಅರಿಯಬೇಕೆಂಬ ಕುತೂಹಲವುಂಟಾಗುವುದು ಸ್ವಾಭಾವಿಕವಾದುದು. ಐತಿಹಾಸಿಕ ದೃಷ್ಟಿಯಿಂದಲೂ ಇದು ಅತ್ಯಗತ್ಯವಾದುದು. ದಾಸವರ್ಯರ ಭಕ್ತಿಗೀತಗಳು ಒಂದಲ್ಲ ಒಂದು ಬಗೆಯಾಗಿ ಭಾವಗೀತೆಗಳೇ ಸರಿ. ಅವುಗಳಲ್ಲಿ ಹಲವಾರು ಆಯಾ ದಾಸರಹೃದಯದಲ್ಲಿನ ಭಕ್ತಿಯು ಹೇಗೆ ಅರಳಿ ಹೂವಾಯಿತು ಎಂಬುದನ್ನು ತಿಳಿಸುತ್ತವೆ. ಪರಮಾತ್ಮನ ಸಂದರ್ಶನ ಲಾಭಕ್ಕಾಗಿ ಅವರು ಆತನನ್ನು ಮರೆಹೊಕ್ಕು ಬೇಡುವುದನ್ನೂ, ತಮ್ಮ ಕಣ್ಣಮುಂದೆಯೇ ನಡೆಯುವ ಅನಾಚಾರಗಳನ್ನು ಕಂಡು ಮರುಗುವುದನ್ನೂ, ಅರಿಯದ ಮಂದಿಗೆ ಸಮಾಧಾನ ಹೇಳಿ ಬುದ್ಧಿವಾದವನ್ನು ಹೇಳುವುದನ್ನೂ ತಿಳಿಯಪಡಿಸುತ್ತವೆ. ಆದ್ದರಿಂದ, ಆಯಾ ದಾಸವರ್ಯರ ಜೀವನ ಚರಿತ್ರೆಯೂ ತಕ್ಕಮಟ್ಟಿಗೆ ತಿಳಿದುಬಂದರೆ ನಮ್ಮ ಚಿತ್ತಾವನ್ನಾಕರ್ಷಿಸುವ ಅವರ ಪದಗಳ ಮೇಲ್ಮೆ ಮತ್ತಷ್ಟು ಹಿರಿದಾಗುತ್ತದೆ. ಈ ಕಾರ್ಯದಲ್ಲಿ ತೊಡಗುವಾಗ ನಮಗೆ ದಾಸವರ್ಯರ ವಿಷಯದಲ್ಲಿ ಅಲ್ಲಿ ಇಲ್ಲಿ ಕೇಳಿಬರುವ ದಂತಕಥೆಗಳು ಸ್ವಲ್ಪಮಟ್ಟಿಗೆ ಸಹಾಯಕವಾಗಬಲ್ಲವು. ಆದರೆ ಈ ದಂತಕಥೆಗಳನ್ನು ಉಪಯೋಗಿಸಿಕೊಳ್ಳುವಾಗ, ಸಂಶೋಧಕನಿಗೆ ಉಂಟಾಗುವ ಪ್ರಯಾಸ ಅಷ್ಟಿಷ್ಟಲ್ಲ. 'ಕತೆಗೆ ಕಾಲಿಲ್ಲ' ಎಂಬಂತೆ ಅನೇಕ ಕತೆಗಳನ್ನು ನಂಬುವುದಕ್ಕೆ ಆತನ ಮನಸ್ಸು ಹಿಂದೆಗೆಯಬಹುದು. ಅಲ್ಲಿ ಕಂಡುಬರುವ ಅನಿರೀಕ್ಷಿತವಾದ ಘಟನೆಗಳೂ ಅಲೌಕಿಕವಾದ ಸನ್ನಿವೇಶಗಳೂ, ಅಸಂಬದ್ಧವೆನ್ನಿಸುವ ಪ್ರಸಂಗಗಳೂ ಆತನ ವಿಚಾರಬುದ್ಧಿಗೆ ಹಿಡಿಸದೆ ಇರಬಹುದು. ಆದರೆ ಈ ಕತೆಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಗ್ರಾಹ್ಯವಾದ ಭಾಗ ಯಾವುದು ಗ್ರಾಹ್ಯವಲ್ಲದ ಭಾಗ ಯಾವುದು ಎಂಬ ಪ್ರಶ್ನೆಯಂತೂ ಬಂದೇ ಬರುತ್ತದೆ. ಆದ್ದರಿಂದ ಈ ಜನಜನಿತವಾದ ಕತೆಗಳನ್ನು ಹೇಗೆ ಮತ್ತು ಎಷ್ಟು ದೂರ ಬಳಸಿಕೊಳ್ಳಬೇಕೆಂಬ ಒಂದು ಎಲ್ಲೆ ಕಟ್ಟನ್ನು ವಿಧಿಸಲೇಬೇಕು. ಐತಿಹಾಸಿಕ ವಿಷಯಗಳನ್ನೇ ಮುಖ್ಯ ಆಧಾರವನ್ನಾಗಿ ಇಟ್ಟುಕೊಂಡು, ಆಯಾ ದಾಸರುಗಳ ಕೀರ್ತನೆಗಳಲ್ಲಿ ಕಂಡುಬರುವ ಆತ್ಮಚರಿತ್ರೆಗಳ ಬೆಳಕಿನಲ್ಲಿ, ಈ ಕತೆಗಳನ್ನೂ ವಿಚಾರ ಮಾಡಿ ನೋಡಿದರೆ, ಅಲ್ಪಸ್ವಲ್ಪವಾದರೂ ವಾಸ್ತವಿಕಾಂಶವು ಗೊತ್ತಾಗುವ ಸಂಭವವುಂಟು. ಆದ್ದರಿಂದ, ಹರಿದಾಸರ ಕೀರ್ತನೆಗಳ ಸಂಗ್ರಹವು ಎಷ್ಟು ಅಗತ್ಯವೋ ಅವರ ಬಗ್ಗೆ ಪ್ರಚಾರದಲ್ಲಿರುವ ದಂತಕಥೆಗಳ ಸಂಗ್ರಹವೂ ಅಷ್ಟೇ ಅಗತ್ಯವಾದುದು.

ದಾಸವರ್ಯರ ಕೃತಿಗಳ ಅವಲೋಕನದಲ್ಲಿ ಕಂಡುಬರುದ ಅಂಶಗಳನ್ನೆಲ್ಲ ನೋಡಿದಲ್ಲಿ, ಸಾಹಿತ್ಯ ಮತ್ತು ಸಂಗೀತಗಳಿಗೆ ಅವುಗಳಿಂದ ಆಗಿರುವ ಉಪಕಾರ ಅಷ್ಟಿಷ್ಟಲ್ಲ. ಈ ಸೇವಾ ಕಾರ್ಯಗಳು ಪರೋಕ್ಷವಾಗಿ ನೆರವೇರಿರಬಹುದು. ಆದರೆ, ಇಡೀ ಪ್ರಾಚೀನ ಕನ್ನಡ ಸಾಹಿತ್ಯದ ಇತಿಹಾಸವನ್ನು ನೋಡಿದರೆ ಈ ಬಗೆಯಾದ ಸಾಹಿತ್ಯ ಸೇವೆಯೇ ಹೆಚ್ಚು ಎನ್ನಬೇಕು. ಶಿವಶರಣರ ವಚನಗಳು, ಹರಿಹರನ ರಗಳೆಗಳು, ಕಡೆಗೆ ಪಂಪ, ರನ್ನ ಮೊದಲಾದ ಮಹಾ ಕವಿಗಳ ಪೌರಾಣಿಕ ಗ್ರಂಥಗಳು ಆಯಾ ಮತಗಳ ಭಾವನೆಗಳನ್ನು ವ್ಯಕ್ತಪಡಿಸಿದಾಗ್ಗೂ, ಅವುಗಳಿಂದ ಕನ್ನಡ ಸಾಹಿತ್ಯವೂ ಅಭಿವೃದ್ಧಿಯಾಗಿಲ್ಲವೆ? ಆ ಮೇರೆಗೆ ದಾಸವರ್ಯರ ಕೀರ್ತನೆಗಳಿಗೂ ನಮ್ಮ ಸಾಹಿತ್ಯದಲ್ಲಿ ಒಂದು ಗಣ್ಯವಾದ ಸ್ಥಾನವಿದೆಯೆಂಬುದನ್ನು ಹೆಚ್ಚು ಸಾಧಿಸಬೇಕಾಗಿಲ್ಲ. ಸಂಗೀತ ಪ್ರಪಂಚದಲ್ಲಿಯಂತೂ ದಾಸರ ಕೀರ್ತನೆಗಳ ಪ್ರಾಶಸ್ತ್ಯವನ್ನು ವಿವರಿಸಿ ಹೇಳಬೇಕಾಗಿಲ್ಲ. ಸಂಗೀತ ಪಾಠದ ಪ್ರಾರಂಭದಲ್ಲಿಯೇ ಪುರಂದರದಾಸರ ಪಿಳ್ಳಾರಿ ಗೀತೆಯನ್ನು ಹೇಳಿಕೊಡುವ ಪದ್ಧತಿ ಇಂದಿಗೂ ನಡೆದುಕೊಂಡು ಬರುತ್ತಿದೆ.

ಮುಖ್ಯವಾಗಿ, ದಾಸ ಸಾಹಿತ್ಯವನ್ನು ಯಾವ ಮಾರ್ಗವನ್ನನುಸರಿಸಿ ಸಂಶೋಧನೆ ನಡೆಯಿಸಬೇಕೆಂಬುದನ್ನೂ, ದಾಸರ ಕೀರ್ತನೆಗಳಂತಹ ಅಮೂಲ್ಯವಾದ ಪದಗಳನ್ನು ಹೇಗೆ ಸಂಗ್ರಹಿಸಬೇಕೆಂಬು

ದನ್ನೂ ಅವುಗಳ ಬಗ್ಗೆ ಎಂತಹ ವಿಚಾರ ವಿಮರ್ಶೆಗಳು ನಡೆಯಬೇಕೆಂಬುದನ್ನೂ, ದಾಸವರ್ಯರ ಜೀವನಕ್ಕೂ ಅವರ ಕೃತಿಗಳಿಗೂ ಇರುವ ಸಂಬಂಧವನ್ನು ಹೇಗೆ ತಿಳಿಯಬಹುದೆಂಬುದನ್ನೂ ಕುರಿತು ಸಂಗ್ರಹವಾಗಿ ನಾಲ್ಕು ಮಾತುಗಳನ್ನು ಈ ಲೇಖನದಲ್ಲಿ ಹೇಳಲು ಪ್ರಯತ್ನ ಪಟ್ಟಿದೆ. ಪ್ರತಿಯೊಂದು ವಿಷಯವನ್ನೂ ಉದಾಹರಣೆಗಳ ಸಮೇತ ವಿಚಾರ ಮಾಡಿದ ಹೊರತು ಈ ಕಾರ್ಯ ಪೂರ್ತಿಯಾಗುವುದಿಲ್ಲ ಎನ್ನುವುದು ಖಂಡಿತವಾದುದು. ದಾಸವರ್ಯರ ಕೀರ್ತನೆಗಳನ್ನು ಆಧ್ಯಾತ್ಮಿಕ, ಐತಿಹಾಸಿಕ ಮತ್ತು ಸಾಹಿತ್ಯಗಳ ದೃಷ್ಟಿಯಿಂದ ಕೂಲಂಕಷವಾಗಿ ವಿಚಾರ ಮಾಡಬೇಕು. ಈ ವಿಚಾರದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಒಟ್ಟುಗೂಡಿ ಈ ಕೆಲಸವನ್ನು ನಡೆಸಬೇಕು.

'ಸೂಕ್ತಿ ಪಂಚಕಂ'

ಚಂ॥ ಪಿರಿಯರ ಚಿತ್ತಮಂ ತವಿಸಿ ಪೆರ್ಮೆಯಿನೊಲ್ಲದೆ ಕಾಡಿ ವಿತ್ತಮಂ
ಬರಿದೆನಿಸುತ್ತೆ ಕಂಡವರೊಳಾಡುತೆ ಪಾಡುತೆ ನೀಗಿ ಪೊಳ್ತುಮಂ ।
ಪರಿಕಿಸದಿಂತು ಕೀಳ್ತೆರದ ದುಸ್ಸಹಮಾಸದೆ ಗಾಸಿಯಾಗಲೇಂ !
ಬರೆವರೆ ರಾಯನಶ್ವಮಿದುಗರ್ದಭಮಾದುದು ಕಾಲದೇಳ್ಗೆಯಿಂ ೧
ಪರಿಮಿತಿಯಿಲ್ಲದಿರ್ಪ ಗುರುಭಕ್ತಿಯನೊಲ್ಲದೆ ಶಿಷ್ಟಮಾರ್ಗಮಂ
ಪರಿಹರಿಸುತ್ತಮಾ ನರಕಕಾರಣ ದುರ್ಗುಣ ಶಿಕ್ಷಣಂಗಳಂ ।
ಮರುಳಿನಲಾಶಿಸಲ್ಕದೆ ದುರಾಶೆಯಬಾಳ್ವಿಗೆ ಬಾಳೆನಿಪ್ಪೊಡಂ
ಬರೆವರೆ ರಾಯನಶ್ವಮಿದು ಗರ್ದಭಮಾದುದು ಕಾಲದೇಳ್ಗೆಯಿಂ ೨
ಪಿರಿದೆನೆ ಬೋಧನಾಮೃತದೆ ಜೀವಸಮಾರಿದ ಚಿತ್ತಭೂಮಿಯೊಳ್
ಪರಿದುರೆನಾಂದು ಬೇರೊಡೆದು ವರ್ಧಿಸೆ ನೀತಿ ಲತಾ ಪ್ರಸೂನಮಂ ।
ಜರಿಯೆನೆ ಸ್ವಾದಂ ವರಸರಸ್ವತಿಪೂಜೆಗೆ ಸಲ್ಲುಮಾದೊಡಂ
ಬರೆವರೆ ರಾಯನಶ್ವಮಿದು ಗರ್ದಭಮಾದುದು ಕಾಲದೇಳ್ಗೆಯಿಂ ೩
ಗುರುವರನೆನ್ನಲೇನದುವೆ ಗೌರವಮೋ ! ಬಗೆಯಲ್ಕುರೂತ್ತಮಂ
ಪರಿಕಿಸಿ ಪೇಳ್ವ ಬೋಧನೆಯ ನಾನದ ಶಿಷ್ಯನೆ ತೋರ್ಕೆಗಾದೊಡಂ ।
" ಗುರು ! ಗುರು ! " ಎಂದೆನಲ್ಕದುವೆ ಪಂದಿಯ ಕುಸ್ತನ ಮಾಗದಿರ್ಕುಮೋ
ಬರೆವರೆ ರಾಯನಶ್ವಮಿದು ಗರ್ದಭಮಾದುದು ಕಾಲದೇಳ್ಗೆಯಿಂ ೪
ಗುರುವರನಿಂದನುಗ್ರಹಮನಾಂತಿರೆ ಶಿಷ್ಯನ ಕಲ್ತಕಲ್ಪಿಯೇ
ಸರಸತಿಯೊಲ್ಮೆಯಿಂ ಫಲಿಸಲಾಫಲಮೇ ಚಿರಸೇವ್ಯಮಪ್ಪೊಡಂ ।
ಗುರುವರ ನಿಂದೆ[illegible]ಗದರಿಂ ತಿರೆಯೊಳ್ಪತಿತಂ ತ್ರಿಶಂಕುವಂ
ದಿರೆಯಿರೆ ರಾಯನಶ್ವಮಿದು ಗರ್ದಭಮಾದುದು ಕಾಲದೇಳ್ಗೆಯಿಂ ೫

—ಎಂ. ಶಂಕರನಾರಾಯಣಭಟ್ಟ, ವಿದ್ವಾನ್.

ಸಾಹಿತಿ ಮತ್ತು ಅವನ ಸ್ಥಿತಿ

ಶ್ರೀ. ಅರ್ಚಿಕ ವೆಂಕಟೇಶ

ಸಾಹಿತ್ಯಾಕಾಶದಲ್ಲಿ ನೆಗೆದು, ನೂರು ನೋಟಗಳನ್ನು ನೋಡಿ, ಸಹಸ್ರ ಮುಖದಲ್ಲಿ ಹಾಡಿ ಲಕ್ಷೋಪಲಕ್ಷ ದೃಶ್ಯಗಳನ್ನು ನಿರ್ಮಿಸಬಲ್ಲ ಸಾಹಿತ್ಯ ಬ್ರಹ್ಮನ ಸೃಷ್ಟಿಯತ್ತ ಕಣ್ಣು ಹೊರಳಿಸಿದರೆ ಇಂದು ಕಂಡುಬರುವುದೇನು? ರಸ ನಿಷ್ಪತ್ತಿಯ ಈ ಬುಗ್ಗಗೇಕೆ ಭೀಕರ ಮೌನ? ದಟ್ಟವಾದ ನಿರಾಶೆಯ ಕಾರ್ಮುಗಿಲ್ ಕಣ್ಗಡ್ಡವಾಗಿ ತೋರುವ ಕಾರಣವೇನು? ಸೌಂದರ್ಯದ ನೆಲೆವೀಡು, ಶಾಂತಿಯ ತವರ್ಮನೆ, ರಸರುಚಿಯ ಆಡುಂಬೊಲವಾದ ಸಾಹಿತ್ಯ ಕ್ಷೇತ್ರದಲ್ಲಿ ಇಂದೇಕೆ ಈ ಬಗೆಯ ಶ್ಮಶಾನ ಶಾಂತಿ?

ಇದು ಕೇವಲ ಕಲ್ಪನೆಯ ಮಾತಲ್ಲ. ಕಣ್ಣಿಗೆ ಕಾಣುವ ವಿಪ್ಲವ ನೋಟದ ವೈಖರಿ. ಎಲ್ಲೆಲ್ಲೂ ಆಶಾದಾಯಕ ಚಿಹ್ನೆ ಮೂಡುವ ಕುರುಹುಗಳು ಕಾಣುತ್ತಿಲ್ಲ. ಕತ್ತಲೆಯ ಮೊತ್ತದಲ್ಲೇ ಸಾಗುತ್ತಿದೆ ಸಾಹಿತಿಯ ಬಾಳು—ಬೀಳಿನ ದಾರಿ.

ಐಶ್ವರ್ಯದ ಮಹಾಮೇರುವಿನಮೇಲೆ ಕುಳಿತುಕೊಳ್ಳಬೇಕೆಂದು ಬಯಸುವುದು ಹುಚ್ಚನ ಮಾತು ಒಂದು ದೃಷ್ಟಿಯಲ್ಲಿ. ಆದರೆ ಐಶ್ವರ್ಯವಿಲ್ಲದಿದ್ದರೆ ಹೋಗಲಿ ಹೊಟ್ಟೆ ಬಟ್ಟೆಗೆ ಬೆಳಗಾದರೆ ಹೋರಾಟ ನಡೆಯುವುದಾದರೆ ಬಾಳೆಲ್ಲ ಈ ಯುದ್ಧದಲ್ಲೇ ನಶಿಸಿ ಹೋಗುವುದಷ್ಟೆ. ಬದುಕಿನ ಚಿಂತೆ ಮೈತುಂಬಿ ನಿಂದಾಗ ಎಲ್ಲಿಯ ಸಾಹಿತ್ಯ? ಎಲ್ಲಿಯ ಸೌಂದರ್ಯ?

ಇಂದು ಈ ಸಮಸ್ಯೆ ಸಾಮಾನ್ಯವಾಗಿ ಭಾರತೀಯ ಸಾಹಿತಿಗಳದಾಗಿದೆ ಎನ್ನಬಹುದು. ಎಲ್ಲೋ ಹಲಕೆಲವರು ಹಣವಂತರಿರಬಹುದು; ಗ್ರಂಥ ನಿರ್ಮಾಣದಿಂದ 'ಐಶ್ವರ್ಯ ಪಡೆದಿರಬಹುದು. ಆದರೆ ಅಂಥವರ ಸಂಖ್ಯೆ ತೀರ ವಿರಳ, ರವೀಂದ್ರನಾಥ ಠಾಕೂರರ ಹಾಗೆ ಕೀರ್ತಿಯಾಗಲೀ ಹಣವಾಗಲೀ ಬರುವುದು ಎಲ್ಲರಿಗೂ ಎಲ್ಲಿ ಸಾಧ್ಯವಾದೀತು?

ಸರಸ್ವತಿಗೂ ಲಕ್ಷ್ಮಿಗೂ ಮೈತ್ರಿ ಸಾಧ್ಯವಿಲ್ಲವೆಂದು ಅನೇಕ ಜನ ಹಳೆತಲೆಯವರ ಅಭಿಪ್ರಾಯ. ಅದು ಎಷ್ಟರ ಮಟ್ಟಿಗೆ ಸತ್ಯ ಎಂಬುದನ್ನು ತಿಳಿಯಬೇಕಾದರೆ ಸರಸ್ವತೀ ಆರಾಧಕರಾದ ಸಾಹಿತಿಗಳನ್ನು ಕೇಳಬೇಕು. ಕೇಳುವುದೇನು ಬಂತು—೧೦೦ಕ್ಕೆ ೯೦ ರಷ್ಟು ಸಾಹಿತಿಗಳು ಅಹನ್ಯಹನಿ ಕಾಲಕ್ಷೇಪ ಗೈಯುವ ಸ್ಥಿತಿಯನ್ನು ದಾಟಲ್ಲ. ದಾಟುವ ಲಕ್ಷಣಗಳೂ ಬರಗಾಲಕ್ಕೆ ಆಹ್ವಾನವೀಯುವ ಮಳೆಯಂತೆ ಎಲ್ಲೋ ಮರೆಯಾಗುತ್ತಿವೆ.

ಕನ್ನಡ ಸಾಹಿತಿಗಳ ವಿಷಯಕ್ಕಂತೂ ಪ್ರತ್ಯೇಕವಾಗಿ ಬರೆಯುವ ಅಗತ್ಯವೇ ಇಲ್ಲ. ನುಡಿ, ನಾಡುಗಳ ಸೇವೆಗೆಂದು ಸಿದ್ಧರಾಗುವವರೆಲ್ಲ ಅರೆಹೊಟ್ಟೆ ಅರೆಮೈಗೆ ಸಿದ್ಧರಾಗಿಯೇ ಕಣಕ್ಕಿಳಿಯುವ ಸ್ಥಿತಿಯವರೇ. ಸಾಹಿತ್ಯ ಸೇವೆಯನ್ನೇ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತೇನೆಂದು ಯಾರಾದರೂ ಅಂದರೆ "ಹುಚ್ಚಾಸ್ಪತ್ರೆಗೆ ಸೇರಿಸಿ" ಎಂದು, ಯೋಚಿಸದೆಯೇ ಧಾರಾಳವಾಗಿ ಹೇಳುವಂತಿದೆ ನಮ್ಮ ಇಂದಿನ ಸ್ಥಿತಿ. ಈ ದುರ್ದಿನ ಎಂದು ಮರೆಯಾಗುವುದೋ? ಸಾಹಿತಿಯೂ ಎಂದು ಚೆನ್ನಾಗಿ ಬದುಕುತ್ತಾನೋ? ಅವನಿಗೂ ಒಂದು ಉಚ್ಛ್ರಾಯದ ಕಾಲವಿದೆಯೋ? ಎಂದು ಕೌತೂಹಲಯುಕ್ತ ಪ್ರಶ್ನಮಾಲಿಕೆ ತನ್ನಿಂದ ತಾನೇ ಹೊಮ್ಮುವುದು.

ಇತ್ತೀಚಿಗೆ ಭಾರತಕ್ಕೆ ಬಂದ ಸುಪ್ರಸಿದ್ಧ ಆಂಗ್ಲ ಕಾದಂಬರಿಕಾರರಾದ ಈ. ಎಂ. ಫಾರ್ಸ್ಟರ್ ಅವರು ಭಾರತೀಯ ಬರೆಹಗಾರರ ಬಗ್ಗೆ ತಮ್ಮ

ಅಭಿಮತವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ.

"I have for a long time been interested in Indian writers···Now I have come to India and have the advantage of meeting many of my Indian colleagues in person, and of hearing from them what they are producing in their own vernaculars. I am much impressed by the volume and the variety of their work.

"But one thing disttresses me, and that is the insufficiency of the payments which as a rule they receive. I hope that in future they may be able to form some sort of Authors' organisation, and procure better terms.

"An author's work may be spiritual, but he himself is of flesh and blood, and he has to live."

ಸಾಹಿತಿ ಬದುಕಬೇಕು. ಅನಂತರ ಅಧ್ಯಾತ್ಮವಾದ ಪ್ರಾರಂಭವಾಗಲಿ. ಆತ ಬದುಕುವ ದಾರಿ ಏನು ? ಈ ಬಗ್ಗೆ ಫಾರ್ಸ್ಟರ್ ಅವರು ಹೇಳಿದ ಮಾತು ಅಕ್ಷರಶಃ ಸತ್ಯ—ನಿತ್ಯ.

ಆಂಗ್ಲ ಸಾಹಿತಿಗಳ ಸ್ಥಿತಿ ನಮ್ಮಂತಿಲ್ಲ. ಅವರು ಪುಸ್ತಕದಿಂದಲೇ ಬೇಕಾದಷ್ಟು ಹಣಗಳಿಸಿ ತಮ್ಮ ಬಾಳನ್ನು ನೆಮ್ಮದಿಮಾಡಿಕೊಳ್ಳಲು ಸಾಮರ್ಥ್ಯವುಳ್ಳವರಾಗಿದ್ದಾರೆ. ಅವರಿಗಿರುವಂತೆ ನಮ್ಮ ಬರೆಹಗಾರರ ಜೀವನಮಟ್ಟವೂ ಏರಬೇಕೆಂದು ಬಯಸುವುದು ಅಪರಾಧವಲ್ಲ; ಆದರೆ ಅದರ ಸಾಧ್ಯಾಸಾಧ್ಯತೆಗಳ ಹಾದಿಯಲ್ಲಿ ಇರುವ ತೊಡಕುಗಳೇನೆಂಬುದನ್ನು ನಾಡವರು ಅರಿಯಬೇಕು.

ಕನ್ನಡ ಸಾಹಿತಿಗಳು ಆರ್ಥಿಕ ದುರಂತದಲ್ಲಿ ಸಿಕ್ಕು ನರಳುತ್ತಾರೆಂಬ ಬಗ್ಗೆ ಒಂದು ಉಲ್ಲೇಖವನ್ನು ಇಲ್ಲಿ ಮಾಡುವುದು ಸೂಕ್ತವೆಂದು ತೋರುತ್ತದೆ. ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರೂ, ಕನ್ನಡದ ಸಿದ್ಧಪ್ರಸಿದ್ಧ ಬರೆಹಗಾರರೂ ಆದ ಶ್ರೀಮಾನ್ ಅ. ನ. ಕೃಷ್ಣರಾಯರು ತಮ್ಮ "ನನ್ನನ್ನು ನಾನೇ ಕಂಡೆ" ಪುಸ್ತಕದಲ್ಲಿ ಹೇಳಿದ ಈ ಮಾತುಗಳನ್ನೇ ನೋಡಿ.

"ನಿಮ್ಮದು ಇದುವರೆಗೆ ೨೦ ಪುಸ್ತಕಗಳವರೆಗೆ ಅಚ್ಚಾಗಿದೆಯಲ್ಲವೆ?"

"ಹೌದು"

"ಹಾಗಾದರೆ ನೀವು ಇದುವರೆಗೆ ಸಾವಿರಾರು ರೂಪಾಯಿಗಳನ್ನು ಸಂಪಾದಿಸಿರಬಹುದು."

"ಈ ಮನೆ ನೋಡಿ ಹೇಳುತ್ತಿದ್ದೀರಾ? ಇದನ್ನು ನಾನು ಕಟ್ಟಲಿಲ್ಲ; ನಮ್ಮ ತಂದೆಯವರು ಕಟ್ಟಿದರು. ನನ್ನ ಆಸ್ತಿ ಎಂದರೆ ನೀವು ನೋಡುತ್ತಿರುವ ಈ ಪುಸ್ತಕ ರಾಶಿ"

"ನಿಮ್ಮ ಪುಸ್ತಕಗಳಿಂದ ಏನೂ ಬರಲಿಲ್ಲವೇ?

"ಬಂದಿವೆ ಡಾಕ್ಟರ್ ಬಿಲ್ಲುಗಳು."

"ನಿಮ್ಮ ಪುಸ್ತಕಗಳು ಚೆನ್ನಾಗಿ ಮಾರಾಟವಾಗುತ್ತವಲ್ಲಾ"

"ಅದನ್ನು ಕೇಳಿ ಸಂತೋಷವಾಗಿದೆ."

"ಈ ಪರಿಸ್ಥಿತಿಯಲ್ಲಿ ಇನ್ನೆಷ್ಟು ದಿವಸ ಸಾಹಿತ್ಯ ಸೇವೆ ಮಾಡಬಲ್ಲಿರಿ?"

"ಉಸಿರು ಮೆತ್ತಗಾಗುವತನಕ.

["ನನ್ನನ್ನು ನಾನೇ ಕಂಡೆ" ಪುಟ ೫]

ಮೇಲೆ ಕೊಟ್ಟ ಸಂಭಾಷಣೆಯಲ್ಲಿ ಕನ್ನಡದ ಪ್ರಖ್ಯಾತ ಬರೆಹಗಾರರ ಸ್ಥಿತಿಯು ಹೃದಯ ವಿದ್ರಾವಕ ನೋಟ ಕಣ್ಣಿಗೆ ಕಟ್ಟುವಂತಿದೆ. ಇನ್ನು ನೂತನವಾಗಿ ಈ ಕ್ಷೇತ್ರಕ್ಕೆ ಕಾಲಿಡಬೇಕೆನ್ನುವವರ ಪಾಡೇನು?

ಇನ್ನೊಂದು ಗಮನಾರ್ಹವಾದ ಮಾತನ್ನೇ ನೋಡಿ:—

"ಸಮಾಜದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲೆತ್ನಿಸಿದ ತಾರಾನಾಥರು, ತಿ. ತಾ. ಶರ್ಮರು, ದ. ಕೃ. ಭಾರದ್ವಾಜರು, ಆಲೂರು ವೆಂಕಟರಾಯರು, ಉತ್ತಂಗಿ ಚೆನ್ನಪ್ಪನವರು, ಸುಬೋಧ ರಾಮರಾಯರು ಇವರ ಸೇವೆ ಎಷ್ಟು ಜನರ ಕಣ್ಣಿಗೆ ಬಿದ್ದಿದೆ ಹೇಳಿ. ಏತಕ್ಕೆ ಬಲ್ಲಿರಾ ? ಇವರಿಗೆ

ಶ್ರೀಮಂತಿಕೆ ಇಲ್ಲ..................ನಿಜವಾದ ಸೇವೆ, ತ್ಯಾಗ, ವೈರಾಗ್ಯಗಳಿಗೆ ಜನ ಬೆಲೆ ಕೊಡುವಂತಾಗ ಬೇಕು."

["ನನ್ನನ್ನು ನಾನೇ ಕಂಡೆ"]

ಆರ್ಥಿಕ ದುರಂತದಿಂದಾಗಿ ನಮ್ಮ ನುಡಿಸೇವಕರು ಮೆತ್ತಗಾಗುತ್ತಿದ್ದಾರೆ. ಇಲ್ಲಿಯವರೆಗೆ ಶ್ರದ್ಧಾಪೂರ್ವಕವಾಗಿ ದುಡಿದವರನೇಕರು ಪ್ರತಿನಿತ್ಯ ಹೋರಾಟ ನಡೆಯಿಸಿ, ಇಹಬಾಳಿನಲ್ಲಿ ತಮ್ಮ ಧ್ಯೇಯವನ್ನು ಕಾಣಲಾರದೆ ಕಣ್ಮರೆಯಾದರು. ಕನ್ನಡಭಾಷೆಯ ಉಳಿವಿಗೆ ಕಾರಣರಾದ ದಿವಂಗತ ಗಳಗನಾಥರು, ಕೆರೂರ್ ವಾಸುದೇವಾಚಾರ್ಯರು ಆರ್ಥಿಕ ಮುಗ್ಗಟ್ಟಿನಿಂದ ನೊಂದು ನುಚ್ಚಾದರು. ಇಂದು ಹೋರಾಡುತ್ತಿರುವ ಸಾಹಿತಿಗಳ ಹಣೆಬರೆಹವೆಲ್ಲ ಸರ್ವಸಾಮಾನ್ಯವಾಗಿ ಅದೇ ಆಗಿದೆ.

ಇದಕ್ಕೆ ಏನಾದರೂ ಪರಿಹಾರ ಮಾರ್ಗವಿಲ್ಲವೇ? ನಿಜವಾಗಿಯೂ ನಮ್ಮ ಸ್ಥಿತಿ ಇಷ್ಟು ಚಿಂತಾಜನಕವಾಗಿದೆಯೇ? ಎಂದು ಯೋಚಿಸಿದಲ್ಲಿ ಪರಿಸ್ಥಿತಿ ನಿಜವಾಗಿಯೂ ಅಷ್ಟು ಭೀಕರವಾಗಿಲ್ಲ. ದೀಪಾವಳಿ, ನವರಾತ್ರಿ ಹಬ್ಬಗಳಲ್ಲೂ, ವಾರ್ಷಿಕ ಗಣನೆಯ ಮುಗಿತಾಯದಲ್ಲೂ ವಿಶೇಷ ಸಂಚಿಕೆಗಳನ್ನು ಪ್ರಕಟಿಸಿ ಹೇರಳವಾಗಿ ಹಣಗಳಿಸುವ ಪತ್ರಿಕಾ ಸಂಪಾದಕರು ಲೇಖಕರಿಗೆ ಹಣ ಕೊಡುವುದಿಲ್ಲ. (ಇತ್ತೀಚೆಗೆ ಕೆಲವರು 'ಅಲ್ಪ' ವಾದರೂ ಕೊಡುತ್ತಿದ್ದಾರೆ) ಕೊಡುತ್ತೇವೆಂದು ಹೇಳಿ ಲೇಖನ ಒಯ್ದು, ಅದನ್ನು ಪ್ರಕಟಿಸಿ ಕೊನೆಗೆ ಪತ್ರಿಕೆಯನ್ನು ಕೊಡುವುದಕ್ಕೂ ಕೂಡ ಮರೆಯುತ್ತಾರೆ. ೧೦ರೂ. ಕೊಡುತ್ತೇವೆಂದು ಮಾತುಕೊಟ್ಟು ೩ ರೂ. ಗೆ ಚೆಕ್ ಕಳಿಸುವ ಸಂಪಾದಕರೂ ಉಂಟು. ಹಾಗೆ ಕಳಿಸಿದ ಚೆಕ್ಕನ್ನು ಸಂಪಾದಕರಿಗೇ ಹಿಂದಿರುಗಿಸಿದರೆ ಅದೂ ಇಲ್ಲ; ಮುಂದೆ ಹಣದ ಮಾತೇ ಇಲ್ಲ. ಇಂಥ ಪ್ರಸಂಗಗಳೂ ನಡೆಯುತ್ತವೆ. ಹೀಗಾಗಿ ನಂಬಿಕೆಯೆಂಬುದು ಪುಸ್ತಕದ ಮಾತಾಗಿದೆ. ಲೇಖಕರ ಸ್ಥಿತಿ ಈ ಎಲ್ಲ ದೃಷ್ಟಿಗಳಿಂದ ಶೋಚನೀಯವಾಗುತ್ತಿದೆ.

ಪಠ್ಯಪುಸ್ತಕ ಸಾಹಿತಿಗಳು ಒಂದು ರೀತಿಯಲ್ಲಿ ಪುಣ್ಯವಂತರು. ಇವರಿಗೆ ಸಾಹಿತ್ಯದಲ್ಲಿರುವ ಪ್ರಾಜ್ಞತೆಯಾಗಲಿ, ಭಾಷಾಪ್ರಭುತ್ವವಾಗಲಿ ಬೇಕಾಗಿಲ್ಲ. ದಾಸೋಹವ ಗೈಯುವುದಕ್ಕೆ ಕಲಿತು ಉತ್ತೀರ್ಣರಾದರೆ ಸಾಕು. ಸಾರ್ಥಕವಾಯಿತು ಜನ್ಮ. ಯಾರೂ ಎಲ್ಲೂ ಕೇಳದ ಪಠ್ಯಪುಸ್ತಕ ಸಾಹಿತಿಗಳೂ ಸಹಸ್ರಾರು ಹುಡುಗರ ಕೈಗೆ "ಅಭೂತಪೂರ್ವ ಸಾಹಿತ್ಯ" ಕೊಡುತ್ತಾರೆ. ಇದನ್ನು "ಅಸ್ತು" ಎನ್ನುವವರ ಮೌಢ್ಯವೆನ್ನಬೇಕೆ? ಅಥವಾ ನೈಜಸಾಹಿತ್ಯವೇ ಇದು ಎಂದು ಒಪ್ಪಬೇಕೆ?

ಪಠ್ಯಪುಸ್ತಕ ಸಾಹಿತಿಗಳ ಪುಸ್ತಕಕ್ಕೆ ಮನ್ನಣೆ ದೊರೆಯಬಾರದೆಂದಲ್ಲ. ಅವರಿಗೆ ಹೇಗಿದ್ದರೂ ಆ ಭಾಗ್ಯ ಸಿಕ್ಕಲೇಬೇಕು. ಆದರೆ ಕನ್ನಡ ಸಾಹಿತ್ಯಕ್ಕಾಗಿ ಸುಮಾರು ಎರಡು ದಶಕ ದುಡಿದವರಿಗೆ, ಎಲ್ಲ ತ್ಯಾಗ ಮಾಡಿದವರಿಗೆ ಒಮ್ಮೆಯಾದರೂ ಈ ಸೌಲಭ್ಯ ಸಿಕ್ಕಬಾರದೇನು ? ಸಾಹಿತ್ಯಕ್ಕಾಗಿಯೇ ದುಡಿದವರ ಪುಸ್ತಕ ಹುಡುಗರ ಭಾಷಾ ಜ್ಞಾನಕ್ಕೆ ಸಹಾಯಕವಾಗುವುದಿಲ್ಲವೇನು? ಅಂತೂ ಈ ಎಲ್ಲ ವಿಚಾರ ಗಮನಸಾರ್ಹವಲ್ಲವೇ?

ಇದರ ಹೊರತಾಗಿ ಇನ್ನೂ ಹಲವಾರು ಸಮಸ್ಯೆಗಳಿವೆ. ಓದುವವರ ಸಂಖ್ಯೆ ಕಡಮೆ. ಒಬ್ಬರು ಒಂದು ಪುಸ್ತಕ ಕೊಂಡರೆ ೧೦ ಜನ ಓದುವರು. ಇದೆಲ್ಲ ಸರಿ. ಆದರೆ ಪುಸ್ತಕ ಇಂದು ಮಾರಾಟವಾಗುವುದಿಲ್ಲ ಎಂದು ಯಾರೂ ಅನ್ನುವ ಸ್ಥಿತಿಯಲ್ಲಿಲ್ಲ. ಹಾಗಾದರೆ ಇನ್ನೇನು?

ನಾಡವರು ಇತ್ತ ಗಮನವೀಯಬೇಕು. ಪರಿಹಾರ ಮಾರ್ಗವನ್ನು ಕಾಣಬೇಕು. ಸಾಹಿತಿಯ ಸ್ಫೂರ್ತಿಯ ಸೆಲೆ ಬತ್ತದಂತೆ ನೋಡಿಕೊಳ್ಳಬೇಕು. ಸಾಹಿತಿ ಜನಾಂಗದ ಗುರು. ಅವನಿಂದ ನಾಡು ನಂದನವನವಾಗಬಲ್ಲುದು. ಹಾಗೆ ಮಾಡಿಸುವುದು ಜನತೆಯ ಗುರಿಯಾಗಬೇಕು.

ಒಮ್ಮೆ ರಷ್ಯದ ಸರ್ವಾಧಿಕಾರಿ ಸ್ಟ್ಯಾಲಿನ್ನರನ್ನು ಯಾರೋ ಒಬ್ಬರು:

"ಇದೇನು ಸಾಹಿತಿಗಳನ್ನೆಲ್ಲ ಕಲೆಹಾಕಿ ಅವರಿಗಾಗಿ ಇಷ್ಟು ಹಣ ವ್ಯಯಿಸುತ್ತಿದ್ದೀರಲ್ಲ; ಇದು ರಾಷ್ಟ್ರಕ್ಕೆ ಹಾನಿಯಲ್ಲವೋ? ಇವರಿಂದೇನು ಪ್ರಯೋ

ಜನ?" ಎಂದು ಕೇಳಿದರಂತೆ. ಅದಕ್ಕೆ ಸ್ಟ್ಯಾಲಿನ್ "ಪರವಾಯಿಲ್ಲ. ಎಷ್ಟು ಖರ್ಚಾದರೂ ಚಿಂತೆಯಿಲ್ಲ. ಇವರೆಲ್ಲರಲ್ಲಿ ಒಬ್ಬನಾದರೂ ಗಾರ್ಕಿಯಂಥ ಸಾಹಿತಿ ಉದಿಸಿದರೆ ಸಾಕು. ರಾಷ್ಟ್ರ ಅಭ್ಯುದಯ ಕಾಣಬಲ್ಲದು" ಎಂದುತ್ತರಿಸಿದರಂತೆ. ಸಾಹಿತ್ಯಕ್ಕೆ, ಸಾಹಿತಿಗಳಿಗೆ ಅಷ್ಟು ಮರ್ಯಾದೆ ಇದೆ ಅಲ್ಲಿ. ಅಂತೆಯೇ ರಾಷ್ಟ್ರನಿರ್ಮಾಪಕರಾದ ಸಾಹಿತಿಗಳು, ರಷ್ಯದ ಅಖಂಡಕೀರ್ತಿ ಸಾಹಸಗಳಿಗೆ ಕಾರಣರಾಗಿದ್ದಾರೆ.

ಒಟ್ಟಾರೆ ಸಾಹಿತಿಯಿಂದ ಮಹಾಮೇರು ಕೂಡ ಚಲಿಸಬಲ್ಲದು. ಆಗದವಮಾತು ಸಾಧ್ಯವಾಗಬಲ್ಲದು. ಆದರೆ ಅವನ ಅಂತಃಸ್ಫೂರ್ತಿ ಚಿಮ್ಮುವಂತೆ ಗೈಯುವ ಭಾರ ಜನಾಂಗದ್ದು. ಹಾಗೆ ಗೈದ ಜನಾಂಗ ಸ್ವಾತಂತ್ರ್ಯದ ಹೊನಲಲ್ಲಿ ಮಿಂದು, ಆನಂದದ ರಸದೂಟವನ್ನುಂಡು, ಭೂತಲದಲ್ಲಿ ಸ್ವರ್ಗವನ್ನು ತಂದು, ನರರೇ ನಾರಾಯಣರಾಗಿ ನಲಿಯುವುದರಲ್ಲಿ ಸಂದೇಹವೇನು?

ಧ್ಯೇಯ

ಅದೊ ! ಮಸಳುತಿದೆ ಗುರಿಯನಂತ ಕಾಲದ ಹಿಂದೆ
ದಣಿದು ತೇಗುವ ಜೀವ ಮರಳುತಿದೆ. ಸಹಿಸಬೇ–
ಕಂತೆ ಕೋಟಲೆ ಕೋಟಿಗಟ್ಟಲೆಯೆ, ವಹಿಸಬೇ–
ಕಂತೆ ನಿರವಧಿ ಕಾಲವನು. ತಿಳಿವು ಬರದಿಂದೆ.
ಮೂಡಣದಮೂಡು–ಮುಳುಗುಗಳ ತೆರೆಗಳಹಿಂದೆ
ಅಸ್ತವಾಯಿತು ಗುರಿಯು. ಕನಸುಗಳ ಗಾಳಿಗೋ–
ಪುರದಾಚೆ, ಸುಖದ ಮಳೆ ಬಿಲ್ಲೀಚೆ, ಇಲ್ಲಿಗೋ !
ಬೇಹಿನವರನು ಕಳಹು. ರಜನಿಕುಣಿಯುವುದು–ಮುಂದೆ
ದೂರ ಮಸುಳಿದ ಗುರಿಯ ನೋಡಿ. ದುಃಖಿಸಬೇಡ
ಮೊಗ್ಗೆಯಿರದೊಮ್ಮೆಗಲೆ ಸುಮನವಾದಂಕುರವು
ಸುಗ್ಗಿಯಲಿಸಹಸಿಗದು. ಬರುವೊಂದು ಕಾಲದಲಿ,
ನೆಲಮುಗಿಲು ಒಂದಾಗಿ ನಿಂತಿರುವದನು ನೋಡ !
ವಿಶ್ವಪತಿಯಾಗಿರುವ ಜೀವಕೆಲ್ಲಿಯಮರೆವು ?
ಸೂರ್ಯಚಂದ್ರರು ನರ್ತಿಸುವರದರ ಕಾಲದಲಿ !

—ವಿನಾಯಕ

ಬಾದಾಮಿಯ ಚಲುಕ್ಯ ಇಮ್ಮಡಿ ಪುಲಿಕೇಶಿಯ ಮೋಡಲಿಂಬದ ತಾಮ್ರಪಟ್ಟ

ಶ್ರೀ. ಗೋವಿಂದ ಪೈ

ಮುಂಬಯಿ ಆಧಿಪತ್ಯದ ಮಿರಜ ಸಂಸ್ಥಾನದಲ್ಲಿಯ ಮೋಡಲಿಂಬ ಎಂಬ ಊರಲ್ಲಿ ದೊರೆತ ಇದೊಂದು ತಾಮ್ರಶಾಸನವು ಕಳೆದ 1909 (?)ನೆಯ ಇಸವಿಯ ಮರಾಠಿ 'ಇತಿಹಾಸ ಸಂಗ್ರಹ'ದಲ್ಲಿ ಪ್ರಕಟವಾಯಿತು. ಅದರಲ್ಲಿಯ ಹಲವು ಅಶುದ್ಧಿಗಳನ್ನು ತಕ್ಕಮಟ್ಟಿಗೆ ತಿದ್ದಿದ ಅದರ ಒಕ್ಕಣೆ ಹೀಗದೆ—

೧) ಸ್ವಸ್ತಿ॥ ಜಯತಿ ಜಲದವೃಂದ ಶ್ಯಾಮ ನೀಲೋತ್ಪಲಾಭಃ ಸ್ಫು
೨) ರದುರುಮಣಿರತ್ನ ಸೃಕ್ಸಮಾವಿದ್ಧ ಕಂಠಃ। ಜಲಧರ ಇ
೩) ವ ವಿದ್ಯುದ್ಭ್ರಾಂತ ಮಧ್ಯೈಕದೇಶೋ ಧರಣಿಧರನಿರೋಧಾಸ್ಪಿನ್ನ
೪) ವಕ್ಷೋ ವರಾಹಃ॥ ಶ್ರೀ ಸ್ವಾಮಿ ಮಹಾಸೇನ ಪಾದಾನುಧ್ಯಾತಾನಾಂ ಮಾನವ್ಯ
೫) ಸಗೋತ್ರಾಣಾಂ ಹಾರಿತೀಪುತ್ರಾಣಾಂ ಅಗ್ನಿಷ್ಟೋಮಾಗ್ನಿಚಯನ ವಾ
೬) ಜಪೇಯ ಪೌಂಡರೀಕ ಬಹುಸುವರ್ಣಾಶ್ವಮೇಧಾವಭೃಥಸ್ನಾ
೭) ನ ಪವಿತ್ರೀಕೃತಶಿರಸಾಂ ಚಲುಕ್ಯಾನಾಂ ವಂಶಸಂಭೂತಃ ಚ
೮) ಲುಕ್ಯ ವಂಶಾಂಬರ ಪೂರ್ಣಚಂದ್ರಃ ಅಪರಿಮಿತ ವಿಕ್ರಮೋಪಾತ್ತ ವಿಪು
೯) ಲಯಶೋವಂತಃ ತಸ್ಯ ಕೀರ್ತಿವರ್ಮಣಃ ಪುತ್ರಃ ಹಿರಣ್ಯಗರ್ಭಸ್ಯಾಶ್ವಮೇ
೧೦) ಧಯಾಜಿನಃ ಪೌತ್ರಃ ಸ್ವಬಾಹು ವಿಕ್ರಮೋಪಾತ್ತರಾಜ್ಯಃ ಅನೇ
೧೧) ಕನೃಪತಿ ಪರಮೇಶ್ವರಃ ವೈಶಾಖ ಪೌರ್ಣಮಾಸ್ಯಾಂ ತಥಾ ಕೈದಮನೇ (?)
೧೨) ದೇವಗಣ ಸ್ವಾಮಿನೇ ಕಾಶ್ಯಪಸಗೋತ್ರಾಣಾಂ ಶಿಯರೇ ಗ್ರಾಮ
೧೩) ವಾಸಿನಾಂ ತಥೋ ಉದಕಪೂರ್ವ ಸಂಭೋಗಃ॥ ಬಹುಭಿರ್ವಸುಧಾ ಭುಕ್ತಾ ರಾ
೧೪) ಜನ್ಯೈಃ ಸಗರಾದಿಭಿಃ । ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತ
೧೫) ಸ್ಯ ತದಾ ಫಲಮ್ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಮ್।
೧೬) ಷಷ್ಟಿವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥....

ಈ ಒಕ್ಕಣೆಯನ್ನು ಪರಿಶೀಲಿಸುವಲ್ಲಿ ಹಾಗೂ ಇದನ್ನು ಬಾದಾಮಿಯ ಚಲುಕ್ಯರ ಇತರ ಶಾಸನಗಳೊಂದಿಗೆ ಹೋಲಿಸುವಲ್ಲಿ ಇದೂ ಅವರದೇ ಶಾಸನವೆಂದು ಸ್ಪಷ್ಟವಾಗುತ್ತದೆ. ಇದರೊಂದಿಗೆ ಅವರ ವರಾಹಮುದ್ರೆಯೂ ಇದೆಯಂತೆ, ಇದರ ಅಕ್ಷರಗಳೂ ಅವರ ಶಾಸನಗಳ ಅಕ್ಷರಗಳಂತೆಯೇ ಇವೆಯಂತೆ.[೧] ಆದರೆ ಇದರಲ್ಲಿ ಇಂತಹದೇ ಅರಸನ ಶಾಸನವೆಂದು ಆತನ ಹೆಸರನ್ನು ಹೇಳಿಲ್ಲವಾದರೂ, ಆತನ ವಂಶವನ್ನು "ಅಗ್ನಿಷ್ಟೋಮಾಗ್ನಿಚಯನ ವಾಜಪೇಯ

೧ ಇತಿಹಾಸ ಸಂಗ್ರಹ, I. ಪು. ೧೬.

ಪೌಂಡರೀಕ ಬಹುಸುವರ್ಣಾಶ್ವಮೇಧಾವಭೃತಸ್ನಾನ ಪವಿತ್ರೀಕೃತ" ಎಂದೂ, ಆತನನ್ನೇ 'ಕೀರ್ತಿವರ್ಮಣಃ ಪುತ್ರಃ' = ಕೀರ್ತಿವರ್ಮನ ಮಗನೆಂದೂ, 'ಹಿರಣ್ಯಗರ್ಭಸ್ಯಾಶ್ವಮೇಧ ಯಾಜಿನಃ ಪೌತ್ರಃ' = ಹಿರಣ್ಯ ಗರ್ಭನವನಾದ (ಅಂದರೆ ಹಿರಣ್ಯಗರ್ಭನ ಸಂತತಿಯವನಾದ)೨ ಅಶ್ವಮೇಧವನ್ನು ಮಾಡಿದಾತನ ಮೊಮ್ಮಗನೆಂದೂ ಹೇಳಿರುವುದರಿಂದ, ಬಾದಾಮಿಯ ಚಲುಕ್ಯ ಸಮ್ರಾಜನಾದ I ಪುಲಿಕೇಶಿಯ ಮಗನಾದ ಕೀರ್ತಿವರ್ಮನ ಮಗನು II ಪುಲಿಕೇಶಿ ಎಂಬುದನ್ನೂ, ಕೀರ್ತಿವರ್ಮನ ತಮ್ಮನಾದ ಮಂಗಲೇಶನ ಮಹಾಕೂಟಸ್ತಂಭ ಲೇಖದಲ್ಲಿ೩ (ಕ್ರಿ. ಶ. 602) ಅವರ ತಂದೆಯಾದ I ಪುಲಿಕೇಶಿಯನ್ನು ಹಿರಣ್ಯಗರ್ಭನ, ಅಂದರೆ ಬ್ರಹ್ಮನ, ಸಂತಾನವೆಂದೂ, ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಪೌಂಡರೀಕ, ಅಶ್ವಮೇಧಾದಿ ಯಾಗಗಳನ್ನು ಮಾಡಿದವನೆಂದೂ, II ಪುಲಿಕೇಶಿಯದೇ ಕಾಲದ (ಕ್ರಿ. ಶ. 634) ಐಹೊಳೆಯ ಶಿಲಾಶಾಸನದಲ್ಲಿಯೂ೪ ಅವನನ್ನು

ಭೂಶ್ಚ ಯೇನ ಹಯಮೇಧಯಾಜಿನಾ
ಪ್ರಾಪಿತಾವಭೃಥ ಮಜ್ಜನಂ ಬಭೌ ॥ ೮ ॥

ಅಶ್ವಮೇಧವನ್ನು ಮಾಡಿದವನೆಂದೂ ಹೇಳಿರುವುದನ್ನು ಇಲ್ಲಿ ಮನವರಿಸಿದರೆ, ಈ ಶಾಸನದಲ್ಲಿ ಹೆಸರು ಹೇಳದೆ 'ಅನೇಕ ನೃಪತಿ ಪರಮೇಶ್ವರಃ' ಎಂದಿಷ್ಟೇ ಸೂಚಿಸಿದ ಅರಸನಾದರೊ ಬಾದಾಮಿಯ ಚಲುಕ್ಯ ಸಮ್ರಾಜನಾದ II ಪುಲಿಕೇಶಿ ಎಂದು ಸಹಸಾ ವ್ಯಕ್ತವಾಗುತ್ತದೆ.

I ಪುಲಿಕೇಶಿ
(ಕ್ರಿ ಶ. ಸು. 550—566)

ಕೀರ್ತಿವರ್ಮ (ಕ್ರಿ. ಶ. 566—597) | **ಮಂಗಲೇಶ** (ಕ್ರಿ. ಶ. 597—608)

II ಪುಲಿಕೇಶಿ

I ಪುಲಿಕೇಶಿ ಕ್ರಿ. ಶ. 566ರಲ್ಲಿ ಕಾಲವಾಗುತ್ತಲೆ ಅವನ ಹಿರೇ ಮಗನಾದ ಕೀರ್ತಿವರ್ಮನು ಬಿಜಾಪುರ ಜಿಲ್ಲೆಯ ಬಾದಾಮಿಯಲ್ಲಿ ಪಟ್ಟವೇರಿದನು. ಕೀರ್ತಿವರ್ಮನು ಕ್ರಿ. ಶ. 597 ರಲ್ಲಿ ಕಾಲವಾಗುವಂದು ಅವನ ಮಗನಾದ II ಪುಲಿಕೇಶಿ ಚಿಕ್ಕವನಿದ್ದ ಕಾರಣವೇನೋ, ಅವನ ತಮ್ಮನೂ II ಪುಲಿಕೇಶಿಯ ಚಿಕ್ಕಪ್ಪನೂ ಆದ ಮಂಗಲೇಶನು ಪಟ್ಟಕ್ಕೆ ಬಂದನು. ಈತನಾದರೊ ಕ್ರಿ. ಶ. ಸು. 608 ರಲ್ಲಿ೫ ಆ ಪಟ್ಟವು II ಪುಲಿಕೇಶಿಗೆ ಹೋಗದೆ ತನ್ನ ಮಗನಿಗೆ ದೊರೆಯು

೨ Fleet's *Kanarese Dynasties* (*FKD*), ಪು 342.
೩ ಅದೇ, ಪು. 344 ಮತ್ತು 349.
೪ *Epigraphia Indica* VIII. ಪು. 237.
೫ FKD, ಪು. 348.

ಬೇಕೆಂದು ಸಾಧಿಸುತ್ತಲೆ, ಐಹೊಳೆಯ ಶಾಸನದಲ್ಲಿ ಹೇಳಿರುವಂತೆ—

ಸಾಸೂಯಮಾತ್ಮನಿ ಭವಂತಮತಃ ಪಿತೃವ್ಯಂ
ಜ್ಞಾತ್ವಾಪರುದ್ಧ ಚರಿತ ವ್ಯವಸಾಯ ಬುದ್ಧ್ಯಾ ॥ ೧೪ ॥
ಸ್ವತನಯಗತ ರಾಜ್ಯಾರಂಭಯತ್ನೇನ ಸಾರ್ಧಂ
ನಿಜಮತನು ಚ ರಾಜ್ಯಂ ಜೀವಿತಂ ಚೋಜ್ಝತಿ ಸ್ಮ ॥ ೧೫ ॥

ಅವರೊಳಗೆ ಒಳಯುದ್ಧವಾಗಿ ಅದರಲ್ಲಿ ಮಂಗಲೇಶನು ಮಡಿದನು. ಹೀಗೆ ಮಂಗಲೇಶನ ಅಧಿಕಾರವನ್ನು ಕಿತ್ತೊಗೆಯುತ್ತಲೆ, ಅದೇ ಶಾಸನದಲ್ಲಿ ಹೇಳಿರುವಂತೆ (ಪದ್ಯ ೧೬) II ಪುಲಿಕೇಶಿಯ ಸುತ್ತಲು 'ಜಗದಖಿಲಮರಾತ್ಯಂಧಕಾರೋಪರುದ್ಧಮ್' ಜಗತ್ತೆಲ್ಲವೂ ಶತ್ರುಗಳ ಮುತ್ತಿಗೆಯಿಂದ ಕಗ್ಗತ್ತಲಾಯಿತು. ಮತ್ತೂ ಅದೇ ಶಾಸನದಿಂದ (ಪ. ೧೭) ತಿಳಿವ ಮೇರೆಗೆ 'ಲಬ್ಧ್ವಾ ಕಾಲಮ್' ಅಂದರೆ ಅದೇ ಹೊತ್ತನ್ನು ಸಾಧಿಸಿ ಅಪ್ಪಾಯಿಕ ಹಾಗೂ ಗೋವಿಂದ ಎಂಬವರು ಆತನ ಮೇಲೆ ದಂಡೆತ್ತಿ ಬಂದರು; ಅವರನ್ನು ಆತನು ಸೋಲಿಸಿದನು. ಕೀರ್ತಿವರ್ಮನು ಗೆದ್ದುಕೊಂಡಿದ್ದ ಬನವಾಸಿ ಪ್ರಾಂತ ಎದ್ದಿತು; ಅದನ್ನು ಆತನು ನಿಗ್ರಹಿಸಿದನು (ಪ. ೧೮). ಗಂಗರನ್ನೂ ಅಲೂಪರನ್ನೂ (ಪ. ೧೯) ಕೊಂಕಣದ ಮೌರ್ಯರನ್ನೂ (ಪ. ೨೦) ಗೆದ್ದನು. ಇವೇ ಮೊದಲಾದ ಹಲವು ಕಾಳಗಗಳು ತೀರಿದ ಮೇಲೆ ತಾನೆ ಆತನು ಬಾದಾಮಿಯಲ್ಲಿ ಪಟ್ಟಾಭಿಷಿಕ್ತನಾದನು. ಹೀಗಾಗಿ ಆತನು ಮಂಗಳೇಶನನ್ನು ಗೆದ್ದಂದಿನಿಂದ ಪಟ್ಟವನ್ನೇರಿದ ನಡುವೆ ಕೆಲಕಾಲ ಸರಿದುಹೋಯಿತು.

II ಪುಲಿಕೇಶಿಯ ಹೈದರಾಬಾದು ತಾಮ್ರಪಟ್ಟದ೬ ತೇದಿ ಆತನ ರಾಜ್ಯಾಭಿಷೇಕದ ೩ನೆಯ ವರ್ಷದಲ್ಲಿಯ ಸೂರ್ಯಗ್ರಹಣ ಯುಕ್ತವಾದ ಭಾದ್ರಪದ ಬಹುಳ ಅಮಾವಾಸ್ಯೆ. ಶಾ. ಶ. ೫೩೫ನೆಯ ವರ್ಷದಲ್ಲಿ **ಪೂರ್ಣಿಮಾಂತ ಭಾದ್ರಪದ** ಬಹುಳ ಅಮಾವಾಸ್ಯೆ, ಅಂದರೆ **ಅಮಾಂತ ಶ್ರಾವಣ** ಬಹುಳ ಅಮಾವಾಸ್ಯೆ = ಕ್ರಿ. ಶ. 613 ನೆಯ ಜುಲಾಯಿ 23ನೆಯ ತಾರೀಕು ಸೋಮವಾರದಂದು ಸಮಗ್ರ ಭಾರತವರ್ಷದಲ್ಲಿ ದೃಶ್ಯವಾದ ಪೂರ್ಣ ಸೂರ್ಯಗ್ರಹಣವಿತ್ತು. ಇದೇ ಆ ತಾಮ್ರಪಟ್ಟದ ತೇದಿ.

ಆತನ ಸಾತಾರೆಯ ತಾಮ್ರಪಟ್ಟದ೭ ತೇದಿ ಆತನ ಆಳೊತ್ತಿನ ೮ನೆಯ ವರ್ಷವಲ್ಲಿಯ ಚಂದ್ರಗ್ರಹಣಯುಕ್ತವಾದ ಕಾರ್ತಿಕ ಹುಣ್ಣಿಮೆ. ಶಾ. ಶ. ೫೩೯ನೆಯ ವರ್ಷದ ಕಾರ್ತಿಕ ಹುಣ್ಣಿಮೆಯಂದು, ಅಂದರೆ ಕ್ರಿ. ಶ. 617 ಅಕ್ಟೋಬರ 19ನೆಯ ತಾರೀಕು ಬುಧವಾರದಂದು, ರಾತ್ರಿ ಚಂದ್ರಗ್ರಹಣವಿತ್ತು. ಅದೇ ಈ ತಾಮ್ರಪಟ್ಟದ ತೇದಿ.

---

೬ ಅದೇ, ಪು. 356. ಕ್ರಿ. ಶ. 612 ಅಗೋಸ್ತು 2ನೆಯ ತಾರೀಕಿನ ಸೂರ್ಯಗ್ರಹಣವು ಭರತಖಂಡದಲ್ಲಿ ಅದೃಶ್ಯವಾಗಿದ್ದ ಕಾರಣ, ಈ ತಾಮ್ರಪಟ್ಟದ ಗ್ರಹಣವನ್ನು ಡಾ॥ ಫ್ಲೀಟರು (Dr. J. F. Fleet) ಅದಕ್ಕೆ ಹೊಂದಿಸಿರುವುದು ಸರಿಯಲ್ಲ.

೭ ಅದೇ, ಪು. 356—57. ಡಾ॥ ಫ್ಲೀಟರು ಈ ಚಂದ್ರಗ್ರಹಣವು ಕ್ರಿ. ಶ. 616 ಅಕ್ಟೋಬರ್ 31ನೆಯ ತಾರೀಕಿನದೊ, ಕ್ರಿ. ಶ. 617 ಅಕ್ಟೋಬರ್ 21ನೆಯ ತಾರೀಕಿನದೊ ಎಂದಿರುವುದೂ ಸರಿಯಲ್ಲ. ಏಕೆಂದರೆ ಕ್ರಿ. ಶ. 616 ರಲ್ಲಿ ಕಾರ್ತಿಕ ಹುಣ್ಣಿಮೆಯಂದು ಚಂದ್ರಗ್ರಹಣವಿರಲಿಲ್ಲ; ಕ್ರಿ. ಶ. 617ರ ಕಾರ್ತಿಕ ಹುಣ್ಣಿಮೆಯ ಚಂದ್ರಗ್ರಹಣವು ಅಕ್ಟೋಬರ್ 19ನೆಯ ತಾರೀಕಿನ ರಾತ್ರಿ ಇದ್ದಿತಲ್ಲದೆ 21ನೆಯ ತಾರೀಕಿನಂದಲ್ಲ.

ಹೀಗೆ ಕ್ರಿ. ಶ. 613 II ಪುಲಿಕೇಶಿಯ ರಾಜ್ಯಾಭಿಷೇಕದ ೩ನೆಯ ವರ್ಷವೂ, ಕ್ರಿ. ಶ. 617 ಅದರ ೮ನೆಯ ವರ್ಷವೂ ಎಂಬುದರಿಂದ, ಆತನ ಪಟ್ಟಾಭಿಷೇಕವು ಕ್ರಿ.ಶ. 610ರಲ್ಲಿ ಜುಲಾಯಿಯಿಂದ ಅಕ್ಟೋಬರದೊಳಗೆ ಜರುಗಿರಬೇಕು.

ನಮ್ಮ ವಿಚಾರದ ಈ ಮೋಡಲಿಂಬದ ತಾಮ್ರಪಟ್ಟದಲ್ಲಿ II ಪುಲಿಕೇಶಿಯ ಹೆಸರೂ ಇಲ್ಲ, ಸತ್ಯಾಶ್ರಯನೆಂಬ ಅವನ ಬಿರುದೂ ಇಲ್ಲ ಮಾತ್ರವಲ್ಲ, ಇದರಲ್ಲಿ ಹೇಳಿದ ದತ್ತಿಯನ್ನು ಬಿಟ್ಟ ಶಾಲಿವಾಹನ ಶಕದ ವರ್ಷ ಸಂಖ್ಯೆಯೂ ಇಲ್ಲ, ಆತನ ಆಳೊತ್ತಿನ ವರ್ಷಸಂಖ್ಯೆಯೂ ಇಲ್ಲದೆ, ಬರೇ ವೈಶಾಖ ಹುಣ್ಣಿಮೆಯಂದು ದತ್ತಿಯನ್ನು ಬಿಟ್ಟತೆಂದು ಅಷ್ಟೇ ಇದೆ. ಆತಏವ ಈ ತಾಮ್ರಪಟ್ಟದ ಕಾಲದಲ್ಲಿ ಆತನು ಇನ್ನೂ ಅಭಿಷಿಕ್ತನಾಗಿರಲಿಲ್ಲ ಎಂದೇ ಅನುಮೋಯಿಸಬೇಕಾಗುತ್ತದೆ. ಹಾಗಾದರೆ ಈ ತಾಮ್ರಪಟ್ಟವು ಕ್ರಿ. ಶ. 609 ರದೊ ಕ್ರಿ. ಶ. 610 ರದೊ ವೈಶಾಖ ಹುಣ್ಣಿಮೆಯಂದು ಹುಟ್ಟಿರಬೇಕು. ಕ್ರಿ. ಶ. 609 ರ ವೈಶಾಖ ಹುಣ್ಣಿಮೆಯಾದರೆ ಆ ತೇದಿ ಏಪ್ರಿಲ್ 24ನೆಯ ತಾರೀಕು ಗುರುವಾರವೂ, ಕ್ರಿ. ಶ. 610 ರದಾದರೆ ಅದು ಏಪ್ರಿಲ್ 13ನೆಯ ತಾರೀಕು ಸೋಮವಾರವೂ ಆಗುತ್ತದೆ. ಇವೆರಡರಲ್ಲಿ ಆ ತೇದಿ ಇಂತಹದೇ ಎಂದು ನಿಷ್ಕೃಷ್ಟವಾಗಿ ತೀರ್ಮಾನಿಸಲಾಗುವುದಿಲ್ಲ.

ಬಿಡುಗಡೆ

ನಿನ್ನ ನಂಬಿದರ ದೇಹಾಂತದಲಿ ಮೋಕ್ಷ
 ವೀವೆ ನೀನೆಂದು ನಿಗಮಾಗಮಂ ಪೇಳೆ,
ಜೀವಿಸಿರುವೆಮ್ಮೊಳಿಂತೇತಕೆ ವಿರೂಕ್ಷ
 ವಾಗಿರುವೆ ದೇವ? ಮತ್ತಾರನ್ನೆ ಕೇಳೆ?

ಮಡಿದ ಮೇಲಣ ಮೋಕ್ಷವಕ್ಕೆಮ ಅನರ್ಘ,
 ಪಡೆದಾತ್ಮಕಲ್ಲದೇನನ್ಯರಿಗೆ ಗೊತ್ತೆ?
ಬಿಡುಗಡೆಯೊ ಜನನಮರಣದ ನಡುವೆ ಸ್ವರ್ಗ,
 ಬಿಡುಗಡೆಯೆ ಜನತೆ-ನರತೆಯ ಬದುಕಿನೊತ್ತೆ!

ಮೋಕ್ಷ ನೀನೆಂತು ಬಿಡುಗಡೆಯು ನೀನಂತು—
 ನೀ ತೊರೆಯಲೆಮ್ಮ ಬಿಡುಗಡೆ ತೊರೆಯಬಂತು!
ಭಾರತದ ಬಾಳ್ವೆ ಏಗಾಲದಿ ನಮುಂತು
 ತೊತ್ತುಗಾರಿಕೆಯೊಳಕಟಾ ಸಂತು, ಸಂತು!

ಬಿಡುಗಡೆಂದಿಗಿನ್ನೀ ಗ್ರಹಣಕೊಡೆಯಾ?
ಭಾರತದೊಳೆಂದು ನೇಸರಿಪೆ ಬಿಡುಗಡೆಯಾ?

—ಗೋವಿಂದ ಪೈ.

ಕಾಮ

ವೈದ್ಯಗುರು ಶ್ರೀ. ಡಿ. ಕೆ. ಭಾರದ್ವಾಜ,
ಬೆಂಗಳೂರು.

ಹಿಂದೂ ಧರ್ಮ ಗ್ರಂಥಗಳಲ್ಲಿ 'ಧರ್ಮ-ಅರ್ಥ-ಕಾಮ-ಮೋಕ್ಷ' ಮತ್ತೆ 'ಇಷ್ಟ ಕಾಮನಾಸಿದ್ಧ್ಯರ್ಥಂ' ಇತ್ಯಾದಿಯಾಗಿ ಹಲವೆಡೆಗಳಲ್ಲಿ ನಿತ್ಯ ಪೂಜಾದಿ ವ್ರತಗಳಲ್ಲಿ 'ಕಾಮ' ಶಬ್ದವು ಯಾವಾಗಲೂ ಪ್ರಯೋಗಿಸಲ್ಪಡುತ್ತಿರುವುದು. ಯಾವನು ಕಾಮಾತ್ಮ ಅಥವಾ ಕಾಮಾರ್ಥಿಯಾಗಿರುವನೋ ಅಂತಹನನ್ನು ಬಾರಿಬಾರಿಗೂ ನಿಂದಿಸಿರುವರು. ಆದರೆ ಸಾಮಾನ್ಯ ವಾಚಕರು ಈ 'ಕಾಮ' ಪದದ ಅರ್ಥ ತಿಳಿಯುವುದರಲ್ಲಿ, ಭ್ರಾಂತರಾಗುವರು. ಆದುದರಿಂದಲೇ ಎಲ್ಲ ಶಾಸ್ತ್ರಗಳ ತಾತ್ಪರ್ಯವನ್ನು ಸರಿಯಾಗಿ ಯಾವಾಗಲೂ ತಿಳಿದುಕೊಳ್ಳಲಾರರಾಗಿರುವರು. ಯಾವುದೋ ಇಂದ್ರಿಯ ವಿಶೇಷದ ತೃಪ್ತಿಯ ಇಚ್ಛೆಯೇ 'ಕಾಮ' ಎಂದು ಅವರು ಆ ಪದ ಪ್ರಯೋಗ ಮಾಡುವರು. ಮತ್ತೆ ಶಾಸ್ತ್ರದಲ್ಲಿಯೂ ಅದೇ ಅರ್ಥದಲ್ಲಿ ಆ ಪದಪ್ರಯೋಗವಿದೆ ಎಂದು ಅವರು ತಿಳಿದಿರುವರು. ಆದರೆ ಇದು ಅವರ ಭ್ರಮೆ. ಮಹಾಭಾರತದ ಒಂದೆರಡು ಶ್ಲೋಕಗಳಲ್ಲಿ ಪ್ರಯೋಗವಾಗಿರುವ ಈ 'ಕಾಮ' ಶಬ್ದದ ಅರ್ಥವನ್ನು ಇಲ್ಲಿ ವಿಮರ್ಶಿಸಲಾಗಿದೆ.

"ಪಂಚ ಇಂದ್ರಿಯ, ಮನಸ್ಸು ಮತ್ತು ಹೃದಯಗಳು ತಮ್ಮ ತಮ್ಮ ಕರ್ತವ್ಯಗಳಲ್ಲಿ ಮಗ್ನವಾಗಿದ್ದು, ಯಾವನಲ್ಲಿ ಪ್ರೇಮವುಂಟಾಗುವುದೊ ಆದರ ಹೆಸರು ಕಾಮ" (ವನಪರ್ವ. ೩೩ನೆಯ ಅಧ್ಯಾಯ) ಈ ಕಾಮವು ನಿಷೇಧವಲ್ಲ, ನಿಂದಾಯೋಗ್ಯವಲ್ಲ. 'ಮನಸ್ಸು, ಹೃದಯ'ಗಳ ಉಲ್ಲೇಖವಿಲ್ಲದೆ, ಕೇವಲ ಪಂಚೇಂದ್ರಿಯಗಳ ಮಾತನ್ನೇ ಹೇಳಿದ್ದರೆ, ಆ ಇಂದ್ರಿಯವಶ್ಯತೆ (Sensuality) ರೂಪದ ದುಷ್ಪ್ರವೃತ್ತಿಯ 'ಕಾಮ' ವೆನಿಸುವುದು. ಆದರೆ 'ಮನಸ್ಸು ಮತ್ತು ಹೃದಯ'ಗಳ ಉಲ್ಲೇಖವಿರುವೆಡೆಗಳಲ್ಲಿ ಈ ಅರ್ಥ ಮಾಡಲಾಗುವುದಿಲ್ಲ. ಮಹಾಭಾರತದ ಮತ್ತೊಂದೆಡೆಯಲ್ಲಿ—'ಹೂ, ಗಂಧಾದಿ ಪದಾರ್ಥಗಳ ಸ್ಪರ್ಶದಿಂದ ಅಥವಾ ಸುವರ್ಣಾದಿ ಪದಾರ್ಥಗಳ ಲಾಭದಿಂದ ಮನುಷ್ಯನಲ್ಲಿ ಉಂಟಾಗುವ ಪ್ರಸನ್ನ ಭಾವಕ್ಕೆ 'ಕಾಮ' ಎಂದು ಹೆಸರು" ಎಂದು ಹೇಳಿದೆ.

ಇದರಿಂದ ಸ್ಪಷ್ಟವಾಗುವುದೇನಂದರೆ ಅದು ಯಾವುದಾದರೂ ಒಂದು ಪ್ರವೃತ್ತಿ ಅಥವಾ ವೃತ್ತಿ ಅಲ್ಲ. ಪ್ರವೃತ್ತಿ ಅಥವಾ ವೃತ್ತಿಯ ತೃಪ್ತಿಯ ಆವಸ್ಥೆ ಮಾತ್ರವಾಗಿದೆ. ಮತ್ತೆ ಅದು ಯಾವಾಗಲೂ ನಿಂದನೀಯ ಅಥವಾ ನಿಂದಿತ ಸುಖವಲ್ಲ. ಅದು ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಫಲ ಮಾತ್ರ. ಆದುದರಿಂದ ಅದು ಕರ್ಮದ ಒಂದು ಉತ್ಕೃಷ್ಟ ಫಲವೆಂದಾಯಿತು. ಈ ಬಗೆಯಾಗಿ ಮನುಷ್ಯನು ಧರ್ಮ ಅರ್ಥ-ಮತ್ತು ಕಾಮಗಳ ವಿಚಾರಗಳನ್ನು ಬೇರೆ ಬೇರೆ ದೃಷ್ಟಿಯಿಂದ ನೋಡಿ ಕೇವಲ ಧರ್ಮದಲ್ಲಿ ಅಥವಾ ಕಾಮದಲ್ಲಿ ತಲ್ಲೀನನಾಗಕೂಡದು. ನಿರಂತರವೂ ಸಮಾನಭಾವದಿಂದ ಈ 'ಧರ್ಮ-ಅರ್ಥ-ಕಾಮ' ವರ್ಗವನ್ನು ಅನುಶೀಲಿಸಬೇಕು. ಮೊದಲನೆಯ ಪ್ರಹರದಲ್ಲಿ ಧರ್ಮಾನುಷ್ಠಾನ, ಎರಡನೆಯ ಪ್ರಹರದಲ್ಲಿ ಧನೋಪಾರ್ಜನೆ, ಮೂರನೆಯ ಪ್ರಹರದಲ್ಲಿ ಕಾಮಭೋಗ ಮಾಡುವುದು ಉಚಿತವೆಂದು ಶಾಸ್ತ್ರದಲ್ಲಿ ಹೇಳಲಾಗಿದೆ.

"ಕೇವಲ ಧರ್ಮಪರನಾಗಿರಕೂಡದು" ಎಂದು ಹೇಳಿದ ಮಾತ್ರಕ್ಕೆ, ಹಾಗೆ ನುಡಿದವನು ಕೇವಲ ಅಧರ್ಮಿ ಅಥವಾ ಧರ್ಮ ಶಬ್ದಕ್ಕೆ ಬೇರೆ ಅರ್ಥವನ್ನು ಪಯೋಗಿಸುವವನಾಗಿರಬೇಕು ಎಂದು ತಿಳಿಯಲಾಗುವುದು. ಈ ಎರಡು ಮಾತುಗಳಲ್ಲಿಯೂ ಸ್ವಲ್ಪ ಸತ್ಯಾಂಶವಿದೆ. ಈ ಮಾತುಗಳನ್ನು ಹೇಳಿದವನು ಸ್ವಯಂ ಗದಾಧರ ಭೀಮಸೇನ, ಅವನು

ಅಧರ್ಮಿಯಲ್ಲ. ಧರ್ಮಾರ್ಜುನರಂತೆ ಅವನು ಧರ್ಮದ ಅತ್ಯುಚ್ಚಸೋಪಾನವನ್ನಡರಿರಲಿಲ್ಲ. ಮತ್ತೆ ಧರ್ಮ ಶಬ್ದದ ಅರ್ಥವನ್ನು ಅವನು ವಿಶೇಷ ರೀತಿಯಲ್ಲಿ ಹೇಳಿರುವನು. ಈ ನುಡಿಗಳನ್ನು ನುಡಿದ ಬಳಿಕ—"ದಾನ, ಯಜ್ಞ, ಸಾಧುಪೂಜೆ, ವೇದಪಾಠ, ಮತ್ತು ಸರಳತೆ-ಇವುಗಳಲ್ಲೊಂದೊಂದೂ ಪ್ರಧಾನ ಧರ್ಮವಾಗಿದೆ'' ಎಂದು ಹೇಳಿರುವನು. ಇದರಿಂದ ಅವನ ಅರ್ಥವೂ ಸ್ಪಷ್ಟವಾಗುವುದು.

ಈಗ ನಾವು 'ಧರ್ಮ'ವೆಂದು ಹೇಳುವುದು ಎರಡು ಬಗೆಯದು. ಒಂದು ನಮಗೇ ಸಂಬಂಧಿಸಿದುದು, ಮತ್ತೊಂದು ಇನ್ನೊಬ್ಬರೊಂದಿಗಿರುವ ನಮ್ಮ ಸಂಬಂಧಕ್ಕೆ ಅನ್ವಯಿಸುವುದು. ಬೇರೆಯವರೊಂದಿಗೆ ಸಂಬಂಧವನ್ನಿಟ್ಟುಕೊಳ್ಳುವ ಧರ್ಮವೇ ಧರ್ಮದ ಪ್ರಧಾನ ಅಂಶ. ಆದರೆ ನಮ್ಮ ಸ್ವಂತ ವಿಚಾರಕ್ಕೆ ಸಂಬಂಧಿಸಿದ ಧರ್ಮವೂ ಧರ್ಮವೆ. ಅದನ್ನು ಬಿಡತಕ್ಕುದಲ್ಲ. ನಾನು ಬೇರೆಯವರನ್ನು ಸುಖದಲ್ಲಿಟ್ಟು, ನಾನೂ ಸುಖದಿಂದ ಇರಬಲ್ಲೆನಾದರೆ, ಅದನ್ನು ಬಿಟ್ಟು ಇಚ್ಛಾಪೂರ್ವಕವಾಗಿ ನಾನು ಏಕೆ ಕಷ್ಟಪಡುವೆನು? ಇಚ್ಛಾಪೂರ್ವಕ ವ್ಯರ್ಥ ಕಷ್ಟಪಡುವುದೂ ಅಧರ್ಮವೆನಿಸುವುದು,—ಇಲ್ಲಿ ಅನ್ಯರೊಂದಿಗೆ ಸಂಬಂಧವನ್ನಿಟ್ಟುಕೊಳ್ಳುವುದೇ **ಧರ್ಮ**, ತನಗೆ ಸಂಬಂಧಿಸಿದ ಫಲಭೋಗವೇ **ಕಾಮ** ಎಂದು ಭೀಮಸೇನನು ಹೇಳಿರುವನು. ಇದರಿಂದ 'ಕೇವಲ ಧರ್ಮಪರನಾಗಿರಬಾರದು' ಎಂಬ ಉಕ್ತಿಯು ಯುಕ್ತಿಸಂಗತವಾಗಿದೆ ಎಂದು ತಿಳಿಯುವುದು.

ಆದರೆ ಧರ್ಮವನ್ನು ಎರಡು ವಿಭಾಗವಾಗಿ ಆತ್ಮಸಂಬಂಧ ಮತ್ತು ಪರ ಸಂಬಂಧವೆಂದು ಮಾಡುವುದು ಸರಿಯಲ್ಲ. ಧರ್ಮವು ಏಕವೇವ. ಧರ್ಮವು ನಮಗೂ ಪರರ ವಿಚಾರಕ್ಕೂ ಸಂಬಂಧಿಸಿರುವುದು. ಕೇವಲ ಬೇರೆಯವರ ವಿಚಾರದಲ್ಲಿ ನಮಗೆ ಸಂಬಂಧಿಸಿದ ವಿಚಾರವಷ್ಟೆ ಧರ್ಮವಾಗಿರಬೇಕೆಂದು ಅನೇಕರು ಹೇಳುವರು. ಕೇವಲ ಪರಲೋಕದಲ್ಲಿ ಸದ್ಗತಿಯನ್ನು ಪಡೆಯಲೆತ್ನಿಸುವುದು—ಕೇವಲ ಆತ್ಮಸಂಬಂಧವಾದುದು—ಧರ್ಮವೆಂದು ಕ್ರೈಸ್ತಾದಿ ಅನ್ಯಧರ್ಮೀಯರ ಮತ. ಆದರೆ ನಿಜವಾದ ವಿಚಾರವೇನೆಂದರೆ, ಕೇವಲ ನಮಗೆಮಾತ್ರ ಸಂಬಂಧಿಸಿದುದಲ್ಲ. ಮತ್ತೆ ಕೇವಲ ಪರರಿಗೂ ಸಂಬಂಧಿಸಿದುದಲ್ಲ. ಹೃದಯದ ಎಲ್ಲ ವೃತ್ತಿಗಳನ್ನೂ ಉಚಿತವಾದ ಅನುಸಂಧಾನ, ಮತ್ತು ಪರಿಣತಿಯೇ ಧರ್ಮ ಇದನ್ನು ನಮಗೆ ಅಥವಾ ಇನ್ನೊಬ್ಬರಿಗೆ ಎಂದು ತಿಳಿದು ಮಾಡತಕ್ಕುದಲ್ಲ. ಧರ್ಮವೆಂದೇ ತಿಳಿದು ಮಾಡತಕ್ಕುದು, ಆ ವೃತ್ತಿಗಳು ನಮಗೂ ಅನ್ಯರಿಗೂ ಸಂಬಂಧಿಸಿದುವಾಗಿವೆ. ಅವುಗಳ ಅನುಶೀಲನ ಅನುಸಂಧಾನಗಳಿಂದ ಸ್ವಾರ್ಥಪರಾರ್ಥಗಳೆರಡೂ ಒಟ್ಟಿಗೆ ಸಿದ್ಧಿಸುವುವು. ಧರ್ಮ ತತ್ತ್ವಗಳ ವಿಮರ್ಶೆಯು ದೀರ್ಘವಾದುದು, ಗಹನವಾದುದು, ಜನರಿಗೆ ಅದು ಸರಿಯಾಗಿ ತಿಳಿಯದೇ, ಧರ್ಮಗ್ಲಾನಿಯಾದಾಗ-ಶ್ರೀಕೃಷ್ಣನು ಹೇಳಿರುವುದು :—

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
....ತದಾತ್ಮಾನಂ ಸೃಜಾಮ್ಯಹಮ್ ॥
ಧರ್ಮಸಂಸ್ಥಾಪನಾರ್ಥಾಯ ।
ಸಂಭವಾಮಿ ಯುಗೇ ಯುಗೇ ॥ ಎಂದುಮುಂತಾಗಿ.

ವೇಪ್ರಿನ್

(ರಿಜಿಸ್ಟರ್ಡ್)

ಇದರ ಲೇಪನದಿಂದ ಕಜ್ಜಿ, ಘಾಯ, ವ್ರಣ ಇಸಬು, ನಾರುಹುಣ್ಣು, ಕರಪಾಣಿ, ಮೂಲವ್ಯಾಧಿ, ಮೆಟ್ಟಿನ ಘಾಯ, ಮುದ್ದಣ (Pimples) ಸುಟ್ಟ ಘಾಯ, ಕತ್ತಿ ಘಾಯ, ತೊಡವಾಳ, ಗಜಕರ್ಣ ಇವು ಮಾಯುವಾಗುತ್ತೆ. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ ನೋವನ್ನು ನಿವಾರಿಸುವುದು. ಇದಲ್ಲದೆ ಇಂದ್ರಜಾಲದೋಷಾದಿಯಲ್ಲಿ ಚೇಳಿನ ವಿಷವನ್ನು ಬಹಿರ್ಗತಪಡಿಸುವುದು. ನಿಮ್ಮಲ್ಲಿ ಒಂದು ಬಾಟ್ಲು ಇದ್ದಲ್ಲಿ ಒಬ್ಬ ವೈದ್ಯರೇ ಇದ್ದಂತಾಗುವುದು. ಕ್ರಯ ಬಹು ಸುಲಭ.

¼ ಔನ್ಸ್ ಬಾಟ್ಲು 1 ಕ್ಕೆ 0—8—0

½ ಔನ್ಸ್ ಬಾಟ್ಲು 1 ಕ್ಕೆ 0—14—0

ಲಸ್ಟರ್ ಡೈಜಸ್ಟೀವ್ ಸಾಲ್ಟ್ಸ್

ಜೀರ್ಣಕೋಶದ ಕಠಿಣ ಸಮಸ್ಯೆಯನ್ನು ಪರಿಹರಿಸುವುದು, ಇದರಿಂದ ಅಜೀರ್ಣ, ಹುಳಿತೇಗು, ಹೊಟ್ಟೆಉಬ್ಬರ, ಜ್ವರಗಡ್ಡೆ, ಪಿತ್ತಕೋಶದ ವ್ಯಾಧಿ, ಪರಿಣಾಮ ಶೂಲೆ, ವಾಯುನೋವು, ಕಾಮಾಲೆ, ಮೂತ್ರಕೃಛ್ರವ್ಯಾಧಿಗಳು ನಾಶವಾಗುವುವು. ಮಲಬದ್ಧತೆ ನಿವಾರಣೆಯಾಗಿ ಶರೀರವು ತಂಪಾಗುವುದು.

ಮಲೇರಿಯಾ ಜ್ವರ ನಿಂತ ಮೇಲೆ ಇದನ್ನು ಉಪಯೋಗಿಸುವುದರಿಂದ ಆಗಾಗ್ಗೆ ಬರುವ ಜ್ವರವನ್ನು ತಡೆಗಟ್ಟುವುದು. ಯಕೃತ್, ಪ್ಲೀಹ ವ್ಯಾಧಿಗಳಲ್ಲಿ (Liver and Spleen) ಮಕ್ಕಳಿಂದ ದೊಡ್ಡವರವರೆಗೆ ಉಪಯೋಗಿಸಲು ದಿವ್ಯ ಔಷಧ.

೨ ಔನ್ಸ್ ಬಾಟಲಿಗೆ 2—2—0

(೨೦ ದಿವಸದ ಔಷಧಿ)

ಎಲ್ಲಾ ಅಂಗಡಿಗಳಲ್ಲಿಯೂ ದೊರಕುವುದು.

ಶೀಘ್ರದಲ್ಲೇ ಪ್ರದರ್ಶಿತವಾಗಲಿದೆ

ತಮಿಳುನಾಡು ಟಾಕೀಸಿನಲ್ಲಿ

● ಟಿ. ಆರ್. ರಾಜಕುಮಾರಿ

● ಪಿ. ಯು. ಚಿನ್ನಪ್ಪ

● ಕುಮಾರಿ ರುಕ್ಮಿಣಿ

ಮೊದಲಾದ ನಟೀ-ನಟರಿಂದ ಕೂಡಿದ

ಪಂಕಜವಲ್ಲಿ (ತಮಿಳು)

ಡೈರೆಕ್ಟರ್: ಎಸ್. ಸೌಂದರರಾಜನ್ ಸ್ಟುಡಿಯೊ: ನ್ಯೂಟೋನ್.

(ಮೈಸೂರು, ಟ್ರಿಚಿ, ಟಾಂಜೋರ್ ಮತ್ತು ಸೇಲಂ ಪ್ರದೇಶಗಳ ಹಕ್ಕು ಸೇರಿದೆ.)

ಪ್ರದರ್ಶನವನ್ನು ನಿರೀಕ್ಷಿಸಿರಿ!

ಮೋಹನ್ ಪಿಕ್ಚರ್ಸಿನವರ

ಬಂದೂಕ್‌ವಾಲಿ (ಹಿಂದಿ)

—: ತಾರಾಗಣ :—

ರೊಮಿಲ, ಅನಿಲ್‌ಕುಮಾರ್

ಮತ್ತಿತರರು.

ಬೆಂಗಳೂರು

ಪ್ಯಾರಾಮೌಂಟ್ ಟಾಕೀಸ್

ಮೈಸೂರು

ನ್ಯೂ ಕೃಷ್ಣಾ ಟಾಕೀಸುಗಳಲ್ಲಿ

—: CONTACT :—

PRABHA PICTURES

Gandhinagar BANGALORE CITY

ವಯಸ್ಕರ ವಿದ್ಯಾಭ್ಯಾಸದ ಕೆಲವು ಅಂಕಿ ಅಂಶಗಳು

ಶ್ರೀ ವಿ. ಎಸ್. ಶ್ರೀನಿವಾಸರಾವ್, ಎಂ.ಎ., ಬಿ.ಟಿ.

ವಯಸ್ಕರಲ್ಲಿ ಅಕ್ಷರ ಪ್ರಚಾರವು ನಮ್ಮ ಸಂಸ್ಥಾನದಲ್ಲಿ ತಕ್ಕಮಟ್ಟಿಗೆ ನಡೆದಿದೆ ಎಂದು ಹೇಳಬಹುದು. ಈ ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯು ಈ ನಾಲ್ಕು ನೇ ವರ್ಷಗಳಲ್ಲಿ ನಡೆಸಿರುವ ಕಾರ್ಯವನ್ನು ಕೊಟ್ಟಿದೆ.

	೧೯೪೧–೪೨ ೬ ತಿಂಗಳು ಮಾತ್ರ	೪೨–೪೩	೪೩–೪೪	೪೪–೪೫
ತರಗತಿಗಳು	೧,೭೩	೪೮೮	೧,೨೩೮	೨೨೧೪
ವಿದ್ಯಾರ್ಥಿಗಳ ಸಂಖ್ಯೆ	೨,೨೫೩	೬,೨೦೧	೨೨,೦೩೨	೩೫,೩೭೧

ಮುಂದೆ ಯುದ್ಧಾನಂತರದ ಶಿಕ್ಷಣ ಪುನರ್‌ರಚನೆಯ ಅಂಗವಾಗಿ ವಯಸ್ಕರ ವಿದ್ಯಾಭ್ಯಾಸಕ್ಕೆ ಬಹಳ ಮಹತ್ವವಿದೆ. ಆದಕ್ಕೆ ಒಂದು ಯೋಜನೆ ೧೫ ವರ್ಷಗಳಲ್ಲಿ ನಮ್ಮ ಸಂಸ್ಥಾನದ ಎಲ್ಲ ಅನಕ್ಷರಸ್ಥರಾದ ವಯಸ್ಕರನ್ನೂ ಅಕ್ಷರಸ್ಥರನ್ನಾಗಿ ಮಾಡುವ ಉದ್ದೇಶದಿಂದ ತಯಾರಾಗಿದೆ.

ಈಗ, ವಯಸ್ಕರ ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ಅಂಕಿಗಳು ಸಂಗ್ರಹವಾಗಿರುವುದರಿಂದ ಅವುಗಳನ್ನು ಪರೀಕ್ಷಿಸಿ ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡಬಹುದು. ಅವನ್ನು ಓದುಗರ ಮುಂದಿಡಬೇಕೆಂದು ನನ್ನ ಆಸೆ. ಅದಕ್ಕೆ ಮುಂಚೆ ವಯಸ್ಕರ ತರಗತಿಗಳಿಗೆ ಸಂಬಂಧಪಟ್ಟ ಒಂದೊಂದು ವಿಷಯಗಳನ್ನು ತಿಳಿದಿರಬೇಕಾಗುತ್ತದೆ.

ವಯಸ್ಕರಿಗೆ ಪಾಠಹೇಳಿಕೊಡುವ ಶಾಲೆಗಳು ಹೆಚ್ಚಾಗಿ ಗ್ರಾಮಾಂತರ ಶಾಲೆಗಳಾಗಿವೆ. ಅವು ರಾತ್ರಿ ಶಾಲೆಗಳು. ಸುಮಾರು ೫ ತಿಂಗಳ ಕಾಲದಲ್ಲಿ ಅವರು ವೃತ್ತಪತ್ರಿಕೆಯ ಸಾಮಾನ್ಯಲೇಖನಗಳನ್ನು ಓದಿ ತಿಳಿದುಕೊಳ್ಳುವ ಯೋಗ್ಯತೆಯನ್ನು ಪಡೆಯುತ್ತಾರೆ. ಅಂದರೆ ಬಾಲಬೋಧೆಗಳಲ್ಲ-ವಯಸ್ಕರ ದೃಷ್ಟಿಯಿಂದಲೇ ಬರೆದ—ಪುಸ್ತಕಗಳನ್ನು, ಬರೆದು ಉಪಯೋಗಿಸುತ್ತಿದೆ. ವಯಸ್ಕ ವಿದ್ಯಾರ್ಥಿಗಳಿಗೆ ಪುಸ್ತಕ ಸ್ಲೇಟು ಮತ್ತು ಇತರ ಸಲಕರಣೆಗಳನ್ನು ಉಚಿತವಾಗಿ ಕೊಡುತ್ತಿದೆ. ಪಾಠ ಹೇಳುವ ಉಪಾಧ್ಯಾಯರಿಗೆ, ಅಕ್ಷರಸ್ಥನನ್ನಾಗಿ ಮಾಡಿದ ವಿದ್ಯಾರ್ಥಿಗೆ ತಲಾ ೨ ರೂ. ನಂತೆ ಸಂಭಾವನೆಯನ್ನು ಕೊಡುತ್ತಿದೆ.

ಈ ೫ ತಿಂಗಳ ಕಾಲವನ್ನು ಎರಡು ಭಾಗವಾಗಿ ವಿಂಗಡಿಸಿದೆ. ಮೊದಲನೆಯ ೨॥ ತಿಂಗಳು, ಅಕ್ಷರ ಪರಿಚಯಕಾಲ. ಎರಡನೆಯ ಅರ್ಧ, ಪುಸ್ತಕಗಳನ್ನು ಓದುವುದಕ್ಕೆ ಹೆಚ್ಚಿನ ಅಭ್ಯಾಸಕ್ಕೆ. ಎರಡನೆಯ ಕಾಲದಲ್ಲಿ ಅಕ್ಷರ ಜ್ಞಾನ ವೃದ್ಧವಾಗುತ್ತದೆ. ಈ ಕಾಲವನ್ನು ಗೊತ್ತುಮಾಡಿರುವುದು ನಾಲ್ಕಾರು ಕಡೆ ಪರೀಕ್ಷಾ ಪ್ರಯೋಗ ನಡೆದಮೇಲೆ.

ಉಪಾಧ್ಯಾಯರಿಗೆ ಸಂಭಾವನೆಯನ್ನು ಕೊಡುವುದು ಆಯಾಕಾಲದ ಪಠ್ಯಪುಸ್ತಕಗಳು ಮುಗಿದು ಪರೀಕ್ಷೆ ನಡೆದಮೇಲೆ. ಅಂದರೆ ಒಂದು ತರಗತಿಯಲ್ಲಿ ವಿದ್ಯಾರ್ಥಿಗಳ ಹಾಜರಿ ಕ್ರಮವಾಗಿ ಇದ್ದರೆ ಅಕ್ಷರ ಪರಿಚಯಕ್ಕೆ ಗೊತ್ತಾದ ೨॥ ತಿಂಗಳಕಾಲ ಮೀರಬಹುದು. ಬಹು ಶ್ರದ್ಧೆಯಿಂದ ನಡೆಸಿದ ತರಗತಿಯಲ್ಲಿ ಮುಂಚಿತವಾಗಿಯೇ ಅಕ್ಷರ ಪರಿಚಯವಾಗಿ ಗೊತ್ತಾದ ಪಠ್ಯ ಪುಸ್ತಕಗಳು ಮುಗಿಯಬಹುದು.

ಮೊದಲನೆಯಕಾಲದ ಪರೀಕ್ಷೆಯನ್ನು ತಾಲ್ಲೂಕಿನ ಪ್ರಚಾರಕರೋ, ಜಿಲ್ಲಾ ವ್ಯವಸ್ಥಾಪಕರೋ

ನಡೆಸುತ್ತಾರೆ. ಎರಡನೆಯ ಪರೀಕ್ಷೆಯನ್ನು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರು ಮಾಡಬೇಕೆಂದು ಗೊತ್ತು ಮಾಡಿದೆ. ಅವರಿಗೆ ಅನುಕೂಲವಿಲ್ಲದಿದ್ದರೆ ಅವರು ಹತ್ತಿರದಲ್ಲಿರುವ ಮಿಡಲ್ ಸ್ಕೂಲಿನ ಉಪಾಧ್ಯಾಯರಿಗಾಗಲೀ ಪ್ರೈಮರಿ ಶಾಲೆಯ ಮುಖ್ಯೋಪಾಧ್ಯಾಯರಿಗಾಗಲೀ ಆ ಜವಾಬ್ದಾರಿಯನ್ನು ವಹಿಸುತ್ತಾರೆ. ಈ ಏರ್ಪಾಡಿನಲ್ಲಿ ಸ್ವಲ್ಪ ಕಾಲಹರಣವಾಗದೆ ಇರುವುದಿಲ್ಲ. ಅಂದರೆ ತರಗತಿಯ ಪಾಠಗಳು ಮುಗಿದು ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧರಾಗಿದ್ದರೂ ತಕ್ಷಣ ಪರೀಕ್ಷೆ ನಡೆಯುವುದಿಲ್ಲ. ಸ್ವಲ್ಪ ಸಾವಕಾಶವಾಗುತ್ತದೆ.

ತರಗತಿಗೆ ಸೇರುವ ವಿದ್ಯಾರ್ಥಿಗಳು, ಶಾಲಾಬಾಲಕರ ವಯಸ್ಸನ್ನು ಮೀರಿರಬೇಕು ಎಂದು ಗೊತ್ತು ಮಾಡಿದೆ. ಆದರೂ ಅಲ್ಲಲ್ಲಿ—ಪ್ರತಿಹಳ್ಳಿಯಲ್ಲೂ ಪ್ರೈಮರಿ ಶಾಲೆ ಇಲ್ಲದಿರುವುದರಿಂದ, ೧೦—೧೨ ವಯಸ್ಸಿನ ಬಾಲಕರು ಬಂದು ಸೇರುತ್ತಾರೆ. ವಯಸ್ಕರಿಗೆ ಮಾತ್ರ ಈ ಶಾಲೆಗಳಿಗೆ ಪ್ರವೇಶ ಎಂದು ಖಂಡಿತವಾಗಿ ಹೇಳಿದರೆ—'ಮೊದಲು ನಮ್ಮ ಮಕ್ಕಳಿಗೆ ಓದು ಬರಹ ಬರುವಂತೆ ಮಾಡಿ ಸ್ವಾಮಿ, ನಮಗೇಕೆ?'—ಎಂದು ಜನ ಹೇಳುತ್ತಾರೆ.

ಈಗ ಕೆಲವು ಜಿಲ್ಲೆಗಳ ಅಂಕಿಗಳನ್ನು ಮಾತ್ರ ಪರೀಕ್ಷಿಸಿ ಈ ಕೆಳಗಿನ ಅಂಶಗಳನ್ನು ತಮ್ಮ ಮುಂದಿಟ್ಟಿದೆ. ಈಗ ಸಂಸ್ಥಾನ ವಯಸ್ಕರ ಶಿಕ್ಷಣ ಕೇಂದ್ರ ಸಮಿತಿಯ ಕಾರ್ಯಾಲಯದಲ್ಲಿ ಅಂಕಿಗಳನ್ನು ಸಂಗ್ರಹಿಸಿ, ಪರೀಕ್ಷಾ ಮತ್ತು ಸಂಶೋಧನೆ ನಡೆಸಲು ಒಂದು ಶಾಖೆಯನ್ನು ಏರ್ಪಡಿಸಿದೆ. ಮುಂದೆ ಅದರ ವರದಿಯನ್ನು ಪ್ರಕಟಿಸಲಾಗುತ್ತದೆ. ಸದ್ಯದಲ್ಲಿ ಈ ನಿರ್ಧಾರಗಳು ತಾತ್ಕಾಲಿಕ ಎಂದು ತಿಳಿಯಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಮೊದಲನೆಯದಾಗಿ, ಯಾವವಯಃಪರಿಮಿತಿಯ ಜನರು ಈ ಶಾಲೆಗಳಿಗೆ ಬರುತ್ತಿದ್ದಾರೆ? ಶಾಲೆಗೆ ಹೋಗುವ ಮಕ್ಕಳ ವಯಸ್ಸನ್ನು ಮೀರಿದ ಯಾರಾದರೂ ಬರಬಹುದು ಎಂದರೂಕೂಡ ಸೇಕಡ ೯೧ಜನ ೧೫ರಿಂದ ೩೦ ವರ್ಷದೊಳಗಿರುವವರು, ಉಳಿದ ಸೇಕಡ ೯ಜನ ೩೧ರಿಂದ ೪೦ ವಯಸ್ಸುಳ್ಳವರು. ೪೦ ವರ್ಷ ಮೀರಿದವರು ತೀರ ಕಡಮೆ, ಇಲ್ಲವೇ ಇಲ್ಲ ಎನ್ನಬಹುದು.

ಎರಡನೆಯದಾಗಿ, ಅಕ್ಷರ ಪರಿಚಯಕ್ಕೆ ಎಷ್ಟು ಕಾಲ ಹಿಡಿಯುತ್ತದೆ? ಪೂರ್ತಿ ಅಕ್ಷರಸ್ಥರೆನ್ನಿಸಿಕೊಳ್ಳಲು ಎಷ್ಟು ಕಾಲ ಹಿಡಿಯುತ್ತದೆ? ಇದು ಬಹು ಮುಖ್ಯಪ್ರಶ್ನೆ. ಅಕ್ಷರ ಪ್ರಚಾರ ಸಮಿತಿಯು ಕೆಲಸ ಮಾಡಲು ಆರಂಭಿಸಿದಾಗ, ಈಸಂಬಂಧದಲ್ಲಿ ಬಹಳ ಸಂದೇಹವಿದ್ದಿತು. "ಮಕ್ಕಳು ಬೆಳಗಿನಿಂದ ಸಂಜೆಯವರೆಗೂ ಶಾಲೆಗೆ ಹೋಗಿ, ಓದುಬರಹ ಕಲಿತು ಅಕ್ಷರಸ್ಥರಾಗಬೇಕಾದರೆ ೩-೪ ವರ್ಷಗಳಾದರೂ ಬೇಕಾಗುವಾಗ, ದಿನಕ್ಕೆ ಒಂದುಗಂಟೆಹೊತ್ತು ಪಾಠಹೇಳಿಸಿಕೊಂಡು ಕಲಿಯುವ ವಯಸ್ಸನ್ನು ದಾಟಿರುವ ವಯಸ್ಕರು ಎಷ್ಟು ವರ್ಷಗಟ್ಟಲೆ ಕಲಿತರೆತಾನೆ ಅಕ್ಷರಸ್ಥರಾದಾರು?" ಎಂದು ಅನೇಕರು ಹೇಳುತ್ತಿದ್ದರು. ವಯಸ್ಕರ ಶಾಲೆಯ ವಿದ್ಯಾರ್ಥಿಗಳಿಗೆ ಮಕ್ಕಳಿಗೆ ಇರುವಷ್ಟು ವಿರಾಮ ಇಲ್ಲ, ನಿಜ. ಜೊತೆಗೆ ಸಂಸಾರ ತಾಪತ್ರಯಗಳು, ಹೊಟ್ಟೆಹೊರೆದುಕೊಳ್ಳುವ ಸಲುವಾಗಿ ಕಷ್ಟನಿಷ್ಠುರಗಳು, ಬೆಳಗಿನಿಂದ ಸಂಜೆಯವರೆಗೆ ದುಡಿದು ಶಾಲೆಗೆ ಬರಬೇಕಾದ್ದರಿಂದ ಮನಸ್ಸು ಹಗುರವಾಗಿರುವುದಿಲ್ಲ. ಹೀಗಿದ್ದರೂ ಅವರಿಗೆ ಅಗಾಧವಾದ ಅನುಭವವಿದೆ, ಗ್ರಹಣಶಕ್ತಿ ಮಕ್ಕಳಿಗಿಂತ ಚೆನ್ನಾಗಿರುತ್ತದೆ. ೪೦ನೆಯ ವಯಸ್ಸಿನವರಿಗೂ ಮನುಷ್ಯನಿಗೆ ಕಲಿಯುವಶಕ್ತಿ ಬೆಳವಣಿಗೆಯ ದಾರಿಯಲ್ಲಿರುತ್ತದೆ. ಈ ನಿರ್ಧಾರಗಳಿಗೆ ಈಗ ತಕ್ಕಷ್ಟು ಆಧಾರ ದೊರೆತಿದೆ.

ಸೇಕಡ ೪೩ ತರಗತಿಗಳು ೨ ರಿಂದ ೩ ತಿಂಗಳೊಳಗಾಗಿ ಅಕ್ಷರ ಪರಿಚಯ ಪರೀಕ್ಷೆಯನ್ನು ತೆಗೆದುಕೊಂಡವು. ಸೇಕಡ ೩೫ ತರಗತಿಗಳಲ್ಲಿ ಈ ಪರೀಕ್ಷೆಯು ನಡೆಯುವುದಕ್ಕೆ ೩ ರಿಂದ ೪ ತಿಂಗಳು ಬೇಕಾಯಿತು.

ಅಂದರೆ ಸೇಕಡ ೭೮ ತರಗತಿಗಳಲ್ಲಿ ಅಕ್ಷರ ಪರಿಚಯವು ೪ ತಿಂಗಳೊಳಗೆ ನಡೆಯಿತು.

ಸೇಕಡ ೨೨ ತರಗಳಲ್ಲಿಮಾತ್ರ ಅಕ್ಷರಪರಿಚಯಕ್ಕೆ ೪ ತಿಂಗಳಮೇಲೆ ಬೇಕಾಯಿತು.

ಮುಂದೆ ಎರಡನೆಯ ಪರೀಕ್ಷೆಗೆ ಸೇಕಡ ೫೯ ತರ

ಗತಿಗಳು ೨ ರಿಂದ ೩ ತಿಂಗಳೊಳಗೆ ಸಿದ್ಧವಾದವು. ಶೇಕಡ ೧೯ ತರಗತಿಗಳಿಗೆ ೩ ರಿಂದ ೪ ತಿಂಗಳ ಕಾಲ ಬೇಕಾಯಿತು. ಅಂದರೆ ಪುನಃ ಸೇಕಡ ೭೮ ತರಗತಿಗಳು ೪ ತಿಂಗಳೊಳಗಾಗಿ ಎರಡನೆಯ ಪರೀಯನ್ನು ಕೊಟ್ಟವು. ಉಳಿದ ೨೨ ತರಗತಿಗಳಿಗೆ ೪ ತಿಂಗಳಮೇಲೆ ಕಾಲಬೇಕಾಯಿತು.

ಆದ್ದರಿಂದ ನೂರಕ್ಕೆ ಎಪ್ಪತ್ತೆಂಟು ಶಾಲೆಗಳಲ್ಲಿ ವಿದ್ಯಾರ್ಥಿಗಳು ಸುಮಾರು ೭-೮ ತಿಂಗಳೊಳಗಾಗಿ ಪೂರ್ತ ಅಕ್ಷರಸ್ಥರಾಗುತ್ತಾರೆ; ಆದರೆ ಒಂದು ವೃತ್ತಪತ್ರಿಕೆಯ ಲೇಖನವನ್ನು ಓದಿ ತಿಳಿದುಕೊಳ್ಳುವಷ್ಟು ಯೋಗ್ಯತೆಯನ್ನು ಪಡೆಯುತ್ತಾರೆ. ಜೊತೆಗೆ ಕ್ಷೇಮ ಸಮಾಚಾರದ ಒಂದು ಕಾಗದವನ್ನು ಬರೆಯಲು ಶಕ್ತರಾಗುತ್ತಾರೆ.

ಮೂರನೆಯದಾಗಿ, ಶಾಲೆಗೆ ಸೇರಿದವರ ಪೈಕಿ ಶೇಕಡ ೭೭ ಜನ ಅಕ್ಷರ ಪರಿಚಯ ಪರೀಕ್ಷೆಯನ್ನು ಕೊಟ್ಟು ತೇರ್ಗಡೆ ಹೊಂದುತ್ತಾರೆ; ಮತ್ತು ಇವರ ಪೈಕಿ ಶೇಕಡ ೮೫ ಜನ ಎರಡನೆಯ ಪರೀಕ್ಷೆ ಕೊಟ್ಟು ತೇರ್ಗಡೆ ಹೊಂದುತ್ತಾರೆ.

ಕೊನೆಯದಾಗಿ, ಒಂದೊಂದು ತರಗತಿಯ ವಿದ್ಯಾರ್ಥಿಗಳು ಎಷ್ಟು ಎಂದು ತಿಳಿಯಬೇಕು. ಸಮಿತಿಯ ನಿಯಮಾವಳಿ ಪ್ರಕಾರ ಒಂದೊಂದು ತರಗತಿಗೆ ೨೦ರಿಂದ ೨೫ರವರೆಗೆ ವಿದ್ಯಾರ್ಥಿಗಳನ್ನು ಸೇರಿಸಬಹುದು ಎಂದು ತಿಳಿಸಿದೆ. ಕೊನೆಯವರೆಗೆ ಉಳಿಯುವರ ಸಂಖ್ಯೆ ಸುಮಾರು ೧೫ ಎಂದು ಸಮಿತಿಯವರ ನಿರೀಕ್ಷೆ.

ಈ ತರಗತಿಗಳ ಸರಾಸರಿ ಹಾಜರಿ ನೋಡಿದಲ್ಲಿ ಅದು ೧೮ ಎಂದು ಕಂಡುಬಂದಿದೆ.

ಕಾಣಿಕೆ

ಕತ್ತಲೆಯ ಕಡಲಿನಲಿ, ಕಾಲನಾ ಆಟದಲಿ,
ತೇಲುತ್ತ ಆಡುತ್ತ ಸುಳಿ ಸುಳಿದು ವರುಷದಲೆಯೊಂದು;
ಮುಂದೆ ಬರಲನುಗೈವ ಹೊಸವರುಷದುದಯದಲಿ
ಹೊಸತನದ ಹುರುಪಿನಾ ಕೈಕಾಣಿಕೆ ಇದೂ!
ಗಾಳಿಗೋಪುರದಲ್ಲಿ ಸವಿಗನಸ ನಲಿದುಂಡು
ತೃಪ್ತಿಯಾದುದು ಇಲ್ಲ; ಮುಂದಿನರಿವಾದುದಿಲ್ಲ;
ಮನೆಯೇನು? ಮಠವೇನು? ಸೇವೆಯಲಿ ಸವೆಯುತಿಹ
ಹರುಷ ಜೀವಕೆ ಹೊಸತು ಕಾಣಿಕೆಯದಿಲ್ಲ.?
ಬದುಕ ಬೇಕೆಂಬಾಸೆಯಲಿ ಜೀವನದ ಕಷ್ಟಗಳ ಮರೆದರಿ
ಶಾಂತಿ ತೊರೆಯಲಿ ಜಡತೆ, ಕೊಳೆಯನೆಲ್ಲವ ತೊಳೆದು,
ಹೊಸ ಹುರುಪಿನಲಿ ಹೊಸವರುಷದೀಪಕೆ ಬೆಳಗೆ
ಥಳ ಥಳಿಸಿ ಉಳಿಯುದೇ—ಕಿರಿಯ ಕಾಣಿಕೆ ಇದೂ.

ತಿರುಮಲೇಶ್ವರ ಅಲಂಗಾರು,
ವಿಟ್ಲ, ದ, ಕನ್ನಡ.

ಚರೈವೇತಿ ಚರೈವೇತಿ....

ಶ್ರೀ ಎಂ. ಕೆ. ಭಾರತೀರಮಣಾಚಾರ್ಯ ಎಂ.ಎ.,

"ಅಡಿಯ ಮುಂದಿಡೆ ಸ್ವರ್ಗ" ಎಂದು ಸರ್ವಜ್ಞನು ಗತಿಶೀಲನಾಗಲು ಬೋಧಿಸಿದ್ದಾನೆ; ಏಕೆಂದರೆ ಗತಿಯೇ ಜೀವನ. ನಿಂತ ನೀರು ವಿಷ; ಮೂಗು ಹಿಡಿದು ಕುಳಿತಿರುವವನು ಪಾಪಿ. ಹರಿಯುವ ನೀರಿನಲ್ಲಿ ಜೀವನವಿದೆ; ಅದರಿಂದ ಸಕಲ ಜೀವಜಂತುಗಳಿಗೂ ಜೀವನ ದೊರೆಯುತ್ತದೆ. ಅಂತೆಯೇ ಗತಿಶೀಲನಾದ ಮನುಷ್ಯನಿಂದ ಇತರರಿಗೊಂದು ಸ್ಫೂರ್ತಿ. ಪ್ರಗತಿಶೀಲನಾದವನಿಂದ ಲೋಕಕಲ್ಯಾಣ. ವಿಶಿಷ್ಟ ಜೀವನವೇ ಪ್ರಗತಿ. ಜೀವನದ ಮಾರ್ಗದಲ್ಲಿ ಸೋತು ಕೂಡುವುದು ಮೂರ್ಛೆ ಅಥವಾ ನಿದ್ರೆ, ಮಲಗುವುದು ಮರಣ, ಎಚ್ಚತ್ತು ನಡೆಯುತ್ತಿರುವುದೇ ಜೀವನ. ಗತಿ ಅಂದರೂ ಒಂದೇ ಜಾಗ್ರತಿ ಅಂದರೂ ಒಂದೇ. ಆದುದರಿಂದ ಜ್ಞಾನಿಗಳು ಸದಾ ಪ್ರಗತಿಪರನಾಗಿರಲು ಬೋಧಿಸುತ್ತಾರೆ.

ಐತರೇಯ ಬ್ರಾಹ್ಮಣದ 'ಚರೈವೇತಿ' ಎಂಬ ಹಾಡಿನಲ್ಲಿ ಇಂದ್ರನು ಹರಿಶ್ಚಂದ್ರನ ಮಗ ರೋಹಿತಾಶ್ವನಿಗೆ ಇದೇ ಶಿಕ್ಷಣವನ್ನು ಕೊಟ್ಟಿದ್ದಾನೆ.

ಆ ಹಾಡಿನ ಮೂಲ ಮತ್ತು ಭಾವಾನುವಾದ ಹೀಗಿದೆ:—

ಚರೈವೇತಿ ಚರೈವೇತಿ........

ನಾನಾಶ್ರಾನ್ತಾಯ ಶ್ರೀರಸ್ತಿ ಇತಿ ರೋಹಿತ ಶುಶ್ರುಮ
ಪಾಪೋ ನೃಷದ್ವರೋ ಜನ ಇಂದ್ರ ಇಚ್ಚರತಃ ಸಖಾ

ಚರೈವೇತಿ........ ೧

ರೋಹಿತ! ಶ್ರಮಕ್ಕೆ ಹೆದರದ ಮನುಷ್ಯನಿಗೆ ಶ್ರೀ ಲಭಿಸುತ್ತದೆ ಎಂದೇ ಕೇಳಿದ್ದೇವೆ. ಸುಮ್ಮನೆ ಕುಳಿತಿರುವ ಮನುಷ್ಯನನ್ನು ಪಾಪವು ತುಳಿದುಬಿಡುತ್ತದೆ. ಸದಾ ಪ್ರಗತಿಪರನಾದ ವ್ಯಕ್ತಿಗೆ ಇಂದ್ರನು ಮಿತ್ರನಾಗಿರುತ್ತಾನೆ.

ಆದುದರಿಂದ ಪ್ರಗತಿಪರನಾಗು, ಪ್ರಗತಿಪರನಾಗು,

ಪುಷ್ಪಿಣ್ಯೌ ಚರತೋ ಜಂಘೇ ಭೂಷ್ಣುರಾತ್ಮಾ ಫಲಗ್ರಹಿಃ
ಶೇರೇಽಸ್ಯ ಸರ್ವೇ ಪಾಪ್ಮಾನಃ ಶ್ರಮೇಣ ಪ್ರಪಥೇ ಹತಾಃ

ಚರೈವೇತಿ........ ೨

ಸದಾ ಮುಂಬರಿಯುವವನ ಪಾದಗಳಲ್ಲಿ ಸ್ಫೂರ್ತಿಯಿರುತ್ತದೆ. ಆತನ ಆತ್ಮವು ಪರಿಶ್ರಮದ ಫಲದಿಂದ ವಿಭೂಷಿತವಾಗುತ್ತದೆ. ಗತಿಪರನ ಪಾಪಗಳು ಆಯಾಸದಿಂದ ಹಿಂದುಳಿದು ಮಲಗಿಬಿಡುತ್ತವೆ. ಆದುದರಿಂದ ನೀನು

ಪ್ರಗತಿಪರನಾಗು.

ಆಸ್ತೇ ಭಗ ಆಸೀನಸ್ಯ ಊರ್ಧ್ವಸ್ತಿಷ್ಠತಿ ತಿಷ್ಠತಃ
ಶೇತೇ ನಿಪದ್ಯಮಾನಸ್ಯ ಚರಾತಿ ಚರತೋ ಭಗಃ

ಚರೈವೇತಿ........ ೩

ಕುಳಿತವನ ಭಾಗ್ಯ ಕುಳಿತಿರುತ್ತದೆ; ನಿಂತಿರುವವನ ಭಾಗ್ಯ ನಿಂತಿರುತ್ತದೆ; ಬಿದ್ದಿರುವವನ ಭಾಗ್ಯ ನಿದ್ರಿಸುತ್ತಿರುತ್ತದೆ. ನಿಂತು ನಡೆವವನ ಭಾಗ್ಯ ಅವನ ಮುಂದೆ ಓಡುತ್ತಿರುತ್ತದೆ.

ಆದುದರಿಂದ ಪ್ರಗತಿಪರನಾಗು.

ಕಲಿಃ ಶಯಾನೋ ಭವತಿ ಸಂಜಿಹಾನಸ್ತು ದ್ವಾಪರಃ
ಉತ್ತಿಷ್ಠಂಸ್ತ್ರೇತಾ ಭವತಿ ಕೃತಂ ಸಂಪದ್ಯತೇ ಚರನ್

ಚರೈವೇತಿ........ ೪

ಸುಪ್ತನು ಕಲಿ; ಆಕಳಿಸುವವನು ದ್ವಾಪರ. ಜಾಗ್ರತನು ತ್ರೇತಾ; ಆದರೆ ಮುನ್ನಡೆವವನು ಕೃತಯುಗಿ.

ಆದುದರಿಂದ ಪ್ರಗತಿಪರನಾಗು.

ಚರನ್ವೈ ಮಧುವಿನ್ದತಿ ಚರನ್ ಸ್ವಾದುಮುದಂಬರಂ
ಸೂರ್ಯಸ್ಯ ಪಶ್ಯ ಶ್ರೇಮಾಣಂ ಯೋ ನ ತಂದ್ರಯತೇ ಚರನ್

ಚರೈವೇತಿ........ ೫

ಗತಿಶೀಲನಿಗೆ ಅಮೃತವು ಲಭಿಸುತ್ತದೆ; ಮುನ್ನಡೆಯಲ್ಲಿ ಅವನ ಇಷ್ಟಾರ್ಥ ಸಿದ್ಧಿಸುತ್ತದೆ. ದಿನವೆಲ್ಲ ಚರಿಸುತ್ತಿದ್ದರೂ ಆಯಾಸಗೊಳ್ಳದ ಸೂರ್ಯನ ಪರಿಶ್ರಮವನ್ನು ನೋಡು.

ಅವನಂತೆಯೇ ಪ್ರಗತಿಪರನಾಗು.

ಪ್ರಗತಿಯ ಸತ್ಯಾರ್ಥವಿದು. ಇದು ಉತ್ತರೋತ್ತರ ಉನ್ನತಿಯನ್ನು ಸೂಚಿಸುತ್ತದೆ. ಹಳೆಯದೆಲ್ಲ ಹಾಳು ಹೊಲಸು ಎನ್ನುವ ಪ್ರಗತಿ ಇದಲ್ಲ. ಪ್ರಗತಿ ಎಂಬ ಪದವೇ ಸಾಪೇಕ್ಷಕ. ಇಂದಿನ ಪ್ರಗತಿ ನಾಳೆಯ ಪ್ರಗತಿಗಿಂತ ಹಿಂದಿರುವುದು ನಿಜ.

ಆದರೆ ಇವುಗಳಲ್ಲಿ ಪರಸ್ಪರ ಸಂಬಂಧವಿಲ್ಲದಿಲ್ಲ. ಪುರಾತನವೇ ಸರಿ, ನೂತನವೆಲ್ಲ ತಪ್ಪು ಎಂಬ ಅಭಿಪ್ರಾಯವೂ ಇದಕ್ಕೆ ದೂರ. ಹಳೆಯುದನ್ನು ಹೊಸ ನೋಟದಿಂದ ನೋಡುವುದು ನಿಜವಾದ ಪ್ರಗತಿಯ ಗುರಿ. ಸೂರ್ಯನ ಉದಾಹರಣೆಯಲ್ಲಿ ಇದು ಸ್ಪಷ್ಟವಾಗಿದೆ. ಸೂರ್ಯನು ಪ್ರತಿದಿನವೂ ಕಾಣದ ವಿಶ್ವವನ್ನೇನೂ ನೋಡುತ್ತಿಲ್ಲ. ಆದರೂ ನಿಯಮಬದ್ಧವಾಗಿ ತನ್ನ ಕಾರ್ಯದಲ್ಲಿ ತಾನು ತತ್ಪರನಾಗಿದ್ದಾನೆ. ಅಂತೆಯೇ ಪೃಥ್ವಿಯೂ ಕೂಡ ತನ್ನ ಪಥದಲ್ಲಿ ಹಗಲಿರುಳೂ ಒಂದೇ ಸಮನೇ ಸುತ್ತುತ್ತಲಿದೆ. ಇಲ್ಲಿ ವಿಶ್ರಾಂತಿಗೆ ಎಡೆ ಇಲ್ಲ. ವಿಶ್ರಾಂತಿ ಎಂದರೆ ಪ್ರಳಯವೇ; ಹೀಗೆ ತನ್ನ ಅಕ್ಷದ ಮೇಲೆ ತಾನು ಸುತ್ತಿ ವಿಕಾಸವನ್ನು ಹೊಂದಿದೆ ಈ ಭೂಮಿ. ಇದರಂತೆ ಸಮಸ್ತ ಸೌರಪರಿವಾರವೂ ಗತಿಶೀಲವಾಗಿದೆ.

ಈ 'ಗತಿ'ಯ ಅಂತ ಅನಂತ ; ಜಲಗತಿಯಂತೆ ಅಸೀಮನ ಸಹವಾಸವಾಗುವ ವರೆಗೂ ಸಾಗುತ್ತಿರುತ್ತದೆ. ಅಂದಿನವರೆಗೂ ಗತಿರತವಾಗಿರುವುದು ಪ್ರತಿಯೊಂದು ಚರಾಚರ ವಸ್ತುವಿನ ಧರ್ಮ.

ಆರ್ಯ ಋಷಿಯ ದರ್ಶನದಲ್ಲಿ ಅದೇ ಪ್ರಗತಿ,

* ಪ್ರಕಟವಾಗಲಿರುವ "ಸನಾತನ" ಎಂಬ ಗ್ರಂಥದಿಂದ.

ಸ್ವರಾಜ್ಯ

ಸ್ವರಾಜ್ಯಂ ಸರ್ವದಾ ಶ್ರೇಯಃ
ಕಾಮಂ ದೋಷ ಸಮನ್ವಿತಂ ।
ಸ್ವಾಧೀನಂ ಚ ಸುಖಂ ಚೈವ
ಪರರಾಜ್ಯಾತ್ ಸು ಶಾಸಿತಾತ್ ॥

ಎಷ್ಟೇ ದೋಷಪೂರ್ಣವಾಗಿರಲಿ, ಸುವ್ಯವಸ್ಥಿತವಾದ ಪರರ ಆಳ್ವಿಕೆಗಿಂತ ಅದು (ಸ್ವರಾಜ್ಯ) ಕೋಟಿ ಪಾಲಿಗೆ ಉತ್ತಮ ; ಏಕೆಂದರೆ ಸುಖ ಮತ್ತು ಸ್ವಾತಂತ್ರ್ಯವಿರುವುದು ಅಲ್ಲಿಯೇ.

*ಕಣ್ವಾಶ್ರಮದ ಹೂದೋಟದಲ್ಲಿ

ಶ್ರೀ. ಅಮ್ಮೆಂಬಳ ಶಂಕರನಾರಾಯಣ, ವಿದ್ಯಾರ್ಥಿ
ಮಂಗಳೂರು.

[ನೀರೆರೆಯುತ್ತಿರುವ ಶಕುಂತಲೆಯು ಇಬ್ಬರು ಸಖಿಯರೊಂದಿಗೆ ಪ್ರವೇಶಿಸುವಳು.]

ಶಕುಂತಲೆ :— ಇತ್ತಿತ್ತ ಸಖಿಯರಿರ!

ಅನಸೂಯೆ

ಸಖಿ, ಶಕುಂತಲೆ! ತಾತ ಕಣ್ವನಿಗೆ ನಿನಗಿಂತ
ಆಶ್ರಮದ ವೃಕ್ಷಗಳು ಪ್ರಿಯತರಗಳೆಂದೂಹಿ-
ಸುವೆನದೇಕೆಂದೊಡವ ನವ ಮಾಲಿಕಾ ಕುಸುಮ
ದಂತೆ ಕೋಮಲೆಯಾದ ನಿನ್ನನೀ ವೃಕ್ಷಗಳ
ಮೂಲಾಲವಾಲಕ್ಕೆ ನೀರ ತೀವಲ್ಕೆಂದು
ನೇಮಿಸಿದ.

ಶಕುಂತಲೆ

ಪಿತನಾಜ್ಞೆಯು ಮಾತ್ರವಲ್ಲೆನಗೆ.
ಇವುಗಳಲಿ ಸೋದರ ಸ್ನೇಹವಿರುವುದು.
(ವೃಕ್ಷಸೇಚನಗೈಯುವಳು)

ದುಷ್ಯಂತ :—(ಸ್ವಗತ) ಇವಳೆ
ಆ ಕಣ್ವದುಹಿತೆಯೇಂ? (ವಿಸ್ಮಯದಿಂದ)
ಇವಳನಾಶ್ರಮ ಧರ್ಮ-
ದಲಿ ಯೋಜಿಸಿದ ಪೂಜ್ಯರಾದ ಕಾಶ್ಯಪ ಮುನಿಗ
ಳುಚಿತಜ್ಞರಲ್ಲವಲೆ?
ಇವಳ ಈ ವಪುವೆಂದ-
ರವ್ಯಾಜ ಮೋಹನಾಕಾರವಿದ ತಪಕರ್ಹ
ವಪ್ಪಂತೆ ಸಾಧಿಸಲ್ಕಿಚ್ಛಿಸುವ ಋಷಿಯಿವನು
ಕನ್ನೈದಿಲೆಲೆಯ ಧಾರೆಯಿನಾ ಶಮೀ ಲತೆಯ
ಕತ್ತರಿಸಲೆಳಸುವಂತಿಹನು ನಿಶ್ಚಯವಾಗಿ.
ಆಗಲೀ ಮರದ ಮರೆಯೊಳಗಿದ್ದು ವಿಶ್ವಾಸ
ಯುಕ್ತವಾಗಿವಳನ್ನು ದಿಟ್ಟಿಸುವೆ.
(ಹಾಗೆಯೇ ಮಾಡುವನು)

ಶಕುಂತಲೆ :— ಎಲೆ ಸಖೀ!
ಅನಸೂಯೆ! ನನ್ನೆದೆಯ ನೀ ಪ್ರಿಯಂವದೆ ನಾರ
ವಸ್ತ್ರದಿಂದತಿಯಾಗಿ ಬಿಗಿದು ಕಟ್ಟಿಹಳಿದನು
ಶಿಥಿಲವಾಗಿಸು.

ಅನಸೂಯೆ :— ಅಯ್ತು.
(ಹಾಗೆಯೇ ಸಡಿಲಿಸುವಳು)

ಪ್ರಿಯಂವದೆ:-(ನಗುತ್ತಾ) ಇಲ್ಲೀಗ ಕುಚಗಳನು
ವಿಸ್ತಾರವಾಗಿಸುವ ನಿನ್ನ ಜವ್ವನವನ್ನು
ನಿಂದಿಸೆಲೆ!

ದುಷ್ಯಂತ:-(ಸ್ವಗತ) ಹೆಚ್ಚಾಗಿ ಇವಳಿಗೀ ಯೌವನ
ವಯಸ್ಸಿಗನುರೂಪವಲ್ಲದ ನಾರ ತೊಡಿಗೆ ಚೆಲು
ವಿನ ಸಿರಿಯ ಹೆಚ್ಚಿಸದೆ ಇರಲಾರದೆಂತೆನಲು,—
ತಾವರೆಯು ನಾವರಿಸಿ ಹಾವಸೆಯುದಿದ್ದರೂ,
ಕಣ್ಗೆಡ್ಡವಾಗಿಹುದು. ತಂಗದಿರನಂಗದಲಿ
ಕರಿಯಾದ ಕರೆಯಿದ್ದರೂ ಕೂಡ ಶೋಭೆಯನು
ಹೆಚ್ಚಿಪುದು. ವಲ್ಕಲವನುಟ್ಟಿದ್ದರೂ ಕೂಡ
ಇವಳೀ ಲತಾಂಗಿಯತಿ ಮನ ಮೋಹನಾಕಾರೆ!
ಅದರಿಂದೆ, ಮಧುರವಾದಾಕಾರವುಳ್ಳವರಿ-
ಗಾವುದಾಭರಣವೆನಿಸುವುದಿಲ್ಲ?

ಶಕುಂತಲೆ:—(ಮುಂದೆ ನೋಡಿ) ನನ್ನನ್ನು
ಕೇಸರದ ವೃಕ್ಷವಿದು ಗಾಳಿಯಿಂದಲೆಯುತಿಹ
ಚೆಂದಳಿರ ಬೆರಳುಗಳಿನಾಹ್ವಾನಗೈಯುವಂ
ತಿದೆಯಿದರನಾದರಿವೆ.
(ಮುಂದೆ ಹೋಗುವಳು)

ಪ್ರಿಯಂವದೆ:— ಸಖಿ, ಶಕುಂತಲೆ! ಒಂದು
ಚಣವಲ್ಲಿಯೇ ನಿಲ್ಲು, ಕೇಸರದ ವೃಕ್ಷವದು

---

* ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕದ ಪ್ರಥಮಾಂಕದಿಂದ

ನೀನು ಹತ್ತಿರವಿದ್ದ ಕಾರಣದಿ ಲತೆಯಿಂದ ಕೂಡಿದಂತೆಸೆಯುವುದು.

ಶಕುಂತಲೆ:— ಇದರಿಂದಲೇ ನೀನು ಸಲೆ 'ಪ್ರಿಯಂವದೆ'ಯೆನಿಪೆ.

ದುಷ್ಯಂತ:—(ಸ್ವಗತ) ಪ್ರಿಯಪಾದರೂ ಕೂಡ ದಿಟವಾದುದನ್ನೆ ಪ್ರಿಯಂವದೆಯೊರೆಯುವಳು; ಶಕುಂತಲೆಯ ಕುರಿತೆಂತೆನಲು,—

ಇವಳ ಚೆಂದುಟಿ ಸಾಟಿ ಕೆಂದಳಿರ ತೆಂಕದಲಿ; ಬಾಹುಗಳು ಹೃದು ವಿಟಪಗಳ ಸದೃಶವಾಗಿಹವು; ಕುಸುಮದಂತೆಸೆಯುತಿಹ ಯೌವನಂ ಸನ್ನದ್ಧವಂಗಗಳಲಾಗಿಹುದು.

ಅನಸೂಯೆ:—ಸಖಿ, ಶಕುಂತಲೆ! ಚೂತ ವೃಕ್ಷಕೀನವ ಮಾಲಿಕಾ ಲತೆಯ ನೀಂ ಸ್ವಯಂವರವಧುವನಾಗಿಸುತ, ಬಳಿಕಾ 'ವನಜ್ಯೋತ್ಸ್ನೆ' ಯೆಂದು ನಾಮುವನಿಟ್ಟೆ. ಮರೆತೆಯೇನದರನ್ನು?

ಶಕುಂತಲೆ:— ಮರೆತೆನಾದರೆ ತನ್ನನೂ ಕೂಡ ಮರೆಯುವೆನು.

(ಲತೆಯ ಬಳಿಗೈದಿ ನೋಡಿ)

ಸಖಿಯೆ, ರಮಣೀಯ ಸಮಯದಿ ಲತಾ-ವೃಕ್ಷ ದಂಪತಿಗಳಿಗೆ ಸಂಬಂಧ ಸಮನಿಸಿದೆ.—ನವಕುಸುಮ ಯೌವನೆ ವನಜ್ಯೋತ್ಸ್ನೆ; ಹಾಗೆಯೇ ಸುಸ್ನಿಗ್ಧ ಪಲ್ಲವಗಳಿರುವುದರಿನುಪಭೋಗ ಯೋಗ್ಯವಿದು ಚೂತ ತರು.

(ನೋಡುತ್ತಾ ನಿಲ್ಲುವಳು)

ಪ್ರಿಯಂವದೆ:—(ಮುಗುಳ್ನಗುವಿನೊಡನೆ) ಅನಸೂಯೆ! ಈ ಶಕುಂತಲೆ ವನಜ್ಯೋತ್ಸ್ನೆಯನ್ನಿಷ್ಟೊಂದು ದಿಟ್ಟಿಪಳದೇಕೆಂದು ಬಲ್ಲೆಯೇಂ?

ಅನಸೂಯೆ:— ನಾನರಿಯೆ. ನೀನೊರೆಯು.

ಪ್ರಿಯಂವದೆ- ಎಂತೀ ವನಜ್ಯೋತ್ಸ್ನೆಯನುರೂಪ ಪಾದಪದೊಳೊಡವೆರೆಯಿತಂತೆಯೇ ತಾನು ಸಹ ತನಗೆ ತಕ್ಕವನಾದ ವರನೊಬ್ಬನನು ಸೇರಬೇಕೆಂದು!

ಶಕುಂತಲೆ:—

(ಅಸೂಯೆಯಿಂದ) ಇದು ನಿನ್ನ ಆತ್ಮಗತವಾಗಿರುವ ಅಭಿಲಾಷೆ ನಿಶ್ಚಯಂ.

(ಕೊಡವನ್ನು ಬಗ್ಗಿಸಿ ನೀರೆರೆಯುವಳು)

ಪಾಠಕಾಃ ಪಠಿತಾರಶ್ಚ। ಯೇಚಾನ್ಯೇ ಶಾಸ್ತ್ರ ಚಿಂತಕಾಃ॥
ಸರ್ವೇ ವ್ಯಸನಿನೋ ಮೂರ್ಖಾಃ। ಯಃ ಕ್ರಿಯಾವಾನ್
ಸ ಪಂಡಿತಃ॥

ಓದುವವರು, ಬೋಧಿಸುವವರು ಮತ್ತು ಶಾಸ್ತ್ರಾರ್ಥಗಳ ಅಧ್ಯಯನದಲ್ಲೇ ನಿರತರಾಗಿಪವರು, ಇವರೆಲ್ಲರೂ ವ್ಯಸನಿಗಳು ಮತ್ತು ಮೂರ್ಖರು; ಕಾರ್ಯ ತತ್ಪರನಾದವನೇ ಪಂಡಿತನು.

ರವಿವರ್ಮನ ಚಿತ್ರಗಳು

ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ.ಎ., ಬೆಂಗಳೂರು.

ಚಿತ್ರಕಲೆ ಏನೆಂಬುದನ್ನು ಅರಿಯದವರಿಗೆ ರವಿವರ್ಮನ ಚಿತ್ರಗಳು ಅತ್ಯಂತ ಸೊಗಸುವುದರಲ್ಲಿ ಆಶ್ಚರ್ಯವಿಲ್ಲ. ನನಗೂ ಒಮ್ಮೆ, ಬಹುಕಾಲದ ಹಿಂದೆ, ಆತನ ಚಿತ್ರಗಳು ಬಹು ಮೆಚ್ಚಿಗೆಯಾಗಿದ್ದುವು. ಆದರೆ, ಸರ್ ವಿಲಿಯಂ ಆರ್ಪೆನ್‌ರವರು ಬರೆದಿರುವ 'The outline of Art' ಎಂಬ ಪಾಶ್ಚಾತ್ಯ ಕಲಾ ವಿಚಾರವಾದ ಪ್ರಮಾಣ ಗ್ರಂಥವನ್ನು ಓದಿ, ಅದರಲ್ಲಿ ನಿರೂಪಿಸಿರುವ ಪಾಶ್ಚಾತ್ಯ ಚಿತ್ರಕಲೆಯ ಬೆಳವಣಿಗೆಯ ಪರಿಯನ್ನು ತಿಳಿದುಕೊಂಡು, ಆ ಕಲಾಭಿವೃದ್ಧಿಯ ಮೈಲಿಗಲ್ಲುಗಳಂತಿರುವ ಕೆಲವು ಮಹಾಕೃತಿಗಳ ಪ್ರತಿಕೃತಿಗಳನ್ನು ಪರಾಮರ್ಶಿಸಿದ ಮೇಲೆಯೂ, ಅಜಂತೆಯ ಚಿತ್ರಗಳ ರೇಖಾ ವೈಖರಿ, ವರ್ಣವಿನ್ಯಾಸ ವೈಭವ, ಆದರ್ಶಪೂರ್ಣ ಭಾವ ಪ್ರಕಾಶನ, ಒಟ್ಟಿನಲ್ಲಿ ಅವುಗಳ ಜೀವಂತ ಸ್ವರೂಪ—ಇವುಗಳನ್ನು (ಅವುಗಳ ಪ್ರತಿಕೃತಿಗಳ ಮೂಲಕ) ಕಂಡು ಮುದಗೊಂಡಮೇಲೆಯೂ ಶ್ರೇಷ್ಠ ಭಾರತೀಯ ಚಿತ್ರಕಲಾವಿದರೆನಿಸಿದ ಶ್ರೀ|| ಗಳಾದ ಅವನೀಂದ್ರನಾಥಠಾಕೂರ, ಕೆ. ವೆಂಕಟಪ್ಪ, ನಂದಲಾಲ ಬಸು, ಪ್ರಮೋದಕುಮಾರ ಚಟರ್ಜಿ, ದೇವೀ ಪ್ರಸಾದ ರಾಯ್ ಚೌಧುರಿ ಮೊದಲಾದವರ ಅಪೂರ್ವ ಸುಂದರ ಕಲಾಕೃತಿಗಳನ್ನು ಅವಲೋಕಿಸಿ ಆನಂದಿಸಿದ ಮೇಲೆಯೂ, ರವಿವರ್ಮನ ಚಿತ್ರಗಳಲ್ಲಿ ನನಗಿದ್ದ ಅಭಿಮಾನ ಬಹುಮಟ್ಟಿಗೆ ಕುಗ್ಗಿತು. ಜನತೆಯ ಅಭಿಮಾನ ಮಾತ್ರ ಇನ್ನೂ ಕುಗ್ಗದೆ ಹಾಗೆಯೇ ಇದೆ; ಅಥವಾ ಇದೆಯೆಂದು ನನ್ನ ನಂಬಿಕೆ. ಹಾಗೆ ಇರುವುದಕ್ಕೆ ಮುಖ್ಯ ಕಾರಣ—ಉತ್ತಮ ಚಿತ್ರಕಲೆಯ ವಿಚಾರವಾಗಿ ಜನತೆಗೆ ತಕ್ಕ ತಿಳಿವಳಿಕೆ ಇಲ್ಲದಿರುವುದು, ಮತ್ತು ನಿಜವಾಗಿಯೂ ಉತ್ತಮವಾದ ಚಿತ್ರಕಲಾಕೃತಿಗಳ ಮಾದರಿಗಳು ಜನತೆಗೆ ರವಿವರ್ಮನ ಚಿತ್ರಗಳಷ್ಟು ಸುಲಭವಾಗಿ ದೊರಕದಿರುವುದು. ಈ ಎರಡು ಅಭಾವಗಳನ್ನೂ ಹೋಗಲಾಡಿಸುವ ಹೊಣೆಯನ್ನು ಕೆಲವರು ವಹಿಸಿಕೊಳ್ಳಬೇಕು: ಈ ಭಾಗದಲ್ಲಿ ಸಾಕಷ್ಟು ಕೆಲಸ ನಡೆದಿಲ್ಲವಾದರೂ, ಈಗ್ಗೆ ಹಲವು ವರ್ಷಗಳ ಹಿಂದೆಯೇ (೧೯೩೨ರಲ್ಲಿ) ಶ್ರೀ. ಅ. ನ. ಕೃಷ್ಣರಾಯರು, 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಗ್ರಂಥವನ್ನು ಬರೆದು ಬಹಳ ಉಪಕಾರ ಮಾಡಿದ್ದಾರೆ. ಈ ಗ್ರಂಥವನ್ನು ಅವಲೋಕನಮಾಡುವ ಹೊಣೆ ನನ್ನ ಮೇಲೆ ಬಿದ್ದಿತ್ತು. ರವಿವರ್ಮನ ಕಲೆಯ ವಿಚಾರವಾಗಿ ಶ್ರೀ ಕೃಷ್ಣರಾಯರಿಗೂ ನನಗೂ ಅಂತಹ ಹೆಚ್ಚಿನ ಅಭಿಪ್ರಾಯಭೇದ ಕಂಡುಬರಲಿಲ್ಲ; ನನ್ನ ಅಭಿಪ್ರಾಯ ಈಗಲೂ ಬದಲಾಯಿಸದೆ ಬಹುಮಟ್ಟಿಗೆ ಹಾಗೆಯೇ ಇರುವುದರಿಂದ ಅದು ಏನೆಂಬುದನ್ನು ಬೇರೆಯ ಮಾತುಗಳಲ್ಲಿ ಹೇಳುವ ಶ್ರಮ ತೆಗೆದುಕೊಳ್ಳದೆ, ಗ್ರಂಥಾವಲೋಕನದ (ಪ್ರಬುದ್ಧ ಕರ್ಣಾಟಕ, ಸಂಪುಟ ೧೫, ಸಂಚಿಕೆ ೧—ಪುಟ ೧೧೬—೧೧೯) ಒಂದು ಭಾಗವನ್ನು ಇಲ್ಲಿ ಎತ್ತಿಕೊಟ್ಟು ತಿಳಿಸ ಬಯಸುತ್ತೇನೆ.

"ಸಹಸ್ರಾರು ಜನರು ರವಿವರ್ಮನ ಚಿತ್ರಗಳನ್ನು ಮೆಚ್ಚಿ ತಲೆದೂಗುತ್ತಿರುವಾಗ ಅವನ ಚಿತ್ರಗಳಲ್ಲೇನಿದೆ ಎಂದು ಕೇಳುವುದಕ್ಕೂ ಧೈರ್ಯಬೇಕು. ಈ ಗ್ರಂಥವನ್ನು ಬರೆದ ಕೃಷ್ಣರಾಯರ ಧೈರ್ಯವನ್ನು ಮೆಚ್ಚುತ್ತೇನೆ. ಉತ್ತಮ ಕಲಾ ಪಕ್ಷಪಾತಿಯು ಯಾವನೇ ಆಗಲಿ ಶ್ರೀಮಾನ್ ಕೃಷ್ಣರಾಯರ ಈ ಮತವನ್ನು ಅಂಗೀಕರಿಸಬೇಕು: 'ಚಿತ್ರಕಾರನು ಸ್ಥೂಲ ಜಗತ್ತಿನಲ್ಲಿ ತಾನು ಕಾಣುವ ಕೆಲ ಸ್ತ್ರೀಪುರುಷ ವ್ಯಕ್ತಿಗಳನ್ನು ತಂದು ಅವರ ಪ್ರತಿರೂಪಗಳಿಗೆ ಬಣ್ಣ ಬಳಿದು, ಲಾಕ್ಷಣಿಕರು ಹೇಳು




ವಂತೆ ಇಷ್ಟೆರಡು ಕೈಗಳನ್ನಿಟ್ಟು ಅವಕ್ಕೆ 'ಸರಸ್ವತಿ' ಎಂದು ಹೆಸರಿಟ್ಟರೆ ಅವು ಸರಸ್ವತಿ ಯಾಗುವುದಿಲ್ಲ. ರವಿವರ್ಮನ ದೇವ ದೇವತೆಗಳೆಲ್ಲರ ಪಾಡೂ ಇಷ್ಟೆ!' ಇದಕ್ಕೆ ಹಲವು ಕಾರಣಗಳನ್ನು ಗ್ರಂಥಕರ್ತರು ಕೊಡುತ್ತಾರೆ: (೧) ರವಿವರ್ಮನು 'ಅರಮನೆಯ ಸುಖವಾತಾವರಣದಲ್ಲಿ ಬೆಳೆದು ಬಾಳಿದವನು;' (೨) 'ದೊಡ್ಡ ದೊಡ್ಡ ಭಾವನೆಗಳ ಗರ್ಭವನ್ನು ಹೊರುವ ಸಂಕಟಕ್ಕೆ ಹೋಗುತ್ತಿರಲಿಲ್ಲ;' (೩) ಸ್ವಸಾಮರ್ಥ್ಯ ಸ್ವಕಲ್ಪನೆಯಿಂದ ಚಿತ್ರಗಳನ್ನು ರಚಿಸಲಾರದವನಾಗಿದ್ದು, 'ಕೆಲವೇ ಶಾಸ್ತ್ರೀಯರ ಹಾಗೂ ನಟರ ಸಹಾಯದಿಂದ ತನ್ನ ಚಿತ್ರಗಳನ್ನು ನಿರ್ಮಿಸುತ್ತಲಿದ್ದನು.' ಆದ್ದರಿಂದ ಅವನ ಚಿತ್ರಕಲೆಯು ಉತ್ತಮತರಗತಿಗೆ ಸೇರಿದುದಲ್ಲ; ಪರಾನುಕರಣದ ಛಾಯೆ ಮಾತ್ರ; ಭಾರತೀಯ ಕಲಾವಿದರ ಶ್ರೇಣಿಯಲ್ಲಿ ಅವನಿಗೆ ಸ್ಥಾನವಿಲ್ಲ— ಎಂದು ಲೇಖಕರ ಅಭಿಪ್ರಾಯ. ಆದರೂ ಅವನ ಚಿತ್ರಗಳಿಗೆ ಮಾನ್ಯತೆ ದೊರೆಕಿದೆಯೆ? ಇಟ್ಟು ಇಂಡಿಯಾ ದೇಶದಲ್ಲಿ ರವಿವರ್ಮನೆಂದರೆ ಗೊತ್ತಿಲ್ಲದವರು ಅತಿವಿರಳವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ರವಿವರ್ಮ ಚಿತ್ರಗಳು ನಿಜವಾಗಿಯೂ ಅಷ್ಟು ಉತ್ತಮವಾದವುಗಳೇ ಅಲ್ಲದೆ ಹೋದರೆ ಜನತೆಯ ಅಭಿರುಚಿಯು ರವಿವರ್ಮನ ಚಿತ್ರಗಳನ್ನು ಪುರಸ್ಕರಿಸುವಷ್ಟು ಕೀಳಾದುದೇ? ಈ ಪ್ರಶ್ನೆಗೆ ಉತ್ತರಕೊಡುವುದು ಸ್ವಲ್ಪ ಕಷ್ಟ. ಇತ್ತೀಚಿಗೆ ರವಿವರ್ಮನ ಚಿತ್ರಗಳ ಅಚ್ಚಿನ ಪ್ರತಿಗಳು ಅಗ್ಗವಾಗಿ ದೊರೆಯಹತ್ತಿದವು; ಜೊತೆಗೆ ಸಾಮಾನ್ಯಜನರ ಮನಸ್ಸನ್ನು ತಣಿಸುವ ಕೆಲವು ಅಂಶಗಳು ರವಿವರ್ಮನ ಚಿತ್ರಗಳಲ್ಲಿವೆ. ಸುಂದರವಾದ ಸ್ತ್ರೀ

ಪುರುಷ ವ್ಯಕ್ತಿಗಳು ಅಂದವಾದ ರೀತಿಯಲ್ಲಿ ಕಣ್ಣಿಗೊಪ್ಪುವ ಬಣ್ಣಗಳಿಂದ ಚಿತ್ರಿತವಾಗಿವೆ. ಲಕ್ಷ್ಮೀ ಸರಸ್ವತೀ ಮೊದಲಾದ ಚಿತ್ರಗಳನ್ನು ಲಕ್ಷ್ಮೀ ಸರಸ್ವತೀ ಎಂದು ಮೆಚ್ಚುವುದಕ್ಕಿಂತಲೂ ಸುಂದರ ಸ್ತ್ರೀವ್ಯಕ್ತಿಗಳೆಂದು ಮೆಚ್ಚುತ್ತಾರೆಂಬುದು ನಮ್ಮ ಭಾವನೆ. ಅವನ ಚಿತ್ರಗಳು ಮೇಲುನೋಟಕ್ಕೆ ಚೆನ್ನಾಗಿರಬಹುದು. ಆದರೆ, 'ಇಂದಿನ ವೇಷಭೂಷಣಗಳನ್ನು ಹಿಂದಿನ ಸನ್ನಿವೇಶ, ವಸ್ತುಗಳಿಗೆ ಜೋಡಿಸಿ ಅವುಗಳ ಐತಿಹಾಸಿಕ ಕಾವ್ಯ ಕಲಾರೂಪಕ, ರಾಷ್ಟ್ರೀಯ ಪ್ರಾತಿನಿಧ್ಯದ ಗುಣಗಳನ್ನು ಅಳಿಸಿಬಿಟ್ಟಿದ್ದಾನೆ....ರವಿವರ್ಮನ ತಪ್ಪೆಂದರೆ, ಜೀವ ದೇವತೆಗಳನ್ನು ತನ್ನ ಕಲಾ ರಂಗಕ್ಕೆಳೆಯಬಾರದಾಗಿತ್ತು; ಆದರೆ ಅವನು ಅಷ್ಟುಮಟ್ಟಿಗೆ ತನ್ನ ಕಲೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಿಲ್ಲ.... ರವಿವರ್ಮನ ಚಿತ್ರಕಲೆಯು ಉತ್ಕೃಷ್ಟವಾದುದೆಂದು ಒಪ್ಪದಿರಬಹುದು; ಆದರೆ ಅವನು ಚಿತ್ರಕಲೆಯುಗಂಧರನ್ನೇ ಅರಿಯನೆಂದು ಹೇಳುವುದು ಕಷ್ಟ."

ಪಾಶ್ಚಾತ್ಯ ಚಿತ್ರಕಲೆಯಲ್ಲಿ ಅನೇಕ ಸಂಪ್ರದಾಯಗಳಿವೆ; ಭಾರತೀಯ ಚಿತ್ರಕಲೆಯಲ್ಲಿಯೂ ಹಲವು ಮಾರ್ಗಗಳು ಕಂಡುಬರುತ್ತವೆ. ಆದರೆ ಸ್ಥೂಲವಾಗಿ ವಾಸ್ತವಿಕ ಮಾರ್ಗ, ಆದರ್ಶಮಾರ್ಗ ಎಂಬ ಎರಡನ್ನು ಎಣಿಕೆಯಲ್ಲಿಟ್ಟುಕೊಳ್ಳಬಹುದು. ಪಾಶ್ಚಾತ್ಯ ಕಲೆಯಲ್ಲಿ ವಾಸ್ತವಿಕ ಪಂಥಾನುಯಾಯಿಗಳು ಬಹುಮಂದಿ; ಈಗಲೂ ಆ ಪಂಥಕ್ಕೆ ಹೆಚ್ಚಿನ ಮನ್ನಣೆ ಇದ್ದೇ ಇದೆ. ಕಲಾವಿದ ಯಾವ ಪಂಥಕ್ಕೆ ಸೇರಿದ್ದಾನೆ ಎನ್ನುವುದು ಅಷ್ಟು ಮುಖ್ಯವಲ್ಲ. ಕಲಾವಿದ ಆ ಸಂಪ್ರದಾಯದ ಹರವಿನಲ್ಲಿ ಹೇಗೆ ತನ್ನ ಪ್ರತಿಭೆಯನ್ನು ಬೀರಿದ್ದಾನೆ, ಕಲ್ಪನಾ ಶಕ್ತಿಯನ್ನು ಮೆರೆದಿದ್ದಾನೆ ಎನ್ನುವುದು ಮುಖ್ಯ. ಆದ್ದರಿಂದ ವಾಸ್ತವಿಕ ಸಂಪ್ರದಾಯಕ್ಕೆ ಸೇರಿದ ರವಿವರ್ಮನ ಕಲೆಯನ್ನು ವಿಚಾರಮಾಡುವಾಗ ಆ ಸಂಪ್ರದಾಯದ ಮಾನದಂಡದಿಂದ ಅಳೆಯಬೇಕಾದ್ದು ನ್ಯಾಯ.





ಜಾನ್ ರಸ್ಕಿನ್ ಎಂಬ ಆಂಗ್ಲ ಮಹಾಶಯನು ಶ್ರೇಷ್ಠ ಸಾಹಿತಿಯೂ ಅಲ್ಲದೆ ಉತ್ತಮ ಕಲಾ ವಿಮರ್ಶಕನೂ ಆಗಿದ್ದನು. ಟರ್ನರ್ ಎಂಬ ಆಂಗ್ಲ ವರ್ಣ ಚಿತ್ರಕಾರನ ಪ್ರತಿಭೆಯನ್ನು ವಿಶೇಷ ಪ್ರಕಾಶಕ್ಕೆ ತಂದವನು ಆತ. ಉತ್ತಮ ಕಲಾವಿದನಾಗಬೇಕೆನ್ನುವವನಿಗೆ ಆತ ವಿಧಿಸುವ ಸೂತ್ರಗಳು ಈ ಮೂರು :

(1) "In drawing, try to represent the appearance of things, never what you know the thing to be"

[" ರೇಖಿಸುವಲ್ಲಿ, ವಸ್ತುಗಳು ಹೇಗೆ ಕಾಣುತ್ತವೆಯೋ ಹಾಗೆ ನಿರೂಪಿಸು; ಅವು ಹೇಗಿವೆಯೆಂದು ನಿನಗೆ ಗೊತ್ತೋ ಹಾಗಲ್ಲ." ಉದಾ.—ದೂರದ ಬೆಟ್ಟಸಾಲನ್ನು ಚಿತ್ರಿಸುವಾಗ ನೀಲವರ್ಣದಲ್ಲಿ ಬೆಟ್ಟದ ಮೈಯನ್ನು ತೆಳುವಾಗಿ ತೋರಿಸಬೇಕು. ಬೆಟ್ಟದಲ್ಲಿ ಗಿಡಮರಗಳೂ ಬಂಡೆಗಳೂ ಇವೆಯೆಂದು ತಿಳಿದಿದ್ದರೂ ದೂರಕ್ಕೆ ಕಾಣದ್ದರಿಂದ ಅವನ್ನು ಚಿತ್ರಿಸಕೂಡದು.]

(2) "Those appearances you are to test by the application of Scientific laws relating to aspects and to learn, by accurate measurement, and the most fixed attention to represent with absolute fidelity"

[" ಆ ಕಂಡಕ್ಕೆ ಕಾಣ್ಕೆಗಳಿಗೆ ವೀಕ್ಷಣ ಸಂಬಂಧ ಶಾಸ್ತ್ರದ ನಿಯಮಗಳನ್ನು ಅನ್ವಯಿಸಿ ಅವನ್ನು ಪರೀಕ್ಷಿಸಬೇಕು. ಮತ್ತು ನಿಷ್ಕೃಷ್ಟವಾಗಿ ಅಳತೆ ಮಾಡಿ, ಅತ್ಯಂತ ನಿಶ್ಚಲ ಗಮನಕೊಟ್ಟು, ಸಂಪೂರ್ಣವಾಗಿಯೂ, ಯಥಾವತ್ತಾಗಿಯೂ ನಿರೂಪಿಸುವದನ್ನು ಕಲಿಯಬೇಕು." ಎಂದರೆ, ಪ್ರಕೃತಿಯಲ್ಲಿರುವಂತೆ ಸ್ವಾಭಾವಿಕವಾಗಿ ಪ್ರಮಾಣಭೂತವಾಗಿ ಚಿತ್ರಿಸಬೇಕೇ ಹೊರತು ಪ್ರಕೃತಿ ವಿರುದ್ಧವಾದ ರೀತಿಯಲ್ಲಿ ಏನನ್ನೂ ಚಿತ್ರಿಸಕೂಡದೆಂದು ತಾತ್ಪರ್ಯ. ಉದಾ.—(೧) ಒಬ್ಬ ವ್ಯಕ್ತಿ ಮರದ ಈಚೆ ಐದಾರು ಅಡಿಗಳ ಅಂತರದಲ್ಲಿ ನಿಂತಿರುವಂತೆ ಚಿತ್ರಿಸಿ ಆತ ಮರವನ್ನು ತಬ್ಬಿಕೊಂಡಿರುವಂತೆ ತೋರಿಸಿದರೆ ಅದು ವೀಕ್ಷಣ ಶಾಸ್ತ್ರ ನಿಯಮಗಳಿಗೆ ವಿರುದ್ಧ. (೨) ತುಂಬಾ ಬಂಡೆಗಲ್ಲುಗಳಿರುವ ಪಾತ್ರದಲ್ಲಿ ತೊರೆ ಕೊಚ್ಚಿಕೊಂಡು ಹರಿಯುತ್ತಿದೆಯೆನ್ನೋಣ. ಹಿನ್ನೆಲೆಯಲ್ಲಿ ಸಂಧ್ಯಾರಾಗ ರಂಜಿತ ಅಂತರಿಕ್ಷ ಆ ನೀರಿನಲ್ಲಿ ಸಂಧ್ಯಾರಾಗದ ಪ್ರತಿಫಲವನ್ನು ರಂಗು ರಂಗಾಗಿ ತೋರಿಸಿದರೆ ಅದು ಸ್ವಭಾವ ವಿರುದ್ಧ. ಏಕೆಂದರೆ ಬಂಡೆಗಳ ನಡುವೆ ರಭಸವಲ್ಲ



ಹರಿಯುವ ನೀರು ಸೊರೆಗೂಡಿರುತ್ತದೆ. ಆ ನೀರಿನಲ್ಲಿ ಏನೂ ಪ್ರತಿಫಲನವಾಗುವುದಿಲ್ಲ.]

(3) "Having learned to represent actuel appearances faithfully 'f, you have any human 'aculty of your own, visionary appearance will take place to you which wlll be nobler and more true than any actual or material appearance;' and the realisation of this is the function of every fine art, which is founded absolutely, there-fore, in truth. and consists absolutely in imagination"

["ವಾಸ್ತವ ನೋಟಗಳನ್ನು ಯಥಾವತ್ತಾಗಿ ನಿರೂಪಿಸುವದನ್ನು ಕಲಿತಮೇಲೆ, ನಿನ್ನ ಸ್ವಂತವಾದ ಮಾನವಸಹಜ ಸಾಮರ್ಥ್ಯ ನಿನಗೆ ಇದ್ದಪಕ್ಷದಲ್ಲಿ, ಯಾವ ವಾಸ್ತವ ಅಥವಾ ಭೌತನೋಟಕ್ಕಿಂತ ಹೆಚ್ಚು ಘನವಾದ, ಹೆಚ್ಚು ಸತ್ಯವಾದ, ದರ್ಶನವೊಂದು ನಿನಗೆ ಬೋಧೆಯಾಗುವುದು. ಅದರ ಸಾಕ್ಷಾತ್ ಕರಣವೇ ಪ್ರತಿಯೊಂದು ಲಲಿತಕಲೆಯ ಕಾರ್ಯ. ಆದ್ದರಿಂದ ಇದು ಸಂಪೂರ್ಣವಾಗಿ ಸತ್ಯನಿಷ್ಠವಾದುದು, ಮತ್ತು ಸಂಪೂರ್ಣವಾಗಿ ಕಲ್ಪನಾ ಭೂಯಿಷ್ಠವಾದುದು." ಎಂದರೆ, ವಾಸ್ತವಿಕ ಸಂಗತಿಗಳಿಗೆ ಕಲ್ಪನಾಶಕ್ತಿಯ ರಸಸ್ಪರ್ಶದಿಂದ ಆದರ್ಶದ ಮೆರಗು ಕೊಡಬೇಕು.]

ಮೇಲ್ಕಂಡ ಸೂತ್ರಗಳ ಮಾನದಂಡದಿಂದ ಅಳೆದದ್ದೇ ಆದರೆ, ರವಿವರ್ಮನು ಮೊದಲೆರಡು ಸೂತ್ರಪರೀಕ್ಷೆಗಳಲ್ಲಿ ತೇರುತ್ತಾನೆ, ಎಂದು ಧಾರಾಳವಾಗಿ ಹೇಳಬಹುದು. ವಾಸ್ತವಿಕ ಸಂಪ್ರದಾಯದ ಮೂಲಭೂತ ತತ್ವಗಳು ಬಹುಮಟ್ಟಿಗೆ ಅವನ ಕರತಲಾಮಲಕವಾಗಿದ್ದವು. ಅವನ ಯಾವ ಚಿತ್ರವನ್ನು ತೆಗೆದುಕೊಂಡು ಪರೀಕ್ಷಿಸಿದರೂ ಆ ಗುಣಗಳು ಗೋಚರವಾಗುತ್ತವೆ. ನಿದರ್ಶನವಾಗಿ ಇಲ್ಲಿ ಮುದ್ರಿಸಿರುವ ಕೆಲ ಚಿತ್ರಗಳಲ್ಲಿ ರವಿವರ್ಮನ ವಸ್ತ್ರವಿನ್ಯಾಸ [Drapery] ಕೌಶಲವನ್ನು ಪರೀಕ್ಷಿಸಬಹುದು. ವ್ಯಕ್ತಿಯ ನಿಲುವನ್ನು

ಅನುಸರಿಸಿ ವಸ್ತ್ರದ, ಅದರ ಮಡಿಕೆ ನೆರಿಗಳ, ವಿನ್ಯಾಸವನ್ನು ಬಹು ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. 'ಮೋಹಿನಿ' ಚಿತ್ರದಲ್ಲಿ ಮುಂದಕ್ಕೆ ಚಲಿಸಿರುವ ಉಯ್ಯಾಲೆಯಿಂದ ಉಂಟಾದ ಹಿಂಗಾಳಿಗೆ ವ್ಯಕ್ತಿಯ ಸೀರೆಯ ಸೆರಗು, ಕುರುಳೋಳಿ ಇವು ಹೇಗೆ ಸ್ವಾಭಾವಿಕವಾಗಿ ಹಿಂಗಡೆಗೆ ಪಟ ಪಟನೆ ಹಾರಾಡುತ್ತಿವೆ ಎಂಬುದು ಎಂಥ ಗಾಂಪನಿಗಾದರೂ ಗೋಚರವಾದೀತು. ಇನ್ನು ವರ್ಣಕಲೆಯನ್ನು ತೆಗೆದುಕೊಂಡರೆ ಅದರಲ್ಲೂ ಅವನು ತಕ್ಕಮಟ್ಟಿಗೆ ಬಲ್ಲಿದನೆಂದೇ ಹೇಳಬೇಕು: ತಂತ್ರ (Technique) ದೃಷ್ಟಿಯಿಂದ ಅವನ ವರ್ಣನ ದೋಷರಹಿತವಾಗಿದೆ. ಅವನ ಮೂಲಚಿತ್ರಗಳು ಕೆಲವನ್ನಾದರೂ ನೋಡಿರುವವರು ಇದನ್ನು ಒಪ್ಪಿಕೊಳ್ಳಬೇಕು. ಆದರೆ, ಚಿತ್ರದ ಅಂತರ್ಭಾವಕ್ಕೆ ಅನುಗುಣವಾಗಿ ವರ್ಣಯೋಜನೆ ಮಾಡುವ ಮರ್ಮವನ್ನು ರವಿವರ್ಮ ಅರಿತಂತೆ ಕಾಣುವುದಿಲ್ಲ. ಸಾಹಿತ್ಯದಲ್ಲಿ ಮಾತಿನಂತೆ ಚಿತ್ರಕಲೆಯಲ್ಲಿ ರೇಖೆ ಅಥವಾ ವರ್ಣ ಭಾವ ವ್ಯಂಜಕವಾಗಬಲ್ಲದೆಂಬ ರಹಸ್ಯ ವಾಸ್ತವ ಸಂಪ್ರದಾಯದ ಕಿರುಚೌಕಟ್ಟಿನ ಪರಿಮಿತಿಯಷ್ಟರಲ್ಲೇ ಕೆಲಸಮಾಡುವ ರವಿವರ್ಮನಂಥ ಕಲಾವಿದರಿಗೆ ನಿಲುಕದ್ದು.

ಇನ್ನು ಮೂರನೆಯ ಸೂತ್ರವನ್ನು ರವಿವರ್ಮನಿಗೆ



ಅನ್ವಯಿಸಿದರೆ ಅವನು ತೇಲುವುದಿಲ್ಲವೆಂದೇ ಹೇಳಬೇಕು. ಇದಕ್ಕೆ ನಿದರ್ಶನವಾಗಿ, ಮಹಾಶಿವರಾತ್ರಿಯ ವಿಷಯವನ್ನೊಳಗೊಂಡ ರವಿವರ್ಮನ ಚಿತ್ರವೊಂದನ್ನು ಕನ್ನಡನಾಡಿನ ಪ್ರತಿಭಾವಂತ ಚಿತ್ರಕಾರರಾದ ಶ್ರೀ ಕೆ. ವೆಂಕಟಪ್ಪನವರ ಚಿತ್ರವೊಂದನ್ನು ಪರಸ್ಪರ ಹೋಲಿಸಿ ನೋಡಬಹುದು. ಶ್ರೀ ವೆಂಕಟಪ್ಪನವರ ಈ ಚಿತ್ರ, ಅವರ ಅನೇಕ ಇತರ ಚಿತ್ರಗಳಂತೆ, 'ವಾಸ್ತವ' ಶರೀರದಲ್ಲಿ 'ಆದರ್ಶ'ದ ಆತ್ಮ ತೇಜಸ್ಸುಳ್ಳ ಜೀವಂತ ಚಿತ್ರವೆಂದು ನನ್ನ ಅಭಿಪ್ರಾಯ. ಈ ಸಂಬಂಧವಾಗಿ ಕೆಲವು ವಿಮರ್ಶೆಯ ಮಾತುಗಳನ್ನು 'ಸಾಹಿತ್ಯ ಮತ್ತು ಚಿತ್ರಕಲೆ' ಎಂಬ ನನ್ನ ಲೇಖನದಲ್ಲಿ ಕೆಲವು ವರ್ಷಗಳ ಹಿಂದೆ ಬರೆದಿದ್ದೆ. (ಪ್ರಬೋಧಕ: ೧೯೩೧ರ



ಮಾರ್ಚಿಯ ಸಂಚಿಕೆ.) ಆ ಭಾಗವನ್ನು ಇಲ್ಲಿ ಉದ್ಧರಿಸಿದರೆ ಅಪ್ರಕೃತವಾಗಲಾರದು:

"ರವಿವರ್ಮನ ಚಿತ್ರದಲ್ಲಿ ಒಬ್ಬ ಯುವತಿ–ಸುಂದರಿಭಕ್ತಳು, ಒಂದು ದೇವಸ್ಥಾನವನ್ನು ಪ್ರವೇಶಮಾಡುತ್ತಿದ್ದಾಳೆ. ಅವಳ ನಿಲುವಿನ ಭಂಗಿ, ನಮ್ಮ ಕಡೆಗೆ ನಟ್ಟಿರುವ ನೋಟ, ಇವನ್ನು ನೋಡಿದರೆ ಅವಳ ಕಾರ್ಯವು ದೇವಸ್ಥಾನಕ್ಕೆ ಹೋಗುವುದಲ್ಲವೆಂದು ಶಂಕೆಯಾಗುತ್ತದೆ. ಅಲ್ಲದೆ ಈಶ್ವರಗುಡಿಯಲ್ಲಿರಬೇಕಾದ ಬಸವ (ನಂದಿ) ಒಂದನ್ನು ಬಿಟ್ಟರೆ ದೇವಸ್ಥಾನವು ದೇವಸ್ಥಾನದಂತೆಯೇ ಕಾಣುವುದಿಲ್ಲ. ಅಲ್ಲದೆ, ಶಿವನು ಬಹಳ ಪುಣ್ಯಮಾಡಿದ್ದ! ಗುಡಿಯ ಮುಂದೆ ಈಗಿನ ಕಾಲದ ಬಂಗಲೆಗಳ ಮುಂದೆ ಹಬ್ಬಿಸಿರುವಂತೆ, ಒಂದು ಗುಲಾಬಿಯಗಿಡ ಬೇರೆ ಹಬ್ಬಿದೆ! ಆ ಚಿತ್ರದಲ್ಲಿ ಸಾಕ್ಷಾತ್ಕರಣವೆನ್ನುವುದು ಎಳ್ಳಷ್ಟೂ ಇಲ್ಲ. ಚಿತ್ರದಲ್ಲಿ ಬಸವಣ್ಣನೊಬ್ಬನಿಲ್ಲದೆ ಹೋದರೆ—ಆ ನಾರೀಮಣಿಯು ಯಾರ ಮನೆಗೋ ವೈಯ್ಯಾರದಿಂದ ಎಳ್ಳು ಬೀರುವುದಕ್ಕೆ ಹೋಗುತ್ತಿರುವಂತೆ ಕಾಣುತ್ತದೆ.

"ವೆಂಕಟಪ್ಪನವರ ಚಿತ್ರವನ್ನು ತೆಗೆದುಕೊಳ್ಳಿ. ಕಂಬಸಾಲಿನ ದೇವಸ್ಥಾನ: ದೇವಸ್ಥಾನದ ಮುಂಬಾಗಿಲಿನ ಸುತ್ತಲೂ ಗೂಡುಗಳಲ್ಲಿ ಹೊತ್ತಿಸಿಟ್ಟಿರುವ ಹಣತೆಯ ಕುಡಿದೀಪಗಳು. ಬರಿಯ ದೀಪಗಳಲ್ಲ, ಉರಿಯುತ್ತಿರುವ ದೀಪಗಳು. ದೀಪದ ಪ್ರಭೆಯು ಗೂಡಿನಲ್ಲೆಲ್ಲಾ ತುಂಬಿ ತುಳುಕಿ ಹೊರಗೆ ಹರಿಯುತ್ತಿದೆ. ಆದರೂ ಹಣತೆಯ ದೀಪ, ಹೆಚ್ಚು ಪ್ರಕಾಶವಿಲ್ಲ. ಸ್ವಲ್ಪ ದೂರದಲ್ಲಿ, ದೇಗುಲದ ಮುಂದುಗಡೆ, ಅಶ್ವತ್ಥ ವೃಕ್ಷವೊಂದು ಮುಸುಕುಮುಸುಕಾಗಿ ಕಾಣುತ್ತಿದೆ. ಈ ದೃಶ್ಯದ ವರ್ಣ ಕೌಶಲವನ್ನು ಮನಗಾಣಬೇಕಾದರೆ ಮೂಲಪ್ರತಿಯನ್ನೇ ನೋಡಬೇಕು.......ಚಿತ್ರದ ಬಣ್ಣಗೆಲಸವು ಅಷ್ಟು ಮನೋಹರವಾಗಿದ್ದರೂ ಚಿತ್ರದ ಸೌಂದರ್ಯವು ಬರಿಯ ಬಣ್ಣಗೆಲಸದಲ್ಲಿಲ್ಲ, ಇನ್ನೆಲ್ಲಿದೆ? ಒಬ್ಬಳು ಯುವತಿ, ಪೂಜಾಸಾಮಗ್ರಿಯೊಡನೆ ದೇವಸ್ಥಾನವನ್ನು ಪ್ರವೇಶಿಸುತ್ತಿದ್ದಾಳೆ. ಗಂಭೀರವಾದ, ಆದರೂ ಭಕ್ತಿಯುತವಾದ ಅವಳ ಮುಖಭಾವವು ಹಣತೆಯ ದೀಪದ ಬೆಳಕಿನಲ್ಲಿ ಎಷ್ಟು ವಿಶದವಾಗಿ ಪ್ರಕಾಶಿಸುತ್ತಿದೆ! ಇನ್ನು ಸ್ವಲ್ಪ ದೂರದಲ್ಲಿ ಒಬ್ಬ ವೃದ್ಧಕಾಯನು ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾನೆ. ಹೀಗೆ ಚಿತ್ರದಲ್ಲಿ ಇಬ್ಬರು ಭಕ್ತ ಶಿರೋಮಣಿಗಳು. ಈ ವ್ಯಕ್ತಿಗಳ ಚಿತ್ರದಲ್ಲೂ ಅಲ್ಲ ಸೌಂದರ್ಯವಿರುವುದು. ಅಲ್ಪವಾದ ಹಣತೆಯ ದೀಪದ ಅಗಾಧವಾದ ಜ್ಯೋತಿಯಲ್ಲಿ ಪೂರ್ಣ ಭಕ್ತಿಭಾವವು ಹೇಗೆ ಮಿಳಿತವಾಗಿದೆ! ಈ ಸಂಮಿಳನದಲ್ಲಿಯೇ ಚಿತ್ರದ ಎಲ್ಲಾ ಸೌಂದರ್ಯ; ಈ ಸಂಮಿಳನ ಪ್ರಕಾಶದಲ್ಲಿಯೇ ಚಿತ್ರಕಾರರ ವ್ಯಕ್ತಿತ್ವ ಪ್ರಕಾಶ; ಈ ಸಂಮಿಳನದಲ್ಲಿಯೇ ಚಿತ್ರಕಾರರ ಕಲ್ಪನಾಶಕ್ತಿ, ಊಹಾಶಕ್ತಿ, ಬುದ್ಧಿಶಕ್ತಿ, ಆತ್ಮಶಕ್ತಿ ಇವೆಲ್ಲದರ ಅಡಕ! ಅತುಳ ಭಕ್ತಿಯೇ ಮೂರ್ತಿವೆತ್ತಂತಿದೆ—ಈ ಚಿತ್ರ! ಇದು ಭಕ್ತಿಭಾವದ ಚಿತ್ರವಲ್ಲ, ಭಕ್ತಿಭಾವದ ಪ್ರಪಂಚ! ಇಂತು ಈ ಚಿತ್ರವು ಶ್ರೇಷ್ಠಕಲೆಗೆ ಆದರ್ಶಪ್ರಾಯವಾದುದು."

ಇಷ್ಟು ಹೇಳಿದಮೇಲೆ, ಈ ಲೇಖನದೊಂದಿಗೆ ಕೊಟ್ಟಿರುವ ಚಿತ್ರಗಳ ಹೆಚ್ಚಿನ ವಿಮರ್ಶೆ ಅನಗತ್ಯ. ಈ ಚಿತ್ರಗಳನ್ನೂ ಮತ್ತು ರವಿವರ್ಮನ ಇನ್ನಿತರ ಚಿತ್ರಗಳನ್ನೂ ಎಷ್ಟುಮಟ್ಟಿಗೆ ಮೆಚ್ಚಬಹುದು ಎಂಬುದನ್ನು ರಸ್ಕಿನ್ ಮಹಾಶಯನ ಸೂತ್ರಗಳ ಬೆಳಕಿನಲ್ಲಿ ಕಂಡುಕೊಂಡು, ನಾಡಿನಲ್ಲಿ ಉತ್ತಮೋತ್ತಮ ಚಿತ್ರಕಲಾ ಸಂಪ್ರದಾಯದ ಬೆಳವಣಿಗೆಗೆ ಸಲ್ಲಬೇಕಾದ ಪ್ರೋತ್ಸಾಹವನ್ನೂ ಕನ್ನಡಜನತೆ ನೀಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಹುಟ್ಟು ಗುಣ

ಶ್ರೀ. ಆರ್. ಎಸ್. ರಾಮರಾವ್, ಎಂ.ಎ.,
ಬೆಂಗಳೂರು.

ವಿಜಯನಗರ ಸಾಮ್ರಾಜ್ಯ ವೈಭವದಿಂದ ಬಾಳಿದ ಕಾಲದಲ್ಲಿ, ಮಧ್ಯಾಹ್ನದ ಸೂರ್ಯ ಪಶ್ಚಿಮಾಂಬುಧಿಯ ಕಡೆಗೆ ದೃಷ್ಟಿಯಿಟ್ಟದ್ದ ಕಾಲದಲ್ಲಿ, ಸದಾಶಿವರಾಯನ ಪ್ರತಿನಿಧಿಯಾಗಿ ನೇಮಿತನಾಗಿದ್ದ ಅಳಿಯ ರಾಮರಾಜ ಕೊಂಚಕೊಂಚವಾಗಿ ಪ್ರಜೆಗಳ ಅರಿವಿಲ್ಲದೆಯೇ ಸಿಂಹಾಸನಾಕ್ರಮಣ ಮಾಡಿ ಕರ್ಣಾಟಕ ರಾಜ್ಯ ವೈಭವವನ್ನು ಬೆಳಗಿದ ಕಾಲದಲ್ಲಿ, ವಿಜಯನಗರ ರಾಜವಂಶದಲ್ಲಿ ರಾಜರುಗಳ ದಿಗ್ವಿಜಯ ಸಮಾರಂಭದಲ್ಲಿ, ವಿಜಯ ವೀರರು ಅಗೋಚರವಾಗಿ ಶತ್ರು ಮನೆಮಠಗಳನ್ನು ನಾಶ ಮಾಡಿದ ಕಳಂಕಾಗ್ನಿ ಕಾಲಕ್ರಮದಲ್ಲಿ ಭೂತಾಕಾರವಾಗಿ ಬೆಳೆದು ಸಾಮ್ರಾಜ್ಯವನ್ನೇ ಭಸ್ಮೀಭೂತವಾಗಿ ಮಾಡಿದ ಸಂದರ್ಭಕ್ಕೆ ಸಂಬಂಧಿಸಿದ ಒಂದು ಸಣ್ಣ ಇತಿಹಾಸಪೂರ್ಣ ದೃಷ್ಟಾಂತವಿದು.

ಶಕ........೧೪೭೭.

ಮಹಾಮಂಡಲೇಶ್ವರ ಕರ್ಣಾಟಕ ಸಿಂಹಾಸನ ರಾಜ ಪ್ರತಿನಿಧಿ ಅಳಿಯ ರಾಮರಾಜ ಮಹಾರಾಜರಲ್ಲಿ—ಬಿಜಾಪುರದ ಸುಲ್ತಾನ್ ಇಬ್ರಾಹಿಂ ಅದಿಲ್ ಷಾ ಅವರು ನಮಸ್ಕಾರ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ:—

ನಮ್ಮ ವಿಶ್ವಾಸಕ್ಕೆ ಪಾತ್ರನಾಗಿ ನಮ್ಮ ಮೆಚ್ಚುಗೆಯನ್ನು ಪಡೆದು ಪ್ರಧಾನ ಸೇನಾನಾಯಕನಾಗಿದ್ದ ಐನ್-ಉಲ್-ಮುಲ್ಕ್‌ನ ಪರಿಚಯ ತಮಗಿರುವುದಷ್ಟೆ! ಆತನು ಈಗ್ಗೆ ಕೆಲವು ತಿಂಗಳುಗಳಿಂದ ಸುಲ್ತಾನರಿಗೆ ಅರಿವಾಗದಂತೆ ತನ್ನದೇ ಒಂದು ಗುಂಪು ಕಟ್ಟಿ ಈಗ ಬಹಿರಂಗವಾಗಿ ನಮ್ಮ ಮೇಲೆ ಯುದ್ಧ ಘೋಷಿಸಿದ್ದಾನೆ. ನಮ್ಮ ಅನ್ನ ತಿಂದು, ನಮ್ಮ ವಿಶ್ವಾಸ ಹೊಂದಿ ನಂಬಿಕೆ ದ್ರೋಹ ಮಾಡುವ 'ನಮ್ಮಕ್ ಹರಾಂ' ಕೆಲಸ ಕೈಕೊಂಡಿದ್ದಾನೆ. ಇಂತಹ ನೀಚನನ್ನು ಭೂತಾಯಿ ಹೊತ್ತಿರುವುದು ಅವಮಾನಕರ. ಅದನ್ನು ಕಂಡು ಸುಲ್ತಾನರಾದ ನಾವು ಭೂಭಾರವನ್ನು ಇಳಿಸದೆ ಸುಮ್ಮನಿರುವುದು ನಮ್ಮ ಹೇಡಿತನವನ್ನು ಪ್ರದರ್ಶಿಸುತ್ತದೆ. ನಾವು ಆತನನ್ನು ಮಗನಿಗಿಂತ ಹೆಚ್ಚಾಗಿ ಪ್ರೀತಿಸಿ, ಎಲ್ಲಾ ವಿಧವಾದ ಅನುಕೂಲಗಳನ್ನೂ ಕಲ್ಪಿಸಿಕೊಟ್ಟು ರಾಜ್ಯದ ಮುಖ್ಯ ಸೇನಾನಾಯಕನನ್ನಾಗಿ ಮಾಡಿದುದಕ್ಕೆ ಅವನು ನಮಗೆ ಅರ್ಪಿಸಿದ ಕಾಣಿಕೆ ಇದು. ತಮ್ಮಲ್ಲಿ ನಾವು ಬಿನ್ನವಿಸಿಕೊಳ್ಳುವುದೆಂದರೆ ಇಷ್ಟೆ. ಷಾಹೀ ರಾಜ್ಯಗಳೊಡನೆ ನಮ್ಮ ಸಂಬಂಧ ಎಷ್ಟ[illegible]ದನ್ನು ತಾವು ಅರಿತವರಾಗಿದ್ದೀರಿ. ಅವರುಗಳಲ್ಲಿ ಯಾರ ಸಹಾಯವೂ ನಮಗೆ ಈಗ ಸಿಗುವ ಸ್ಥಿತಿಯಲ್ಲಿಲ್ಲ. ನಮ್ಮ ಪೂರ್ವ ಮೈತ್ರಿಯನ್ನು ನೆನೆದು ಈ ದಂಗೆಕೋರ ದುರಾತ್ಮನನ್ನು ಕೊಲ್ಲುವುದ[illegible] ತಾವು ಸಹಾಯ ಮಾಡಬೇಕಾಗಿ ಬಿನ್ನವಿಸಿಕೊ[illegible]ವೆ.

ತಮ್ಮ ಮೈತ್ರಿಯನ್ನು [illegible]

ಇಬ್ರಾಹಿಂ ಅದಿಲ್ [illegible],

ಬಿಜಾಪುರ.

(೨)

ರಾಮರಾಜ ಕೃಷ್ಣದೇವರಾಯನ ಬಳಿ ಕೆಲಸಕ್ಕೆ ಸೇರಿಕೊಳ್ಳುವುದಕ್ಕೆ ಮುಂಚೆ ಷಾಹಿ ರಾಜ್ಯವೊಂದರಲ್ಲಿ ಕೆಲವು ದಿನ ಸೈನಿಕನಾಗಿ ಕೆಲಸ ಮಾಡಿದ್ದನು. ಆಗ ಹಿಂದೂ ಮಹಮ್ಮದೀಯ ಭೇದವಿಲ್ಲದೆ ರಾಜರುಗಳು ಶೂರರನ್ನು ತಮ್ಮ ಸೇನೆಗಳಲ್ಲಿ ವಿಶ್ವಾಸದಿಂದ ಸೇರಿಸಿಕೊಳ್ಳುತ್ತಿದ್ದರು. ರಾಮರಾಜ ತನ್ನ ತಂದೆ ಕೃಷ್ಣದೇವರಾಯನಲ್ಲಿ ಸೇನಾಪತಿಯಾಗಿದ್ದು ಆಪ್ತತ್ವವನ್ನು ಸಂಪಾದಿಸಿದ್ದುದರಿಂದ ಮಗನನ್ನು ಅಲ್ಲಿಗೆ ಬರಮಾಡಿಕೊಂಡನು. ಇದಕ್ಕೆ ಮುಂಚೆ ರಾಮರಾಜನಿಗೂ ಅದಿಲ್‌ಷಾನಿಗೂ ಮೈತ್ರಿಯಿತ್ತು. ಅಲ್ಲದೆ ತನ್ನ ಹಿಂದೂ ಚಕ್ರಾಧಿಪತ್ಯವನ್ನು ದಕ್ಷಿಣದಲ್ಲಿ ಪ್ರಬಲವಾಗಿ ಕಟ್ಟುವ ಮನೋಭಾವವುಳ್ಳ ತಾನು ಷಾಹಿ ರಾಜ್ಯಗಳನ್ನು ಒಂದರ ಮೇಲೆ ಒಂದನ್ನು ಎತ್ತಿಕಟ್ಟಿ ತನ್ನ ರಾಜ್ಯ ವಿಸ್ತಾರಕ್ಕೆ ಅನುಕೂಲ ಪಡಿಸಿಕೊಳ್ಳುವ ದೃಷ್ಟಿಯಿಂದ ಅದಿಲ್‌ಷಾನಿಗೆ ಸಹಾಯ ಮಾಡಿಕೊಡಲು ಒಪ್ಪಿದನು. ಬಂಡುಗಾರನಾದ ಐನ್-ಉಲ್-ಮುಲ್ಕ್‌ನನ್ನು ಅಡಗಿಸುವುದು ಮಾತ್ರ ಇಬ್ರಾಹಿಮನ ಉದ್ದೇಶವಾದರೆ ರಾಮರಾಜನ ಉದ್ದೇಶ ಬಂಡುಗಾರನನ್ನು ಅಡಗಿಸುವ ನೆಪದಲ್ಲಿ ಅಹಮದ್ ನಗರದ ಹುಸೇನ್ ನೈಜಾಂ ಷಾನಿಗೆ ಪೆಟ್ಟು ಕೊಡುವುದು. ಆದ್ದರಿಂದ ಇಬ್ರಾಹಿಮ್‌ನ ಪತ್ರಕ್ಕೆ ಒಪ್ಪಿ ಸೇನಾಪತಿಯಾದ ತನ್ನ ತಮ್ಮ ವೆಂಕಟಾದ್ರಿಯನ್ನು ಸೇನೆಯೊಡನೆ ದಂಗೆಯನ್ನು ಅಡಗಿಸಲು ಕಳುಹಿಸಿಕೊಟ್ಟ. ರಾಮರಾಜನ ಸೇನೆ ವೆಂಕಟಾದ್ರಿಯಂತಹ ನಿಪುಣ, ಶಕ್ತನ ಮುಂದಾಳುತನದಲ್ಲಿ ಹೊರಟಮೇಲೆ ಸೋಲೆಂಬುದು ಇಲ್ಲವೇ ಇಲ್ಲ ತಾನೆ!

ಭೀಮಾನದಿಯಿಂದಾಚೆಗೆ ಶತ್ರುವನ್ನು ಓಡಿಸಿಬಿಟ್ಟ ಮೇಲೆ ಐನ್-ಉಲ್ಕ್-ಮುಲ್ಕ್‌ನು, ಹುಸೇನ್ ನೈಜಾಂ ಷಾನ ಬಳಿಗೆ ಶರಣಾಗತನಾಗಿ ತೆರಳಿದನು. ಆದರೆ ಅವನು ಎಲ್ಲಿ ಹೋದರೂ ಬಂಡುಗಾರನೆ! ಅಲ್ಲದೆ ಹುಸೇನನಿಗೆ ಐನ್-ಉಲ್ಕ್-ಮುಲ್ಕ್‌ನಿಗೆ ಸಹಾಯ ಮಾಡುವ ಭರವಸೆ ಕೊಟ್ಟಿದ್ದರೂ ಅದು ಬಿಜಾಪುರವನ್ನು ಮುತ್ತುವ ದುರಭಿಲಾಷೆಯಿಂದ. ಆಸೆ ನಿರಾಶೆಯಾದಾಗ ದಂಗೆಕೋರನನ್ನು ಕೊಲೆ ಮಾಡಿಸಿದ.

ತಂದೆಯ ಪ್ರಾಣ ಉಳಿಸಲು ಮಗನಾದ ಮಲ್ಲಿಕ್ ಐನೂಲ್ ಮುಲ್ಕ್ ಗಿಲಾನಿಯು ಮಾಡಿದ ಪ್ರಯತ್ನವೆಲ್ಲಾ ವಿಫಲವಾಯಿತು. ಕಡೆಗೆ ತಂದೆಯ ಶವಸಂಸ್ಕಾರ ಮಾಡಿ ಅವನಿಗೆ ಪ್ರಥಮ ಆಶ್ರಯದಾತನಾದ ಬಿಜಾಪುರದ ಇಬ್ರಾಹಿಂ ಬಳಿಗೆ ಬಂದು. ಸುಲ್ತಾನನ ಆಶ್ರಯ ಬೇಡಿದ. ಸುಲ್ತಾನ ಅವನಿಗೆ ಆಶ್ರಯ ಕೊಟ್ಟಾನೆ! ತಂದೆಯಂತೆ ಮಗ ಎಂದು ಅವನನ್ನು ಹೊಗಳಿ ಅವನನ್ನು ಕಳುಹಿಸಿಕೊಟ್ಟ. ಗಿಲಾನಿಯು ಹೋಗುವಾಗ ರಾಜನನ್ನೊಮ್ಮೆ ಕಂಡು, 'ತಂದೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ಈ ಮಗ ಮುಂದೆ ತಮಗೆ ಉಪಕಾರ ಮಾಡಿಕೊಡುತ್ತಾನೆ' ಎಂಬ ಪ್ರತಿಜ್ಞೆಯನ್ನು ತಮ್ಮೆದುರಿಗೆ, ಅಲ್ಲಾನ ಎದುರಿಗೆ ಮಾಡಿದ್ದಾನೆ, ಎಂದು ಹೇಳಿ ಅಲ್ಲಿಂದ ಹೊರಟುಹೋದ.

(೩)

ಕಾಲಚಕ್ರ ತಿರುಗುತ್ತಿರುತ್ತದೆ. ಎಲ್ಲರಿಗೂ ಪೂರ್ಣಾಯುಸ್ಸು ಇರುತ್ತದೆಂದು ಹೇಳುವಂತಿಲ್ಲ. ರಾಮರಾಜನಂತೆ ಮಾತ್ರ ತಮ್ಮ ವೈಭವ ಸುಖದ ಮಧ್ಯದಲ್ಲಿ ಪೂರ್ಣಾಯುಸ್ಸಿನಿಂದ ಸಾಯುವವರು ವಿರಳ. ತಮ್ಮ ಪೂರ್ವಾರ್ಜಿತ ಪಾಪಫಲವನ್ನು ಕಣ್ತುಂಬ ನೋಡಿ, ಅನುಭವಿಸಿ ದುಃಖಪಡುತ್ತಾ ಜೀವಿಸಿರುವವರೇ ಅನೇಕರು. ಏನಾದರೇನು ವಿಧಿಯಾಟ ಕಣ್ಣುಮುಚ್ಚಾಲೆಯಾಟ. ದೋಸೆ ಒಂದು ಕಡೆ ಬೆಂದ ಮೇಲೆ ಮಗುಚಿಯೇ ಹಾಕಬೇಕು. ಒಂದು ದೇಶದ, ಒಂದು ವಂಶದ ಚರಿತ್ರೆಯಲ್ಲಿ ಒಂದು ಕಾಲಮಾನ, ನಾಲ್ಕಾರು ತಲೆಮಾರನ್ನು ವಿವೇಕದಿಂದ ನೋಡಿದರೆ ಯಾರ ಪಾಪದ ಫಲ ಯಾರು ಅನುಭವಿಸುತ್ತಾರೆಂದು ತಿಳಿಯದೆ ಇರದು. ಇದು ದೈವಸೃಷ್ಟಿಯ ಮೂಲನಿಯಮವೋ ಏನೊ! ಕಾಲಾಂತರಗಳವರೆಗೆ ಬದುಕಲಾರದ ನಾವು ಚರಿತ್ರೆಯ ರೂಪದಲ್ಲಿ ಎಷ್ಟೋ ಕಾಲ್ಪನಿಕ ವಿಷಯಗಳಿಂದ ಸುಖಪಡುತ್ತೇವೆ; ಆನಂದ ಪಡುತ್ತೇವೆ.

ದುಃಖ ಪಡುವವರು ಸಹನಾತೀತರಾಗಿ ಪೂರ್ವ ಜನ್ಮದ ಕರ್ಮಫಲವೆನ್ನುತ್ತಾರೆ ಇದು ಸಹಜ ವಲ್ಲವೆ ?

ಇಬ್ರಾಹಿಂ ಅದಿಲ್ ಷಾ ಕಾಲವಾದಾನಂತರದಲ್ಲಿಯೇ ಅವನ ಮಗ ಅಲಿ ಅದಿಲ್ ಷಾ ಬಿಜಾಪುರಕ್ಕೆ ಸುಲ್ತಾನನಾದ. ಅಲಿ ರೂಪದಲ್ಲಿ, ಸೌಂದರ್ಯದಲ್ಲಿ ಚಾತುರ್ಯದಲ್ಲಿ ಪ್ರಸಿದ್ಧನಾಗಿದ್ದರೂ ತಂದೆಯಷ್ಟು ರಾಜನೀತಿ ನಿಪುಣನಲ್ಲ. ಇಬ್ರಾಹಿಮ್‌ನ ಸ್ನೇಹದಿಂದ ರಾಮರಾಜನ ಅಂತಃಪುರದಲ್ಲಿ ಅಲಿ ಎಷ್ಟೋ ಸಲ ಹುಡುಗನಾಗಿದ್ದಾಗ ರಾಣಿಯರ ಆದರ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರನಾಗಿದ್ದ. ರಾಮರಾಜನ ಈ ವಿಶ್ವಾಸಗಳೆಲ್ಲ ರಾಜಕೀಯದಲ್ಲಿ ಬಹು ದೂರ. ಬಿದರೆಯವರೊಡನೆ ಸೇರಿಕೊಂಡು ಅಲಿಯನ್ನು ಹೊಡೆದೋಡಿಸಿದ್ದ ಒಂದು ಸಲ. ಇದು ರಾಜಕೀಯ. ರಾಜಕೀಯದಲ್ಲೂ ಅಷ್ಟೆ. ಇವತ್ತಿನ ನಂಟು ನಾಳಿನ ನಂಜು. ಇವತ್ತಿನ ದ್ವೇಷ ನಾಳಿನ ಸ್ನೇಹ. ಅಲಿ ಆದಿಲ್ ಷಾ ಸ್ನೇಹದಿಂದಿದ್ದ ಅಹ್ಮದ್ ನಗರದ ಸುಲ್ತಾನನಿಂದ ಸೋತು ರಾಜ್ಯಭ್ರಷ್ಟನಾದ. ಕಡೆಗೆ ರಾಮರಾಜನೇ ಶರಣು. ಮೊದಮೊದಲು ರಾಮರಾಜ ಇದಕ್ಕೆ ಒಪ್ಪಲಿಲ್ಲ. ಅವನಿಗೆ ಈಗೊಂದು ಒಳ್ಳೆಯ ಸುಸಂಧಿಯೇ ಸಿಕ್ಕಿತ್ತು. ಆದರೆ ರಾಣಿವಾಸ ಅಲಿಯಲ್ಲಿಟ್ಟಿದ್ದ ವಾತ್ಸಲ್ಯದಿಂದ ರಾಮರಾಜ ಅಲಿಯ ಪಕ್ಷ ಕಟ್ಟಬೇಕಾಯಿತು. ರಾಮರಾಜನ ಹೆಂಡತಿಯರ ಪೈಕಿ ಅಪ್ಪಲಾಂಬಾ ಎಂಬವಳ ಒಬ್ಬ ಮಗ ಆಗತಾನೆ ಯುದ್ಧದಲ್ಲಿ ಕಾಲವಾಗಿದ್ದ. ಅವಳು ಪುತ್ರಶೋಕದಲ್ಲಿ ಮಗ್ನಳಾಗಿದ್ದಾಗ ಅಲಿ ಅವಳಲ್ಲಿ ತನ್ನ ಪಿತೃವಿಯೋಗ ದುಃಖವನ್ನೂ ರಾಜ್ಯವಿಯೋಗ ಶೋಕವನ್ನೂ ಹೇಳಿಕೊಂಡು ಕಣ್ಣೀರಿಟ್ಟ. ಕೆಲವು ಸಂದರ್ಭಗಳಲ್ಲಿ ಪ್ರೀತಿವಿಶ್ವಾಸಗಳಿಗೆ ಜಾತಿಮತಗಳ ಕಟ್ಟಳೆಗಳು ಪ್ರತಿಬಂಧಕವಾಗುವುದಿಲ್ಲ. ಅಪ್ಪಲಾಂಬ ಮಗನ ಸಾವಿನ ದುಃಖದಲ್ಲಿದ್ದಾಗ ಅಲಿ ತನ್ನ ವ್ಯಸನವನ್ನು ತೋಡಿಕೊಂಡಾಗ ಅವಳು ಅವನನ್ನು ತನ್ನ ಮಗನೆಂದೇ ಭಾವಿಸಿದಳು. ಅವನನ್ನು ದತ್ತು ಸ್ವೀಕಾರ ಮಾಡಿದಳು. ಈ ಬಂಧನದಿಂದ ರಾಮರಾಜ ಅಲಿಯ ಪಕ್ಷ ವಹಿಸಬೇಕಾಯಿತು. ಅಲಿಗೆ ತಿರುಗೊಮ್ಮೆ ಬಿಜಾಪುರವನ್ನು ಗೆದ್ದುಕೊಟ್ಟು ರಾಜ್ಯಾಭಿಷೇಕ ಮಾಡಿಸಿದ. ಇದರಿಂದ ರಾಮರಾಜನಿಗೆ ಪ್ರತಿಫಲವಿಲ್ಲದೆ ಇಲ್ಲ. ರಾಯಚೂರು, ಮುದ್ಗಲ್ ಎರಡು ಊರುಗಳು ಇವನಿಗೆ ಅಭಿಷೇಕ ಕಾಲದ ಕಾಣಿಕೆಯಾಗಿ ದೊರಕಿದುವು. ಅಲಿ ಆದಿಲ್ ಷಾ ರಾಮರಾಜನ ಮಗನಾಗಿ, ಅವನ ಸ್ನೇಹಿತನಾಗಿ ನಿಂತ. ಶಾಹಿ ರಾಜ್ಯಗಳ ಪೈಕಿ ಒಂದು ಶಾಶ್ವತವಾಗಿ ತನ್ನ ಬಂಧುವಾಯಿತೆಂದು ಅಳಿಯ ರಾಮರಾಜ ಬಗೆದ.

(೪)

ರಾಮರಾಜನಿಗೆ ಮಹಮ್ಮದೀಯ ರಾಜ್ಯಗಳ ಮೇಲೆ ದ್ವೇಷವೇ ಹೊರತು ವೈಯಕ್ತಿಕವಾಗಿ ಅಲ್ಲ. ಇಬ್ರಾಹಿಂ ಷಾನಿಂದ ಹೊರದೂಡಲ್ಪಟ್ಟ ದಂಗೆಕೋರನ ಮಗ ಗಿಲಾನಿ ರಾಮರಾಜನ ಬಳಿ ನೌಕರಿಗೆ ಬಂದ. ಅವನ ಶಕ್ತಿ ಸಾಮರ್ಥ್ಯಗಳನ್ನು ಕಾಲಾನುಕ್ರಮದಲ್ಲಿ ಮನಗಂಡು ಅವನನ್ನು ಒಬ್ಬ ಪ್ರಧಾನ ಸೇನಾಪತಿಯಾಗಿ ನೇಮಿಸಿಕೊಂಡ. ತಾನು ಅವನಲ್ಲಿಟ್ಟಿದ್ದ ವಿಶ್ವಾಸದ ಅಗಾಧತೆಯಿಂದ ಅವನನ್ನು ತಮ್ಮನೆಂದೇ ಸಂಬೋಧಿಸುತ್ತಿದ್ದ. ಈ ತಮ್ಮನ ವಿಷಯದಲ್ಲಿ ಸಂಪೂರ್ಣ ನಂಬಿಕೆಯುಳ್ಳವನಾಗಿ ಅವನನ್ನು ಪ್ರಧಾನ ಕಾರ್ಯಗಳಲ್ಲೆಲ್ಲಾ ನೇಮಿಸುತ್ತಿದ್ದ. ಗಿಲಾನಿಯೂ ಕೂಡ ಸ್ವಾಮಿಭಕ್ತಿಯಿಂದ ಕೆಲಸ ಮಾಡಿಕೊಂಡು ರಾಜನ, ಪ್ರಜೆಗಳ ವಿಶ್ವಾಸವನ್ನು ಗಳಿಸಿದ್ದ. ಅವನಿಗೆ ಬ್ರಾಹ್ಮಣರನ್ನು ಕಂಡರೆ ತುಂಬ ಪ್ರೀತಿ, ಭಕ್ತಿ, ಮತ್ತು ಭಯ. ತನ್ನ ನೌಕರಿಗೆ ಮೆಚ್ಚಿದ ರಾಜನಿಂದ ಬೇವಿನಹಳ್ಳಿಯನ್ನು ಬಳುವಳಿಯಾಗಿ ಪಡೆದು ಅದನ್ನು ಬ್ರಾಹ್ಮಣರಿಗೆ ದಾನ ಮಾಡಿದ್ದ. ಗಿಲಾನಿ ತನ್ನೊಡನೆ ತನ್ನ ಆಪ್ತಮಿತ್ರ ದಿಲಾವರ್ ಖಾನನನ್ನೂ ಬರಮಾಡಿಕೊಂಡು ಅವನಿಗೆ ಜೀವನೋಪಾಯ ಕಲ್ಪಿಸಿಕೊಟ್ಟಿದ್ದ. ಅವನೂ ಕೂಡ ತನ್ನ ಕಾರ್ಯ ಚಾತುರ್ಯದಿಂದ ಹೆಚ್ಚು ಪ್ರಸಿದ್ಧಿಗೆ ಬಂದು ಕೋಲಾರ ಪ್ರದೇಶದ ಮಂಡಲೇಶ್ವರನಾದ. ರಾಮರಾಜ ಇಂತಹ ವಿಶ್ವಾಸಕ್ಕೆ ಪಾತ್ರರಾದ ಸೇನಾನಾಯಕರಿಂದ, ವೆಂಕಟಾದ್ರಿಯಂತಹ ಪ್ರಧಾನ ಸೇನಾಪತಿಯಿಂದ, ತನ್ನ

ತಿರುಮಲನಂತಹ ಮಂತ್ರಿಯ ಬುದ್ಧಿ ಚಾಣಾಕ್ಷತನದಿಂದ, ಶತ್ರುಗಳನ್ನು ಬಡಿದು ಸಂತತ ಸಂಗ್ರಾಮಮತಿಯುಳ್ಳ ಶಾಹಿ ರಾಜ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಪೋರ್ಚುಗೀಸರೊಡನೆ ವ್ಯಾಪಾರ ಹೂಡಿ ರಾಜ ವೈಭವ, ಸಂಪತ್ತನ್ನು ಹೆಚ್ಚಿಸಿಕೊಂಡು ರಾಜ್ಯವಾಳುತ್ತಿದ್ದನು.

(೫)

ಮಧ್ಯಾಹ್ನದ ಸೂರ್ಯ ಅಸ್ತಾಚಲ ಗಮನಾಸಕ್ತನಾಗಿದ್ದ. ವಿಜಯನಗರ ಸಾಮ್ರಾಜ್ಯ ಸರ್ವತೋಮುಖವಾದ ವೈಭವದಿಂದ ಮೆರೆದು ಭೂಲೋಕದ ಸುರನಗರಿಯಾಗಿ ಬಾಳಿ ಇನ್ನೂ ಹೆಚ್ಚು ಸೌಂದರ್ಯಾತಿಶಯ ದೈವಸೃಷ್ಟಿಯಲ್ಲಿ ಸಾಧ್ಯವಿಲ್ಲವೆಂದು ಭಾವಿಸುವಂತೆ ಪ್ರಕಾಶಮಾನವಾಗಿ ಕಂಗೊಳಿಸಿ, ಕಣ್ಣಿಗೆ ಮಿಂಚಿನ ಪ್ರಕಾಶವನ್ನು ಬೀರಿ ಕತ್ತಲಿಸುವಂತಾಯಿತು.

ಶಾಹೀ ರಾಜ್ಯಗಳು ಹುಟ್ಟಿದಾಗಲಿಂದ ಆಂತಃಕಲಹಗಳಲ್ಲಿ ಮಗ್ನವಾಗಿದ್ದುದು ಕೆಲವರಿಗೆ ಅರಿವಾಯಿತು. ಒಂದು ಧರ್ಮದವರು ಒಂದು ಮತದವರು, ಒಂದು ರಕ್ತಸಂಬಂಧವಿರುವವರು ಹೀಗೆ ಜನ್ಮ ಜನ್ಮಾಂತರದಿಂದ ಗೃಹಕಲಹಕ್ಕೆ ಎಡೆಗೊಡುವುದು ಶುದ್ಧ ಶೋಚನೀಯ ಎಂದು ಅರಿತರು. ತಾವು ಐದು ಜನ ಬಹಮನೀ ರಾಜ್ಯಗಳೂ ಒಟ್ಟಾಗಿ ತಮಗೆ ಸಂಪೂರ್ಣವಾಗಿ ಧರ್ಮದಲ್ಲಿ ಸಂಸ್ಕೃತಿಯಲ್ಲಿ ಆಚರಣೆಯಲ್ಲಿ ವಿರುದ್ಧರಾದ ಹಿಂದೂಗಳ ಹೆದರಿಕೆಯಲ್ಲಿ ಅವಿತುಕೊಂಡು ತಮ್ಮ ರಾಜ್ಯ ಭಾಗಗಳನ್ನೂ ಜನಗಳನ್ನೂ ಸಂಪತ್ತನ್ನೂ ಹಾಳು ಮಾಡಿಕೊಳ್ಳುತ್ತಿರುವುದು ಅವಮಾನಕರವೆಂದು ಭಾವಿಸಿದರು. ತಾವೆಲ್ಲ ಒಟ್ಟಾಗಬೇಕೆಂದೂ ವಿಜಯನಗರದ ಮೇಲೆ ಬೀಳಬೇಕೆಂದೂ ನಿಶ್ಚಯಿಸಿದರು. ಇದನ್ನು ಮೊದಲು ಸೂಚಿಸಿದವನು ರಾಮರಾಜನ ಪಾಲಿತ ಪುತ್ರನಾದ, ದತ್ತುಪುತ್ರನಾದ ಆಲಿ ಅದಿಲ್ ಷಾ. ಆತ ಬಹಿರಂಗವಾಗಿ ಏನೂ ಕೆಲಸ ಮಾಡದಿದ್ದರೂ ಗುಪ್ತವಾಗಿ ಸಂಧಾನ ನಡೆಸಿದ. ತನಗೂ ಆಜನ್ಮದ್ವೇಷಿಯಾದ ಅಹಮದ್‌ನಗರದ ನೈಜಾಂ ಷಾಹಿಗೂ ರಕ್ತಸಂಬಂಧ ಏರ್ಪಟ್ಟರೆ ಒಳ್ಳೆಯದೆಂದು ಮಹಾಮಂತ್ರಿ ಮಂತ್ರಾಲೋಚನೆ ಹೇಳಿದ ಅದರಂತೆ ನೈಜಾಂ ಷಾನ ಮಗಳನ್ನು ಅದಿಲ್ ಷಾನಿಗೂ ಅದಿಲ್ ಷಾನ ತಂಗಿಯನ್ನು ಷಾನ ಮಗನಿಗೂ ತಂದುಕೊಂಡು ವಿವಾಹ ಸಮಾರಂಭ ವೈಭವದಿಂದ ನಡೆಯಿತು. ಇದರ ಮರೆಯಲ್ಲಿ ಯುದ್ಧಸನ್ನಾಹ ಜಾಗರೂಕತೆಯಿಂದ ಮುಂದುವರಿಯಿತು.

ರಾಮರಾಜನಿಗೆ ಇವೆಲ್ಲಾ ಅರಿವಾಗದೇ ಇಲ್ಲ. ಅವನೂ ಯುದ್ಧಕ್ಕೆ ತಯಾರಾಗುತ್ತಲೇ ಇದ್ದ, ಆದರೆ ಗ್ರಹಚಾರ, ಅಳಿಗಾಲ; ವಿಧಿನಿಯಮ. ವಿಶ್ವಾಸಪಾತ್ರರು ವಿಶ್ವಾಸಘಾತುಕರಾದರು. ಸ್ವಾಮಿಭಕ್ತರು ಸ್ವಾಮಿದ್ರೋಹಿಗಳಾದರು. ದೇಶಭಕ್ತರು ದೇಶದ್ರೋಹಿಗಳಾದರು.

ಈ ಮಧ್ಯೆ ರಾಮರಾಜನ ಆಸ್ಥಾನಕ್ಕೆ ಆದಿಲ್ ಷಾ ಒಬ್ಬ ಪ್ರತಿನಿಧಿಯನ್ನು ಕಳುಹಿಸಿದ್ದ. ಅವನಿಗೆ ಆಸ್ಥಾನದಲ್ಲಿ ಅಪಮಾನವಾಯಿತೆಂಬ ಕುಂಟು ನೆಪದಿಂದ ರಾಮರಾಜನ ಮೇಲೆ ಯುದ್ಧ ಘೋಷಿಸಿದ. ಆದರೂ ಅವನು ನೇರವಾಗಿ ಯಾವ ಪ್ರಧಾನಕಾಳಗದಲ್ಲೂ ಭಾಗ ವಹಿಸಲಿಲ್ಲ. ಮುಖ್ಯ ಸೂತ್ರವೆಲ್ಲಾ ಕಾರಭಾರವೆಲ್ಲ-ಹುಸೇನ್ ನೈಜಾಂಷಾನದೇ ಆಗಿತ್ತು.

ಕೃಷ್ಣಾನದಿಯ ಬಳಿ ಉತ್ತರಕ್ಕೆ ಸುಮಾರು ೨೫ ಮೈಲಿ ದೂರದಲ್ಲಿರುವ ರಾಕ್ಷಸ ತಂಗಡಿಯಲ್ಲಿ ಎರಡು ಸೇನೆಗಳೂ ಸಂಧಿಸಿದುವು. ಹಿಂದೂಸೈನ್ಯವು ಬಲದಲ್ಲಿ, ಶಕ್ತಿಯಲ್ಲಿ, ಜನಸಂಖ್ಯೆಯಲ್ಲಿ ಮಹಮ್ಮದೀಯ ಸೈನ್ಯಕ್ಕೆ ಮೂರರಷ್ಟಿತ್ತು. ಸೇನಾಪತಿ ವೆಂಕಟಾದ್ರಿಯು ಪ್ರಭುವನ್ನು ಕುರಿತು ‘ಮಹಾರಾಜರಲ್ಲಿ ವಿಜ್ಞಾಪನೆ, ತಮ್ಮ ಸೇವಕನಾದ ನಾನು ಮತ್ತು ತಿರುಮಲರು ಈ ಯುದ್ಧವನ್ನು ನೋಡಿಕೊಳ್ಳುತ್ತೇವೆ. ತಾವು ವಿಶ್ರಮಿಸಿಕೊಳ್ಳಬಹುದು. ವಯಸ್ಕರಾದ ತಾವು ನಮ್ಮ ಮಾತನ್ನು ಅನುಚಿತವೆಂದು ಭಾವಿಸಬಾರದು’ ಎಂದನು. ವೀರಾಗ್ರಣಿಯಾದ ರಾಮರಾಜ ಇದಕ್ಕೆ ಒಪ್ಪಿಯಾನೆ! ‘ನಾನು ಕಾಲಿಟ್ಟ ಸಂಗ್ರಾಮದಲ್ಲಿ ಇದುವರೆಗ ಸೋಲೆಂಬುದನ್ನರಿಯೆ. ಈಗ ನಾನು ಯುದ್ಧಕ್ಕೆ ಬರದೆ ಹಿಂಜರಿದರೆ! ಹೇಡಿಯೆನ್ನರೇ ಜನರು. ವಯಸ್ಸು ಮುಖ್ಯವಲ್ಲ; ನನ್ನ ಉತ್ಸಾಹ ಮುಖ್ಯ. ಪ್ರತಿಯೊಬ್ಬನಲ್ಲೂ ರಕ್ತ ಬಿಸಿಯಾಗಿರುವವರೆಗೆ ಯುದ್ಧವಾ

ಡಿರಿ, ನಡೆಯಿರಿ' ಎಂದು ಹುರಿದುಂಬಿಸಿ ತಾನೂ ಯುದ್ಧಮುಖಕ್ಕೆ ಆನೆಯಮೇಲೇರಿ ತೆರಳಿದನು.

ಯುದ್ಧ ಆರಂಭವಾಯಿತು. ಆರುದಿನಗಳ ಭೀಕರ ಯುದ್ಧ ಮಹಾಭಾರತದ ಯುದ್ಧದಂತಿತ್ತು. ಯಾವ ಪಕ್ಷದವರೂ ಜಯಲಭಿಸುವವರೆಗೆ ಹಿಂದೆಗೆ ಯುವಂತಿರಲಿಲ್ಲ. ಆರನೆಯದಿನ ಸೂರ್ಯಾಸ್ತ, ಮುಸ್ಲಿಮರ ಸೂರ್ಯ ಮುಳಿಗಿದಂತೆಯೇ ಎಂದು ಹಿಂದುಗಳು ನಿಶ್ಚಯಗೊಂಡರು. ಅವತ್ತಿನ ಯುದ್ಧ ದಲ್ಲಿ ವೆಂಕಟಾದ್ರಿಯ ಮಗ ಕರ್ಣಾಟಕ ರಾಜ್ಯಸಂರ ಕ್ಷಣೆಗಾಗಿ ಪ್ರಾಣಾಹುತಿಯಿತ್ತ. ವೆಂಕಾಟಾದ್ರಿಯ ಒಂದು ಕಣ್ಣಿಗೆ ಭರ್ಜಿ ಚುಚ್ಚಿ ಆತ ಏಕಾಕ್ಷಿಯಾದ. ವಿಷಯ ರಾಮರಾಜನಿಗೆ ತಿಳಿದ ಕೂಡಲೇ ಮಹಾ ರಾಜ ಆನೆಯಿಂದಿಳಿದು ಪಾದಚಾರಿಯಾಗಿ ಕತ್ತಿ ಹಿರಿದು ತುರುಕರನ್ನು ತುಂಡು ತುಂಡುಮಾಡಲುಪ ಕ್ರಮಿಸಿದ. ತುರುಕರು ತತ್ತರಿಸಿದರು. ತಮಗೆ ಅಂತ್ಯ ಕಾಲ ಸಂಭವಿಸಿತೆಂದುಕೊಂಡರು. ಯುದ್ಧಭೂಮಿ ಯಿಂದ ಹಿಂದೆಗೆಯಲು ಸಮಯ ಕಾಯುತ್ತಿದ್ದರು. ಆದರೆ ಸುಲ್ತಾನ ನೈಜಾಂ ಹುಸೇನ್ ತನ್ನ ಸ್ಥಾನ ವನ್ನು ಸಂಗ್ರಾಮ ಮಧ್ಯದಿಂದ ಕದಲಿಸಲಿಲ್ಲ. ರಾಮ ರಾಜನಿಗೆ ವಿಧಿ ವಿರೋಧವೆಸಗಿತು. ಹೊಟ್ಟೆಯಲ್ಲಿನಂ ಜಿಟ್ಟಿದ್ದ ಗಿಲಾನಿ, ತನ್ನ ಸ್ನೇಹಿತನೊಂದಿಗೆ ಸ್ವಾಮಿ ದ್ರೋಹ ಬಗೆದ. ತನ್ನ ಸ್ವಾಮಿಯ ಸೈನ್ಯದಮೇಲೆ ತನ್ನ ಸೈನಿಕರು ಬೀಳುವಂತೆ ಆಜ್ಞೆ ಹೊರಡಿಸಿದ. ಕರ್ಣಾಟಕ ಸೈನ್ಯದಲ್ಲಿ ಅವ್ಯವಸ್ಥೆಯಾಯಿತು. ಯುದ್ಧ ಯಾರಾರಿಗೆ ಎಂಬುದೇ ತಿಳಿಯದೇ ಹೋಯಿತು. ಸೈನಿಕರು ಬೆಚ್ಚಿದರು. ಕಂಡ ಕಡೆ ಓಡಿದರು. ಇಷ್ಟರಲ್ಲಿ ಹುಸೇನ್ ಷಾನ ಆನೆ ತಪ್ಪಿಸಿಕೊಂಡು ಪಾದಚಾರಿಯಾಗಿ ಯುದ್ಧಮಾಡು ತ್ತಿದ್ದ ಮುದುಕ ರಾಮರಾಜನನ್ನು ಹಿಡಿದುಕೊಂಡು ತನ್ನ ಸ್ವಾಮಿಗೆ ಒಪ್ಪಿಸಿತು. ಅವನು ತಕ್ಷಣವೇ ರಾಜನ ತಲೆಯನ್ನು ಕತ್ತರಿಸಿ ಅದನ್ನು ಭರ್ಜಿಯ ತುದಿಯಲ್ಲಿ ನೆಟ್ಟು ಶತ್ರುಗಳ ಮುಖಕ್ಕೆ ಹಿಡಿದನು. ರಾಮರಾಜನ ಸೈನ್ಯ ಅಲ್ಲೋಲಕಲ್ಲೋಲ ವಾಯಿತು. ವೆಂಕಟಾದ್ರಿ ತಿರುಮಲರು ಯುದ್ಧ ಭೂಮಿಯಿಂದ ತಲೆತಪ್ಪಿಸಿಕೊಂಡರು.

ರಾಕ್ಷಸತಂಗಡಿ—ಶಕ—೧೪೮೬.

ಷಹಾನ್‌ಷಾ ಸುಲ್ತಾನ್ ಆಲಿ ಅದಿಲ್ ಷಾರವರ ಪಾದದ್ವಯಗಳಲ್ಲಿ ನೌಕರರ ಸಾಷ್ಟಾಂಗ ಪ್ರಣಾಮ ಪೂರ್ವಕ ಅರಿಕೆಗಳು:—

ತಮ್ಮ ತಂದೆಯವರ ಸಮಕ್ಷಮದಲ್ಲಿ ನಾನೊಮ್ಮೆ ಅರಿಕೆಮಾಡಿಕೊಂಡಿದ್ದೆ. ಬಂಡುಗಾರರೆಂದು ಸಾವಿಗೆ ತುತ್ತಾದ ನಮ್ಮ ತಂದೆಯವರ ಪಾಪದ ಪ್ರಾಯಶ್ಚಿ ತ್ತಕ್ಕಾಗಿ ನಾನು ಋಣ ತೀರಿಸುತ್ತೇನೆ. ಕಾಲಬಂ ದಾಗ ಎಂದು. ಅಲ್ಪನಾದ ನಾನು ಈಗ ಪೂರ್ಣ ಮಾಡಿಕೊಟ್ಟಿದ್ದೇನೆ. ರಾಮರಾಜರಲ್ಲಿ ಹತ್ತಾರು ವರ್ಷಗಳು ಸೇವೆ ಸಲ್ಲಿಸಿಯೂ ಅವರ ವಿಶ್ವಾಸಕ್ಕೆ ಪಾತ್ರನಾಗಿಯೂ ಇದ್ದ ನಾನು ನಮ್ಮ ಧರ್ಮದ ಉನ್ನತಿಗಾಗಿ, ನಮ್ಮ ಧರ್ಮಕ್ಕೆ ಜಯವನ್ನು ಸಂಪಾದಿಸಿಕೊಡಲೋಸುಗವಾಗಿ, ನಮ್ಮ ಜನರ ಸೇವೆಗಾಗಿ, ಉಂಡಮನೆಗೆರಡು ಬಗೆದರೂ, ಪ್ರತ್ಯುಪಕಾರದ ಸಾಧನೆಗಾಗಿ ಪಣತೊಟ್ಟ ನಾನು ಇಂದು ಸೈನ್ಯದಲ್ಲಿ ಸ್ವಕಲಹ ಕಲ್ಪಿಸಿ ತಮಗೆ ಜಯ ಸಂಪಾದಿಸಿಕೊಟ್ಟಿದ್ದೇನೆ. ನನ್ನ ಅಲ್ಪ ಕಾಣಿಕೆ ಯನ್ನು ಸ್ವೀಕರಿಸಿ ನನ್ನನ್ನು ಸರ್ವಾನುಗ್ರಹಿಸ ಬೇಕೆಂದು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ ಹುಜೂರ್ ಖಾವಿಂದ್.

ತಮ್ಮ ವಿಶ್ವಾಸಕ್ಕೆ ಪಾತ್ರನಾಗಲೆಳಸುವ

ಮಲ್ಲಿಕ್ ಐನೂಲ್ ಮುಲ್ಕ್ ಗಿಲಾನಿ

ಪತ್ರಿಕೆಯನ್ನು ಓದಿದವರು ಸುಲ್ತಾನರ ಬೇಗಂ. ಪತ್ರ ಓದಿಮುಗಿಸುವುದಕ್ಕೂ ಆಲಿ ಆದಿಲ್ ಷಾ ರಾಮರಾಜನ ಅಂತ್ಯವನ್ನು ಅರಿತುಕೊಂಡು, ಬರು ವುದಕ್ಕೂ ಸರಿಹೋಯಿತು. ಅವನೂ ಪತ್ರವನ್ನು ಓದಿ ಸಂತೋಷ ತುಂದಿಲನಾಗಿ ತನ್ನ ಪಟ್ಟದ ಕತ್ತಿ ಯನ್ನೇ ಗಿಲಾನಿಗೆ ಬಹುಮಾನವಾಗಿ ಕೊಟ್ಟನು. ಅವನು ತಲೆಬಗ್ಗಿಸಿ ನಮಸ್ಕಾರ ಮಾಡುತ್ತಿದ್ದಷ್ಟರ ಲ್ಲಿಯೇ ಬೇಗಂ ಸಾಹೇಬರು ಹೊರಗೆ ಬಂದು ಗಿಲಾನಿಯ ಕೈಯಲ್ಲಿದ್ದ ಕತ್ತಿಯನ್ನು ಕಸಿದು ಕೊಂಡು ಅವನ ತಲೆಯನ್ನು ಮುಂಡದಿಂದ ಪ್ರತ್ಯೇ ಕಿಸಿ, ಆತನ ತಂದೆ ಇಬ್ರಾಹಿಂ ಆದಿಲ್ ಷಾ ರಾಮ ರಾಜನಿಗೆ ಬಂಡುಗಾರರನ್ನು ಅಡಗಿಸಲು ಸಹಾಯ ಕೋರಿ ಪ್ರಾರ್ಥಿಸಿ ಬರೆದಿದ್ದ ಪತ್ರವನ್ನು ಸುಲ್ತಾನ ನಿಗೆ ಕೊಟ್ಟು ಒಳಗೆ ಹೋಗಿಬಿಟ್ಟಳು.

ದಾಸರಿಗೇಕೆ ಲಿಂಗದ್ವೇಷ ?

ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮ.

★

ಈ ಲೇಖನದಲ್ಲಿ ಶ್ರೀ ಪುರಂದರದಾಸರು, ಸ್ತ್ರೀ ಕುಲವನ್ನು ನಿಂದಿಸಿ ನಿಷ್ಕರುಣದಿಂದ ಅವರನ್ನು ಕುರಿತು ಹಲವು ಅಪಮಾನಕರವಾದ ಮಾತುಗಳನ್ನು ಆಡಿದ್ದಾರೆಂದು ಆಕ್ಷೇಪಿಸಲಾಗಿದೆ. ಇದಕ್ಕಾಗಿ ಅವರ (ದಾಸರ) ಗುಣ ನಡತೆಗಳು, ಜ್ಞಾನ ವೈರಾಗ್ಯ ಭಾವಗಳು, ಇವುಗಳನ್ನು ಪ್ರಶ್ನಿಸಲಾಗಿದೆ. ಶ್ರೀ ಪುರಂದರ ದಾಸರು ಲೋಕಕ್ಕೆ, ಭಗವದ್ಭಕ್ತಿ ಮತ್ತು ಜ್ಞಾನ ವೈರಾಗ್ಯಗಳನ್ನು ಯಾವ ರೀತಿಯಲ್ಲಿ ಬೋಧಿಸಿದ್ದಾರೋ, ಸಮಾಜದಲ್ಲಿದ್ದ ದುರ್ಗುಣಗಳನ್ನು, ಬಡವ ಬಲ್ಲಿದರೆಂಬ, ಕೃಪಣ ಶ್ರೀಮಂತರೆಂಬ, ಸ್ತ್ರೀಪುರುಷರೆಂಬ ಭೇದವಿಲ್ಲದೆ ನಿರ್ದಾಕ್ಷಿಣ್ಯವಾಗಿ ಹಾಗೆಯೇ ಪ್ರತಿಪಾದಿಸಿ, ಖಂಡಿಸಿ ಸಮಾಜ ಸುಧಾರಣೆಗಾಗಿ ಪ್ರಯತ್ನಿಸಿದ್ದಾರೆ. ಅವರ ಉದ್ದೇಶವು 'ಮುಂಡೆ ಬೋಳಾದ ಮಾತ್ರಕ್ಕೆ ಮನವು ಬೋಳಾಗಲಾರದು' ಎಂಬುದನ್ನು ಸ್ಪಷ್ಟವಾಗಿ ತೋರಿಸಲು ಸಮಾಜದಲ್ಲಿ ಕಂಡುಬಂದ ಕೆಲ ವ್ಯಕ್ತಿಗಳ ಆಚರಣೆಯನ್ನು ಅಕ್ಷೇಪಿಸಿ ತೋರ್ಪಡಿಸುವುದಲ್ಲದೆ ಯಾರನ್ನೂ ವ್ಯಕ್ತಿಶಃ ನಿಂದಿಸುವುದಲ್ಲ—ಸ್ತ್ರೀಯರನ್ನು ನಂಬಬೇಡಿ ಎಂದು ಹೇಳುವುದಾದರೂ, ವಿಷಯಾಭಿಲಾಷೆಯಿಂದ ಅಂಧರಾಗಿ ಪರಗತಿಯನ್ನು ಕೆಡಿಸಿಕೊಳ್ಳದಂತೆ ಪುರುಷ ವರ್ಗವನ್ನು ಎಚ್ಚರಿಸುವುದಕ್ಕಾಗಿ ಅಲ್ಲದೆ ಅನ್ಯಥಾ ಅಲ್ಲ. ಅವರ ಪದಗಳನ್ನು ಈ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಬೇಕಲ್ಲದೆ, ಸ್ತ್ರೀವರ್ಗದ ಮೇಲೆಯೇ ಅವರಿಗೆ ದ್ವೇಷವಿತ್ತೆಂದು ಅರ್ಥ ಮಾಡಬಾರದೆಂದು ಸೂಚಿಸಬಯಸುವೆವು. —ಸಂ.

'ಹರಿದಾಸ ಕೀರ್ತನ ತರಂಗಿಣಿ'ಯಲ್ಲಿ ಕಂಡು ಬಂದ ಹಲವು ಪದಗಳನ್ನು ಮಾತ್ರ ಈ ಲೇಖನದಲ್ಲಿ ಉದಾಹರಣೆಗಾಗಿ ತೆಗೆದುಕೊಳ್ಳಲಾಗಿದೆ. ಸಾಹಿತ್ಯ ರಾಶಿಯಲ್ಲಿರುವುದನ್ನೆಲ್ಲ ಉದಾಹರಣೆಗಾಗಿ ಕೊಡಬೇಕಾಗಿಲ್ಲ. ಆ ಲೇಖಕರ ಚಿತ್ರವೃತ್ತಿಯನ್ನು ವರ್ಣಿಸಲು ಆರಿಸಿದ ಕೆಲವು ಉದಾಹರಣೆಗಳು ಸಾಕು.

ಪುರಂದರ ದಾಸರ ಕೃತಿ ರಾಶಿಯಲ್ಲಿರುವ ಈ ಪದ ರತ್ನವನ್ನು ನೋಡಿ :

ರಾಗ: ಸೌರಾಷ್ಟ— —ತಾಳ ಛಾಪು.

ಕೂಳಿಗೆ ಬಿದ್ದಿರುವ ಬೋಳಿ ನಿನಗಿಷ್ಟು
ಗೈಯಾಳಿತನವೇತಕೆ ‖ ಪ ‖

ಆಚಾರ ನೋಡಿದರೆ ಅಲ್ಲೇನು ಹುರುಳಿಲ್ಲ
ಮೋಚಿ ಸಣ್ಣಂಗಾರ ಮುಸುಕುತಿದ್ದಿ
ವಾಚಾಮಗೋಚರ ಒಕ್ಕಣೆ ಹರಟುವೆ
ನೀಚ ಮುಂಡೆ ನಿನಗೆ ನಾಚಿಕಿಲ್ಲವೇನೆ ‖

ಲಕ್ಷ ಬತ್ತಿ ಆಚರಿಸಿ ಲಕ್ಷ ನಮಸ್ಕರಿಸಿ
ಕುಕ್ಷಿಯೊಳಗೆ ಕಪಟವಿಟ್ಟುಕೊಂಡು
ಭಕ್ಷ್ಯವ ಪ್ರೀತಿಯಲಿ ಪರ ಪುರುಷಗೆ ರಾತ್ರಿ
ಭಿಕ್ಷವ ಕೊಟ್ಟು ನೀನಪ್ಪಿಕೊಂಬ್ಯಲ್ಲೆ ? ‖

'ಉಂಡು ತಿಂದು ಮುಂಡೆ ಗಂಡಗತ್ತಾಳು'
ಎಂದು ಕಂಡವರು ಹೇಳುವ ಗಾದೆಯಂತೆ
ದಂಡಿಸುವ ಇವಳ ಪುರಂದರ ವಿಠಲನು
ಮುಂಡೆ ಬೋಳಾದರೆ ಮನವು ಬೋಳಾಯ್ತೆ ‖

ಭಾವ ಗಾಂಭೀರ್ಯಕ್ಕೆ, ಭಾಷಾ ಗಾಂಭೀರ್ಯಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ನಮಗೆ ಸಿಗುವುದಿಲ್ಲ. ಪುರಂದರ ದಾಸರಿಗೆ ತಕ್ಕುದಲ್ಲವೀ ಮನೋಧರ್ಮ ಈ ಸಾಹಿತ್ಯ ಕರ್ಮ! ಭಾವ ಹೊಲಸು ಭಾಷೆ ಹೊಲಸು.

ಭಾರತೀಯ ಸಂಸ್ಕೃತಿಯ ಭಾಗ್ಯವೆಲ್ಲ ಅದರಲ್ಲಿ ಸ್ತ್ರೀ ಕುಲಕ್ಕಿರುವ ಸ್ಥಾನ ಗೌರವ. ನಮ್ಮ ವೇದೋಪನಿಷತ್ತುಗಳ ಮಹರ್ಷಿಗಳೆಲ್ಲ ತಮ್ಮ ಕಣ್ಣೆದುರಿಗಿಟ್ಟುಕೊಂಡ ಆದರ್ಶವಾವುದು ; ಆ ಆದರ್ಶ ಸಾಧನೆಗೆ ಅವರು ಅಳವಡಿಸಿಕೊಂಡ ಆಚಾರವೆಂತಹುದು ?

"ಮಾತೃದೇವೋಭವ !
ಪಿತೃದೇವೋಭವ !
ಆಚಾರ್ಯದೇವೋಭವ !"

ಮೊದಲ ಹೆಸರು, ಮೊದಲ ನಮಸ್ಕಾರ ತಾಯಿಗೆ ಆಮೇಲೆ ತಂದೆಯ ಮಾತು, ಅನಂತರ ಗುರುಗಳು. ಮಾತೃಸ್ಥಾನವಷ್ಟು ಪವಿತ್ರವೆನಿಸಿದುದು. ಇಷ್ಟಾದರೂ ದಾಸಶ್ರೇಷ್ಠರೆನಿಸಿದವರು ಸ್ತ್ರೀಯರನ್ನು ಕುರಿತು ಇಷ್ಟು ಅನ್ಯಾಯವಾಗಿ ವರ್ತಿಸುವುದೆ ?

"ಉಂಡು ತಿಂದು ಮುಂಡೆ
ಗಂಡಗತ್ತಳು"

ಎಂದು ದಾಸರು ನಿರ್ಭಾಗ್ಯ ಸ್ತ್ರೀಯನ್ನು ಪರಿಹಾಸ್ಯ ಮಾಡುವರು. ದಾಸರಂತಹ ಜ್ಞಾನಿಗಳಿಗೆ, ವಿರಾಗಿಗಳಿಗೆ ಆಂತರಿಕ ಬಲವಿಲ್ಲವಾದರೆ, ಮನೋದಾರ್ಢ್ಯವಿಲ್ಲವಾದರೆ ಆ ದೌರ್ಬಲ್ಯ ದೋಷಕ್ಕೆ ನಾರಿಯರನ್ನು ಗುರಿ ಮಾಡುವುದು ಯಾವ ನ್ಯಾಯ. ಈ ಮನೋಧರ್ಮ, ಈ ಭಾಷೆ, ಇಂದ್ರಿಯ ನಿಗ್ರಹಿಗಳಿಗೆತರವಲ್ಲ; ಪುಂಡುಪೋಕರಿಗಳಿಗೆ(?) ಸಲ್ಲುವುದು.

ಗಂಡಸು ಜಾರದೆ ಹೆಂಗಸು ಜಾರಲು ಸಾಧ್ಯವೊ ? ಜಾರ ಕಲೆಯಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನ ಭ್ರಷ್ಟರು. ಸತ್ಯ ಸ್ಥಿತಿಯು ಹೀಗಿರಲಿಕ್ಕಾಗಿ ದಾಸರು ತಮ್ಮ ನಿಶಿತ ಖಡ್ಗಾಘಾತಿಗೆ ಅಬಲೆಯರನ್ನು ಮಾತ್ರ ಗುರಿಪಡಿಸಿದರೇಕೆ ? ದಾಸರು ಸ್ತ್ರೀಯರಾಗಿದ್ದರೆ ಹಂಡ ಬಂಡ ಗಂಡಸರನ್ನು ಖಂಡತುಂಡು ಮಾಡುತ್ತಿದ್ದರೋ ಏನೋ!

"ಈ ಕೇಸರಿಯನ್ನು ಚಿತ್ರಿಸಿದವರಾರು" ಎಂಬ ವಾಕ್ಯಕ್ಕೆ ಸಂಬಂಧಪಟ್ಟ ಕಥೆಯು ವಾಚಕರಿಗೆಲ್ಲ ಗೊತ್ತಿರಬೇಕು.

ಸ್ತ್ರೀಯು ದಾಸರಿಗೆ ದಾಸಿಯಾಗಿರಬೇಕು ; ಗುಲಾಮಿಯಾಗಿರಬೇಕು. ಅದಕ್ಕಿಂತ ಹೆಚ್ಚಿನ ಸ್ಥಾನವನ್ನು ಅವರು ನಾರಿಗೆ ಕೊಡಲು ಸಿದ್ಧರಾಗಿಲ್ಲ. ಇದೆಂತಹ ಸಭ್ಯತೆಯೋ ಕೊಂಚ ನೋಡಿ :

ರಾಗ : ಮೋಹನ— —ತಾಳ ಛಾಪು.

ಸತಿಗೆ ಸ್ವತಂತ್ರವ ಕೊಡದಿರು ನಿನ್ನ
ಮತಿಗೆಟ್ಟು ಬಾಯ ಬಿಡದಿರಣ್ಣ ॥
ಪತಿಗೆ ಬಣ್ಣದ ಮಾತನಾಡ್ಯಾಳೊ ಅವಳು
ಮಿತಿಯಿಲ್ಲದೆ ವೆಚ್ಚ ಮಾಡ್ಯಾಳೋ
ಅತಿ ಹರುಷದಿಂದ ಕೂಡ್ಯಾಳೋ ಪರ
ಗತಿಗೆ ಕರೆ ಕರೆ ಮಾಡ್ಯಾಳಣ್ಣ ॥
ಹಡದ ತಂದೆತಾಯ ತೊರಿಸ್ಯಾಳೊ ತನ್ನ
ಕಡೆಗೆ ಬಾಯೆಂದು ಕರೆಸ್ಯಾಳೋ
ಬಿಡದೆ ಒಂಟಿಯ ಮಾಡಿ ನಿಲಿಸ್ಯಾಳೊ ಒಂದು
ಪಡಿಭತ್ಯಕೆ ಬಾಯ ಬಿಡಿಸ್ಯಾಳಣ್ಣ ॥
ತಂದದ್ದರೊಳಗರ್ಧ ಕದ್ದಾಳೊ ತನ್ನ
ಸಂದು ಸುಳಿವು ನೋಡಿ ಮೆದ್ದಾಳೊ
ಮುಂದಿದ್ದ ಕೂಸನ್ನು ಒದ್ದಾಳೊ ಹತ್ತು
ಮಂದಿಲಿ ಮಾನವ ಕೆಡಿಸ್ಯಾಳಣ್ಣ ॥
ಉಂಡು ಉಟ್ಟಮನೆ ಎಣಿಸ್ಯಾಳೊ ಅವನ
ಭಂಡು ಮಾಡಿ ಬಾಯ ಬಿಡಿಸ್ಯಾಳೋ
ಮುಂಡೆ ಕೆದರಿಕೊಂಡು ಸೆಣಿಸ್ಯಾಳೋ ದೊಡ್ಡ
ಕೊಂಡ ಕೋತಿಯಂತೆ ಕುಣಿಸ್ಯಾಳಣ್ಣ ॥
ಕರೆ ಕರೆ ಸಂಸಾರ ಥರವಲ್ಲ ಇಂಥ
ದುರುಳ ಹೆಣ್ಣಿನ ಸಂಗವಿರೆಸಲ್ಲ
ನೆರೆಹೊರೆ ನೋಡಿ ನಗುವರಲ್ಲ ಸಿರಿ
ಪುರಂದರ ವಿಠಲ ತಾ ಬಲ್ಲ ॥

ಈ ಪಾದಗಳೆಲ್ಲ ಮಕ್ಕಳಿಗೂ ಅರ್ಥವಾಗುತ್ತದೆ. ದಾಸರು ಕೇಳಿದ ಮಾತನ್ನು ಉತ್ಪ್ರೇಕ್ಷೆ ಮಾಡಿ, ಉಪ್ಪು ಕಾರ ಹಚ್ಚಿ ಹೇಳುತ್ತಿರುವರೋ, ಇಲ್ಲ ಸ್ವಾನುಭವದ ಗೀತೆಯನ್ನೇನಾದರೂ ಹಾಡುತ್ತಿರು

ವರೋ ಗೊತ್ತಿಲ್ಲ. ಅದು ಹೇಗಾದರೂ ದಾಸ ಶ್ರೇಷ್ಠರಿಗೆ ಸ್ತ್ರೀಕುಲದಲ್ಲಿ ಪ್ರೀತಿಯಿಲ್ಲ, ಗೌರವವಿಲ್ಲ ಈ ಲಿಂಗದ್ವೇಷಕ್ಕೆ ಕಾರಣವೇನು?

ಬಾಯಿ ತೆಗೆದರೆ ಭಂಡ ಮಾತೇನೆ? ಈ ಉಗಾಭೋಗ ನೋಡಿ:

'ಕೋಳಿಗೆ ಯಾತಕ್ಕೆ ಹೊನ್ನ ಪಂಜರವು?'
ಬೋಳಿಗೆ ಯಾತಕ್ಕೆ ಜಾಜಿ ಮಲ್ಲಿಗೆ ದಂಡೆ ॥

ಅಲಂಕಾರ ವಚನ ರಚನೆ ಇದು! ಬೋಳಿ— ಎಂಬ ಮಾತೇ ಸಾಕು; ನೊಂದ ಬೆಂದ ವಿಧವೆಯರನ್ನು ಕೊಲ್ಲಲಿಕ್ಕೆ. 'ಜಾಜಿಮಲ್ಲಿಗೆ ದಂಡೆ' ಮಾತು ಅವರ ಪಾಲಿಗೆ ಯಮಪಾಶದಂತಿದೆ. ಪರಮ ವೈಷ್ಣವರಾದ ದಾಸರು ಗಂಡನನ್ನು ಕಳೆದುಕೊಂಡ ನಿರ್ಭಾಗ್ಯರನ್ನು ಕರುಣೆಯಿಂದ ಕಾಣಲಾರದಾದರಲ್ಲ! ತಾನು ಮೇಲು, ಹೆಂಗಸು ಕೀಳು ಈ ದುರ್ಭಾವನೆ ಪುರುಷನಲ್ಲಿ ಬೇರೂರಿದೆ. ಸಾಮಾನ್ಯ ಮನುಷ್ಯರ ಮಾತು ಹಾಗಿರಲಿ. ಸರ್ವಸಂಗ ಪರಿತ್ಯಾಗ ಮಾಡಿದ ಸನ್ಯಾಸಿಗಳೂ ಮೇಲು ಕೀಳೆಂಬ ಪಾಶವೀ ಮಹಾ ವ್ಯಾಧಿಗೊಳಗಾಗಬೇಕೆ? ಬ್ರಹ್ಮಜ್ಞಾನಿಗಳಿಗೀಶೀಲ ತರವಲ್ಲ.

'ಲಲ್ಲೆ ಮಾತಿನ ಸತಿಯು ನಂಬಿದವ ಕೆಟ್ಟ' ನೆಂದು ದಾಸರು ಹೇಳುವರಲ್ಲ 'ಠಕ್ಕು ಮಾತಿನ ಪತಿಯ ನಂಬಿ ಕೆಟ್ಟೆ' ನಾರಿಯರ ವಿಚಾರವೇನಾದರೂ ದಾಸರ ತಲೆ ಸೋಕಿದೆಯೊ? ಲೌಕಿಕದಲ್ಲಿ ಗುಣ ದುರ್ಗುಣಗಳೆರಡೂ ಸ್ತ್ರೀಪುರುಷರಲ್ಲಿ ಸಮಾನವಾಗಿರುವುದು. ಒಂದು ತರವ ಅಳತೆಯಿಂದ ನೋಡುವುದಾದರೆ ಸ್ತ್ರೀ ಮೇಲ್ಮಟ್ಟ ಮುಟ್ಟುವಳು; ಪುರುಷನು ಕೆಳಮಟ್ಟದಲ್ಲಿ ತಡಕಾಡುವನು. ಸ್ತ್ರೀಕುಲದ ನಿಸ್ವಾರ್ಥತೆಯಲ್ಲಿ ಆಕೆಯೇ ಮೊದಲು ಆಕೆಯೇ ಕೊನೆ. ಪುರುಷನು ಸ್ತ್ರೀಯೆದುರಿಗೆ ಈ ಗುಣಭಾಗದಲ್ಲಿ ನಿಲ್ಲಲೇಲಾರ.

'ಅನುಕೂಲವಿಲ್ಲದ ಸತಿಯು
ವರ್ಜಿಸಬೇಕು'

ಎಂಬುದು ದಾಸರ ಉಪದೇಶ! ಸಂದೇಶ!

'ಪ್ರತಿಕೂಲನಾದರೂ ಪತಿಯು
ಪೂಜಿಸಬೇಕು'

ಯಾರು? ಸತಿ! ಹೀಗೆ ಮಾಡಿದರಲ್ಲವೆ ಗಂಡಸರಾಕೆಯನ್ನು 'ಮಹಾ ಪತಿವ್ರತೆ! ಕಲಿಯುಗ ಜಾನಕಿ' ಎಂದು ಹೊಗಳುವುದು!

"ಪತಿಯ ಸೇವೆ ಬಿಟ್ಟು ಪರ
ಪತಿಯ ಕೂಡೆ ಸರಸವಾಡಿ
ಸತತ ಮೈಯ ತೊಳೆದು ಹಲವು
ವ್ರತವ ಮಾಳ್ಪ ಸತಿಯ ಕಂಡು"

ದಾಸರಿಗೆ 'ನಗೆಯು ಬರುತಿದೆ'ಯಂತೆ! ಸತೀಕುಲಕ್ಕಿಂತಹ ಕಳಂಕ ಹಚ್ಚುವುದು ವೈರಾಗ್ಯದಧಿದೇವತೆಗಳಿಗೆ ತರವಲ್ಲ. ಆಡಬಾರದ ಮಾತನ್ನಾಡಿ, ಸ್ತ್ರೀಕುಲದ ಮನ ನೋಯಿಸಿ, ಅವರು ನೋವು ತಿನ್ನುತ್ತಿದ್ದರೆ 'ನಗೆಯು ಬರುತಿದೆ'ಯೆಂದು ಹಲ್ಕಿರಿವವರ ಮಾತೇನು ನಮಗೆ.

"ಪತಿಗಳ ನಿಂದಿಪ ಸತಿಯರು ಬಹುವಿಧ
ವ್ರತಗಳ ಮಾಡಿದರೇನು ಫಲ?"

ಎಂಬುದು ದಾಸರ ಪ್ರಶ್ನೆ. ಸತಿಯರನ್ನು ಪತಿಗಳು ಬಾಯಿಗೆ ಬಂದಂತೆ ದುರ್ಭಾಷೆಗಳನ್ನಾಡಬಹುದು. ಇವನು ಹೀಗೆ ಮಾಡಿದರೂ ಇವನಿಗೆ ಸ್ವರ್ಗದಲ್ಲೊಂದು 'ಸೀಟ್ ರಿಜರ್ವ್'!

'ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು
ತನ್ನ ಮನೆಗವಳ ಯಜಮಾನಿಯೆನಿಸಿ
ಭಿನ್ನವಿಲ್ಲದೆ ಅರ್ಧದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಶದಿ'

ಅನ್ನುವರಲ್ಲ ಪುರಂದರ ದಾಸರು. ಸತಿಯ ಮಾತನ್ನಿವರು ಹೇಳಿದರು. ಪತಿಯ ನಡತೆ ಕುರಿತು ಅವರಿಗೇನಾದರೂ ತೋರಿತೆ? ಇಲ್ಲ. ಕಾರಣ ಅವರಿಗೆ ಸ್ತ್ರೀ ಜನದಲ್ಲಿ ಗೌರವವಿಲ್ಲ, ನಂಬುಗೆ ಇಲ್ಲ. ದಾಸರ ಈ ಮಾತು ಅವರ ಮನೋ ದೌರ್ಬಲ್ಯವನ್ನು ಸೂಚಿಸುವುದೇ ಹೊರತು ನಾರೀ ಜನರ ನಡತೆಗೆ ಯಾವ ಊನವನ್ನೂ ತರುವುದಿಲ್ಲ.

ರಾಗ : ಪೂರ್ವಿ— —ತಾಳ ಆದಿ.

"ನಂಬಬೇಡಿ ನಾರಿಯರನು
ಹಂಬಲ ಹಾರೈಸಬೇಡ ॥ ಪ ॥
ಅಂಬುಜಾಕ್ಷಿಯರೊಲುಮೆ
ಡಂಭಕವೆಂದು ತಿಳಿಯಿರೋ ॥ ಅ ॥

ಮಾಟವೆಲ್ಲ ಪುಸಿಯು
ಸತಿಯ ರಾಟವೆಲ್ಲ ಸಂಚು ಸನ್ನೆ
ನೋಟವೆಲ್ಲ ಘನ್ನ ಘಾತುಕ
ಕೂಟವೆಲ್ಲ ವಂಚನೆ
ಪಾಟುಗೆಟ್ಟು ಹೆಂಗಳೊಡನೆ
ಕೋಟಲೆಗೊಂಡು ತಿರುಗಬೇಡಿ
ನೀಟುಗಾರ ರತಿಯರೊಲುಮೆ
ಬೂಟಕವೆಂದು ತಿಳಿಯಿರೊ' ೧

ಸೋತೆನೆಂದು ವಿಟಗೆ ದೈನ್ಯ
ಮಾತನಾಡಿ ಮರುಳುಗೊಳಿಸಿ
ಕಾತರವನು ಕೊಟ್ಟು ಅವನ
ಮಾತಾಪಿತರ ತೊಲಗಿಸಿ
ಪ್ರೀತಿ ಪಡಿಸಿ ಹಣವ ಸೆಳೆದು
ರೀತಿಗೆಡಿಸಿ ಕಡೆಯಲಿ ಬಸನ
ಕೋತಿಯಂತೆ ಮಾಡಿಬಿಡುವ
ಜಾತಿಕಾರ ಹೆಂಗಳ ॥ ೨

ಧರಣಿ ಜನರು ಕೇಳಿ ಲೇಶ
ಕರುಣವಿಲ್ಲ ನಾರಿಯರಿಗೆ
ಎರಳೆಕಂಗಳ ಹೆಂಗಳೊಲುಮೆ
ಬರಹ ನೀರ ಮೇಲಿನ
ಸರಸಮುಖಿಯರಿರವ ನೀವು
ಬರಿದೆ ನಂಬಿ ಕೆಡಲಿಬೇಡಿ
ಗುರು ಪುರಂದರ ವಿಠಲರಾಯನ
ಚರಣ ನಂಬಿ ಬದುಕಿರೋ ॥"

ನಾರಿಯರನ್ನು ನಂಬಬೇಡಿರೆಂದು ಹೇಳಲು ದಾಸರಿಗೆ ಬಾಯಿ ಹೇಗೆ ಬಂತೋ ನಾ ಕಾಣೆ. 'ನಾರಿಯರಿಗೆ ಕರುಣವಿಲ್ಲ'ವಂತೆ! ಕರುಣೆಗೂ, [illegible]ಕೆಗೂ ಮೂಲಸ್ಥಾನ ಸ್ತ್ರೀಕುಲ. ದಾಸರು ಹೀಗೆಲ್ಲ ನಾರೀ ಜನರನ್ನೂ, ಸತೀಮಣಿಯರನ್ನೂ, ಮಾತೃದೇವತೆಗಳನ್ನೂ ಆಡಬೇಕಾದರೆ ಅವರ ಭಯವೇ ಅದಕ್ಕೆ ಕಾರಣವೆಂದು ಕಾಣಬರುತ್ತದೆ.

ಭವಿಷ್ಯಭಾರತದಲ್ಲಿ ಸಂಸ್ಕೃತಿಯ ಪ್ರಶ್ನೆ

ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು

ಯುದ್ಧಾನಂತರದ ಸುಧಾರಣೆಗಳಲ್ಲಿ ಭಾರತದ ಸ್ವಾತಂತ್ರ್ಯ ಮೊದಲನೆಯದು. ಸ್ವಾತಂತ್ರ್ಯವಿಲ್ಲದೆ ಕೈಕಟ್ಟಿ ಕೂಡುವುದು ಯಾವ ಸಣ್ಣ ರಾಷ್ಟ್ರಕ್ಕೂ ಒಗ್ಗದ ಮಾತು. 'ಬಲೀಯಾನಬಲಂ ಗ್ರಸತೇ' ಎಂಬ ನೀತಿ ಇಂದಿನ ಸನ್ನಿವೇಶಕ್ಕೆ ಒಗ್ಗುವುದಲ್ಲ. ಜಗತ್ತು ಎಚ್ಚತ್ತಿದೆ. ಆಟಂ ಬಾಂಬಿನಿಂದ ಜಗತ್ತನ್ನು ದಮನಮಾಡಿ ತನ್ನ ಕಾಲ ಕೆಳಗಿಟ್ಟುಕೊಳ್ಳಲು ಬಯಸುವುದೂ ಹುಚ್ಚುತನದ ಮಾತೇ ಸರಿ! ಎಂದ ಮೇಲೆ ಭಾರತಕ್ಕೆ ಇದೀಗ ತಿಂಗಳು—ದಿನಗಳ ಅಳತೆಯಲ್ಲಿಯೇ ಸ್ವಾತಂತ್ರ್ಯ ಕಾದುಕೂತಿದೆ. ಅದು ಜಗನ್ನಿಯಾಮಕನ ವರಪ್ರಸಾದ. ಅಥವಾ ಜನತೆಯ ಜಾಗೃತಿಯ ಕುರುಹು. ನಾಲ್ವತ್ತು ಕೋಟಿ ಭಾರತ ಪುತ್ರರೂ ಅದಕ್ಕೆ ಸಮಭಾಗಿಗಳು. ಸ್ವಾತಂತ್ರ್ಯಸುಧೆಯ ಹಂಚಿಕೆಯಲ್ಲಿ ಈಸಲ ದೇವಾಸುರ ಕಲಹ ಬರುವುದು ಅಸಂಭವ. ಅದನ್ನು ಹಂಚಲು ಯಾವ ಮೋಹಿನಿಯ ಅ ವ ತಾ ರ ವಾ ಗು ವು ದೂ ಬೇಡ.

ಸಹಸ್ರಾರು ವರ್ಷಗಳಿಂದ ಸ್ವಾತಂತ್ರ್ಯಸುಧೆ ಸವಿದು ಅಮರವಾಗಿದ್ದ ಭಾರತ, ವಿಧಿವಶದಿಂದ ನೂರಾರು ವರ್ಷಗಳು ಪರಕೀಯರ ಧಾಳಿಗಳಿಗೆ ಸಿಕ್ಕಿ ಬಳಲಿ ತೊಳಲಿದೆ. "ಸರ್ವೇಜನಾಸ್ಸುಖಿನೋಭವಂತು" ಎಂಬ ಉದಾತ್ತ ತತ್ತ್ವವನ್ನು ತಲೆಯ ಮೇಲಿಟ್ಟು ನೆಲದಾಸೆಗೆ ಎಡೆಗೊಡದೆ 'ಯಾವಧರ್ಮದವನಾದರೇನು? ಮಾನವನಾದರೆ ಸಾಕು. 'ಮಮಾತ್ಮಾ ಸರ್ವಭೂತಾತ್ಮಾ' ಎಂದು ಸರ್ವ ಧರ್ಮ ಸಮನ್ವಯ [illegible] ವಿಶ್ವಭ್ರಾತೃತ್ವವನ್ನು ಸಾರಿದ ಭಾರತಕ್ಕೆ ಬಂದಗತಿ ಪರಕೀಯರ ಪದಧೂಳಿಯಲ್ಲಿನರಳುವುದು, ನೀಚದೃಷ್ಟಿ, ಕಿರಾತವರ್ತನೆ. 'ಇವನು ನಾಝಿ, ಇವನು ಆಂಗ್ಲ, ಇವನು ರಷ್ಯ, ಜಪಾನಿ ಹಿಂದೂ' ಎಂಬ ವರ್ಣದ್ವೇಷದ ಬಲೆಗೆ ಬಲಿಯಾಗಿ ಜಾತಿ ಕೋತಿಗಳನ್ನಾಡಿಸಿ ದೀನ–ದಲಿತ ಜನಾಂಗಗಳನ್ನೂ ಸಣ್ಣಪುಟ್ಟ ರಾಷ್ಟ್ರಗಳನ್ನೂ ಗಳಗ್ರಾಸಮಾಡಿಕೊಂಬ ಜನಾಂಗ ನವನಾಗರಿಕವೆಂದು ಹೆಸರು ಪಡೆದಿದೆ. ಭ್ರಾತೃಭಾವ (Brother hood) ವನ್ನು ಉಪದೇಶಿಸುತ್ತಾ ಮಾರ್ಜಾಲ ವೇದಾಂತವನ್ನು ನೀಡಲು ಬರುತ್ತಿರುವುದು ಎಷ್ಟು ನಾಚಿಗೆಗೇಡಿತನವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಆಟಂ ಬಾಂಬಿನ ಅಂತರಂಗವನ್ನು ಅನ್ಯರಿಗೆ ಅರುಹಲಾಗದೆಂಬ ಸ್ವಾರ್ಥಪರಾಯಣ ನೀತಿವಿಶಾರದರು ವೇದ ವೇದಾಂತಗಳನ್ನು ಅನ್ಯರಿಗೆ ಹೇಳಬಾರದೆಂದು ಸಂಕುಚಿತ ನೀತಿ ಪ್ರಿಯರಾದ ಕೆಲವರ ಅಣ್ಣತಮ್ಮದಿರೆಂಬಲ್ಲಿ ಸಂದೇಹವಿಲ್ಲ. ಆದರೆ ಈ ಕೂಟನೀತಿಗೂ ಅಳಿಗಾಲ ಪಕ್ಕದಲ್ಲಿ ಒಡಮೂಡಿಯೇ ಇದೆಯೆಂಬುದನ್ನು ಮರೆಯಬಾರದು.

ನೂರಾರು ವರ್ಷಗಳಿಂದ ಪರ ಸಂಸ್ಕೃತಿಗಳು ಮೇಲಿಂದಮೇಲೆ ಬಂದಡಸಿದರೂ **ಭಾರತಸಂಸ್ಕೃತಿ** ತನ್ನ ಮೇರು ಗಂಭೀರ ಸ್ಥಿರ ಭಾವದಿಂದ ತಲೆಯೆತ್ತಿ ನಿಂತಿದೆ. ಆದರೆ ಇತ್ತೀಚಿನ ಪರಕೀಯ ಶಿಕ್ಷಣ ಪದ್ಧತಿಯಿಂದಾಗಿ ನಮ್ಮ ಸಂಸ್ಕೃತಿಯ ಭವಿಷ್ಯ ಆಶಾಜನಕವಾಗಿಲ್ಲ. ವಿಜ್ಞಾನ ಶಿಕ್ಷಣ ಪಡೆದ
ನಮ್ಮ ತರುಣರು ಪಾಶ್ಚಾತ್ಯ ಶಿಕ್ಷಣ ಪದ್ಧತಿಯ
ಫಲವಾಗಿ ನಮ್ಮ ಸಂಸ್ಕೃತಿಯಲ್ಲಿ ಅನಾದರ ತೋ
ರುತ್ತ ಸಂಸ್ಕೃತಿ (Culture) ಯ ಸ್ಥಳದಲ್ಲಿ ನಾಗ
ರಿಕತೆ (civilization) ಯನ್ನು ನಟ್ಟು ಪರಕೀ
ಯರ ವೇಷ–ಭಾಷೆ–ಭೂಷಣಗಳ ಅನುಕರಣಕ್ಕೆ
ಬಲಿಯಾಗುತ್ತಿದ್ದಾರೆ. ತಮ್ಮ ಪ್ರತಿ ರಕ್ತಕಣ
ಲ್ಲಿಯೂ ಸಂಸ್ಕೃತಿಯ ಬೀಜ ರೂಪದ ಸಂಸ್ಕಾ
ಬೇರೆಯಾಗುತ್ತಿದೆ. ಇದರಿಂದಾಗಿ ಇನ್ನು ಒಂ

ರಡು ತಲೆಮಾರಿನೊಳಗಾಗಿ ಭಾರತ ಯಾವುದೋ ಹೇಳ ಹೆಸರಿಲ್ಲದ ಒಂದು ವಿಲಕ್ಷಣ ಸಂಸ್ಕೃತಿಯನ್ನು ಹೊಂದಬಹುದೆಂದು ವಿಚಾರಜ್ಞರು ಪರಿಶೀಲಿಸುತ್ತಿದ್ದಾರೆ. ಹಿಂದೆ ಜನತೆಯ ಮನೋಭಾವಗಳು ಪರಿವರ್ತನವಾಗಲು ಶತಮಾನಗಳು ಹಿಡಿಯುತ್ತಿದ್ದುವೆಂಬುದು ಚರಿತ್ರೆಯಲ್ಲಿ ಅಂಕಿತವಾಗಿದೆ. ಕ್ಷಣಕ್ಷಣಕ್ಕೂ ನಮ್ಮ ಚಿತ್ತವೃತ್ತಿಗಳಲ್ಲಿ ಬೇರೆ ಬೇರೆ ಸನ್ನಿವೇಶಗಳಿಂದ ಆವೇಶ-ಉದ್ವೇಗ-ವಿಚಾರಲಹರಿಗಳು ಮೂಡುವ ಸಾಮುಗ್ರಿ ಸಿದ್ಧವಾಗಿದೆ. ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಕ್ಷೇಮಚಿಂತನೆಗಳ ಬಾಂಧವ್ಯ ಬೆಳೆಯುತ್ತಿದೆ. ಮಾನವನ ದೃಷ್ಟಿಯಲ್ಲಿ ಜಗತ್ತು ಕಿರಿದಾಗಿದೆ. ದೈವ ಸೃಷ್ಟಿರಹಸ್ಯಗಳನ್ನರಿತು ಪ್ರತಿಸೃಷ್ಟಿ ಮಾಡತೊಡಗಿದ ಮಹರ್ಷಿ ವಿಶ್ವಾಮಿತ್ರನ ಕಾರ್ಯ ಈಗ ನಾಗಾಲೋಟದಿಂದ ಮುಂದುವರಿದಿದೆ. ಸಂಶೋಧನೆಯಲ್ಲಿ ಪರಿಪೂರ್ಣನೆನಿಸಿ ಮಾನವನು ಬ್ರಹ್ಮಪದವಿಯನ್ನೈದಲು ಹೆಚ್ಚು ಕಾಲ ಬೇಕಿಲ್ಲವೆನಿಸಿದೆ. ಜನತೆಯ ನಡೆ-ನುಡಿ-ನೋಟ-ಮಾಟ-ನಯ-ನೀತಿ ಮತ್ತು ಮತ-ಧರ್ಮಗಳಲ್ಲಿ ನವನವೋನ್ಮೇಷವಾಗುತ್ತಿದೆ. ನಾಗರಿಕತೆಯು ಮುಂದುವರಿದಂತೆಲ್ಲ ಸಂಸ್ಕೃತಿ ಹಿಂಜರಿಯುತ್ತಿದೆ. ಭವಿಷ್ಯ ಭಾರತದಲ್ಲಿ ನಮ್ಮ ಸಂಸ್ಕೃತಿಯ ಸ್ಥಾನಮಾನಗಳೇನೆಂಬ ಸಂದೇಹ ವಿಚಾರಪರರ ಹಗಲುಗನಸುಗಳಿಗೆಡೆಯಾಗಿದೆ. ಕಳೆದ ತಿಂಗಳು (೧೬-೧೭-೧೮-ನವೆಂಬರ್ ೧೯೪೫), ಆಗ್ರಾದಲ್ಲಿ ನಡೆದ ಅಖಿಲಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀಯುತ **ಸಂಪೂರ್ಣಾನಂದರೂ** ಸ್ವಾಗತಾಧ್ಯಕ್ಷರಾದ ಶ್ರೀಯುತ **ಪಂಡಿತ ರಾಮಚಂದ್ರಗುಪ್ತ** ಎಂ. ಎಲ್. ಸಿ., ಅವರೂ ತಮ್ಮ ಭಾಷಣಗಳಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಭಾರತೀಯ ಸಂಸ್ಕೃತಿ ಸಂರಕ್ಷಣೆಯ ಹೊರತು ಭಾರತೀಯರು ತಮ್ಮ ಗುರಿಮುಟ್ಟುವುದು ದುಸ್ಸಾಧ್ಯ. ಸಂಸ್ಕೃತಿಹೀನ ಜನಾಂಗ ಜೀವವಿಲ್ಲದ ದಟ್ಟದಂತೆ. ನಮ್ಮ ಸಂಸ್ಕೃತಿಯ ಸಂರಕ್ಷಣೆಗೆ ಸಂಸ್ಕೃತ ಭಾಷಾ ಪ್ರಚಾರವೇ ಅಡಿಗಲ್ಲು.

ಸಂಸ್ಕೃತಿ—ಸಂಸ್ಕೃತ

ಸಂಸ್ಕೃತಿ—ಸಂಸ್ಕೃತಗಳಿಗೆ ಹುಟ್ಟಿನಲ್ಲಿಯೇ ಒಂದು ಬಾಂಧವ್ಯವಿದೆ. ಸಂಸ್ಕೃತ ಭಾರತೀಯರ ಸಂಸ್ಕೃತಿಯ ಗಣಿ. ವೇದದ ಹಿಂದಿನಿಂದ ಹಿಡಿದು ಇಂದಿನವರೆಗೂ ಆಯಾ ದೇಶ—ಕಾಲ—ಜನಾಂಗಗಳಲ್ಲಿ ಚಿರಂತನಕಾಲದಿಂದ ಬೆಳೆದುಬಂದ ಸಂಸ್ಕಾರ ವಿಶೇಷವೇ ಸಂಸ್ಕೃತಿ. ವೇದ ವೇದಾಂತ ಶಾಸ್ತ್ರದರ್ಶನಾದಿಯಾದ ನಮ್ಮ ಬೃಹತ್ಸಾಹಿತ್ಯದಲ್ಲಿ ಅದರ ರೂಪು ರೇಖೆಗಳು ಅಂಕಿತವಾಗಿವೆ. ಅದರ ನೆರಳು ಭಾರತದ ಪ್ರಾಂತ ಭಾಷೆಗಳಲ್ಲಿಯೂ ಪ್ರತಿಫಲಿಸಿ ಬೆಳೆದು ಪರಿಪೂರ್ಣತೆಯ ಕಡೆಗೆ ಸಾಗಿದೆ. ವಿವಿಧಭಾಷೆ, ಮತ, ಜನಾಂಗಗಳ ಜೀವನ ವಿಕಾಸದ ಸವಿಫಲಗಳ ತನಿರಸ ರಸಾಯನ ಭಾರತೀಯ ಸಂಸ್ಕೃತಿ. ಇದರಲ್ಲಿ ಆರ್ಯ ದ್ರಾವಿಡ ಮುಂತಾದ ಅನೇಕ ಜನಾಂಗಗಳ ಸಂಸ್ಕಾರ ಮೂರ್ತೀಭವಿಸಿದೆ ಅದು ಸಂಸ್ಕೃತ ಭಾಷೆಯಲ್ಲಿ ಅಡಗಿದೆ. ಈ ಎಲ್ಲ ಸಂಸ್ಕಾರಗಳ ಕೈಗನ್ನಡಿ ಸಂಸ್ಕೃತ. ಇಂದು ಬಳಕೆಯಲ್ಲಿರುವ ಭಾರತೀಯ ಧರ್ಮತತ್ತ್ವಗಳ ಅದರು ಸಂಸ್ಕೃತ ಭಾಷೆಯಲ್ಲಿದೆ. ಮುಂದೆ ಅವತರಿಸಿದ ಆಚಾರ್ಯರು, ಶರಣಸಂತರಾದಿಯಾದ ಅನುಭವಿಗಳು ಅದಕ್ಕೆ ಪುಟವಿಟ್ಟು ಅಪರಂಜಿಮಾಡಿ ತಮ್ಮ ತಮ್ಮ ಅನುಭವದ ಒರೆಗಲ್ಲಿಗೆ ತೀಡಿನೋಡಿ ಬಣ್ಣವಿಡಿದು ತಮತಮಗೆ ಅಭಿಮತವಾದ ಅಲಂಕಾರ ನಿರ್ಮಾಣದಲ್ಲಿ ಉಪಯೋಗಿಸಿರುವರೆಂಬುದು ಎಲ್ಲರಿಗೂ ವೇದ್ಯವಾಗಿದೆ. ಒಡವೆಗಳು ಅನಂತ, ಹೆಸರು ಅನೇಕ. ಆದರೆ ಮೂಲಧಾತು ಒಂದೇ. [ಈ ಉದಾತ್ತ ತತ್ತ್ವವನ್ನು ಬಿಂಬಿಸುವ ಶಿಕ್ಷಣಕ್ರಮ ಭಾರತದಲ್ಲಿ ಏರ್ಪಟ್ಟಂದು ನಿಜವಾದ ಭಾರತೀಯತೆಯ ಪುನರುದಯವಾದಂತೆಯೇ. ಪರದಾಸ್ಯ ಪರಿಪೀಡಿತ, ಸ್ವಾತಂತ್ರ್ಯ ವಿಹೀನ ಭಾರತಕ್ಕೆ ಈಗ ಅದು ಹಗಲುಗನಸೇ ಸೈ. ಅದನ್ನು ಗಳಿಸಬೇಕಾದರೆ ಸಂಸ್ಕೃತಪ್ರಚಾರ—ಚಳುವಳಿಗಳ ಧ್ಯೇಯಸಾಧನೆ ಬೇಕು.]

"ನಮ್ಮ ದೇಶದ ದಾಸ್ಯಕ್ಕೆ ನಾವೇ ಕಾರಣ. ನಮ್ಮ ಸಂಸ್ಕೃತ ಭಾಷೆ—ಸಭ್ಯತೆ—ಸಂಸ್ಕೃತಿಗಳ

ಘೋರ ಅಧಃಪತನಕ್ಕೆ ನಮ್ಮ ಆಲಸ್ಯವೇ ಮುಖ್ಯ. ಸಾವಿರಾರುವರ್ಷಗಳ ನಿದ್ರೆಯಿಂದ ಭಾರತವಿಂದು ಎಚ್ಚರಗೊಳ್ಳಬೇಕು. ಇಲ್ಲದಲ್ಲಿ ಇಂದು ಸಾಯುವಂತಿರುವ ಸಂಸ್ಕೃತವು ನಾಳೆ ಮೃತವೇ ಆದೀತು. ಅದರೊಂದಿಗೆ ನಮ್ಮ ವಿಶಾಲ—ಅಪೌರುಷೇಯ ಧರ್ಮ—ಸಭ್ಯತೆ—ಸಂಸ್ಕೃತಿ ಸಂಗ್ರಹವಾಗಿ ಹೇಳಬೇಕಾದರೆ ಸರ್ವಸ್ವವೂ ವಿಲಯವಾಗುತ್ತದೆ. ಒಡನೆಯೇ ನಮ್ಮ ಗೌರವಾರ್ಹವಾದ ಭಾರತೀಯತೆಯೂ ನಷ್ಟವಾಗುತ್ತದೆ. ದೇಶ ದಾಸ್ಯದ ಬಲೆಯಲ್ಲಿ ನಿರಂತರವೂ ಸಿಲುಕಿ ನರಳಬೇಕಾಗುತ್ತದೆ. ಆಗ ಯಾವನುತಾನೆ ಚಿರಂತನ ಕಾಲದಿಂದ ಬಂದ ವೇದ—ವೇದಾಂತ ಭಗವದ್ಗೀತೆ—ಬ್ರಹ್ಮಸೂತ್ರಾದಿ ದರ್ಶನ ಗ್ರಂಥಗಳಿಗೊದಗುವ ದುರ್ಗತಿಯಿಂದ ಹರಿದು ಹಂಚಿ ನಷ್ಟಭ್ರಷ್ಟವಾದ ಭಾರತೀಯತೆಯನ್ನು ಉದ್ಧಾರ ಮಾಡಲಾದೀತು. ಅಂದೇ ನಮ್ಮ ಸ್ವರಾಜ್ಯದಾಸೆಯೂ ಗಗನ ಕುಸುಮವಾಗುತ್ತದೆ. ಆದುದರಿಂದ ಭಾರತದ ನಾಯಕರು-ಧರ್ಮಾಚಾರ್ಯರು—ಪಂಡಿತರು—ಸಮಸ್ತ ಜನತೆಯೂ ಸಂಸ್ಕೃತಿಸಂರಕ್ಷಣೆಗಾಗಿ ನಡುಕಟ್ಟಿ ನಿಲ್ಲಬೇಕು"

ಅಂದು ಸ್ವಾಗತಾಧ್ಯಕ್ಷರು (ಪು. ಲ.) ಹೇಳಿರುವ ಮಾತು ಸಂಸ್ಕೃತಿ ರಕ್ಷಣೋಪಾಯದ ಆವಶ್ಯಕತೆಯನ್ನು ಉದ್ಘೋಷಿಸಿದೆ.

ಸಭಾಪತಿ ಶ್ರೀಯುತ ಸಂಪೂರ್ಣಾನಂದರು ಸಂಸ್ಕೃತ ರಾಷ್ಟ್ರಭಾಷೆಯಾದರೆ ಬರುವ ಅಡ್ಡಿ ಅತಂಕಗಳ ಮಾತೆತ್ತಿ ಸ್ತ್ರೀ ಶೂದ್ರರಾದಿಯಾಗಿ ಸರ್ವರೂ ವೇದ ವೇದಾಂಗಾದಿ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡಲು ಅಡ್ಡಿಯಿಲ್ಲವೆಂದೂ, ಪರಧರ್ಮೀಯರೂ, ಪರದೇಶದವರೂ ಮತ್ತು ನಮ್ಮ ಶಾಸ್ತ್ರಗಳಲ್ಲಿ ಶ್ರದ್ಧೆಯಿಲ್ಲದವರೂ ವೇದಾದಿಧರ್ಮಶಾಸ್ತ್ರಗಳನ್ನು ಓದಿ ವಿಮರ್ಶೆಗಳನ್ನು ನಡೆಯಿಸುತ್ತಿರುವಲ್ಲಿ ಭಾರತೀಯನಾಗಿ, ವೇದಾದಿಗಳನ್ನು ಶ್ರದ್ಧಾಭಕ್ತಿಯಿಂದ ಓದಲೆಳೆಸುವ ಜಿಜ್ಞಾಸುವಿಗೆ ತಡೆಯೊಡ್ಡುವುದು. ಅವಿಚಾರತೆಯೆಂದೂ ವೇದಕಾಲದಲ್ಲಿ ಸ್ತ್ರೀ ಶೂದ್ರರನೇಕರು ವೇದ ವೇದಾಂತ ಶ್ರವಣ ರಚನಾದಿಗಳಲ್ಲಿ ಭಾಗವಹಿಸಿದ್ದರೆಂಬುದಕ್ಕೆ ನಿದರ್ಶನವಿತ್ತು ಸಮಸ್ತರಲ್ಲಿಯೂ ಸಂಸ್ಕೃತಭಾಷೆಯನ್ನು ಪ್ರಚಾರಮಾಡಬೇಕೆಂದು ಹೇಳಿದ್ದಾರೆ. ಮೊನ್ನೆ ತಾನೆ ಸರ್. ಸಿ. ಪಿ. ರಾಮಸ್ವಾಮಿ ಐಯರ್‌ರವರು ಮದರಾಸಿನಲ್ಲಿ ಸಂಸ್ಕೃತಪ್ರಚಾರದ ವಿಷಯದಲ್ಲಿ ಹೇಳಿರುವ ಮಾತುಗಳು ಇದಕ್ಕೆ ಬೆಂಬಲವಾಗಿವೆ.

ಮೈಸೂರು ಸಂಸ್ಕೃತ ಅಕಾಡೆಮಿ

ಇಂದಿಗೆ ಹಲವು ವರ್ಷಗಳ ಹಿಂದೆ ಮೈಸೂರಿನಲ್ಲಿಯೂ ಅನೇಕಮಂದಿ ವಿಚಾರಶೀಲರು ಈ ತತ್ವಸಾಧನೆಗಾಗಿ ಒಂದು ಸಂಘವನ್ನು ಏರ್ಪಡಿಸಿ ಅದಕ್ಕಾಗಿ ಹಲವಾರು ಸಾವಿರ ರೂ. ಗಳ ನಿಧಿಯನ್ನೂ ಸಾವಿರಾರು ಪುಸ್ತಕಗಳ ಭಂಡಾರವನ್ನೂ ಏರ್ಪಡಿಸಿದ್ದರೆಂಬುದು ಸ್ತುತ್ಯರ್ಹವಾಗಿದೆ. ಆದರೆ ಇತ್ತೀಚೆಗೆ ಬಂದ ಅಧಿಕಾರಿಗಳ ಕಾರ್ಯದಕ್ಷತೆಯ ವಿಹೀನತೆಯಿಂದ ಅದು ದೀರ್ಘ ನಿದ್ರಾಮುದ್ರಿತವಾಗಿದೆ. ನಿವೃತ್ತ—ಪ್ರವೃತ್ತ ಅಧಿಕಾರಿಗಳು ಅಥವಾ ಜೀವನ ಹಂತದ ತುಟ್ಟತುದಿಯಲ್ಲಿ ಕುಳಿತು ದಿನವೆಣಿಸುವ ಮಹನೀಯರು ಹಿಡಿದಿರುವ ಸಂಸ್ಥೆಯ ಅಧಿಕಾರ ಸೂತ್ರಗಳನ್ನು ಉತ್ಸಾಹಿಗಳಾದ ತರುಣರಿಗೆ ವಹಿಸಿ ಮಾರ್ಗದರ್ಶಕರಾದಲ್ಲಿ ಸಂಸ್ಥೆಯು ಇದುವರೆಗಾಗಲೇ ಅನೇಕ ಮಹತ್ವಪೂರ್ಣವಾದ ಕೆಲಸ ಸಾಧಿಸಬಹುದಾಗಿತ್ತು. 'ಮೈಸೂರು ಸಂಸ್ಥಾನದ ಸಂಸ್ಕೃತ ವಿದ್ಯಾಭ್ಯಾಸಕೇಂದ್ರವೆನಿಸಿದ ಸಂಸ್ಕೃತ ಬೋರ್ಡು ಅಥವಾ ಸರ್ವಜನ ಸಾಧಾರಣವಾದ ಕನ್ನಡ ಸಾಹಿತ್ಯ ಪರಿಷತ್ತಿನ ಮಾದರಿಯಲ್ಲಿ ಮಾರ್ಪಡಿಸಿದಲ್ಲಿ ಅದರ ಕಾರ್ಯಗಳು ಶತಾಧಿಕ ಸಂಖ್ಯೆಯಲ್ಲಿ ಮುಂದುವರಿಯಲು ಅವಕಾಶವಾಗುತ್ತದೆ.

ಕರ್ಣಾಟಕಕ್ಕೊಂದು ಸಂಸ್ಕೃತಸಾಹಿತ್ಯಪರಿಷತ್ತು

ಕನ್ನಡ ಪ್ರಚಾರಕ್ಕಿರುವಂತೆ ಅಖಿಲ ಕರ್ಣಾಟಕಕ್ಕೆ ಒಂದು ಸಂಸ್ಕೃತ ಸಾಹಿತ್ಯ ಪರಿಷತ್ತು ಬೇಕು. ಕರ್ಣಾಟಕದ ವಿದ್ಯಾರ್ಥಿಗಳು ಕಳೆದ ಒಂದೆರಡು ವರ್ಷಗಳಿಂದ ಸಂಸ್ಕೃತ ವಿದ್ಯಾರ್ಥಿ ಸಮ್ಮೇಳನಗಳನ್ನು ಅಲ್ಲಲ್ಲಿ ಮಾಡಿ ಜಾಗೃತಿಯನ್ನುಂಟುಮಾಡುತ್ತಿರುವುದು ಒಂದು ಶುಭೋದಯವೆನಿಸಿದೆ.

ಅಲ್ಲದೆ ವಿದ್ಯಾರ್ಥಿಗಳೇ 'ಸಂಸ್ಕೃತ ಪ್ರಚಾರಸಂಘ' ವನ್ನು ಮಾಡಿಕೊಂಡು ಉತ್ಸಾಹದಿಂದ ಪ್ರಚಾರದಲ್ಲಿ ತೊಡಗಿದ್ದರೂ ಸರಿಯಾದ ಪ್ರೋತ್ಸಾಹವಿಲ್ಲದೆ ನಿರುತ್ಸಾಹ ಮತಿಗಳಾಗಿದ್ದಾರೆ. ಆದುದರಿಂದ ಸರ್ಕಾರದವರೂ ಮಹಾಜನಗಳೂ ಇದಕ್ಕಿರುವ ಅಡಚಣೆಗಳನ್ನು ಪರ್ಯಾಲೋಚಿಸಿ ಪರಿಹಾರೋಪಾಯವನ್ನು ಚಿಂತಿಸಿ ಕಾರ್ಯೋನ್ಮುಖರಾಗಬೇಕು. ಅದಕ್ಕಾಗಿ ಒಂದು ಪ್ರತ್ಯೇಕ ಸಂಸ್ಥೆ—ಅಡಳಿತ—ವ್ಯವಸ್ಥೆಯಾಗಬೇಕು. ಆ ಸಂಸ್ಥೆಯ ಆಶ್ರಯದಲ್ಲಿ ಸಾಹಿತ್ಯ ಪ್ರಚಾರ—ಸಂಸ್ಕೃತಿ ಸಂರಕ್ಷಣೆ ಅವ್ಯಾಹತವಾಗಿ ಸಾಗಬೇಕು. ಇಂತಹ ಮಹತ್ಕಾರ್ಯದ ಭವ್ಯತೆಯನ್ನು ದೂರದೃಷ್ಟಿಯಿಂದ ಪರ್ಯಾಲೋಚಿಸಿ ಸಂಸ್ಕೃತ ಅಕಾಡೆಮಿಯ ಅಧಿಕಾರಿಗಳು ಮುಂದೆ ಬಂದು ಕೀರ್ತಿಭಾಗಿಗಳಾಗಬೇಕು. ಒಂದು ಸಂಸ್ಥೆಯನ್ನು ಉದ್ಧಾರ ಮಾಡುವ ಮಹತ್ಕಾರ್ಯಕ್ಕೆ ಅವರು ಉದಾರವಾಗಿ ನೆರವಿತ್ತು ಭಾರತ ಸಂಸ್ಕೃತಿ ಸಂರಕ್ಷಕರಾಗುವ ಭಾಗ್ಯಕ್ಕೆ ಭಾಗಿಗಳಾಗಬೇಕೆಂದು ಹಾರೈಸುತ್ತೇನೆ.

ಅನಭಿಷಿಕ್ತ ರಾಜ್ಞೀ

ಹೋಮರನು ಯುದ್ಧವನ್ನೂ, ವರ್ಜಿಲನು ಆಯುಧವನ್ನೂ ಹೋರೇಸ್‌ನು ಪ್ರೇಮವನ್ನೂ ಮಿಲ್ಟನ್ ಮತ್ತು ಡಾಂಟೆ ಸ್ವರ್ಗ ನರಕಗಳನ್ನೂ ಕುರಿತು ಮಹಾಕಾವ್ಯವನ್ನು ಬರೆದರು.

ಆದರೆ ಆ ಸಿದ್ಧ ಕವಿಗಳ ಒಟ್ಟು ಪ್ರತಿಭೆಯು ನನ್ನಲ್ಲಿದ್ದು, ನನ್ನ ಕೈಯಲ್ಲಿ ಸಹಸ್ರ ತಂತಿಗಳ ತಂಬೂರಿಯನ್ನು ಕೊಟ್ಟು ಇಡೀ ವಿಶ್ವವೇ ಕೇಳಲು ಕುಳಿತಿದ್ದರೆ ನಾನು ಮನದಣಿಯುವವರೆಗೂ ಗೋವಿನ ಮಹಿಮೆಯನ್ನು ಹಾಡಿ ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡುತ್ತಿದ್ದೆ.

ಚಾಣದ ಸಹಾಯದಿಂದ ಹೃದಯದಲ್ಲಿ ಮನೆಮಾಡಿರುವ ಗೋಮಾತೆಯ ಚಿತ್ರವನ್ನು ಅಮೃತಶಿಲೆಯಲ್ಲಿ ಕೆತ್ತುವ ಪ್ರತಿಭೆಯುಳ್ಳ ಶಿಲ್ಪಿಯಾಗಿದ್ದರೆ ಪ್ರಪಂಚದ ಪಾಷಾಣ ರಾಶಿಗಳಿಂದ ನಿರ್ಮಲವೂ ಶುಭ್ರವೂ ಆದ ಅಮೃತ ಶಿಲೆಗಳನ್ನು ಆಯ್ದು, ತಿಂಗಳಬೆಳಕಿನಲ್ಲಿ ಮಿಂದು, ನಿರಭ್ರನೀಲಾಕಾಶವನ್ನು ಹೊದ್ದು, ನಿಶ್ಶಬ್ದವಾಗಿರುವ ಸುಂದರ ಕಾನನದಲ್ಲಿ, ತಿಳಿನೀರಿನ ಸರೋವರದ ತೀರದಲ್ಲಿ ಪಕ್ಷಿಗಳ ಕಲನಿನಾದವನ್ನು ಕೇಳುತ್ತ ಕುಳಿತು ನನ್ನ ಪವಿತ್ರತಮ ಕಾರ್ಯದಲ್ಲಿ ತೊಡಗುತ್ತಿದ್ದೆ. ಸ್ವಚ್ಛವೂ ಶೀತಲವೂ ಆದ ಅಮೃತ ಶಿಲೆಯಲ್ಲಿ ಒರಟುತನವೇನಾದರೂ ಇದ್ದರೆ ಚಾಣದ ಸಹಾಯದಿಂದ ದೂರ ಮಾಡಿ, ನನ್ನ ಹೃದಯದಲ್ಲಿ ನೆಲೆಸಿರುವ ಗೋಮಾತೆಯನ್ನು ಕಡೆಯಲು ಅನುಕೂಲವಾಗುವಷ್ಟು ಕೋಮಲವಾಗಿ ಮಾಡುತ್ತಿದ್ದೆ. ಕರುಣಾಭರಿತವಾದ ವಿಶಾಲ ನೇತ್ರಗಳು, ಪುಷ್ಟಿಕರವಾದ ಪಯಪಾನವನ್ನು ಮಾಡಿಸಲು ಹಾತೊರೆದು ನಿಂತಿರುವ ತುಂಬುಸ್ತನಗಳು, ಪ್ರೇಮದಿಂದ ಪಾನಮಾಡುವವರಿಗೆ ಆರೋಗ್ಯ, ಶಕ್ತಿ ಮತ್ತು ಸುಖವನ್ನು ಕರುಣಿಸುವ ಅಮೃತಧಾರೆ—ಇವೆಲ್ಲವೂ ಆ ತಾಯಿಯ ಹಿರಿಮೆ.

ಗೋಮಾತೆಯು ಅನಭಿಷಿಕ್ತ ರಾಜ್ಞೀ. ಇಡೀ ವಿಶ್ವವೇ ಅವಳ ರಾಜ್ಯ. ಸೇವೆಯೇ ಅವಳ ಬಿರುದು. ಒಂದಕ್ಕೆ ನೂರ್ಮಡಿಯಾಗಿ ಕೊಡುವುದೇ ಅವಳ ಹೆಗ್ಗಳಿಕೆ.

ಇದ್ದಕ್ಕಿದ್ದಂತೆಯೇ ಪ್ರಪಂಚದಲ್ಲಿರುವ ಹಸುಗಳೆಲ್ಲವೂ ಸತ್ತುಹೋದರೆ—ಏಕೆ ಬಂಜೆಯಾದರೂ ಸಾಕು—ಮನುಷ್ಯನು ವಿಪತ್ತಿಗೆ ಒಳಗಾದಂತೆಯೇ ಸರಿ. ರೈಲು, ಬ್ಯಾಂಕು, ಬಟ್ಟೆ ಏನಿಲ್ಲದಿದ್ದರೂ ನಾವು ಬದುಕಿಬಾಳುತ್ತಿರಬಹುದು; ಆದರೆ ಹಸುಗಳಿಲ್ಲದಿದ್ದರೆ ರೋಗ, ಕ್ಷಯ, ಕೊನೆಗೆ ಮೃತ್ಯು ಇವಕ್ಕೆ ತುತ್ತಾಗ ಬೇಕಾಗುವುದು.

ಶ್ರೀ ಮಾಲ್ಕಂ ಆರ್. ಪೀಟರ್‌ಸನ್.

ಕನ್ನಡ ಗದ್ಯದ ಬೆಳವಣಿಗೆ

ಶ್ರೀಮಾನ್
ವೈ. ಅಚ್ಯುತರಾವ್, ಎಂ.ಎ.,
ಹೈದರಾಬಾದ್.

ಈಗ ನಮ್ಮ ನಾಡಿನ ಸಾಹಿತ್ಯದಲ್ಲಿ ಎಲ್ಲಿ ನೋಡಿದರೂ ವಸಂತಕಾಲ. ಋತುಧರ್ಮಕ್ಕನುಸಾರವಾಗಿ ನಮ್ಮ ಸಾಹಿತ್ಯ ವೃಕ್ಷವೂ ಅದರ ನಾನಾ ಶಾಖೆಗಳಲ್ಲಿ ಕೆಂದಳಿರುಗಳನ್ನು ಹೊರಸೂಸುತ್ತಿದೆ. ಅವೆಲ್ಲ ಮುಂದೆ ಬಲಿತು ಹೂವಾಗಿ ರುಚಿರುಚಿಯಾದ ಫಲವನ್ನು ಉಣಲು ಕೊಡುತ್ತವೆ ಎಂಬ ನಂಬಿಕೆ ನಮಗೆ ಚೆನ್ನಾಗಿ ತೋರುತ್ತಿದೆ.

ಈ ನಮ್ಮ ಸಾಹಿತ್ಯದಲ್ಲಿ ಎಲ್ಲ ಸಾಹಿತ್ಯದಲ್ಲೂ ಇದ್ದಂತೆ ಮುಖ್ಯವಾಗಿ ಪದ್ಯಗದ್ಯಗಳೆಂಬ ಎರಡು ಶಾಖೆಗಳುಂಟು. ವಿಶ್ವದ ಎಲ್ಲಾ ಸಾಹಿತ್ಯಗಳ ಚರಿತ್ರೆಯಿಂದ ತಿಳಿದುಬರುವಂತೆ ನಮ್ಮಲ್ಲಿ ಕೂಡ ಹಿಂದಿನ ಕಾಲದಲ್ಲಿ ಪದ್ಯಕ್ಕೆ ಹೆಚ್ಚು ಮಾನ್ಯತೆ ಇತ್ತು. ಅದರ ವ್ಯವಸಾಯವೂ ಹೆಚ್ಚಾಗಿತ್ತು. ಅಲ್ಲಲ್ಲಿ ಗದ್ಯ ಕಂಡು ಬಂದರೂ ಅದು ಹೆಚ್ಚು ಬಳಕೆಗೆ ಬಂದಿರಲಿಲ್ಲ. ಆ ಗದ್ಯವೂ ಮಾತನಾಡುತ್ತಿದ್ದ ಕನ್ನಡ ಗದ್ಯವಾಗಿರದೆ ಕೇವಲ ಗ್ರಂಥ ಗದ್ಯವಾಗಿದ್ದಿತು. ಇದಕ್ಕೆ ಅನೇಕ ಕಾರಣಗಳುಂಟು. ಧರ್ಮದಲ್ಲಿಯಾಗಲಿ, ರಾಜಕೀಯದಲ್ಲಿಯಾಗಲಿ ಆಗಾಗ್ಗೆ ಯಾವ ರೀತಿ ಪುನರ್ವಿಕಾಸವಾಗುತ್ತದೊ ಹಾಗೆಯೇ ಸಾಹಿತ್ಯದಲ್ಲೂ ಆಗುವುದುಂಟು. ಗದ್ಯದ ಧ್ವಜವನ್ನು ಎತ್ತಿ ಹಿಡಿಯಲು ಆಗಾಗ್ಗೆ ಕೆಲ ವಿಭೂತಿ ಪುರುಷರೂ ಹುಟ್ಟುತ್ತಾರೆ. ಇದು ಎಲ್ಲಾ ಸಾಹಿತ್ಯದಲ್ಲೂ ಉಂಟು. ಸಂಸ್ಕೃತವು ಒಂದು ಕಾಲದಲ್ಲಿ ನಮ್ಮ ಜೀವನದಲ್ಲೂ ಸಾಹಿತ್ಯದಲ್ಲೂ ಮಾರ್ಗದರ್ಶಿಯಾಗಿತ್ತು. ಆಗ ಸಾಹಿತ್ಯ ಎಡೆಬಿಡದೆ ಅದೇ ಮಾರ್ಗದಲ್ಲಿ ಹೋಗುತ್ತಿತ್ತು. ಇಂದು ನಮ್ಮ ಸಾಹಿತ್ಯಕ್ಕೆ ಹೆಚ್ಚಾಗಿ ಪಾಶ್ಚಾತ್ಯ—ಅದರಲ್ಲೂ ಇಂಗ್ಲಿಷು ಸಾಹಿತ್ಯವು ಆದರ್ಶವಾಗಿದೆ. ಹೀಗೆ ಆದರ್ಶವಾಗಿರುವ ಇಂಗ್ಲಿಷು ಸಾಹಿತ್ಯದಲ್ಲೂ ೧೪ನೇ ಶತಮಾನದವರೆಗೂ ಸ್ವಾತಂತ್ರ್ಯತೆ ಇರಲಿಲ್ಲ. ಅದಕ್ಕೆ ಫ್ರೆಂಚ್ ಸಾಹಿತ್ಯವೇ ಮಾದರಿಯಾಗಿದ್ದಿತು. ಆಗಿನ ಇಂಗ್ಲಿಷು ಅರಸರೂ ಕೂಡ ಉತ್ತಮ ಸಾಹಿತ್ಯಕ್ಕೆ ಫ್ರೆಂಚ್ ಭಾಷೆ ಬೇಕೆಂದೂ ಇಂಗ್ಲಿಷ್ ಭಾಷೆ 'ಸಪ್ಪೆ' ಎಂದೂ ಹೇಳುತ್ತಿದ್ದರು. ಕೆಲ ಜನರು ಇಂಗ್ಲಿಷು ಅಭಿಮಾನಿಗಳು ಮಾತ್ರ ಇದಕ್ಕೆ ವಿರೋಧವಾಗಿ ಇಂಗ್ಲಿಷು ಭಾಷೆಯನ್ನು ಕಾಪಾಡಲು ಅನೇಕ ಪ್ರಯತ್ನಗಳನ್ನು ಮಾಡಿದರು. ನಮ್ಮ ಕನ್ನಡದಲ್ಲೂ ಅದೇ ಬಾಳಾಗಿದ್ದಿತು. ೧೨ನೇ ಶತಮಾನದಲ್ಲಿ ಕನ್ನಡಕ್ಕೆ ಹೆಚ್ಚು ಗೌರವವನ್ನು ಅದರಲ್ಲೂ ಕನ್ನಡ ಗದ್ಯಕ್ಕೆ ಹೆಚ್ಚು ಮಾನ್ಯತೆ ಕೊಟ್ಟವರು ಎಂದರೆ ಆಗಿನ ರಾಜಕೀಯ ವ್ಯಕ್ತಿಯೂ ಇನ್ನೂ ಹೆಚ್ಚಾಗಿ ಧರ್ಮ ಪ್ರಚಾರಕರೂ ಆದ ಬಸವಣ್ಣನವರು. ಇವರು ಹಠ ಕಟ್ಟಿ ಕನ್ನಡವನ್ನೂ ಕನ್ನಡ ಗದ್ಯವನ್ನೂ ಉದ್ಧಾರ ಮಾಡಿದರು. ಈ ಭಾಷೋದ್ಧಾರಕ್ಕಾಗಿಯೂ ಪ್ರಜೆಗಳ ಸ್ವಾತಂತ್ರ್ಯೋದ್ಧಾರಕ್ಕಾಗಿಯೂ ಇಂಗ್ಲಿಷು ಸಾಹಿತ್ಯದಲ್ಲಿ ಮೊದಲು ಹೊರಟದ್ದು ಗದ್ಯವೇ ಹೊರತು ಪದ್ಯವಲ್ಲ. ೧೫ನೇ ಶತಮಾನದಲ್ಲಿ ನ್ಯಾಯಾಸ್ಥಾನದಲ್ಲಿ ಮೊದಲನೆಯ ಸಲ ನ್ಯಾಯಾಧಿಪತಿಯು ಎದುರಿಗೆ, ಆಗ ಸರ್ಕಾರದ ಭಾಷೆಯಾಗಿದ್ದ ಲ್ಯಾಟಿನ್ ಭಾಷೆಯನ್ನು ಬಿಟ್ಟು,

ಇಂಗ್ಲೀಷು ಭಾಷೆಯಲ್ಲಿ ತನ್ನ ವಾದವನ್ನು ಹೂಡಿ
ಅದರ ಮರ್‍ಯಾದೆಯನ್ನು ಕಾಪಾಡಿದವನು ಧರ್ಮ
ಸಂಸ್ಥೆಗೆ ಸೇರಿದ ಒಬ್ಬ ಬಿಷಪ್. ತರುವಾಯ ಆಗ
ಇಂಗ್ಲೆಂಡಿನ ನ್ಯಾಯಾಧೀಶನಾಗಿದ್ದ ಸರ್ ಜಾನ್
ಫಾರ್ಟೆಸ್ಕ್ಯೂ 'Sir John Fortescue' ಎಂಬು
ವನು. ನಿರಂಕುಶ ಪ್ರಭುತ್ವ ಅಂಕುಶ ಪ್ರಭುತ್ವಗ
ಳಿಗೆ ಇರುವ ತಾರತಮ್ಯ 'The diffirence between absolute and limited monarchy'
ಎಂಬ ರಾಜಕೀಯ ಪ್ರಬಂಧವನ್ನು ಇಂಗ್ಲಿಷ್‌ಗದ್ಯ
ದಲ್ಲಿ ಬರೆದನು. ಅದೇ ಕಾಲದಲ್ಲಿ 'W. Caxton'
ಕ್ಯಾಕ್ಸ್‌ಟನ್ನಿನಿಂದ ಅಚ್ಚುಕೂಟವು ಏರ್ಪಟ್ಟು
ಅನೇಕ ಪುಸ್ತಕಗಳು ಅಚ್ಚಾದವು. ಅದರಲ್ಲಿ ಮೊದ
ಲನೇ ಅಚ್ಚಾದ ಪುಸ್ತಕವೆಂದರೆ 'ದಿ ಗೇಮ್ಸ್ ಆಫ್
ಚೆಸ್' ಎಂಬ ಗದ್ಯ ಪುಸ್ತಕ. ಹೀಗೆ ಅಲ್ಲಿ ಗದ್ಯಕ್ಕೆ
ಒಂದು ಸ್ಥಾನ ದೊರೆಯಿತು.

ಇಲ್ಲಿ ನಾವು ನೋಡಬೇಕಾದ ಮುಖ್ಯಾಂಶವೇ
ನೆಂದರೆ ಗದ್ಯವು ತಲೆ ಎತ್ತಿ ನಿಲ್ಲಲು ಕಾರಣಗಳೆರಡು
(೧) ಜನರಲ್ಲಿ ಸ್ವಾತಂತ್ರ್ಯಾಭಿಲಾಷೆ (೨) ಅಚ್ಚು
ಕೂಟದ ನಿರ್ಮಾಣ. ಭಾರತದೇಶದ ಎಲ್ಲಾ ಸಾಹಿತ್ಯ
ಗಳಲ್ಲೂ ಗದ್ಯವು ತಲೆ ಎತ್ತಿ ನಿಂತದ್ದು ಈ ಎರಡು
ಮುಖ್ಯ ಕಾರಣಗಳಿಂದಲೇ.

ಸ್ವಾತಂತ್ರ್ಯಾಭಿಲಾಷೆಯ ಬೀಜವು ೧೯ನೇ ಶತ
ಮಾನದ ಉತ್ತರಾರ್ಧದಲ್ಲಿ ನೆಟ್ಟಿದ್ದಾದರೂ ಅದು
ಹೆಚ್ಚಾಗಿ ಬೇರೂರಿ ನಿಂತದ್ದು ಮೊದಲನೆಯ ಮಹಾ
ಯುದ್ಧವಾದಮೇಲೆ. ಈ ಮಧ್ಯೆ ಭಾರತೀಯರ
ಜೀವನದಲ್ಲಿ ಒಂದು ಬದಲಾವಣೆಯಾಗಿ ಅವರ
ದೃಷ್ಟಿಯು ಕೇವಲ ಆಧ್ಯಾತ್ಮಿಕ ಮಾರ್ಗ ಒಂದರ
ಲ್ಲಿಯೇ ಹೋಗದೆ, ವಿಜ್ಞಾನಕ್ಕೆ ಒಳಪಟ್ಟಿದ್ದ
ನವ ಸಂಸ್ಕೃತಿಯ ಕಡೆಗೂ ಬಿದ್ದಿತು. ಜೀವನದ
ಕನ್ನಡಿಯಂತಿರುವ ಸಾಹಿತ್ಯವು ಈಗ ಜೀವನದ
ಅನೇಕ ಮುಖಗಳನ್ನು ಪ್ರತಿಬಿಂಬಿಸಬೇಕಾಯಿತು.
ಮನುಷ್ಯನ ಜೀವನದ ಗುಟ್ಟನ್ನು ನ್ಯಾಯರೀತಿ
ಯಲ್ಲಿ ನಿರ್ಣಯಿಸಿ ಅವನ ಮುಂದೆ ಚಿತ್ರಿಸಿ ನಿಲ್ಲಿ
ಸಲು ಗದ್ಯವೇ ಮುಖ್ಯ ಸಾಧನವಾಯಿತು. ಗದ್ಯಕ್ಕೆ
ಪದ್ಯಕ್ಕಿದ್ದಂತೆ ಕಠಿಣ ಕಟ್ಟುಗಳಿಲ್ಲ. ಆದರೂ ಗದ್ಯವು
ಶಿಸ್ತು ತಪ್ಪಿದ ಗುಂಡುಗೋವಿಯಲ್ಲ. ಗದ್ಯದಲ್ಲಿ
ಶಿಸ್ತೂ, ಬಿಗಿಯೂ ಶೈಲಿಯೂ ಉಂಟು.

ಹಿಂದಿನವರದು ಸುಖಜೀವನ; ಅವರಿಗೆ ಮೋಕ್ಷ
ಸಾಧನೆಯ ಮೇಲೆ ಹೆಚ್ಚು ಗಮನವಿಡಲು ಹೆಚ್ಚು
ವಿರಾಮವಿರುತ್ತಿತ್ತು. ಆದುದರಿಂದ ಹೆಚ್ಚಾಗಿ ತಮ್ಮ
ಕೃತಿಗಳಲ್ಲಿ ಧರ್ಮದ ವಿಷಯಗಳನ್ನೇ ತೆಗೆದುಕೊ
ಳ್ಳುತ್ತಿದ್ದರು. ಆಧ್ಯಾತ್ಮಿಕ ಜೀವನದಲ್ಲಿ ಅನೇಕ
ಸಂಶೋಧನೆಗಳನ್ನು ನಡೆಸಿ ಅದರ ನಿರ್ಣಯವನ್ನು
ತತ್ವರೂಪದಲ್ಲಿ ಎಲ್ಲಾ ಜನರಿಗೂ ಸಾರುವುದೇ
ಅವರ ಮುಖ್ಯೋದ್ದೇಶವಾಗಿದ್ದಿತು. ಅಲ್ಲದೆ ಈ
ತತ್ವಗಳು ಹೆಚ್ಚಾಗಿ ಬಾಯಿಂದ ಬಾಯಿಗೆ ಹೋಗು
ತ್ತಿದ್ದುದರಿಂದ ಅವನ್ನು ಸುಲಭವಾಗಿ ಜ್ಞಾಪಕ
ವಿಡಲು ಅನುಕೂಲವಾದ ಸಾಧನವು ಪದ್ಯರೂಪ
ವಾಗಿದ್ದಿತು. ಎಲ್ಲೋ ಅಲ್ಲಲ್ಲಿ ವ್ಯಾವಹಾರಿಕ ಗ್ರಂಥ
ಗಳು, ಮೋಕ್ಷ ಸಾಧನೆಗೆ ಹೆಚ್ಚು ಅನುಕೂಲಿಸದ
ಪ್ರಾಪಂಚಿಕ ವಿಷಯಗಳನ್ನು ನಿರೂಪಿಸುವ
ಒಂದೊಂದು ಗ್ರಂಥವು ಸಿಕ್ಕಿದರೂ, ಉದಾಹರಣೆ
ಗಾಗಿ ಗಣಿತ, ವೈದ್ಯಶಾಸ್ತ್ರ, ಜ್ಯೋತಿಷ ಮೊದಲಾ
ದವುಗಳು, ಅವೂ ಕೂಡ ಆಗಿನ ಪದ್ಧತಿಯಂತೆ
ಪದ್ಯಮಯವಾಗಿರುತ್ತಿದ್ದುವು. ಇದರಿಂದ ಅವರಿಗೆ
ಗದ್ಯವು ಬೇಡವಾಗಿದ್ದಿತೆಂದಲ್ಲ. ಯಾವ ವಿಷಯವು
ಸದಾ ಜ್ಞಾಪಕಕ್ಕೆ ಬೇಕಿರಲಿಲ್ಲವೊ ಅಂಥವುಗಳು,
ಗದ್ಯರೂಪದಲ್ಲಿವೆ. ಉದಾಹರಣೆಗೆ ಕೆಲವು ಶಾಸನ
ಗಳ ಗದ್ಯಗಳು.

ಭಾರತೀಯ ಸಾಹಿತ್ಯಗಳಲ್ಲಿ ಗದ್ಯವು ಈಚಿನ
ದೆಂದೂ ಹಿಂದಿನವರು ಅದನ್ನು ಹೆಚ್ಚಾಗಿ ಲಾಲಿಸಿರ
ಲ್ಲಿಲ್ಲವೆಂದೂ ಪದ್ಯಕ್ಕೆ ಅವರು ಮನಸೋತರೆಂದೂ
ಕೆಲವರು ಟೀಕಿಸುವುದುಂಟು. ಇದು ತುಸ ನಿಜ
ವಾದರೂ ಹಿಂದಿನವರು ಗದ್ಯವನ್ನು ಅಲ್ಲಗಳೆದ
ರೆಂದು ಹೇಳುವುದು ತಪ್ಪು. ಪದ್ಯಕ್ಕಿಂತ ಗಂಭೀರ
ವಾದ ಗದ್ಯ ಬರೆಯುವುದು ಕಷ್ಟವೆಂದು ಅವರು
ತಿಳಿದಿದ್ದರು. ಎಲ್ಲಾ ಸಾಹಿತ್ಯದಲ್ಲೂ ಮೊದಲು
ಪದ್ಯ ತರುವಾಯ ಗದ್ಯ. ನೃಪತುಂಗನ ಕವಿರಾಜ
ಮಾರ್ಗದಲ್ಲಿ ಗದ್ಯಕಾರರ ಹೆಸರು ಸೂಚಿತವಾಗಿದೆ.
ಅಲ್ಲಿಂದ ಈಚೆಗೆ ನಮಗೆ ಅನೇಕ ಗದ್ಯಭಾಗಗಳು

ದೊರೆತಿವೆ. ಆದರೆ ಗದ್ಯವು ಪ್ರಧಾನವಾಗಿ ಸಾಹಿತ್ಯದಲ್ಲಿ ಏತಕ್ಕೆ ಬಳಕೆಗೆ ಬರಲಿಲ್ಲ ಎಂಬ ಪ್ರಶ್ನೆಗೆ ಉತ್ತರ, ಗ್ರೀಕ್ ಮತ್ತು ಇಂಗ್ಲಿಷ್ ಸಾಹಿತ್ಯಗಳಲ್ಲಿ ಏಕೆ ಹಿಂದೆ ಗದ್ಯವು ಪ್ರಧಾನವಾಗಿ ಬರಲಿಲ್ಲ ಎಂಬ ಪ್ರಶ್ನೆಗೆ ಬರುವ ಉತ್ತರವೇ ಆಗಿದೆ. ದೇಶವು ಉದ್ಯಮಪ್ರಧಾನ(Industrial)ವಾದಂತೆ ಅಲ್ಲಿಯ ಜನರ ನಿತ್ಯಜೀವನ ಬದಲಾವಣೆಯಾಗುತ್ತ ಬಂದಿತು. ಎಲ್ಲಿ ಉದ್ಯಮ ಪ್ರಧಾನ ವೊದಲಾಯಿತೊ ಅಲ್ಲಿ ಗದ್ಯವುಹೆಚ್ಚು ಬಳಕೆಗೆ ಮೊದಲು ಬಂದಿತು. ಹೀಗೆ ನಮ್ಮ ಕನ್ನಡ ನಾಡಿನಲ್ಲಿ ಉದ್ಯಮ ಪ್ರಧಾನವಾದುದ್ದು ಇತ್ತೀಚೆಗೆ, ಆದುದರಿಂದಲೇ ಗದ್ಯವೂ ಇತ್ತೀಚಿಗೇನೇ ಬೆಳೆದದ್ದು. ಧರ್ಮದಮೇಲೆ ಹೆಚ್ಚು ಮಮತೆ ಇದ್ದು ಆ ವಿಷಯಗಳನ್ನೇ ಆರಿಸಿಕೊಂಡು ಹಿಂದಿನವರು ಬರಿಯುತ್ತಿದ್ದರೆಂದು ಮೇಲೆಯೇ ಹೇಳಿದೆ. ಅವರಿಗೆ ಹೊಟ್ಟೆಯ ಪಾಡು ಮುಖ್ಯವಾಗಿರಲಿಲ್ಲ. ಎಂದು ಈ ದೃಷ್ಟಿ ತಪ್ಪಿ ಹೊಟ್ಟೆಪಾಡು ಮುಖ್ಯವಾಯಿತೋ, ಆ ಹೊಟ್ಟೆಗಾಗಿ ನಾನಾ ರೀತಿಯಲ್ಲಿ ನಾನಾ ಉದ್ಯಮಗಳಲ್ಲಿ ದುಡಿಯುವುದು ಪ್ರಾರಂಭವಾಯಿತೋ, ಎಂದು ಜನರಲ್ಲಿ ಸಾಂಘಿಕ ಬಲದ ಸ್ವಾರಸ್ಯವು ತಿಳಿಯಿತೋ, ಎಂದು ಒಂದು ದೇಶದಲ್ಲಿ ಆದ ಯಾವುದಾದರೊಂದು ಘಟನೆಯು ನೆರೆ ದೇಶದ—ಈಗ ಪ್ರಪಂಚದ ಮೂಲೆ ಮೂಲೆಗೂ ತಗಲಿ ಅದರ ಪ್ರಭಾವವನ್ನು ಬೀರುವುದಕ್ಕೆ ಪ್ರಾರಂಭಿಸಿತೋ, ಯಾವಾಗ ಮನುಷ್ಯನು ಈ ವಿರಾಟ್ ಸ್ವರೂಪವಾದ ಪ್ರಾಪಂಚಿಕ ವ್ಯವಹಾರದಲ್ಲಿ ಸಿಕ್ಕಿಕೊಂಡು ಅಲ್ಲಿಂದ ವಾರಾಗಲು ದಿನಗಳಲ್ಲಿಯ ಗಂಟೆಗಳನ್ನೂ, ತಿಂಗಳಿನಲ್ಲಿಯ ದಿನಗಳನ್ನೂ ಎಣಿಸಿ ಕಾಲ ತಳ್ಳಲು ಪ್ರಾರಂಭಿಸಿದನೋ ಅಂದೇ ಅವನ ಸಾಹಿತ್ಯವೂ ಗದ್ಯಮಯವಾಯಿತು. ಪದ್ಯದ ರಮ್ಯತೆ ಹೋಯಿತು. ಕೇವಲ ಕವಿಗಳು ಮಾತ್ರ ತಮ್ಮ ಭಾವನೆಯನ್ನು ಒಂದು ರೀತಿಯ ಹೊಸ ಛಂದಸ್ಸಿನಲ್ಲಿ ಹೇಳತೊಡಗಿದರು. ಮತ್ತೆಲ್ಲವೂ ಛಂದಸ್ಸಿಲ್ಲದ ಪದಗಳ ಗುಂಪಾಗಿ ನಿಂತಿತು. ಹೀಗಾಗಿಯೇ ಇಂಗ್ಲಿಷು ಸಾಹಿತ್ಯದಲ್ಲಿ ನಾನಾ ಭಾಗಗಳಲ್ಲಿ ಗದ್ಯವು ತಲೆದೋರಿತು. ನಮ್ಮಲ್ಲಿಯೂ ಅದೇ ರೀತಿಯಾಗಿ ಆಗಿರುತ್ತವೆ. ಜೀವನದಲ್ಲಿ ನೀರಸತೆ ಹುಟ್ಟಿ ಹೊಟ್ಟೆಗಾಗಿ ತೊಂದರೆ ಪಡುವುದು ಹೆಚ್ಚಾಗಿ ಈ ಕಾರಣದಿಂದ ಸ್ವತಂತ್ರ್ಯಾಭಿಮಾನವು ಬೇರೂರಿ ನಮ್ಮ ಸಾಹಿತ್ಯದಲ್ಲೂ ನಾನಾ ಶಾಖೆಗಳು ಚಿಗುರಿಕೊಂಡವು. ಈ ದೃಷ್ಟಿಯು ಹೆಚ್ಚಾಗಿ ಪ್ರಚೋದಿತವಾದುದ್ದು ಮಹಾ ಯುದ್ಧವಾದ ಮೇಲೆ. ಅದುವರೆವಿಗೂ ಜೀವನ ದೃಷ್ಟಿ ಬದಲಾಯಿಸಿದೆ ಎಂಬುದಕ್ಕೆ ಕುರುಹು ಸಿಕ್ಕಿದರೂ ಆ ದೃಷ್ಟಿಯಿಂದ ಹುಟ್ಟಿದ ಸಾಹಿತ್ಯ ಭಾಗವು ಬಹು ಕಡಿಮೆಯಾಗಿದೆ. ೧೯ನೇ ಶತಮಾನದ ಅಂತ್ಯಭಾಗದಲ್ಲಿ ಕೆಲ ಲೇಖಕರು ಪೌರಾಣಿಕ ಅಧ್ಯಾತ್ಮಿಕ ವಿಷಯಗಳನ್ನು ಬಿಟ್ಟು, ಸಾಮಾಜಿಕ, ವಿಜ್ಞಾನ, ಅನ್ಯ ಸಾಹಿತ್ಯದ ಭಾಷಾಂತರ ಮೊದಲಾದ ವೈವಿಧ್ಯಗಳ ಕಡೆಗೆ ಕೈ ಹಾಕಿರುವರು. ೨೦ನೇ ಶತಮಾನದ ಪ್ರಾರಂಭದಿಂದ ಮಹಾಯುದ್ಧದ ವರೆಗೂ ಈ ಮಾರ್ಗದಲ್ಲಿ ಹೆಚ್ಚು ಪ್ರಗತಿಯಾಗಿದೆ. ಮಹಾಯುದ್ಧದ ತರುವಾಯ ವಿಜ್ಞಾನದ ಕೈ ಮೇಲಾಗಿ ಜೀವನವು ಹೆಚ್ಚಾಗಿ ಅದೇ ಮಾರ್ಗವನ್ನೇ ಅನುಸರಿಸಿತು. ಪಾಶ್ಚಾತ್ಯ ಸಂಸ್ಕೃತಿಯು ನಮ್ಮ ಜೀವನದಲ್ಲಿ ಸೇರಿಬಿಟ್ಟಿತು. ಅಲ್ಲಿಂದೀಚೆಗೆ ಕನ್ನಡ ಸಾಹಿತ್ಯದಲ್ಲಿ ಗದ್ಯದ ಬೆಳೆವಣಿಗೆಯು ಸೊಂಪೇ ಸೊಂಪು. ಈ ಹೇರಳತೆಗೆ ತಕ್ಕಂತೆ ಉತ್ಕೃಷ್ಟತೆಯೂ ಉಂಟು.

ಎರಡನೆಯದಾದ ಅಚ್ಚುಕೂಟದ ಉಪಯೋಗದಿಂದ ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ವೈವಿಧ್ಯದ ಬೆಳೆವಣಿಗೆಯ ವೇಗವೂ ಹೆಚ್ಚಾಯಿತು. ಒಬ್ಬನ ಬದಲು ನೂರಾರು ಜನರು ಪುಸ್ತಕ ಬರೆಯತೊಡಗಿದರು. ಈ ನೂರಾರು ಲೇಖಕರ ಸಾವಿರಾರು ಪುಸ್ತಕಗಳು ಅಚ್ಚಾಗತೊಡಗಿದವು. ಈ ಪುಸ್ತಕಗಳನ್ನು ಓದುವವರ ಸಂಖ್ಯೆಯೂ ಹೆಚ್ಚಾಯಿತು. ಓದಿ ಟೀಕೆ ಬರೆಯುವವರೂ ಒದಗಿದರು. ಹೀಗೆ ಪದ್ಯ ಗದ್ಯಗಳೆರಡಕ್ಕೂ ಅನುಕೂಲ ಸಿಕ್ಕಿದರೂ, ಪದ್ಯವು ಎಲ್ಲರ ಕೈಗೂ ಸಿಕ್ಕುವುದಲ್ಲವಾದ್ದರಿಂದ ಗದ್ಯದ ಬೆಳೆವಣಿಗೆಯೇ ಹೆಚ್ಚಾಯಿತು. ಈ ಸಂದರ್ಭದಲ್ಲಿ ನಮ್ಮ ಕನ್ನಡ ನಾಡಿನಲ್ಲಿ ಮೊದಲು ಅಚ್ಚು

ಕೊಟವನ್ನೇರ್ಪಡಿಸಿದವರಾರು? ಮೊದಲು ಅಚ್ಚಾದ ಪುಸ್ತಕವಾವುದು, ಗದ್ಯವಾವುದು, ಪದ್ಯವಾವುದು ಎಂಬುದನ್ನು ಸರಿಯಾಗಿ ಪರಿಶೀಲಿಸಿ ಬರೆದಿಡಬೇಕಾಗಿದೆ. ಕನ್ನಡ ಪ್ರೇಮಿಗಳು ಈ ವಿಷಯದಲ್ಲಿ ಕೈ ಹಾಕಿ ತೋರಿಸಿಕೊಟ್ಟರೆ ಕನ್ನಡ ಸಾಹಿತ್ಯಕ್ಕೆ ಸಹಾಯ ಮಾಡಿದಂತಾಗುತ್ತದೆ. ಮೊದಲು ಅಚ್ಚಾದ ಕೃತಿಗಳು ಉಪನ್ಯಾಸ, ಪ್ರಬಂಧ, ಮುನ್ನುಡಿ, ಕತೆ, ಕಾದಂಬರಿ, ನಾಟಕ ಯಾವುದಾದರೂ ಆಗಿರಬಹುದು, ಅವುಗಳು ಸಾಹಿತ್ಯ ದೃಷ್ಟಿಯಿಂದ ಅಷ್ಟು ಉತ್ತಮವಲ್ಲದುದಾಗಿರಬಹುದು. ಆದರೂ ಸಾಹಿತ್ಯ ಚರಿತ್ರೆಯಲ್ಲಿ ಅವುಗಳನ್ನು ಕಾಣಿಸುವುದು ಸೂಕ್ತವಾಗಿ ಕಾಣುತ್ತದೆ.

ಹಿಂದಿನ ಕಾಲದಲ್ಲಿ ಇದ್ದ ಗದ್ಯದ ಮಾದರಿಯನ್ನು ಈಗಿನ ಗದ್ಯದ ಮಾದರಿಗೆ ಹೋಲಿಸಿ ನೋಡುವ. ಹೊಯಿಸಳರ ಕಾಲದಲ್ಲಿ ಸಿಕ್ಕಿದ ಕೆಲವು ವೀರಗಲ್ಲುಗಳಮೇಲೆ ಇರುವ ಗದ್ಯವನ್ನು ನೋಡಿ. ಇದು ಶಂಭಾವನೆಯಿಂದ ತೆಗೆದುಕೊಂಡಿದೆ.

೧. "ಮಹಿಳೆಯರ ಮಾನವ ಕಾಯ್ದು...." "............ಶ್ರೀ ವೀರ ಬಲ್ಲಾಳದೇವರು ಪೃಥ್ವೀರಾಜ್ಯಂಗೆಯ್ಯುತ್ತಂ ಇರೆ ಹಾಲವರೆಯ ಅರಸಿನಗುಪ್ಪೆಯಲು ಬಯಿಚೆಯ ಗೌಡನಮಗ ಮಾಕೆಯಗಂಗವೆಗ್ಗಡೆವೀರ---ಇರಿದು ಹೆಣ್ಡಿರುಹೆ ವುರ್ಚುವಲ್ಲಿ ಕೆಲಬರಂಕೊಂದು...."

ಸ್ವಾಮಿಕಾರ್ಯಕೆ ಬಂದ

೨. "....ಶ್ರೀ ಜಗದೇವ ಸಿಂಗದೇವರಸರುದುಗ್ಗಡೆಯ ಮಗ ಬಮ್ಮಣ ಹೆಗ್ಗಡೆ ಸ್ವಾಮಿ ಕಾರ್ಯಕೆ ಬನ್ದು ಮಳಲಿಯುಸಿಂಗಜ್ಜನಕೂಡೆ ಕಾದಿಯಳಿಯಲು ದುಗ್ಗವೆಗ್ಗಡೆಗೆ ಬಿಟ್ಟಭೂಮಿ"

ದಾಯಾದಿತನದಿ ಕನ್ನವನಿಕ್ಕಿದವನಕೊಂದ

೩. "........ನಾಳ್ಪ್ರಭು ಬೊಂಮ....ಆತನಮಗ ಮಾದರಸನು ತಮ್ಮ ಸೋಮಕ್ಕಾನು ಆ........ರಿಗೆ ಮಸರೆಯರಿಗ ಉಡನ ಮಕಳು ಕಾಳ ಬೊಂಮ ಸೋಮ ದಾಯಾದ ತನದಿಂ ಕನ್ನವನಿಕ್ಕಿ ಯಿರಿಯೆ ತಮ್ಮ ಮಕ್ಕಳು ಹೆಂಡಿರಕೂಡಿ ಪುಯ್ಯಲನೆಬ್ಬಿಸಿ ....ಕೊಂದು ತಾನುಂಶಿವಪಾದಮೊಳ್ಯೈಕ್ಯನಾದಂ...."

ಈ ಶಾಸನಗಳ ಭಾಷೆಯು ಹೊಸಗನ್ನಡದಂತೆ ಸುಲಭವಾಗಿ ಅರ್ಥವಾಗುತ್ತದೆ. ಶಕಟ ರೇಫೆಯ ಉಪಯೋಗವು ಇನ್ನೂ ಆಗಿತ್ತು. ಪದಗಳ ಹಿಂದೆ ಅನುಸ್ವಾರವನ್ನು ಸೇರಿಸುವ ಪದ್ಧತಿ ಆಗಿತ್ತು, ಈಗ ಇಲ್ಲ. 'ಗಉಡನಮಕ್ಕಳು' ಇದನ್ನು ಗಮನಿಸಿ. ಪದದ ಮಧ್ಯೆ ಸ್ವರಪ್ರಯೋಗ ಈಗಿಲ್ಲ. ಈ ಕೆಲ ವಿಶೇಷಗಳನ್ನು ಬಿಟ್ಟರೆ ಈಗ ನಾವು ಬರೆಯುವ, ನಾವು ಮಾತಾಡುವ ಕನ್ನಡವೂ ಇದೂ ಒಂದೇ ಆಗುತ್ತದೆ. ಆಗ ಗದ್ಯದ ಉಪಯೋಗವು ಹೆಚ್ಚಾದಂತೆ ಭಾಷೆಯಲ್ಲೂ ಕೆಲವು ಮಾರ್ಪಾಡುಗಳಾದವು. ಆಂಗ್ಲ ಸಾಹಿತ್ಯದ ವಿರಾಮ ಚಿಹ್ನೆಗಳು ಉಪಯೋಗಕ್ಕೆ ಬಂದವು. ಈ ಮಾರ್ಪಾಡಾದ ಗದ್ಯವೇ ಇಂದಿನ ಹೊಸಗನ್ನಡ.

ಇನ್ನು ೧೯ನೆಯ ಶತಮಾನದ ಉತ್ತರಾರ್ಧದಿಂದ ಮೊದಲನೆಯ ಮಹಾಯುದ್ಧದವರೆಗೂ ಬರೆಹಗಾರರನ್ನು ನೋಡಿದರೆ ಅನೇಕರು ಸಿಕ್ಕುತ್ತಾರೆ. ಕವಿಚರಿತ್ರೆಯಲ್ಲಿಯೇ ೨೦೦ರಮೇಲೆ ಹೇಳಿದೆ. ಇವರಲ್ಲಿ ಅನೇಕರು ನಾಟಕಗಳನ್ನು ಭಾಷಾಂತರಿಸಿದವರು, ಆಧ್ಯಾತ್ಮಿಕವಲ್ಲದ ಲೌಕಿಕ ವಿಷಯಗಳನ್ನು ಬರೆದವರು ಮೊದಲಾಗಿ ಸಿಕ್ಕುತ್ತಾರೆ. ಷೇಕ್ಸ್‌ಪಿಯರ್ ಕವಿಯ, Merchant of venice Taming of the Shrew, Othello ಎಂಬುವುಗಳನ್ನು ಅನೇಕರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಅನೇಕರು ವಿಜ್ಞಾನದ ವಿಷಯಗಳಿಂದ ತೋಟದ ಬೇಸಾಯ, ಗರ್ಭಿಣಿ ಶಿಶು ಸಂರಕ್ಷಣೆ, ಸಸ್ಯಜೀವನ, ಮೊದಲಾದವುಗಳನ್ನು ಬರೆದಿದ್ದಾರೆ. ಮಂಗಳೂರಿನ ಬಾಸೆಲ್ ಮಿಷನ್ನಿನವರು ಅನೇಕ ಪಾರಿಭಾಷೆಗಳಿಂದ ಕೂಡಿದ ಸಸ್ಯ ಜೀವನ ಪುಸ್ತಕ ಒಂದನ್ನು ಕನ್ನಡದಲ್ಲಿ ಆಗಲೇ ಪ್ರಸಿದ್ಧಿಸಿದ್ದಾರೆ. ಅನೇಕರು ಬಂಗಾಳಿ ಕಾದಂಬರಿಗಳನ್ನೂ ಮಹಾರಾಷ್ಟ್ರ ಕಾದಂಬರಿಗಳನ್ನೂ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಮತ್ತೆ ಕೆಲವರು ನಿಘಂಟೆಯರು, ಸಮುದ್ರ ಪ್ರಯಾಣ ಮೊದಲಾದ ಸಾಮಾಜಿಕ ವಿಷಯಗಳಮೇಲೆ ಬರೆದಿದ್ದಾರೆ. ಈ ಬರೆಹಗಾರರಲ್ಲಿ ಕ್ರೈಸ್ತರು ಮೊದಲುಗೊಂಡು ಸನಾತನ

ದವರುಂಟು, ಅನೇಕ ಸ್ತ್ರೀಯರೂ ಇದ್ದಾರೆ. ಇಲ್ಲಿ ಈಗ ನಾವು ಗಮನಿಸಬೇಕಾದುದೆಂದರೆ ಪಾಶ್ಚಾತ್ಯಸಂಸ್ಕೃತಿಯ ಸಂಪರ್ಕವಾದಮೇಲೆ ಜೀವನ ಬದಲಾಯಿಸಿರುವುದಕ್ಕೆ ತಕ್ಕಂತೆ ಸಾಹಿತ್ಯ ವಿಷಯಗಳೂ ಬದಲಾಯಿಸಿ ಗದ್ಯಕ್ಕೆ ಪ್ರೋತ್ಸಾಹ ಸಿಕ್ಕಿರುವುದು. ಅನೇಕರು ಶಾಲಾ ಪಠ್ಯ ಪುಸ್ತಕಗಳನ್ನು ಗದ್ಯರೂಪದಲ್ಲಿ ಬರೆದಿದ್ದಾರೆ. ಹಿಂದಿನದೇ ಶ್ರೇಷ್ಠ ಸಾಹಿತ್ಯತ್ಯವೆಂದು ಹೇಳುತ್ತಿದ್ದ ನಚ್ಚು ಸ್ವಭಾವಹೋಗಿ ಯಾವುದನ್ನು ಸಮಾಜದಲ್ಲಿ ಚರ್ಚೆಮಾಡಲು ಹೆದರುತ್ತಿದ್ದರೋ ಅಂಥವಿಷಯಗಳಾದ ವಿಧವೆ, ಪ್ರಸವ, ಮೊದಲಾದವುಗಳಮೇಲೆ ಪುಸ್ತಕಗಳು ಹೊರಬಿದ್ದವು. ಅನೇಕ ವಿದ್ವಾಂಸರು ಹಿಂದಿನ ಸಾಹಿತ್ಯವನ್ನು ಅಚ್ಚು ಹಾಕಿಸಿ ಅದಕ್ಕೆ ಮುನ್ನುಡಿಗಳನ್ನೂ ಟೀಕೆಗಳನ್ನೂ ಬರೆದರು. ಮಧುರವಾಣಿ, ಕಾವ್ಯಮಂಜರಿ, ಪ್ರಬೋಧ, ಸುವಾಸಿನಿ, ಮುಂತಾದ ಮಾಸಪತ್ರಿಕೆಗಳು ಹೊರಟು ಅನೇಕ ಗದ್ಯ ಪ್ರಬಂಧಗಳಿಗೆ ಸ್ಥಾನಕೊಟ್ಟುವು. ಕನ್ನಡ ನಿಘಂಟುಗಳು ಅಚ್ಚಾದುವು. ಒಟ್ಟಿನಲ್ಲಿ, ಹಂಚಿಹೋಗಿರುವ ಕನ್ನಡದ ನಾನಾ ಭಾಗಗಳಿಂದಲೂ ಕನ್ನಡಕ್ಕೆ ಗೌರವದೊರೆಯಿತು. ಈ ಸಂದರ್ಭದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘವು ಮಾಡಿದ ಸೇವೆ ಅಮೋಘವಾದುದು. ಅಲ್ಲಿಂದೀಚೆಗೆ ಬೆಂಗಳೂರಿನಲ್ಲಿ ಕರ್ಣಾಟಕ ಪರಿಷತ್ತು ಸೇರಿ ಅನೇಕ ಮಾನ್ಯರ ಆಶೀರ್ವಾದದಿಂಲೂ, ಪ್ರಯತ್ನದಿಂದಲೂ ಕೃಷ್ಣರಾಜಸಾಹಿತ್ಯಪರಿಷನ್ಮಂದಿರವೆಂಬ ಹೆಸರಿನಿಂದ ಸ್ಥಾಪಿತವಾಗಿ ಕನ್ನಡ ಸಾಹಿತ್ಯಕ್ಕೆ ಮಾಡುತ್ತಿರುವ ಸೇವೆಯನ್ನು ಕುರಿತು ಹೊಸದಾಗಿ ಹೇಳಬೇಕಾಗಿಲ್ಲ. ಈ ನಾನಾ ಚಟುವಟಿಕೆಗಳೂ ಮೈಸೂರರಸರ ಕೃಪಾ ಕಟಾಕ್ಷವೂ ಕನ್ನಡ ಗದ್ಯಕ್ಕೆ ಬಹಳವಾಗಿ ಪ್ರೋತ್ಸಾಹಕೊಟ್ಟಿವೆ. ಮಹಾಯುದ್ಧವಾದಮೇಲೆ ಭಾರತೀಯ ಜನಾಂಗದ ರಾಜಕೀಯ ದೃಷ್ಟಿ ಮತ್ತುಷ್ಟು ಚೇತರಿಸಿಕೊಂಡಿತು. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡಕ್ಕೆ ಸ್ಥಾನ ದೊರೆತು ಅಲ್ಲಲ್ಲಿ ಕರ್ನಾಟಕಸಂಘಗಳು ಏರ್ಪಾಡಾದವು. ಈಗ ಕರ್ನಾಟಕದ ಪ್ರತಿಯೊಂದು ಹಳ್ಳಿಗಳಲ್ಲೂ ಭಾರತದ ಮುಖ್ಯಪಟ್ಟಣಗಳಲ್ಲೂ ಕರ್ನಾಟಕಸಂಘಗಳು ಸ್ಥಾಪಿತವಾಗಿ ಕನ್ನಡಧ್ವಜವನ್ನು ಎತ್ತಿಹಿಡಿದಿವೆ. ಈ ಸಂಘಗಳೂ ಬರಹಗಾರರನ್ನು ಪ್ರೋತ್ಸಾಹಿಸಿ ಅನೇಕ ಲೇಖನಗಳ ಹುಟ್ಟಿಗೆ ಕಾರಣವಾಗಿವೆ. ಅಚ್ಚುಕೂಟಗಳ ವ್ಯವಸ್ಥೆಯಾದಾಗಿನಿಂದ ಅನೇಕ ಪ್ರಕಟಣಾಲಯಗಳು, ವೃತ್ತಪತ್ರಿಕೆಗಳು, ಮಾಸಿಕ, ತ್ರೈಮಾಸಿಕ, ದೈನಂದಿನ ಮೊದಲಾದುವುಗಳು ಹೊರಬಿದ್ದು ಗದ್ಯವು ನಾನಾಮುಖದಲ್ಲಿ ನಾನಾ ಪಾರಿಭಾಷೆಗಳನ್ನೊಳಗೊಂಡು ಕರ್ಣಾಟಕವನ್ನೆಲ್ಲಾ ಆಕ್ರಮಿಸಿದೆ. ಈರೀತಿಯಾಗಿ ಯುದ್ಧಾನಂತರದ ಚೇತನವು ಬಹುವಿಧದಲ್ಲಿ ಬಹುಬೇಗ ಬೆಳೆದು ಅನೇಕ ಗದ್ಯ ಗ್ರಂಥಗಳು ಹೊರಬಿದ್ದವು.

ಇನ್ನು ಗದ್ಯಕ್ಕೆ ಸೇರುವ ವಿಷಯಗಳನ್ನು ಕುರಿತು ಎರಡುಮಾತು ಹೇಳುವೆನು.

೧. ನಾಟಕ ೨ ಕಾದಂಬರಿ ೩ ನಾಡುಚರಿತ್ರೆ ೪ ಜೀವನ ಚರಿತ್ರೆ ಅಥವಾ ಆತ್ಮ ಚರಿತ್ರೆ ೫ ವೇದಾಂತ ೬ ವಿಜ್ಞಾನ ೭ ರಾಜನೀತಿ ೮ ವಾಣಿಜ್ಯ ೯ ಅರ್ಥ ೧೦ ಕುಶೀದ ೧೧ ವಿಮಾ ೧೨ ಧರ್ಮ ೧೩ ಪ್ರಯಾಣ ಅಥವಾ ದೇಶಾಟನೆ ೧೪ ಸಂಘೋತ್ಸವಗಳಲ್ಲಿ ಆದ ಭಾಷಣ ೧೫ ಅಯಿಕೆಯಲ್ಲಿ ಆದ ಸ್ಪರ್ಧಾ ಭಾಷಣ ೧೬ ವೃತ್ತಪತ್ರಿಕಾ ಸಂಪಾದಕೀಯ ೧೭ ಉತ್ಕೃಷ್ಟ ಕಾವ್ಯಗಳಿಗೆ ಮುನ್ನುಡಿ ೧೮ ನಾನಾ ವಿಷಯಗಳನ್ನೊಳಗೊಂಡ ಪ್ರಬಂಧಗಳ ಸಂಕಲನ ೧೯ ವಿಶ್ವದ ವಿವಿಧ ವಿಷಯುಗನ್ನು ಪರಿಚಯುಮಾಡುವ ಪ್ರಬಂಧಗಳ ನಿಘಂಟು (Encyclopedia) ೨೦ ವಿಮರ್ಶೆ ೨೧ ನಿತ್ಯಜೀವನದಲ್ಲಿ ಹೆಗ್ಗುರುತಾಗಿ ಬರೆದಿರುವ ಡೈರಿ ಪದ್ಧತಿ ೨೨ ಓಲೆ ಲೇಖಗಳು (Letter writing) ೨೩ ನಾನಾಪ್ರಸಂಗಗಳಲ್ಲಿ ಕೊಡುವ ಬಿನ್ನವತ್ತಳೆ ೨೪ ಬಾಲಸಾಹಿತ್ಯ ೨೫ ಕಡೆಯದಾಗಿ ಅನುಕ್ರಮಣಿಕೆಯ ಪಟ್ಟಿ (Bibliography) ಹೀಗೆ ನಾನಾತರಗಳಲ್ಲಿ ನಾವು ಇಂದು ನೋಡುತ್ತೇವೆ. ಈ ನಾನಾ ವಿಷಯುಗಳಪೈಕಿ ಈಗಾಗಲೇ ನಿಮಗೆ ಅನೇಕ ಪಂಡಿತರುಗಳಿಂದ ಸಾಹಿತ್ಯಕ್ಕೆ ಸೇರಿ ಕಾವ್ಯವೆನಿಸಿಕೊಳ್ಳುವ ಅನೇಕ ಗದ್ಯಭಾಗಗಳ ಪರಿಚಯುವಾಗಿದೆ. ವಿಶ್ವಸಾಹಿತ್ಯದಲ್ಲಿ ಯಾವ ಯಾವ ವಿಷಗಳಮೇಲೆ ಗದ್ಯ ಪ್ರಬಂಧಗಳು ಹೊರಟವೆಯೋ

ಅವೆಲ್ಲ ವಿಷಯಗಳನ್ನೂ ಒಳಗೊಂಡ ಪ್ರಬಂಧಗಳು ಈಗ ನಮಗೆ ಕನ್ನಡದಲ್ಲಿ ಸಿಕ್ಕುತ್ತವೆ ಅಂದರೆ ಅದು ಹೆಮ್ಮೆಯ ಮಾತೇ ಸರಿ. ಒಂದು ಆಕ್ಷೇಪಣೆ ಈಗ ಬರಬಹುದು. ಈ ವಿಷಯಗಳಲ್ಲಿ ಆಗಿರುವ ವ್ಯವಸಾಯವು ಸಾಕೇ? ಇದು ಉತ್ತಮವ್ಯವಸಾಯವೇ? ವ್ಯವಸಾಯ ಸಾಕೆಂದು ಯಾರೂ ಹೇಳುವುದಿಲ್ಲ. ಇತರೇ ಸಾಹಿತ್ಯಗಳಲ್ಲಿ ಇರುವ ಕುಪ್ಪೆಯನ್ನು ನೋಡಿ ನಮ್ಮ ಸಾಹಿತ್ಯವೂ ಅಷ್ಟೇ ಕುಪ್ಪೆಯಾಗಬೇಕೆಂದರೆ ಅದು ಸರಿಯಾದ ಹೋಲಿಕೆಯಾಗುವುದಿಲ್ಲ. ನಮ್ಮ ಜನರ ಸಾಕ್ಷರತೆ, ನಿರಕ್ಷರತೆ, ನಮ್ಮ ಜನರ ಆರ್ಥಿಕ ವ್ಯವಸ್ಥೆ, ನಮ್ಮ ಜೀವನದ ಮಟ್ಟ, ಇವೆಲ್ಲವನ್ನೂ ನೋಡಿದರೆ, ನಾವು ಇನ್ನೂ ಹಿಂದೆ ಉಳಿದಿದ್ದೇವೆ. ಎಂದಿಗೆ ನಾವು ವಿಶ್ವದಲ್ಲಿ ಎಲ್ಲರಂತೆ ನಿಲ್ಲುತ್ತೇವೋ ಅಂದಿಗೆ ನಮ್ಮ ಸಾಹಿತ್ಯವೂ ಅದೇ ಮಟ್ಟಕ್ಕೆ ಏರುತ್ತದೆ. ಇಂಗ್ಲೀಷು ಸಾಹಿತ್ಯದಲ್ಲಿ ನೋಡಿ ಎಷ್ಟು ಕಾದಂಬರಿಗಳಿವೆ, ನಾಟಕಗಳಿವೆ? ಮಹಾರಾಷ್ಟ್ರ ಸಾಹಿತ್ಯದಲ್ಲಿ ನೋಡಿ ಎಷ್ಟು ಬೆಳವಣಿಗೆಯಾಗಿದೆ ಎಂದು ಕೇಳಿದರೆ ಒಪ್ಪಿಕೊಂಡು ನಮ್ಮಲ್ಲಿ ಅಷ್ಟಿಲ್ಲವೆಂದು ಹೇಳಬೇಕಾಗುತ್ತದೆ. ತಪ್ಪು ಯಾರದು?, ಹೀಗೆ ಪ್ರಶ್ನೆ ಕೇಳುವ ಪ್ರತಿಯೊಬ್ಬರೂ ತಮ್ಮ ಸ್ವಂತಕ್ಕೆಂದು ಒಂದೊಂದು ಪುಸ್ತಕವನ್ನು ಕೊಂಡು ಕೊಳ್ಳಲಿ, ಸಾಕು; ನಮ್ಮ ರಾಶಿಯು ಹೆಚ್ಚುತ್ತದೆ, ನಮ್ಮ ಬರಹಗಾರರು ಹೆಚ್ಚುತ್ತಾರೆ. ಒಂದು ಸಾಹಿತ್ಯದಲ್ಲಿ ಎಷ್ಟೋ ಭಾಗಗಳು ಜೊಳ್ಳು ಇರುವುದೂ ಉಂಟು. ಅಂದರೆ ಬರೆದದ್ದೆಲ್ಲವೂ ಉತ್ತಮ ಕಾದಂಬರಿಗಳೂ, ಕಥೆಗಳೂ, ಆಗಲಾರವು. ಈ ಜೊಳ್ಳು ಎಲ್ಲಾ ಸಾಹಿತ್ಯದಲ್ಲೂ ಉಂಟು. ಕಾವ್ಯವಾಗಿ ನಿಲ್ಲುವ ಸಾಹಿತ್ಯವೂ ಕೇವಲಕೊಂಚವೆ?

ಆ ಸಾಹಿತ್ಯದಲ್ಲೂ ಆ ಜನಾಂಗದ ಜೀವನದ ವೈವಿಧ್ಯವೂ ಎದ್ದು ಕಾಣುತ್ತದೆ. ಜೋಸೆಫ್ ಕಾನ್ರಾಡ್‌ನಂತೆ ನಮ್ಮಲ್ಲಿ ಸಮುದ್ರ ಸಾಹಸಕಾರ್ಯಗಳ ಕಾದಂಬರಿ ಬರೆಯಲು ಈಗೆಸಾಧ್ಯವುಂಟೆ? ಯುದ್ಧಾನಂತರ ಆದರೂ ಆಗಬಹುದು. ನಮ್ಮ ಅಂಗಳವೆಷ್ಟೋ ನಮ್ಮ ಸಾಹಸವೂ ಓಡಾಟವೂ ಅಷ್ಟೆ! ಜೀವನದಲ್ಲಿ ನಮ್ಮ ಅನುಭವಗಳು ಹೇರಳವಾಗಬೇಕು. ವೈವಿಧ್ಯದಿಂದ ಕೂಡಿರಬೇಕು. ಅದೇ ಅಡಿಗೇಮನೆ, ಅದೇ ಅಡಿಗೆ, ಅದೇ ನಾಡು, ಅದೇ ಹೆಣ್ಣು ಹೊನ್ನುಗಳು; ವೈವಿಧ್ಯವು ಹೇಗೆ ಬರಬೇಕು. ಜೀವನವು ಹಿಗ್ಗಿ ಏರಿದಂತೆ ಸಾಹಿತ್ಯವು ಹಿಗ್ಗಿ ಏರೀತು. ಮೇಲೆ ಹೇಳಿದ ಅನೇಕ ಗದ್ಯಭಾಗಗಳನ್ನು ಒಳಗೊಂಡ ಮಾಸಪತ್ರಿಕೆಗಳು, ವಾರಪತ್ರಿಕೆಗಳು, ದೈನಂದಿನಗಳನ್ನು ನೋಡಿದರೆ ಭಾವಕವಿತೆ ಅಷ್ಟು ಬೆಳೆಯಲಿಲ್ಲವೆಂದು ತೋರುತ್ತದೆ. ಕವಿಗಳು ನೆ. ಅದಕ್ಕೆ ಕಾರಣ ಕವಿತೆಗೆ ಕಟ್ಟುಂಟು. ೯ ರ ದೃಷ್ಟಿಯೇ ಬೇರೆ.

ಜೀವನದ ಶಾಲತೆ, ಅದರಲ್ಲಿ ಸಿಕ್ಕುವ ವಿವಿಧ ಸನ್ನಿವೇಶಗಳ ಸೂಕ್ಷ್ಮತೆಗಳನ್ನು ವಿವರಿಸಲು ಗದ್ಯವೇ ಲೇಸು. ಈ ಸೂಕ್ಷ್ಮತೆಗಳನ್ನು ಹುಡುಕುವುದು ರಸಿಕನ ಅಥವಾ ವ್ಯವಹಾರ ಚತುರನ ಜಾಣ್ಮೆ. ಸಮುದ್ರದಂತಿರುವ ಈ ಜೀವನದ ವಿಶ್ವದಲ್ಲಿ ದಡದ ಮೇಲೆ ನಿಂತಿರುವವನ ಕಣ್ಣಿಗೆ ಮೀನು ಕಾಣಿಸದು. ಅದರಿಂದಲೇ ನಾವು ಸಮುದ್ರದಲ್ಲಿ ಮೀನು ಇಲ್ಲವೆಂದು ಹೇಳುವುದು ಸಾಧ್ಯವೆ? ರಸಿಕನು ತನ್ನ ದೃಷ್ಟಿಜಾಲವನ್ನು ಈ ಸಮುದ್ರದಲ್ಲಿ ಹಾಕಬೇಕು. ಅವನ ಜಾಲದ ವಿಶಾಲತೆ, ಭದ್ರತೆಗೆ ತಕ್ಕಂತೆ ತಿಮಿಂಗಿ ಂತಿರುವ ದೊಡ್ಡಮೀನು ಮೊದಲುಗೊಂಡು ಸ ಮೀನಿನವರೆಗೂ ಸಿಕ್ಕುತ್ತವೆ.

ಗದ್ಯದಲ್ಲಿ ವಸ್ತು ಅಥವಾ ವಿಷಯ ಪ್ರಾಧಾನ್ಯವಾದುದರಿಂದ ಅದರಲ್ಲಿ ಭಾವನೆಗೆ ಹೆಚ್ಚು ಅವಕಾಶವಿಲ್ಲ. ಗದ್ಯ ಪದ್ಯಗಳ ಉದ್ದೇಶವು ಅಂತ್ಯದಲ್ಲಿ ಆನಂದವೊಂದೇ. ಎಷ್ಟೋ ಪದ್ಯಕಾವ್ಯಗಳು ಗದ್ಯದಲ್ಲಿದ್ದಿದ್ದರೆ ಅವಕ್ಕೆ ಕುಂದೇನೂ ಬರುತ್ತಿರಲಿಲ್ಲ. ಒಂದುಮಟ್ಟ ಹೊಳೆಪು ಹೆಚ್ಚುತ್ತಿತ್ತೆಂದು ಹೇಳಬಹುದು. ಉದಾಹರಣೆಗೆ ಶ್ರೀ ಪುಟ್ಟಪ್ಪನವರ ರಕ್ತಾಕ್ಷಿ.

ವಸ್ತು ಪ್ರಾಧಾನ್ಯಕ್ಕೆ ಶೈಲಿಯಲ್ಲಿ ಸರಳತೆ ಇದ್ದರೆ ಒಳ್ಳೆಯದು. ಆದುದರಿಂದ ಗದ್ಯದ ಶೈಲಿಯು ಎಷ್ಟು ಸರಳವಿದ್ದರೆ ಅಷ್ಟೂ ಅದಕ್ಕೆ ತೇಜಸ್ಸು ಬರುತ್ತದೆ. ಪ್ರತಿಪಾದಿತ ವಸ್ತುವಿಗೆ ತಕ್ಕಂತೆ ಅದರ ಉಡುಪಿರ

ಬೇಕು. ಉದಾಹರಣೆ ಕಾನೂರು ಸುಬ್ಬಮ್ಮ ಹೆಗ್ಗಡಿತಿಯಲ್ಲಿ ಬರುವ ಹೂವಯ್ಯನ ವರ್ಣನೆಯನ್ನು ನೋಡಿದರೆ, ಇಲ್ಲಿ ಲೇಖಕರು ವಸ್ತುವನ್ನು ಹಿಂದಕ್ಕೆ ದಬ್ಬಿ ಶಬ್ದಗಳಿಗೆ ಸೋತಿದ್ದಾನೆ ಎನಿಸುತ್ತದೆ. ಹೀಗಿದ್ದರೆ ಗದ್ಯವು ಕೆಟ್ಟುಹೋಯಿತೂ ಎನ್ನಬಹುದು. ಸಾಧಾರಣವಾಗಿ ಬರಹಗಾರನು ಕವಿತೆ ಮತ್ತು ಗದ್ಯಗಳೆರಡಕ್ಕೂ ಕೈಹಾಕುವವನಾದರೆ ಅನೇಕ ವೇಳೆ ಅವನ ಗದ್ಯವು ಈ ರೀತಿ ದಾರಿ ತಪ್ಪಿಹೋಗುವುದುಂಟು. ಹಾಗಿಲ್ಲದೆ ಬರಿಯ ಗದ್ಯಗಾರರಾದರೆ ಅವರ ಗದ್ಯವು ಮಾದರಿಯ ಗದ್ಯವಾಗಿರುತ್ತದೆ. ಉದಾಹರಣೆಗಾಗಿ ಶ್ರೀವರ್ಮ ಕೃಷ್ಣಶಾಸ್ತ್ರಿಗಳು ಮತ್ತು ಶ್ರೀ. ಎಸ್. ವಿ. ರಂಗಣ್ಣ ಇವರುಗಳ ಗದ್ಯಭಾಗಗಳು. ಕೆಲವು ಬಹು ಪಳಗಿದ ಕೈಗಳು ಮಾತ್ರ, ಪದ್ಯ ಗದ್ಯಗಳೆರಡನ್ನು ಬರೆದರೂ ಗದ್ಯವನ್ನು ಮಾದರಿಯದನ್ನಾಗಿ ಮಾಡುತ್ತವೆ. ಇದಕ್ಕೆ ಉದಾಹರಣೆ ಶ್ರೀ. ಡಿ. ವಿ. ಗುಂಡಪ್ಪನವರು, 'ಮಂಕು ತಿಮ್ಮ'ನ ಕಗ್ಗವನ್ನು ಬರೆದ ಈ ಕವಿಯನ್ನು ನಾವು ಹೊಸಗನ್ನಡದ ಮಾದರಿಗ The Maker of the Modern Prose) ಎಂದು ಹೇಳಿದರೆ ತಪ್ಪಾಗಲಾರದು. ಗದ್ಯದ ಓಟವು ವಿಷಯವನ್ನನುಸರಿಸಿಯೇ ಇರಬೇಕು. ವಿಮರ್ಶೆ ವಿಡಂಬನ, ಕಥೆ, ಕಾದಂಬರಿ, ನಾಟಕಗಳ ಗದ್ಯಕ್ಕೂ ಉಳಿದ ಗದ್ಯ ಭಾಗಗಳ ಶೈಲಿಗೂ ಪದ ಸಂಯೋಜನೆಗೂ ವ್ಯತ್ಯಾಸವನ್ನು ನೋಡಬಹುದು. ಅನೇಕ ವೇಳೆ ಕೇವಲ ಸಾಧಾರಣ ಪದಗಳಿಂದ ಬಹು ಗೂಢಾರ್ಥವನ್ನು ನಿವೇದಿಸಬಹುದು. ಶ್ರೀ॥ ಜಿ. ಪಿ. ರಾಜರತ್ನಂರವರ ಹನಿಗಳು ಈ ಜಾತಿಗೆ ಸೇರಿದುವು. ಹರಟೆಗಳು, ಚುಟುಕಗಳು ಮೊದಲಾದವುಗಳನ್ನು ಈ ಜಾತಿಗೆ ಸೇರಿಸಬಹುದು.

ಕೆಲವು ತಾಯಂದಿರು ಸ್ವಾಭಾವಿಕವಾಗಿ ಬಂದ ತಮ್ಮ ಪ್ರೀತಿಯ ಭಾವನೆಯನ್ನು ಅನೇಕ ತರದಲ್ಲಿ ತೋರಿಸುತ್ತಾರೆ. ಇವುಗಳನ್ನು ಸರಿಯಾಗಿ ವಿಮರ್ಶಿಸಿದರೆ ಇವುಗಳು ಅತ್ಯುತ್ತಮ ಸಾಹಿತ್ಯಕ್ಕೆ ಸೇರುತ್ತವೆ. ಇಲ್ಲಿ ಒಂದು ತನ್ನ ಗಂಡನಿಗೆ ಬರೆದ ಕಾಗದವನ್ನು ಕೊಡುತ್ತೇನೆ. ಇದು ತನ್ನ ಮಗುವಿನ ವಿಷಯದಲ್ಲಿ ಹೆಮ್ಮೆಯಿಂದ ತಾಯಿ ಬರೆದ ಕಾಗದ.

"ನಿಮ್ಮ ತುಂಟ ಮಗ ಸದಾ ಅಳುತ್ತಿರುತ್ತಾನೆ. ನಿದ್ದೆಯಿಂದ ಎದ್ದರೆ ಎತ್ತಿಕೊಳ್ಳೆಂದು ಅಳುವು. ಎತ್ತಿಕೊಂಡರೆ ಹಾಲೆಕೊಡೆಂದು ಅಳುವು. ಹಾಲು ಕೊಟ್ಟ ಮೇಲೆ ಆಡಿಸೆಂದು ಅಳುವು. ತೊಟ್ಟಿಲಲ್ಲಿ ಮಲಗಿಸಿ ತೂಗಿದರೆ ತುಂಟತನದ ಅಳುವು, ಅಂತು ಅಳುವ ಅಳುವ. ಇದನ್ನು ನೋಡಿ ನನಗೆ ನಗುವೂ ಅಳುವೂ ಒಮ್ಮೆಲೇ ಬರುತ್ತದೆ. ಅವನು, ನನ್ನನ್ನು ನೀವು ರೇಗಿಸಿ ಅಳುಸುತ್ತಿದ್ದಂತೆ ರೇಗಿಸಿ ಅಳಿಸುತ್ತಾನೆ. ನನ್ನ ಕೈಲಿ ಸಾಧ್ಯವಿಲ್ಲದಿದ್ದರೆ ಎತ್ತಿಕೊಂಡು ಮುದ್ದಾಡುತ್ತಾ ನಾನೂ ಅತ್ತುಬಿಡುತ್ತೇನೆ. ಆಗ ಅವನು ನನ್ನ ಮುಖವನ್ನು ದುರುದುರನೆ ನೋಡುತ್ತಾನೆ. ಅಂತೂ ನಿಮ್ಮ ಮಗನ.... ...." ಈ ಒಂದು ಸಣ್ಣ ಅಳುವಿನ ವರ್ಣನೆಯನ್ನು ತಾಳ್ಮೆಯಿಂದ ತಾಯಿಯು ಸಹಿಸಿ ಪ್ರತಿಯೊಂದು ಕಾರ್ಯಾನಂತರ ಅಳುವಿಗೂ ಒಂದೊಂದು ಭಾವನೆಯನ್ನು ಕೊಟ್ಟಿದ್ದಾಳೆ. ಇದೇ ಸನ್ನಿವೇಶದಲ್ಲಿ ರಸಿಕಳಲ್ಲದ ತಾಯಿ ಇದ್ದಿದ್ದರೆ ಹಾಳು ಮಗು, ಸದಾ ಅಳುತ್ತದೆ ಎಂದು ಅದಕ್ಕೆ ಎರಡು ಏಟು ಕೂಡ ಕೊಟ್ಟುಬಿಡುತ್ತಿದ್ದಳು. ಹೀಗೆ ಸಣ್ಣ ವಿಷಯ ಮೊದಲುಗೊಂಡು ದೊಡ್ಡ ವಿಷಯಗಳಿಗೂ ಕೂಡ ಗದ್ಯವು ಪೋಷಕವಾಗಿ ನಿಂತಿದೆ. ಪದ್ಯವು ಅರಸಿನ ಔತಣದಂತೆ (Royal dinner). ಅದನ್ನು ಅನುಭವಿಸುವವರು ಬಹು ಉನ್ನತರೆಂದೆನಿಸಿಕೊಳ್ಳುವ ಅರಸಿನ (೫, ೬) ಐದಾರು ಜನ ಮಿತ್ರರು ಮಾತ್ರ. ಗದ್ಯವು ನಮ್ಮ ಊರಿನ ರಥೋತ್ಸವದ ಸಮಾರಾಧನೆಯಂತೆ. ಅಲ್ಲಿಗೆ ಎಲ್ಲರೂ ಆಹ್ವಾನಿತರು ಬಂದು ಉಂಡು ಆನಂದ ಪಡಬಹುದು. ಎರಡು ಔತಣದಲ್ಲಿಯೂ, ಉಣಿಸು ಒಂದೇ ಆದರೂ, ಎಲೆಗಳನ್ನು ಮುಂಚಿತವಾಗಿಯೇ ಕಾದಿಟ್ಟು ಉಂಡು ಆನಂದಿಸುವವರೇ ಬಹಳ ಮಂದಿ.

ಸಾಹಿತ್ಯವು ವಿಶ್ವದಲ್ಲಿ ಹರಡಿರುವ ಒಂದು ಪ್ರಕಾಶ—ಪ್ರತಿದಿನವೂ ಹರಡಿರುವ ಸೂರ್ಯ ಪ್ರಕಾಶದಂತೆ ಅದು ಎಲ್ಲರನ್ನೂ ಆಕರ್ಷಿಸುವುದಿಲ್ಲ. ಅದೇ ಸೂರ್ಯ ಪ್ರಕಾಶದಲ್ಲಿ ಒಂದು ಮಿಂಚು ಬಂದರೆ

ಎಲ್ಲರನ್ನೂ ಅಹಹ ಎನ್ನಿಸುತ್ತದೆ. ಹಾಗೆ ಪಳಪಳ ಹೊಳೆದು ಹೃದಯವನ್ನು ಅರಳಿಸಿ ಅಹಾ ಎನಿಸುವ ಮಿಂಚೇ ಭಾವ ಕವಿತೆ. ಇದೇ ಸೂರ್ಯನ ಬೆಳಕಿನಲ್ಲಿ ಅನೇಕ ಸೊಡರುಗಳನ್ನು ಅಣಿಯಾಗಿಟ್ಟು ಮಾಡುವ ಒಂದು ಅಲಂಕಾರ. ಎಲ್ಲರ ಮನವನ್ನೂ ಮತ್ತೆ ಆಕರ್ಷಿಸಿ ಯಾವ ವಸ್ತುವಿನ ಪ್ರಕಾಶವು ಹೆಚ್ಚಲೆಂದು ಈ ಸೊಡರುಗಳಿಟ್ಟವೆಯೋ ಆ ವಸ್ತುವಿಗೆ ಒಂದು ಆಕರ್ಷಣ ಶಕ್ತಿಯನ್ನು ಕೊಡುತ್ತವೆ. ಹೀಗೆ ಜೀವನದಲ್ಲಿ ಸಾಮಾನ್ಯವಾದ ವಿಷಯವನ್ನು ಪ್ರಕಾಶಿಸುವಂತೆ ಪದಗಳೆಂಬ ಅನುಕೂಲವಾದ ಸೊಡರುಗಳ ಶ್ರೇಣಿಯು ಗದ್ಯ. ಗದ್ಯಕ್ಕೆ ಎಷ್ಟು ಸೊಡರಿದ್ದರೂ ಆಗಬಹುದು. ಇದು ಎಲ್ಲರಿಗೂ ನಿಲುಕುವ ಪದಾರ್ಥ. ಭಾವ ಕವಿತೆಗೆ ಹೆಚ್ಚು ಸೊಡರು ಬೇಕಿಲ್ಲ. ಅಲ್ಪದರಲ್ಲಿಯೆ ಹೆಚ್ಚು ಪ್ರಕಾಶ, ಒಂದೆರಡು ಮಿಂಚಿನಲ್ಲಿಯೆ ಕ್ಷಣದೊಳಗೆ ವಿಶ್ವವನ್ನೆಲ್ಲಾ ಕಾಣಿಸುತ್ತದೆ. ಇದು ಎಲ್ಲರಿಗೂ ನಿಲುಕುವ ಮಟ್ಟದಲ್ಲಿಲ್ಲ. ಭಾವನೆ ಬಂದ್ದಾಗ ಕವಿ ಕವಿಯಾಗುತ್ತಾನೆ. ಬಾ ಎಂದರೆ ಭಾವನೆಯು ಬಾರದು. ಹೀಗೆಯೇ ಮಿಂಚು ಬಾ ಎಂದಾಗ ಬಾರದು. ಅದು ಬರುವಾಗಲೇ ಬಂದೀತು. ಮನೆಯ ಸೊಡರನ್ನು ನಾವು ಯಾವಾಗಲಾದರೂ ಎಷ್ಟು ಅಂದವಾಗಿಯಾದರೂ ಹಚ್ಚಿಕೊಳ್ಳಬಹುದು. ಹೀಗೆ ಗದ್ಯ ಸಾಹಿತ್ಯವು ಪ್ರಕಾಶಿಸುವ ಸೊಡರುಗಳಂತೆ ಪದಗಳ ಗುಂಪು. ನಾವು ಅದನ್ನು ಜೋಡಿಸುವ ರೀತಿಯಂತೆ ಅದರ ಆಕರ್ಷಣ ಶಕ್ತಿಯು ಬರುತ್ತದೆ. ನಮ್ಮನ್ನು ಯಾವ ಸೌಂದರ್ಯವು ಆಕರ್ಷಿಸುತ್ತದೆಯೋ ಅದನ್ನು ನೋಡಿ ನಾವು ಆನಂದಿಸುತ್ತೇವೆ. ಹೀಗೆ ಗದ್ಯ ಪದ್ಯಗಳೆರಡರ ಉದ್ದೇಶವೂ ಒಂದೇ ಆಗುತ್ತದೆ. ಹೀಗಿದ್ದರೆ ಹಿಂದಿನವರು ಗದ್ಯವನ್ನು ಏಕೆ ಉಪಯೋಗಿಸಲಿಲ್ಲವೆಂದು ಕೇಳಬಹುದು. ಅದು ಆಯಾ ಕಾಲದ ಅಭಿರುಚಿಯ ಮೇಲೆ ಹೋಗುತ್ತದೆ. ಆಗಿನವರಿಗೆ ಆಧ್ಯಾತ್ಮಿಕ ರುಚಿ ಒಂದೇ ಇದ್ದುದು. ಈಗಲಾದರೋ ಜೀವನದಲ್ಲಿ ಅನೇಕ ವಿಧದ ರುಚಿಗಳು ಬಂದಿವೆ. ಇವುಗಳಿಗೆ ಗದ್ಯವೇ ಲೇಸು.

ಕಡೆಯ ಮಾತಾಗಿ ನಮ್ಮಲ್ಲಿ ಎಲ್ಲರೂ ದಿನಂಪ್ರತಿ ಸಂಭಾಷಣೆಯಲ್ಲಿ ಕನ್ನಡ ಪದಗಳನ್ನೇ ಉಪಯೋಗಿಸಬೇಕು. ಪ್ರತಿಯೊಬ್ಬ ಕನ್ನಡಿಗನೂ, ಕನ್ನಡಿತಿಯೂ ಓಲೆಗಳನ್ನು ಕನ್ನಡದಲ್ಲಿಯೇ ಬರೆಯಬೇಕು. ಸ್ವಲ್ಪ ಹಾಸ್ಯವಾಗಿ ಹೇಳುವುದೆಂದರೆ ಹುಡುಗಿಗೆ ಅಥವಾ ಹುಡುಗನಿಗೆ ಮದುವೆ ಕಾಲದಲ್ಲಿ ಸಂಗೀತ ಬರುತ್ತದೆಯೋ ಮುಂತಾಗಿ ಕೇಳುವ ಪದ್ಧತಿಯ ಜೊತೆಗೆ ಶುದ್ಧ ಕನ್ನಡದಲ್ಲಿ ಮಾತನಾಡುವ ಶಕ್ತಿ ಇದೆಯೇ? ಓಲೆಗಳನ್ನು ಕನ್ನಡದಲ್ಲಿ ಬರೆಯುವ ಅಭ್ಯಾಸವುಂಟೊ? ಎಂದು ಕೊಳ್ಳುವ ವಾಡಿಕೆಯೂ ಬಂದರೆ ಚೆನ್ನಾಗಿದ್ದೀತು. ಕಾಸು ಕಾಸಿಗೆ ಗಂಟು ಆಗುವಂತೆ ಕಾಲಕ್ರಮೇಣ ಕರ್ಣಾಟಕದ ನಾನಾ ವ್ಯವಹಾರಗಳೂ, ಕನ್ನಡದ ಮೂಲಕವೇ ನಡೆಯಬೇಕು. ಇದು ಸಣ್ಣದರಲ್ಲಿ ಬೇರೂರಿ ನಿಂತು ದೊಡ್ಡ ವೃಕ್ಷವಾಗಿ ಬೆಳೆದು ನೊಂದಿರುವ ಕರ್ಣಾಟಕಕ್ಕೆ ತನ್ನ ಛಾಯೆಯನ್ನು ಹರಡಬೇಕು.

ನಮಸ್ಕಾರ ವ್ಯಾಯಾಮ

ಸದ್ಯಕ್ಕೆ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಕಲಿಯುತ್ತಿರುವ ವಿದ್ಯಾರ್ಥಿಗಳ ಹಾಗು ವಿದ್ಯಾರ್ಥಿನಿಯರ ಆರೋಗ್ಯವು ಕೆಡುತ್ತ ನಡೆದದ್ದು ಕಂಡುಬರುತ್ತಲಿರುವದು. ಕಲಿತ ಜನರ ಮೈಕಟ್ಟೂ ಅವರ ಆಹಾರ ಮೊದಲಾದವುಗಳೂ ಸರಿಯಾಗಿರುವದಿಲ್ಲ. ಮನುಷ್ಯನು ಆರೋಗ್ಯ ಭಾಗ್ಯ ಹೀನನಾಗಲು ಅವನು ಸಿಟ್ಟಿನ ಸ್ವಭಾವದವನಾಗುವನು. ಕೆಲಸದಲ್ಲಿ ಬೇಸರಿಕೆಯುಂಟಾಗವದು. ತನ್ನ ಹಿತವನ್ನು ಮಾಡಿಕೊಳ್ಳಲಾರನು. ಆದ್ದರಿಂದ ಸಮಾಜದ ಹಿತವಾದರೂ ಅವನಿಂದಾಗುವದಿಲ್ಲ. ಅವನ ಸಂತತಿಯು ಬಲಹೀನವಾಗುವದು. ಶಾರೀರಕ ದೌರ್ಬಲ್ಯದ ಜೊತೆ ಮಾನಸಿಕ ದೌರ್ಬಲ್ಯವೂ ಆಗುವದರಿಂದ ರಾಷ್ಟ್ರವೇ ಅಧೋಗತಿಯ ಮಾರ್ಗವನ್ನು ಹಿಡಿಯುವದು. ಇದು ಯಾವ ದೇಶಕ್ಕೂ ಒಳ್ಳೇ ಲಕ್ಷಣವಲ್ಲ. ಅನಿಷ್ಟಕರವಾದ ಈ ಪರಿಸ್ಥಿತಿಯು ದೇಶಕ್ಕೆ ಒದಗುವದಕ್ಕೆ ಹಲವು ಕಾರಣಗಳಿರಬಹುದು. ಆದರೂ ಈಗಿನ ವಿದ್ಯಾರ್ಥಿಗಳು ಹಾಗು ವಿದ್ಯಾರ್ಥಿನಿಯರು ಯೋಗ್ಯವಾಗಿ ವ್ಯಾಯಾಮವನ್ನು ಮಾಡದಿರುವದು ಒಂದು ಕಾರಣವಾಗಿದೆ. ಶಾಲೆಯ ವೇಳಾಪತ್ರಿಕೆಯಲ್ಲಿ ವ್ಯಾಯಾಮದ ತಾಸುಗಳಿದ್ದರೂ ಅದರಿಂದ ಉಪಯೋಗವಾಗಲೊಲ್ಲದು. ಕಾಲೇಜದಲ್ಲಿಯ ವ್ಯಾಯಾಮವನ್ನುಂಟುಮಾಡುವ ಆಟಗಳಿಂದಲೂ ವಿಶೇಷ ಲಾಭವಾಗಲೊಲ್ಲದು. ವಿದ್ಯಾರ್ಥಿಗಳು ಒಂದೇ ಸವನೆ ಕೂತಲ್ಲಿಯೇ ಕೂತು ಮಾನಸಿಕ ಶ್ರಮವನ್ನು ಮಾಡುವರು. ಆದರೆ ಯಾವದೊಂದು ಬಗೆಯ ವ್ಯಾಯಾಮಕ್ಕೆ ಅವರ ಮನಸ್ಸು ಒಗ್ಗುವದಿಲ್ಲ. ಇದರಿಂದ ತಮ್ಮ ವೇಳೆಯು ಸುಮ್ಮನೆ ಖರ್ಚು ಆಯಿತೆಂದು ತಿಳಿಯುತ್ತಾರೆ. ಶಾಲೆಗಳಲ್ಲಿ ಗಣಿತ, ಇತಿಹಾಸ, ಭೂಗೋಲ ಮುಂತಾದ ವಿಷಯಗಳನ್ನು ಕಲಿಯುವಾಗ ವರ್ಗದಲ್ಲಿ ಹಾಜರಿಯು ಚೆನ್ನಾಗಿರುವದು. ಅದೇ ವಾರಕ್ಕೊಂದಾವೃತ್ತಿ ಇರುವ ವ್ಯಾಯಾಮ ತಾಸಿನಲ್ಲಿ ಕೆಲವು ಹುಡುಗರಿಗೆ ತಲೆನೋಯುವದು, ಹೊಟ್ಟೆಕಡಿತ, ಕಾಲುನೋವುಗಳು ನೆನಪಾಗುವವು. ಇದರಿಂದ ವ್ಯಾಯಾಮದ ಬಗ್ಗೆ ಈಗ ಅನಾವಸ್ಥೆಯುಂಟಾಗಲು ಆರೋಗ್ಯವು ಕ್ರಮದಿಂದ ಹಾನಿಯ ಮೆಟ್ಟಲುಗಳನ್ನು ಏರುತ್ತ ದೇಶದ ಅಧೋಗತಿಯ ಕಡೆಗೆ ಹೋಗುತ್ತಿರುವದು ಕಂಡುಬರಹತ್ತಿರುವದು. ಆದುದರಿಂದ ಉಂಟಾಗಿರುವ ಈ ಸ್ಥಿತಿಯನ್ನು ಹೋಗಲಾಡಿಸಲು, ಯಾವ ವ್ಯಾಯಾಮವು ಯೋಗ್ಯವಾಗಿರುವುದೆಂಬುದನ್ನೂ ಅದನ್ನು ಮಾಡಿಸುವಬಗೆಯನ್ನೂ ಅದರ ಲಾಭಗಳನ್ನೂ ಈ ಲೇಖದಲ್ಲಿ ವಿವರಿಸುತ್ತೇವೆ.

ವ್ಯಾಯಾಮ ಎಂಥದಿರಬೇಕು. ಎಂದರೆ, ಅದರಿಂದ ಎಲ್ಲ ಅವಯವಗಳಿಗೂ ಸ್ನಾಯುಗಳಿಗೂ ಅಲ್ಲದೆ ಮನಸ್ಸಿಗೂ ಸಹ ವ್ಯಾಯಾಮವಾಗಬೇಕು. ಅದನ್ನು—ಬೇಕಾದಲ್ಲಿ ಬೇಕಾದಾಗ—ಎಲ್ಲ ಋತುಗಳಲ್ಲಿ—ಮಾಡಲಿಕ್ಕೆ ಬರುತ್ತಲಿರಬೇಕು. ಅದಕ್ಕೆ ಉಪಕರಣಗಳು ಬೇಕಾಗಬಾರದು. ಒಬ್ಬನಿಗಾಗಲಿ ಹಲವು ಜನರಿಗಾಗಲಿ ಸುಲಭರೀತಿಯಿಂದ ಮಾಡಲಿಕ್ಕೆ ಬರುತ್ತಿರಬೇಕು. ಇಷ್ಟೇ ಅಲ್ಲ, ಇಂಥ ವ್ಯಾಯಾಮವು ಹೆಂಗಸರಿಗೂ ಗಂಡಸರಿಗೂ ಹುಡುಗರಿಗೂ ಪ್ರಾಯದವರಿಗೂ ಮುದುಕರಿಗೂ ಅಶಕ್ತರಿಗೂ ಸಶಕ್ತರಿಗೂ ಸಹ ಮಾಡಲಿಕ್ಕೆ ಬರುವಂಥದು ಇರಬೇಕು. ಒಟ್ಟಿನಮೇಲೆ ಸಕಲರಿಗೂ ಸರ್ವಕಾಲದಲ್ಲಿಯೂ ಯೋಗ್ಯವಾದುದಾಗಿದ್ದು ದೇಶದ-ರಾಷ್ಟ್ರದ-ಆರೋಗ್ಯವನ್ನು ಕಾಪಾಡುವಂಥದಿರಬೇಕೆಂದು ಸ್ವಲ್ಪದರಲ್ಲಿ ಹೇಳಿದಂತಾಯಿತು. ಇಂಥ ವ್ಯಾಯಾಮವೆಂದರೆ **ಸೂರ್ಯ ನಮಸ್ಕಾರ ವ್ಯಾಯಾಮ**.

ಸೂರ್ಯನಮಸ್ಕಾರ ವ್ಯಾಯಾಮದ ಹೊರತು ಉಳಿದ ವ್ಯಾಯಾಮಗಳಲ್ಲಿ ಇಲ್ಲವೆ ಆಟಗಳಲ್ಲಿ ಒಂದಿಲ್ಲೊಂದು ತೊಂದರೆಯು ಬರುತ್ತದೆ. ಲೋಡು, ಮಲ್ಲಗಂಬ, ಡಂಬೆಲ್ಸ್ ಮೊದಲಾದ ವ್ಯಾಯಾಮಗಳಿಗೆ ಉಪಕರಣಗಳು ಬೇಕು. ತಾಲೀಮಖಾನೆಯಾಗಲಿ ಏಕಾಂತದ ಸ್ಥಳವಾಗಲಿ ಬೇಕು. ಈಸುವ ವ್ಯಾಯಾಮವು ಉತ್ತಮವಾಗಿದ್ದರೂ ಅದಕ್ಕೆ ಸಾಕಷ್ಟು ನೀರೂ ಬೇಕಾಗುವುದಲ್ಲದೆ ಎಲ್ಲ ಋತುಗಳು ಅನುಕೂಲವಾಗಿರುವದಿಲ್ಲ. ನಡೆಯುವ ವ್ಯಾಯಾಮಕ್ಕೂ ಅಡಚಣಿ ಇರುತ್ತದೆ. ೮-೧೦ ಮೈಲು ನಡೆದಲ್ಲದೆ ಅದರಿಂದ ಚಲೋ ವ್ಯಾಯಾಮವಾಗಲಾರದು. ಇದರಿಂದ ವೇಳೆಯು ಬಹಳ ಬೇಕಾಗುವದು. ಕ್ರಿಕೆಟ್ ಟೆನ್ನಿಸ್, ಹುತೂತೂ, ಖೋಖೋ ಮೊದಲಾದ ಆಟಗಳಿಗಾದರೂ ಒಂದಿಲ್ಲೊಂದುಬಗೆಯ ತೊಂದರೆಯು ಬಂದೇಬರುತ್ತದೆ. ಮನೆಗೆ ಆಪ್ತರು ಬಂದಾಗ, ಗೆಳೆಯರು ಬಂದಾಗ, ಪರೀಕ್ಷೆ ಬಂದಾಗ, ಕಾರ್ಯಪ್ರಸ್ತಗಳಾದಾಗ ಇವೆಲ್ಲ ವ್ಯಾಯಾಮಗಳನ್ನು ಬಿಡುವ ಪ್ರಸಂಗವು ಬರುತ್ತದೆ. ಒಮ್ಮೊಮ್ಮೆ ಎಂಟೆಂಟು ದಿವಸಗಳವರೆಗೆ ಯಾವ ತರದ ವ್ಯಾಯಾಮವನ್ನಾಗಲಿ ಮಾಡದೆ ಸುಮ್ಮನೆ ಇರಬೇಕಾಗುತ್ತದೆ. ಆದರೆ ನಮಸ್ಕಾರ ವ್ಯಾಯಾಮಕ್ಕೆ ಉಪಕರಣಗಳು ಬೇಕಿಲ್ಲ. ಒಬ್ಬನೇ ಇದ್ದರೂ ಬರುತ್ತದೆ. ಹಲವರು ಇದ್ದರೂ ಬರುತ್ತದೆ. ತಾಲೀಮಖಾನೆಯ ಅವಶ್ಯವಿಲ್ಲ. ಏಕಾಂತವು ಬೇಡ, ಬೇಕಾದ ಋತುಗಳಲ್ಲಿ ಮಾಡಬಹುದು. ಮನೆಗೆ ಯಾರು ಬಂದರೂ ಯಾರು ಹೋದರೂ ಇದಕ್ಕೆ ಅಡ್ಡಿಯಾಗುವುದಿಲ್ಲ. ಒಟ್ಟಿನಮೇಲೆ ಇದಕ್ಕೆ ಯಾವ ತೊಂದರೆಯೂ ಬರದೆ ಸುಸೂತ್ರವಾಗಿ ಸಾಗುವುದು. ಇಂಥ ಉತ್ಕೃಷ್ಟವಾದ ನಮಸ್ಕಾರ ವ್ಯಾಯಾಮವನ್ನು ಎಲ್ಲರೂ ಪದ್ಧತಿಯಿಂದ ಮಾಡುವುದಕ್ಕೆ ಪ್ರಾರಂಭಿಸಿದರೆ ದೇಶದ ಆರೋಗ್ಯವು ಬೆಳೆಯುವುದು; ಅಲ್ಲದೆ ಧರ್ಮಜಾಗ್ರತಿಯೂ ಉಂಟಾಗುತ್ತದೆ.

ಮಕ್ಕಳು ಸಣ್ಣವರಿರುವಾಗ ಅವರು ಯಾವುದೊಂದು ನಿಯಮಿತವಾದ ವ್ಯಾಯಾಮವನ್ನೂ ಮಾಡುವ ಅವಶ್ಯವಿಲ್ಲ. ಯಾಕೆಂದರೆ ಅವರಿಗೆ ಆಟಗಳಿಂದ ಬೇಕಾದಷ್ಟು ವ್ಯಾಯಾಮವಾಗುತ್ತದೆ. ಮುಂದೆ ೭,೮ ವರ್ಷದವರಾದ ಮೇಲೆ ಅವರಿಗೆ ಕೆಳಗೆ ಹೇಳಿದಷ್ಟು ನಮಸ್ಕಾರ ವ್ಯಾಯಾಮವನ್ನು ಮಾಡಿಕೊಳ್ಳಬೇಕು. ಇದರಡಿಯಲ್ಲಿ ೮ ವರ್ಷದಿಂದ ೭೦ ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ನಮಸ್ಕಾರ ವ್ಯಾಯಾಮದ ಪ್ರಮಾಣವನ್ನು ಕೊಟ್ಟದೆ.

೧.	೮ರಿಂದ ೧೦ವರ್ಷದ	ಮಕ್ಕಳು	ದಿನಾಲು ೨೫	ನಮಸ್ಕಾರ ಹಾಕಬೇಕು.
೨	೧೦ ,, ೧೨	,,	,, ೨೫-೫೦	,, ,,
೩	೧೨ ,, ೧೬	,,	,, ೫೦-೭೫	,, ,,
೪	೧೬ ,, ೨೦ ಹಾಗೂ ೬೫ ,, ೭೦	,, ,, ಮನುಷ್ಯನು	,,	ಶಕ್ತಿಯ ಮಾನದಂತೆ ೩೦೦ರವರೆಗೆ ನಮಸ್ಕಾರ ಹಾಕಬೇಕು.
೫	೭೦ ,, ಮುಂತಿ ತಮಗೆ ಆಗುವಷ್ಟು			,, ,,

ವಯಸ್ಸಿನ ಮಾನದಿಂದಲೂ ಶಕ್ತಿಯ ಮಾನದಿಂದಲೂ ದಿನಾಲು ತಪ್ಪದೆ ಗೊತ್ತುಮಾಡಿಕೊಂಡಷ್ಟು ನಮಸ್ಕಾರಗಳನ್ನು ಹಾಕಲಿಕ್ಕೆ ಬೇಕು. ಇಲ್ಲದಿದ್ದರೆ ನಾಲ್ಕಾರು ತಿಂಗಳು ದಿನಾ ೩೦೦, ೪೦೦ ವರೆಗೆ ನಮಸ್ಕಾರಗಳನ್ನು ಹಾಕೋಣ. ಮುಂದೆ ಒಮ್ಮೆಲೆ ಕಡಮೆಮಾಡಿ ೨೫ಕ್ಕೆ ತಂದು ನಿಲ್ಲಿಸೋಣ. ಈ ತರದ ಅಕ್ರಮ ಮಾತ್ರ ಆಗಬಾರದು. ಇದರಿಂದ ಶರೀರಕ್ಕೆ ಹಿತವಾಗುವದಂತೂ ಒತ್ತಟ್ಟಿಗುಳಿದು ಅಹಿತವೇ ಆಗುತ್ತದೆ.

ನಮಸ್ಕಾರ ವ್ಯಾಯಾಮ ಮಾಡುವ ಸ್ಥಳವು ಜಾರಿಕೆಯುಳ್ಳದ್ದಿರಬಾರದು. ಇಲ್ಲವೆ ಎದೆಗೆ ಉಸುಕು ಹತ್ತುವಂತದು ಇರಬಾರದು. ನಮಸ್ಕಾರದ ಹೊತ್ತಿಗೆ ಗಂಡಸರಿಗೆ ಪಂಚೆ, ಸಣ್ಣಧೋತರ ಇರಬೇಕು. ಇಲ್ಲವೆ ಒಂದು ಲಂಗೋಟಿಯಿದ್ದ

ರಂತೂ ಬಹಳ ಉತ್ತಮ. ಹೆಂಗಸರಿಗೆ ಹಗುರಾದ ಸೀರೆ, ಸೈಲಾದ ಒಂದು ಕುಪ್ಪಸ ಇಷ್ಟಿದ್ದರೆ ಸಾಕು. ವ್ಯಾಯಾಮ ಮಾಡುವವರಿಗೆ ೧ ಮೊಳ ೪ ಬೆರಳು ಅಳತೆಯುಳ್ಳ ಸ್ವಚ್ಛ ಅರಿವೆಯೊಂದು ಬೇಕಾಗುವದು. ಇಷ್ಟರಿಂದ ನಮಸ್ಕಾರವ್ಯಾಯಾಮದ ಸಿದ್ಧತೆಯಾಯಿತು. ಇನ್ನು ಈ ವ್ಯಾಯಾಮವನ್ನು ಯಾವ ರೀತಿಯಿಂದ ಮಾಡಬೇಕೆಂಬುದನ್ನು ಹೇಳುವೆವು. ಅದಕ್ಕೆ ಮೊದಲು ವ್ಯಾಯಾಮಕ್ಕೆ ಸಿದ್ಧವಾಗುವ ರೀತಿಯನ್ನಷ್ಟು ಹೇಳುವದು ಅವಶ್ಯವೆಂದು ತೋರುತ್ತದೆ. ಮೇಲೆ ಹೇಳಿದಂತೆ ಪೋಷಾಕು ಮಾಡಿಕೊಂಡು ಎರಡೂ ಕಾಲುಗಳನ್ನು ಕೂಡಿಸಿ ಹೆಬ್ಬೆರಳುಗಳಿಗೆ ವಸ್ತ್ರವ ತಗುಲುವಂತೆ ಎದುರಿಗೆ ಹಾಸಬೇಕು. ವ್ಯಾಯಾಮ ಮಾಡುವವರು ತಮ್ಮೆದುರಿಗೆ ಉಪಾಸ್ಯದೇವತೆಯ ಚಿತ್ರವನ್ನಾಗಲೀ ಒಂದೇ ಬಿಳೇ ಚುಕ್ಕೆಯ ನ್ನಾಗಲಿ ಇಟ್ಟುಕೊಂಡು ಅತ್ತಕಡೆಗೇ ಏಕಾಗ್ರಚಿತ್ತ ರಾಗಿ ಸರಳ ನಿಲ್ಲಬೇಕು. ಕೈಗಳೆರಡೂ ಎದೆಯ ಮೇಲೆ ಜೋಡಿಸಿದವುಗಳಿದ್ದು ಒಂದಕ್ಕೊಂದು ಹತ್ತಿರಬೇಕು. ಎದೆಯನ್ನು ಸಾಧ್ಯವಾದಷ್ಟು ಮ ಟ್ಟಿಗೆ ಮುಂದೆ ಹಾಯಿಸಿ, ಹೊಟ್ಟೆಯನ್ನು ತಮ್ಮಿಂ ದಾದಷ್ಟು ಸೇದಿಕೊಳ್ಳಬೇಕು. ಎದುರಿಗೆ ನೋಡಬೇಕು.

ರೂಪಂ ರೂಪವಿವರ್ಜಿತಸ್ಯ ಭವತೋ ಧ್ಯಾನೇನ ಯದ್ವರ್ಣಿತಂ ।
ಸ್ತುತ್ಯಾನಿರ್ವಚನೀಯತಾಖಿಲಗುರೋ ದೂರೀಕೃತಾ ಯನ್ಮಯಾ ॥
ವ್ಯಾಪ್ತತ್ವಂ ಚ ನಿಸಾಶಿತಂ ಭಗವತೋ ಯತ್ತೀರ್ಥಯಾತ್ರಾದಿನಾ ।
ಕ್ಷಂತವ್ಯಂ ಜಗದೀಶ ತದ್ವಿಕಲತಾ ದೋಷತ್ರಯಂ ಮತ್ಕೃತಂ ॥

ಅರ್ಥ—ಪರಮೇಶ್ವರಾ, ನೀನು ರೂಪರಹಿತನು; ಆದರೆ ನಾನು ಧ್ಯಾನದಿಂದ ನಿನ್ನ ರೂಪವನ್ನು ವರ್ಣಿಸಲು ಪ್ರಯತ್ನಿಸಿದೆನು. ಎಲೈ ನಿಖಿಲಗುರೂ, ನೀನು ಅನಿರ್ವಚನೀಯನು; ಆದರೆ ನಾನು ಸ್ತುತಿಯಿಂದ ನಿನ್ನ ಆ ಅನಿರ್ವಚನೀತಿಯನ್ನು ಹೋಗಲಾಡಿಸಲು ಯತ್ನಿಸಿದೆನು; ದೇವಾ, ನೀನು ಸರ್ವವ್ಯಾಪಿಯು; ಆದರೆ ನಾನು ತೀರ್ಥಯಾತ್ರಾದಿಗಳ ಮಾಹಾತ್ಮ್ಯವನ್ನು ವರ್ಣಿಸಿ ನಿನ್ನ ವ್ಯಾಪಕತೆಯನ್ನು ಸಂಕೋಚಗೊಳಿಸಲು ಯತ್ನಿಸಿದೆನು. ಎಲೈ ಜಗದೀಶನೇ, ಈ ಪ್ರಯತ್ನಗಳಿಂದ ನಾನು ನಿನ್ನಲ್ಲಿ ನ್ಯೂನತಾರೋಪಣೆಯ ಮೂರು ತಪ್ಪುಗಳನ್ನು ಮಾಡಿದೆನು; ದಯಾಘನಾ ಅವನ್ನು ಕ್ಷಮಿಸು.

ಕಲಾಭಿನಂದನೆ

ಬೆಂಗಳೂರಿನಲ್ಲಿ ಶ್ರೀ ಥಿಯೇಟರ್ಸ್ ಎಂಬ ಹೆಸರಿನಿಂದ ರಂಗಭೂಮಿಯ ನವೀನ ಕ್ಷೇತ್ರವನ್ನು ಸ್ಥಾಪಿಸಿಕೊಂಡು, ತಮ್ಮ ಜನಪ್ರಿಯ ನಾಟಕಗಳಿಂದ ಸಹಸ್ರಾರುಮಂದಿ ಪ್ರೇಕ್ಷಕವೃಂದವನ್ನು ಆಕರ್ಷಿಸಿರುವ ಶ್ರೀವರ್ಮಾ ಹಿರಣ್ಣಯ್ಯನವರು, ತಮ್ಮ ಕಾರ್ಯದಲ್ಲಿ ಪಡೆಯುತ್ತಿರುವ ಜಯಕ್ಕಾಗಿ, ರಂಗಭೂಮಿಯ ಅಭಿಮಾನಿಗಳಿಂದ ವಿಶೇಷ ಧನ್ಯವಾದಗಳಿಗೆ ಪಾತ್ರರಾಗಿದ್ದಾರೆ. [illegible]ಲನಚಿತ್ರ ಪ್ರದರ್ಶನಗಳ ಹಾವಳಿಯಿಂದ ಶುದ್ಧಾಂ[illegible]ಳಕ್ಕಿಳಿದು ಹೋಗಿದ್ದ ರಂಗಭೂಮಿಯ ಕಡೆ [illegible] ಮನವನ್ನು ಆಕರ್ಷಿಸುವ ಸದವಕಾಶ[illegible]ಂತವಾದ ಇವರ ನಾಟಕಗಳ ಮೂಲಕ [illegible]ವರುಮಾಡಿರುವ ಪರಿಶ್ರಮವು ಪ್ರಶಂಸ[illegible] ದೇವದಾಸಿ, ತಮಾಷ್, ಮಂಡೋದರಿ [illegible] ಇವರಿಂದ ರಚಿತವಾದ ಹಲವು ನಾಟಕಗಳು [illegible] ಜನಮನರಂಜಕವಾಗಿವೆ. ಅಲ್ಲದೆ ಇವರು ವಿ[illegible] ಸಂಸ್ಥೆ ಮುಂತಾದುವುಗಳಿಗೂ ಮುಕ್ತಹಸ್ತರಾ[illegible] ದಾನಮಾಡುತ್ತ ಸಮಾಜ ಸೇವಾ ನಿರತರಾ[illegible]ದಕ್ಕಾಗಿಯೂ ಅಭಿನಂದನೀಯರಾಗಿದ್ದಾ[illegible]

ಇವರ ಈ ಕಲಾಸೇವೆಯು ಕನ್ನ[illegible] ವಿಶೇಷ ರೀತಿಯಿಂದ ಪ್ರಸಿದ್ಧಿಗೊಂಡು [illegible] ನಟಕಲಾಚಾರ್ಯರಾದ ದಿವಂಗತ [illegible]ರ್ಯರ ದಿವ್ಯಕೀರ್ತಿಪ್ರತಿಭೆಗಳನ್ನು [illegible]ಹಾಜನರು ಸ್ಮರಣೆಗೆ ತಂದುಕೊಂ[illegible] ಭೂಮಿ ಕಲಾಕ್ಷೇತ್ರವನ್ನೂ ಅ[illegible]ಷ್ಟಿಯಿಂದ ನೋಡುವ ಸುಯೋಗ[illegible] ನಾಟಕಗಳ ಮೂಲಕ ಒದಗಲಿ ಎಂ[illegible]ತ್ತೇವೆ.

ಕರ್ನಾಟಕದ ರಂಗ[illegible]ಯ ಕ್ಷೇತ್ರದಂತೆಯೇ, ನೂತನವಾಗಿ ಅಭಿವೃದ್ಧಿಗೆ ಬರುತ್ತಿರುವ ಚಲಚ್ಚಿತ್ರ ಕ್ಷೇತ್ರವೂ, ಕನ್ನಡಿಗರ ಹೃದಯಾಕರ್ಷಕವಾಗುವಂತೆ ಪರಿಶ್ರಮಿಸಬೇಕಾದುದು ನಿಸ್ವಾರ್ಥಿಗಳಾದ ಕಲಾವಿದರ ಅಗತ್ಯ ಕರ್ತವ್ಯವಾಗಿದೆ. ಚಲಚ್ಚಿತ್ರವು ಸದ್ಯಃಕಾಲದಲ್ಲಿ ಕೇವಲ ಕಲಾದೃಷ್ಟಿಯಿಂದ ಮಾತ್ರವೇ ಅಲ್ಲ; ಸಹಸ್ರಾರು ಮಂದಿ ಅನೇಕ ಬಗೆಯ ವೃತ್ತಿಯವರಿಗೆ ಜೀವನಪ್ರದವಾಗಿದೆಯಾದ್ದರಿಂದ ಔದ್ಯೋಗಿಕ ದೃಷ್ಟಿಯಿಂದಲೂ ಪ್ರೋತ್ಸಾಹಿಸಲ್ಪಡಬೇಕಾದ ಒಂದು ಕೈಗಾರಿಕೆಯಾಗಿದೆ.

ಪರಿಶ್ರಮ ಧೀರರೂ ವ್ಯವಹಾರ ಚತುರರೂ ಆದ ಹಿಂದೀ ತಮಿಳು ಮ[illegible] ತೆಲುಗು ಚಿತ್ರಪಟ ನಿರ್ಮಾತೃಗಳು ಕನ್ನ[illegible]ಖ್ಯನಗರಗಳಲ್ಲೆಲ್ಲ, ಜನಮನವ[illegible]ದು ಕನ್ನಡಿಗರ ಧನವನ್ನು ಸೂ[illegible]ದು ಶೋಚನೀಯ ವಿಚಾರ. [illegible] ವ್ಯವಹಾರ ಚತುರ[illegible]ದ ಕನ್ನ[illegible]ಮ್ಮಪುತ್ರರು, ಮುಂದಡಿ[illegible]ಟ್ಟು [illegible] ಪಡಬೇಕಾದುದು ಕರ್ತವ್ಯ[illegible]

[illegible]ಲ್ಲಿ ಹಿಂದೆ ಪ್ರಕಟವಾಗಿದ್ದ ರಾಧಾ[illegible]ಚಿತ್ರ[illegible]ದ ನಟಿ--ನಿರ್ಮಾಪಕಿಯರಾದ ಶ್ರೀಮತಿ [illegible] ವಿ. ರಾಜಮ್ಮನವರು ಒಂದು ನಿಶ್ಚಿತಧ್ಯೇಯ[illegible] ಕೂಡಿ ಕಾರ್ಯತತ್ಪರರಾಗಿರುವರೆಂದು [illegible]ರ್ಷಿಸುತ್ತೇವೆ. ಇವರು ಪ್ರಕೃತ ಕಲಾಪತಿ [illegible]ಮಿಳು ಚಿತ್ರವನ್ನು ಆರ್ಥಿಕದೃಷ್ಟಿಯಿಂದ ತ[illegible]ನರಾದರೂ ಮುಂದೆ ಕನ್ನಡ ಭಾಷೆಯಲ್ಲೇ [illegible]ಣಿಕ ಮತ್ತು ಐತಿಹಾಸಿಕ ಚಲಚ್ಚಿತ್ರಪಟ [illegible]ಣಕಾರ್ಯಕ್ಕಾಗಿ ದುಡಿಯಲು ಸಂಕಲ್ಪಿಸಿ[illegible]ು ಕೇಳುತ್ತೇವೆ. ಅದು ವಾಸ್ತವವಾಗಲೆಂದ[illegible]ದ ಕನ್ನಡ ಚಲಚ್ಚಿತ್ರಪಟ ಕೈಗಾರಿಕೆಯ[illegible]ೂ ಉತ್ತಮರೀತಿಯಿಂದ ಫಲವಂತವಾಗು[illegible]ಲಾಭಿಮಾನಿ ಶಾರದಾಂಬೆಯು ಪರಮಾನುಗ್ರಹವಾಗಲೆಂದೂ ಹಾರೈಸುತ್ತೇವೆ.

INDEX TO ADVERTISERS